ಆದಿಲಶಾಹಿ ಸಾಹಿತ್ಯ ಸಂಪುಟ : ೧೭

- ತುಹಫತ್-ಅಲ್-ಮುಜಾಹಿದೀನ
- ಅಸದಬೇಗನ ನೆನಪುಗಳು
- ಆದಿಲಶಾಹಿಗಳ ಸ್ಥಾನೀಯ ಆಡಳಿತ

ವಚನಪಿತಾಮಹ ಡಾ॥ ಫ.ಗು. ಹಳಕಟ್ಟಿ ಸಂಶೋಧನ ಕೇಂದ್ರ
ಬಿ.ಎಲ್.ಡಿ.ಇ. ಸಂಸ್ಥೆ, ವಿಜಯಪುರ

ಆದಿವಾಸಿ ಸಾಹಿತ್ಯ ಸರಣಿ : ೧೭

- ಶುಜಜ್ಞತ್ – ಆಲ್ – [illegible]
  ([illegible])
- ಅಸ್ವಪ್ನಗಳ ಗೀತೆಗಳು
- ಆದಿವಾಸಿಗಳ ಸ್ವಾಯತ್ತ ಆಡಳಿತ

- ತುಹಫತ್-ಅಲ್-ಮುಜಾಹಿದೀನ
  (ಹತಾತ್ಮರ-ಹೋರಾಟಗಾರರ ಮೆರವಣಿಗೆ)
- ಅಸದಬೇಗನ ನೆನಪುಗಳು
- ಆದಿಲಶಾಹಿಗಳ ಸ್ಥಾನೀಯ ಆಡಳಿತ

ಆದಿಲಶಾಹಿ ಸಾಹಿತ್ಯ ಸಂಪುಟ : ೧೭

• ತುಹಫತ್-ಅಲ್-ಮುಜಾಹಿದೀನ
(ಹುತಾತ್ಮರ-ಹೋರಾಟಗಾರರ ಮೆರವಣಿಗೆ)

• ಅಸದಬೇಗನ ನೆನಪುಗಳು

• ಆದಿಲಶಾಹಿಗಳ ಸ್ಥಾನೀಯ ಆಡಳಿತ

ಅನುವಾದಕರು
ಡಾ. ಆರ್. ಕೆ. ಕುಲಕರ್ಣಿ

ವಚನಪಿತಾಮಹ ಡಾ. ಫ.ಗು. ಹಳಕಟ್ಟಿ ಸಂಶೋಧನ ಕೇಂದ್ರ
ಬಿ.ಎಲ್.ಡಿ.ಇ. ಸಂಸ್ಥೆ, ವಿಜಯಪುರ

1. **Tuhpatul-Mujahidin** – Arabik work by Shaykh Zainuddin Makhdum English Translation by – S. Mohammad Husayn Nainar
2. **Wakeyat-e-Asad Beg** – Persian work rendered into English 'Asad Beg's Mission to Bijapur' by Dr P. M. Joshi, Elliat and Dowson volume
3. **The local Administration of Adilshahi Sultanate (1489-1686)** by Fukuzava hiroshi

   Above all translated from English into Kannada By **Dr. R.K.Kulkarni**

Published by : **Dr. P.G.Halakatti Research Centre,** B.L.D.E. Association, Vijayapur, Karnataka

Edition : **2017**

Pages : **xxiv + 190 = 216**

Copies : **1000**

Price : **Rs. 100.00**

Typeset : **Dr. P. G. Halakatti Research Centre,** Vijayapur

Printed : **Print Point,** Bengaluru-40, Mob : 9739067359

ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆರ್ಥಿಕ ಅನುದಾನದ ನೆರವಿನಿಂದ ಈ ಪುಸ್ತಕ ಪ್ರಕಟವಾಗಿದೆ.

೧. **ತುಹಫತ್–ಅಲ್–ಮುಜಾಹಿದೀನ (ಹುತಾತ್ಮರ–ಹೋರಾಟಗಾರರ ಮೆರವಣಿಗೆ)**– ಶೇಖ ಝೈನುದ್ದೀನ ಮಖದುಮ್ಮನ ಅರೇಬಿಕ್ ಕೃತಿ, ಇಂಗ್ಲೀಶ ಭಾಷಾಂತರ – ಎಸ್. ಮುಹಮ್ಮದ ಹುಸೇನ್ ನೈನಾರ್

೨. **ಅಸದಬೇಗನ ನೆನಪುಗಳು** – ಅಸದಬೇಗನ ಪರ್ಶಿಯನ್ ಕೃತಿ, ಇಂಗ್ಲೀಶ್ ಅನುವಾದ– ಡಾ. ಪಿ. ಎಮ್. ಜೋಶಿ, ಇಲಿಯಟ್ ಮತ್ತು ಡೌಸನ್ ಸಂಪುಟ

೩. **ಆದಿಲಶಾಹಿಗಳ ಸ್ಥಾನೀಯ ಆಡಳಿತ** – ಮೂಲ ಫುಕುಝಾವಾ ಹಿರೋಶಿಯ ಇಂಗ್ಲಿಷ್ ಲೇಖನ

   ಮೇಲಿನವುಗಳು, ಇಂಗ್ಲಿಷ್‌ನಿಂದ ಕನ್ನಡಕ್ಕೆ – ಡಾ. ಆರ್. ಕೆ. ಕುಲಕರ್ಣಿ

ಪ್ರಕಾಶಕರು : ವಚನಪಿತಾಮಹ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ, ಬಿ.ಎಲ್.ಡಿ.ಇ. ಸಂಸ್ಥೆ, ವಿಜಯಪುರ

ಆವೃತ್ತಿ : ಪ್ರಥಮ ೨೦೧೭

ಪುಟಗಳು : xxiv + ೧೯೦ = ೨೧೬

ಪ್ರತಿಗಳು : ೧೦೦೦

ಬೆಲೆ : ರೂ. ೧೦೦.೦೦

ಡಿ.ಟಿ.ಪಿ. : ವಚನಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ, ವಿಜಯಪುರ

ಮುದ್ರಣ : ಪ್ರಿಂಟ್ ಪಾಯಿಂಟ್, ಬೆಂಗಳೂರು–೪೦. ಮೊ. ೯೭೩೯೦೬೭೩೫೯

*

ಆದಿಲ್‌ಶಾಹಿ ಸಾಹಿತ್ಯ ಅನುವಾದ ಸಮಿತಿ

ಅಧ್ಯಕ್ಷರು

ಡಾ. ಎಂ. ಎಂ. ಕಲಬುರ್ಗಿ

(ದಿನಾಂಕ ೩೦-೮-೨೦೧೫ರ ವರೆಗೆ)

ನಿರ್ದೇಶಕರು

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ

ಸದಸ್ಯರು

ಡಾ. ಬಿ.ಜಿ. ಮೂಲಿಮನಿ

ಡಾ. ರಹಮತ್ ತರೀಕೆರೆ

ಶ್ರೀ ರಂಜಾನ್ ದರ್ಗಾ

ಡಾ. ಎಚ್. ಜಿ. ದಡ್ಡಿ

ವಿಶೇಷ ಆಮಂತ್ರಿತ ಸದಸ್ಯರು

ಶ್ರೀ ಶಿವಯೋಗಿ ಎಸ್. ತಂಬಾಕೆ

ಡಾ. ಎಂ. ಎಸ್. ಮದಭಾವಿ

ಮೌಲಾನಾ ಮಹಬೂಬುರ್ ರಹಮಾನ ಮದನಿ

ಪದನಿಮಿತ್ತ ಸದಸ್ಯರು

ಜಿಲ್ಲಾಧಿಕಾರಿಗಳು, ವಿಜಯಪುರ

ಸಹಾಯಕ ನಿರ್ದೇಶಕರು,

ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ವಿಜಯಪುರ

*

ಅಧ್ಯಕ್ಷರ ಮಾತು

ಎಂ. ಎಂ. ಕಲಬುರ್ಗಿ

ವಿಜಯಪುರದ ಬಿ.ಎಲ್.ಡಿ. ಶಿಕ್ಷಣ ಸಂಸ್ಥೆ ಇತ್ತೀಚಿನ ದಿನಗಳಲ್ಲಿ ಸಾಂಸ್ಕೃತಿಕ ಸಂಸ್ಥೆಯಾಗಿಯೂ ಬೆಳೆಯುತ್ತಲಿದೆ. ಈ ಸಂಸ್ಥೆಯ ಭಾಗವಾಗಿರುವ 'ವಚನಪಿತಾಮಹ ಡಾ॥ ಫ.ಗು. ಹಳಕಟ್ಟಿ ಸಂಶೋಧನ ಸಂಸ್ಥೆ'ಯ ಇಂದಿನ ಕಾರ್ಯ ಮತ್ತು ಕಾರ್ಯಕ್ರಮಗಳು ಇದಕ್ಕೆ ಉದಾಹರಣೆಯೆನಿಸಿವೆ.

ಡಾ॥ ಫ.ಗು. ಹಳಕಟ್ಟಿಯವರದು ಕೇವಲ ವ್ಯಕ್ತಿಕಲ್ಯಾಣಕೇಂದ್ರಿತ ವ್ಯಕ್ತಿತ್ವವಲ್ಲ, ಸಮಾಜಕಲ್ಯಾಣಕೇಂದ್ರಿತ ವ್ಯಕ್ತಿತ್ವ. ಇದಕ್ಕೆ ತಕ್ಕಂತೆ ಅವರ ಹೆಸರಿನ ಈ ಸಂಸ್ಥೆ ಎಲ್ಲ ಸಮಾಜಗಳನ್ನು-ಸಾಮಾಜಿಕರನ್ನು 'ಇವ ನಮ್ಮವ, ಇವ ನಮ್ಮವ, ಇವ ನಮ್ಮವ' ಎಂಬ ಆದರ್ಶದಲ್ಲಿ ಬೆಳೆಯುತ್ತಲಿದೆ. ಇದಕ್ಕೆ ಸಾಕ್ಷಿಯಾಗಿದೆ, ಈ ಸಂಸ್ಥೆ ಕೈಗೆತ್ತಿಕೊಂಡಿರುವ 'ಆದಿಲ್‌ಶಾಹಿ ಸಾಹಿತ್ಯ ಅನುವಾದ ಯೋಜನೆ'.

ಮಧ್ಯಕಾಲೀನ ಭಾರತೀಯ ಇತಿಹಾಸದಲ್ಲಿ ವಿಜಯಪುರದ ಆದಿಲ್‌ಶಾಹಿಗಳ ಹೆಸರು ಪ್ರಸಿದ್ಧವಾದುದು, ಸುಪ್ರಸಿದ್ಧವಾದುದು. ಏಕಕಾಲಕ್ಕೆ ಉತ್ತರದ ಮೊಗಲರೊಂದಿಗೆ, ದಕ್ಷಿಣದ ವಿಜಯನಗರದವರೊಂದಿಗೆ ಸಂಘರ್ಷ-ಸಮನ್ವಯದಿಂದ ೧೪೮೯-೧೬೮೬ರವರೆಗೆ ರಾಜ್ಯಭಾರ ಮಾಡಿದ ರಾಜಮನೆತನವಿದು. 'ದೀನೇ ಇಲಾಹಿ' ಖ್ಯಾತಿಯ ಮೊಗಲ್ ಮನೆತನದ ಅಕ್ಬರ್‌ನಂತೆ 'ದಾದ ಇಲಾಹಿ' ಖ್ಯಾತಿಯ ಆದಿಲ್‌ಶಾಹಿ ಮನೆತನದ ಜಗದ್ಗುರು ೨ನೆಯ ಇಬ್ರಾಹಿಮ್ ಬಾದಷಹನು ಸಮನ್ವಯ ಸಮಾಜಸ್ಥಾಪಿಸಲು ನಿರತನಾದುದು ಗಮನಾರ್ಹವೆನಿಸಿದೆ.

ಈ ಮನೆತನದ ಎಂಟು ಜನ ಅರಸರು ಸಾಹಿತಿಗಳು-ಸಾಹಿತ್ಯಪ್ರೇಮಿಗಳು. ಈ ಸಾಹಿತ್ಯ ಲೌಕಿಕ-ಧಾರ್ಮಿಕ ಎರಡೂ ಆಯಾಮಗಳಲ್ಲಿ ಬಿಚ್ಚಿ ಬೆಳೆದಿದೆ. ಹಿಂದೂಗಳದು

ಪುರಾಣಪ್ರಜ್ಞೆಯಾದರೆ, ಮುಸಲ್ಮಾನರದು ಇತಿಹಾಸಪ್ರಜ್ಞೆ, ಈ ಪ್ರಜ್ಞೆಗೆ ಅನುಗುಣವಾಗಿ ಇವರ ಆಸ್ಥಾನದಲ್ಲಿ-ಇವರ ರಾಜ್ಯದಲ್ಲಿ ಸುಮಾರು ೨೦ ಕೃತಿಗಳು ಹುಟ್ಟಿಕೊಂಡಿವೆ. ಸಮಕಾಲೀನ ರಾಜಕೀಯದೊಂದಿಗೆ ಜೀವನದ ಇತರ ಕ್ಷೇತ್ರಗಳನ್ನೂ ಚಿತ್ರಿಸಿದ ಈ ಸಾಹಿತ್ಯದ ಬಹುಭಾಗ ಪ್ರಕಟವಾಗದೆ, ಕನ್ನಡಕ್ಕೆ ಅನುವಾದವಾಗದೆ ಉಳಿದಿದ್ದಿತು. ಈ ದೊಡ್ಡ ಆಕರವನ್ನು ಕೈಬಿಟ್ಟು ಈವರೆಗೆ ಇತಿಹಾಸ ಬರೆದುದು ವಿಷಾದದ ಸಂಗತಿಯಾಗಿದೆ. ಇದಕ್ಕೆ ಕಾರಣ, ಈ ಸಾಹಿತ್ಯದ ಖಣಿ, ಉರ್ದು-ಪರ್ಶಿಯನ್ ಭಾಷೆಯಲ್ಲಿರುವುದು ಮತ್ತು ಈ ಅರಸರು ಅನ್ಯರೆಂದು ಭಾವಿಸಿರುವುದು. 'ವಚನಪಿತಾಮಹ ಡಾ॥ ಫ.ಗು.ಹಳಕಟ್ಟಿ ಸಂಶೋಧನ ಸಂಸ್ಥೆ' ಈ ಯಾವುದೇ ಸೂತಕಗಳನ್ನು ಪರಿಗಣಿಸದೆ ಪ್ರಸ್ತುತ ಯೋಜನೆಯನ್ನು ಕೈಗೆತ್ತಿಕೊಂಡಿದೆ.

ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆರ್ಥಿಕ ಅನುದಾನದ ನೆರವಿನಿಂದ ಈ ಯೋಜನೆ ಅಸ್ತಿತ್ವಕ್ಕೆ ಬಂದಿದೆ. ಇದನ್ನು ಒದಗಿಸುವಲ್ಲಿ ತೀವ್ರಆಸಕ್ತಿ ವಹಿಸಿದವರು ಈ ಹಿಂದೆ ಕನ್ನಡ-ಸಂಸ್ಕೃತಿ ಇಲಾಖೆಯ ಸಚಿವರಾಗಿದ್ದ ಶ್ರೀ ಗೋವಿಂದ ಕಾರಜೋಳ ಅವರು. ಈ ಆಸಕ್ತಿಯನ್ನು ಮುಂದುವರಿಸುತ್ತಲಿರುವವರು ಇಂದು ಸಚಿವರಾಗಿರುವ ಶ್ರೀಮತಿ ಉಮಾಶ್ರೀ ಅವರು. ಸಹಕರಿಸಿದವರು ಈ ಇಲಾಖೆಯ ಅಧಿಕಾರಿಗಳು. ಇವರಿಗೆ ನಾವು ಕೃತಜ್ಞರಾಗಿದ್ದೇವೆ.

ಬಿ.ಎಲ್.ಡಿ. ಶಿಕ್ಷಣ ಸಂಸ್ಥೆ ನಮಗೆಲ್ಲ ಹೆಮ್ಮೆಯ ಮಾದರಿ. ಈ ರೀತಿಯಲ್ಲಿ ಇದನ್ನು ಬೆಳೆಸುತ್ತಲಿರುವವರು ಅಧ್ಯಕ್ಷರಾದ ಶ್ರೀ ಎಂ.ಬಿ. ಪಾಟೀಲರು. ಈ ಸಂಸ್ಥೆಯ ಅಂಗವಾಗಿರುವ 'ವಚನಪಿತಾಮಹ ಡಾ॥ ಫ.ಗು. ಹಳಕಟ್ಟಿ ಸಂಶೋಧನ ಸಂಸ್ಥೆ'ಗಾಗಿ ತ್ರಿಕರಣಪೂರ್ವಕ ದುಡಿಯುತ್ತಲಿರುವವರು ಇದರ ಅಧ್ಯಕ್ಷರಾದ ಶ್ರೀ ಶಿವಯೋಗಿ ತಂಬಾಕೆಯವರು. ಇವರಿಬ್ಬರ ಪ್ರೋತ್ಸಾಹ-ನೆರವುಗಳಿಗೆ, ಈ ಯೋಜನೆಯ ಸಲಹಾ ಮಂಡಳಿಯ ಸದಸ್ಯರ ಮಾರ್ಗದರ್ಶನಕ್ಕೆ, ಅನುವಾದ ಕಾರ್ಯದಲ್ಲಿ ವಿದ್ವಾಂಸರು ನೀಡಿದ ಸಹಕಾರಕ್ಕೆ ಅಭಿನಂದನೆಗಳು.

ಸರಕಾರ ರೂಪಿಸಿದ ಸಲಹಾಮಂಡಳಿಯ ನಿರ್ದೇಶನದಂತೆ ಈ ಯೋಜನೆಗಾಗಿ ಡಾ॥ ಫ.ಗು.ಹಳಕಟ್ಟಿ ಭವನದಲ್ಲಿ ಒಂದು ಸ್ವತಂತ್ರ ಕಾರ್ಯಾಲಯವನ್ನು, ಅಗತ್ಯ ಸಿಬ್ಬಂದಿ ವರ್ಗವನ್ನು ಅಸ್ತಿತ್ವಕ್ಕೆ ತರಲಾಯಿತು. ಈ ಮಣಿಹಕ್ಕೆ ಡಾ॥ ಕೃಷ್ಣ ಕೋಲ್ಹಾರಕುಲಕರ್ಣಿ ಅವರು ನಿರ್ದೇಶಕರಾಗಿ ಲಭಿಸಿರುವುದು ಒಂದು ಸುಯೋಗವೆಂದೇ ಭಾವಿಸುತ್ತೇವೆ. ಮೊದಲಿನಿಂದಲೂ ಆದಿಲ್‌ಶಾಹಿ ಸಾಹಿತ್ಯ-ಸಂಸ್ಕೃತಿಗಳ ಅಧ್ಯಯನದಲ್ಲಿ ನಿಮಗ್ನರಾದ ಇವರು ಈ ಯೋಜನೆಗಾಗಿ ದುಡಿದ ರೀತಿ ಅನನ್ಯವಾದುದು. ಹಸ್ತಪ್ರತಿ-ಮುದ್ರಿತಪ್ರತಿಗಳ ಸಂಗ್ರಹ, ಸೂಕ್ತ ಅನುವಾದಕರ ಆಯ್ಕೆ, ಅವರಿಂದ ಕೆಲಸಮಾಡಿಸಿಕೊಳ್ಳುವ ರೀತಿ, ಅನುವಾದಗಳ ಪರಿಷ್ಕರಣ-

ಪ್ರಕಟಣೆ ಇತ್ಯಾದಿಗಳಿಗಾಗಿ ಇವರು ತ್ರಿವಿಕ್ರಮ ಪ್ರಜ್ಞೆಯಿಂದ ಶ್ರಮಿಸಿದ್ದಾರೆ. ಇವರೊಂದಿಗೆ ಫ.ಗು.ಹಳಕಟ್ಟಿ ಸಂಶೋಧನ ಸಂಸ್ಥೆಯ ಕಾರ್ಯದರ್ಶಿಗಳಾದ ಡಾ.ಎಂ.ಎಸ್.ಮದಭಾವಿ ಅವರು ನಿರಪೇಕ್ಷ ಭಾವದಿಂದ ಹಗಲಿರುಳು ದುಡಿದಿದ್ದಾರೆ. ಇವರೊಂದಿಗೆ ಮಿಕ್ಕ ಸಿಬ್ಬಂದಿ ವರ್ಗದವರು ಸಹಕರಿಸಿದ ರೀತಿಯೂ ಸ್ಮರಣೀಯವಾಗಿದೆ. ಇವರೆಲ್ಲರಿಗೂ ಕೃತಜ್ಞತೆಗಳು.

■

*

ಪ್ರಸ್ತಾವನೆ

ಸಮಿತಿ ಸದಸ್ಯರು

ಮಧ್ಯಯುಗೀನ ಭಾರತದ ಚರಿತ್ರೆಯಲ್ಲಿ ವಿಜಾಪುರದ ಆದಿಲಶಾಹಿಗಳ ಪಾತ್ರ ಬಹು ಮುಖ್ಯವಾಗಿದೆ. ದಕ್ಷಿಣ ಭಾರತದ ಬಹುಪಾಲು ಪ್ರದೇಶವನ್ನು ಅವರು ವಿಜಾಪುರ ಕೇಂದ್ರದಿಂದ ಆಳಿದರು. ಇಂದಿನ ಅಖಂಡ ಕರ್ನಾಟಕವನ್ನು ಅವರು ಸುಮಾರು ಒಂದು ಶತಮಾನದಷ್ಟು ಕಾಲ ತಮ್ಮ ಅಂಕಿತದಲ್ಲಿ ಇಟ್ಟುಕೊಂಡಿದ್ದರು. ಹೀಗಾಗಿ ಆದಿಲಶಾಹಿಗಳ ಚರಿತ್ರೆಯನ್ನು ಅಭ್ಯಸಿಸದೆ ಕರ್ನಾಟಕದ ಚರಿತ್ರೆ ಪೂರ್ಣಗೊಳ್ಳುವುದಿಲ್ಲ.

ಈ ಆದಿಲಶಾಹಿಗಳ ರಾಜ್ಯವು ಕ್ರಿ.ಶ. ೧೪೮೯ರಿಂದ ೧೬೮೬ರ ವರೆಗೆ ಅಸ್ತಿತ್ವದಲ್ಲಿದ್ದಿತು. ಇಲ್ಲಿ ಆಳಿದ ೮ ಜನ ಬಾದಶಹರುಗಳ ವ್ಯಕ್ತಿತ್ವ ವರ್ಣಮಯವಾಗಿದ್ದಿತು. ಸಾಹಿತ್ಯ, ಸಂಗೀತ, ಕಲೆ, ವಾಸ್ತುಶಿಲ್ಪ, ಧರ್ಮ ಜೊತೆಗೆ ರಾಜಕಾರಣ ಇವುಗಳಲ್ಲೆಲ್ಲ ಇವರು ತಮ್ಮದೇ ಆದ ಮುದ್ರೆಯನ್ನು ಒತ್ತಿ ಹೋಗಿದ್ದಾರೆ.

ಇಂದು ಜಗತ್ತಿನಲ್ಲೆಲ್ಲ ಓದುತ್ತಿರುವ ಗುಲ್ಶನೆ–ಇಬ್ರಾಹಿಮಿ ಇತಿಹಾಸದ ಕರ್ತೃ ಮಹಮ್ಮದ ಕಾಸಿಮ ಫರಿಸ್ತಾ, ಎರಡನೆಯ ಇಬ್ರಾಹಿಮ ಆದಿಲಶಹ(ಕ್ರಿ.ಶ. ೧೫೮೦–೧೬೨೬)ನ ಆಸ್ಥಾನದಲ್ಲಿದ್ದುಕೊಂಡು ಆ ಗ್ರಂಥವನ್ನು ಬರೆದನು. ಅದರಂತೆ ಇನ್ನೂ ಹಲವಾರು ಜನ ಇತಿಹಾಸಕಾರರು, ಕವಿಗಳು ಆದಿಲಶಾಹಿ ಆಸ್ಥಾನದಲ್ಲಿ ಇದ್ದುಕೊಂಡು ಕೃತಿಗಳನ್ನು ರಚಿಸಿದ್ದಾರೆ. ಅವುಗಳೆಲ್ಲ ಅಂದು ಪ್ರಚಲಿತದಲ್ಲಿದ್ದ ಪರ್ಶಿಯನ್ ಇಲ್ಲವೆ ದಖಣಿ ಹಿಂದಿ ಭಾಷೆಗಳಲ್ಲಿ ರಚಿತವಾಗಿವೆ.

ನಾಡಿನ ವಿಶ್ವವಿದ್ಯಾಲಯಗಳು, ಭಾರತೀಯ ಇತಿಹಾಸ ಅನುಸಂಧಾನ ಇತ್ಯಾದಿ ಸಂಸ್ಥೆಗಳು ಇತಿಹಾಸದ ಕೆಲಸ ಮಾಡುತ್ತಿದ್ದರೂ ಬಿಜಾಪುರ ಇತಿಹಾಸದ ವಿಷಯದಲ್ಲಿ

ಆಗಬೇಕಾದಷ್ಟು ಆಗಲಿಲ್ಲ. ಅದಕ್ಕೆ ಮೂಲ ಕಾರಣ, ಬಹುಶಃ ಅಧ್ಯಯನಕ್ಕೆ ಬೇಕಾಗುವ ಮೂಲ ಆಕರಗಳು ವಿಶ್ವದಾದ್ಯಂತ ಚದುರಿ ಹೋಗಿರುವುದು ಮತ್ತು ಅವು ಪರ್ಶಿಯನ್, ದಖಣಿ ಭಾಷೆಗಳಲ್ಲಿರುವುದು. ಈ ಕೊರತೆಯನ್ನು ಗಮನಿಸಿ ಬಿಜಾಪುರ ಆದಿಲಶಾಹಿ ಕಾಲದ ಸಾಹಿತ್ಯವನ್ನು ಕನ್ನಡದ ಮೂಲಕ ಪ್ರಕಟಿಸುವ ಪ್ರಯತ್ನವಾಗಿದೆ. 'ಆದಿಲಶಾಹಿ ಸಾಹಿತ್ಯ ಅನುವಾದ ಯೋಜನೆ'.

ಹಂಪಿಯ ಕನ್ನಡ ವಿಶ್ವವಿದ್ಯಾಲಯಕ್ಕೆ ಸಂಲಗ್ನವಾಗಿರುವ ಬಿಜಾಪುರ ಬಿ ಎಲ್.ಡಿ.ಇ. ಸಂಸ್ಥೆಯ ವಚನಪಿತಾಮಹ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರವು ಕಳೆದ ದಶಕದಿಂದ ಸಂಶೋಧನಕ್ಷೇತ್ರದಲ್ಲಿ ಅಪರೂಪದ ಕೆಲಸವನ್ನು ಮಾಡುತ್ತಿದೆ. ಡಾ. ಫ ಗು ಹಳಕಟ್ಟಿ ಅವರ ಸಮಗ್ರಸಾಹಿತ್ಯವನ್ನು ೧೫ ಸಂಪುಟಗಳಲ್ಲಿ ಸಂಪಾದಿಸಿ ಪ್ರಕಟಿಸಿದೆ. ೮ ವಿದ್ಯಾರ್ಥಿಗಳು ವಿವಿಧ ವಿಷಯಗಳಲ್ಲಿ ಪಿಚ್.ಡಿ. ಪದವಿಗಳನ್ನು ಪಡೆದಿದ್ದಾರೆ. ಇನ್ನು ಹಲವರು ಪದವಿ ಪಡೆಯುವ ದಾರಿಯಲ್ಲಿದ್ದಾರೆ. ಇದಕ್ಕೆಲ್ಲ ಬಿ.ಎಲ್.ಡಿ.ಇ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಎಂ.ಬಿ.ಪಾಟೀಲ ಅವರ ನಿರಂತರ ಬೆಂಬಲವೇ ಕಾರಣವಾಗಿದೆ. ಅವರ ಆಸಕ್ತಿಯಂತೆ ಸಂಶೋಧನ ಕೇಂದ್ರವು 'ಆದಿಲಶಾಹಿ ಸಾಹಿತ್ಯ ಅನುವಾದ ಯೋಜನೆ'ಯ ಕರಡು ಪ್ರತಿಯನ್ನು ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಕಳಿಸಿತು. ಯೋಜನೆಯ ಮಹತ್ವವನ್ನು ಗುರುತಿಸಿ ಕರ್ನಾಟಕ ಸರಕಾರವು, ಡಾ. ಎಂ.ಎಂ. ಕಲಬುರ್ಗಿ ಅವರ ಅಧ್ಯಕ್ಷತೆಯಲ್ಲಿ ಡಾ. ಬಿ.ಜಿ.ಮೂಲಿಮನಿ, ಡಾ. ರಹಮತ ತರೀಕೆರೆ, ಶ್ರೀ ರಂಜಾನ್ ದರ್ಗಾ, ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಮತ್ತು ಡಾ. ಎಚ್.ಜಿ.ದಡ್ಡಿ, ಈ ಸದಸ್ಯರನ್ನೊಳಗೊಂಡ ಒಂದು ಸಮಿತಿಯನ್ನು ರಚಿಸಿ ಯೋಜನೆಗೆ ಅನುಮತಿ ನೀಡಿತು.

ಇದು ಭಾರತದಲ್ಲಿಯೇ ಒಂದು ಅಪರೂಪದ ಯೋಜನೆ. ಮಧ್ಯಯುಗೀನ ಕಾಲದ ಬಿಜಾಪುರ ಆದಿಲಶಾಹಿಗಳ ಕಾಲದಲ್ಲಿ ರಚಿತಗೊಂಡ ಎಲ್ಲ ಸಾಹಿತ್ಯವನ್ನು ಕನ್ನಡಕ್ಕೆ ತರುವುದು ಯೋಜನೆಯ ಮುಖ್ಯ ಉದ್ದೇಶ.

ಪ್ರಾರಂಭದಲ್ಲಿ ಆದಿಲಶಾಹಿ ಚರಿತ್ರೆಗೆ ಸಂಬಂಧಪಟ್ಟ ಈ ಕೆಳಗಿನ ಸಮಕಾಲೀನ ಕೆಲವು ಚರಿತ್ರ ಗ್ರಂಥಗಳ ಪಟ್ಟಿಯನ್ನು ಮಾಡಲಾಯಿತು. ಅವು ದೊರೆಯುವ ಸಂಭಾವ್ಯ ಸ್ಥಳಗಳನ್ನೂ ಗುರುತಿಸಲಾಯಿತು.

೧. **ಮುಹಮ್ಮದ ಕಾಸೀಮ ಫೆರಿಸ್ತಾ : ತಾರೀಖ–ಇ–ಫೆರಿಸ್ತಾ [ಪರ್ಶಿಯನ್]**
ಇಂಗ್ಲೀಷಿಗೆ ಅನುವಾದಿಸಿದ್ದಾರೆ ಕ್ಯಾಪ್ಟನ್ ಬ್ರಿಗ್ಸ [ಕ್ರಿ.ಶ.೧೮೭೯] ಮೂಲ ಪರ್ಶಿಯನ್ ಹಸ್ತಪ್ರತಿ ಮುಂಬಯಿ ಅರ್ಕೀವ್ಸ, ಸಾಲಾರ ಜಂಗ ವಸ್ತುಸಂಗ್ರಹಾಲಯ ಹೈದರಾಬಾದ ಇತ್ಯಾದಿಗಳಲ್ಲಿ ಲಭ್ಯ.

೨. **ಅಬ್ದುಲ್ಲಾ ದೆಹಲವಿ : ಇಬ್ರಾಹಿಮನಾಮಾ [ದಖಣಿ]**
ಪ್ರಕಟವಾಗಿದೆ. ಮೂಲ ಹಸ್ತಪ್ರತಿ ಮುಂಬಯಿ ಅರ್ಕೀವ್ಸ ಮತ್ತು ಔಂಧ ಅರ್ಕೀವ್ಸ ಸಾತಾರಾದಲ್ಲಿವೆ.

೩. **ಅಸದಬೇಗ : ವಾಕಾಯತೆ ಅಸದಬೇಗ [ಪರ್ಶಿಯನ್]**

ಚಾಪ್‌ಮನ್‌ನಿಂದ ಇಂಗ್ಲಿಷ್‌ಗೆ ಅನುವಾದವಾಗಿದೆ [೧೮ನೆ ಶತ]. ನಂತರ ಪಿ.ಎಂ.ಜೋಶಿ ಅವರಿಂದಲೂ, ಜೊತೆಗೆ ಇಲಿಯಟ್ ಮತ್ತು ಡೌಸನ್ ಸಂಪುಟ ೬ರಲ್ಲಿ ಭಾಗಶಃ ಅನುವಾದವಾಗಿದೆ. ಇದರ ಹಸ್ತಪ್ರತಿಯು ಆಂಧ್ರಪ್ರದೇಶ ಪ್ರಾಚೀನ ಹಸ್ತಪ್ರತಿಗಳ ಸಂಗ್ರಹ ಹೈದರಾಬಾದಿನಲ್ಲಿ ಲಭ್ಯ.

೪. **ಕಾಜಿ ನೂರುಲ್ಲಾ : ತಾರೀಖೆ ಅಲಿ ಆದಿಲಶಹ [ದಖಣಿ]**
ಮೂಲ ಹಸ್ತಪ್ರತಿಗಳು ಮುಂಬಯಿ ಅರ್ಕೀವ್ಸ, ಇಂಡಿಯಾ ಆಫೀಸ ಲಾಯಬ್ರರಿ ಲಂಡನ್ ಮತ್ತು ಬ್ರಿಟಿಶ್ ಮ್ಯುಜಿಯಮ್ ಲಾಯಬ್ರರಿ ಲಂಡನ್, ಸಾಲಾರಜಂಗ ವಸ್ತುಸಂಗ್ರಹಾಲಯ ಹೈದ್ರಾಬಾದಗಳಲ್ಲಿ ಲಭ್ಯ.

೫. **ಜುಹೂರ್ ಬಿನ್ ಜುಹೂರಿ : ಮಹಮ್ಮದನಾಮಾ [ಪರ್ಶಿಯನ್]**
ಹಸ್ತಪ್ರತಿಯು ಪ್ರಾಚ್ಯ ವಸ್ತುಸಂಗ್ರಹಾಲಯ ಬಿಜಾಪುರದಲ್ಲಿ ಲಭ್ಯ.ಭಾಗಶಃ ಬಿ.ಡಿ.ವರ್ಮಾರಿಂದ ಇಂಗ್ಲಿಷಿನಲ್ಲಿ ಅನುವಾದ.

೬. **ನುಸ್ರತಿ : ಅಲಿನಾಮಾ [ದಖಣಿ]**
ಪ್ರಕಟವಾಗಿದೆ. ಪ್ರತಿ ದುರ್ಮಿಳ.

೭. **ಬಶೀರುದ್ದೀನ ಅಹ್ಮದ : ವಾಕಾತೆ ಮಾಮಲಕತ್ ಬಿಜಾಪುರ [ಉರ್ದು]**
ಕರ್ನಾಟಕ ಉರ್ದು ಅಕಡೆಮಿಯಿಂದ ಪ್ರಕಟ. ಮೂಲಪ್ರತಿ ಸಾಲಾರಜಂಗ ಮ್ಯುಜಿಯಮ್ ಹೈದರಾಬಾದದಲ್ಲಿ ಲಭ್ಯ.

೮. **ಮುಹಮ್ಮದ ಹಾಶೀಮ ಘುಜೂನಿ : ಘುತುಹತೆ ಆದಿಲಶಾಹಿ [ಪರ್ಶಿಯನ್]**
ಮುಂಬಯಿ ಅರ್ಕೀವ್ಸ, ಬ್ರಿಟಿಶ್ ಇಂಡಿಯಾ ಲಾಯಬ್ರರಿ ಲಂಡನ್‌ಗಳಲ್ಲಿ ಹಸ್ತಪ್ರತಿಗಳಿವೆ.

೯. **ಮೀರ್ ರಫೀಯುದ್ದೀನ ಶಿರಾಜಿ : ತದ್ಕಿರಾತ–ಅಲ್–ಮುಲ್ಕ [ಪರ್ಶಿಯನ್]**
ಸಾಲಾರಜಂಗ ವಸ್ತುಸಂಗ್ರಹಾಲಯ ಹೈದರಾಬಾದದಲ್ಲಿ ಹಸ್ತಪ್ರತಿ ಲಭ್ಯ.

೧೦. **ಶೇಖ್‌ಜೈನುದ್ದೀನ ಅಲ್ ಮಾಬಾರಿ: ತುಹಫತುಲ್ ಮುಜಾಹಿದೀನ [ಪರ್ಶಿಯನ್]**

೧೧. **ಸೈಯದ ಅಲಿ ಬಿಲಗ್ರಾಮಿ : ತಾರೀಖೆ ದಖನ್ ೪ ಸಂಪುಟಗಳು [ಉರ್ದು]**

೧೨. ಸಯ್ಯದ ಮೊಹಿಯುದ್ದೀನ ಪೀರಜಾದಾ : ಅಹವಾಲೆ ಸಲಾತೀನ ಬಿಜಾಪುರ [ಪರ್ಶಿಯನ್]
ಬ್ರಿಟಿಶ್ ವಸ್ತುಸಂಗ್ರಹಾಲಯ ಲಂಡನ್, ಹಸ್ತಪ್ರತಿ ಸಂಖ್ಯೆ ೨೬೨೭೦.

೧೩. ಫಿತೂರಖಾನ ವಲ್ಲದ ಅಸದಖಾನ ಲ್ಯಾರಿಯ : ಹಪ್ತ ಕುರ್ಸೀ [ಪರ್ಶಿಯನ್]
ಸಾಲಾರಜಂಗ ವಸ್ತು ಸಂಗ್ರಹಾಲಯ ಹೈದ್ರಾಬಾದ, ಇಂಡಿಯಾ ಆಫೀಸ ಲಾಯಬ್ರರಿ ಲಂಡನ್‌ಗಳಲ್ಲಿ ಹಸ್ತಪ್ರತಿ ಲಭ್ಯ.

೧೪. ೨ನೆಯ ಇಬ್ರಾಹಿಮ ಆದಿಲಶಹ : ಕಿತಾಬೆ ನವರಸ [ದಖಣಿ ಹಿಂದಿ]
ಕರ್ನಾಟಕ ವಿ.ವಿ.ಯಿಂದ ಪುಸ್ತಕ ಪ್ರಕಟವಾಗಿದೆ.

೧೫. ಜುಬೇರಿ : ರೌಜತ್ ಅಲ್ ಔಲಿಯಾ ಎ ಬಿಜಾಪುರ [ಪರ್ಶಿಯನ್]
ಆಂಧ್ರಪ್ರದೇಶ ಪ್ರಾಚ್ಯ ಹಸ್ತಪ್ರತಿ ಸಂಗ್ರಹ ಹೈದರಾಬಾದದಲ್ಲಿ ಹಸ್ತಪ್ರತಿ ಲಭ್ಯ. ಹಸ್ತಪ್ರತಿ ಸಂಖ್ಯೆ ೧೪೮೧೩

೧೬. ಜುಬೇರಿ : ಬುಸಾತಿನೆ ಸಲಾತೀನ [ಪರ್ಶಿಯನ್]
ಮರಾಠೀ ಅನುವಾದದಿಂದ ಕನ್ನಡಕ್ಕೆ ಅನುವಾದ ಆಗಿದೆ. ಪರ್ಸಿಯನ್ ಹಸ್ತಪ್ರತಿ ಸಾಲಾರಜಂಗ ವಸ್ತು ಸಂಗ್ರಹಾಲಯ ಹೈದರಾಬಾದದಲ್ಲಿ ಲಭ್ಯ.

೧೭. ಮೀರ ಅಹಮದ ಅಲಿ ಖಾನ: ಗುಲದಸ್ತಾ ಎ ಬಿಜಾಪುರ [ದಖಣಿ]
ಆಂಧ್ರಪ್ರದೇಶ ಆರ್ಕೀವ್ಸದಲ್ಲಿ ಹಸ್ತಪ್ರತಿ ಲಭ್ಯ. ಸಂಖ್ಯೆ ೧೯೩.

೧೮. ಅಬುಲ ಹಸನ ಕಾದಿರಿ : ಶಾಹಿಪತ್ ಇ ಹುದಾ [ಬಿಜಾಪುರ ಸೂಫಿ ಸಂತರ ಚರಿತ್ರೆ ೧೭೯೬] [ಪರ್ಶಿಯನ್]
ಸಾಲಾರಜಂಗ ವಸ್ತುಸಂಗ್ರಹಾಲಯ ಹೈದರಾಬಾದದಲ್ಲಿ ಹಸ್ತಪ್ರತಿ ಲಭ್ಯ.

೧೯. ಆದಿಲಶಾಹಿಕಾಲದ ಫರ್ಮಾನುಗಳು: ಭಾರತ ಇತಿಹಾಸ ಸಂಶೋಧಕ ಮಂಡಳ [ಸಾವಿರಕ್ಕೂ ಮಿಕ್ಕಿ] ಮತ್ತು ಸನದುಗಳು ಪುಣೆ ಮತ್ತು ಇತರ ಸ್ಥಳಗಳಲ್ಲಿ ಲಭ್ಯ.

ಹೀಗೆ ಪಟ್ಟಿ ಮಾಡಿ, ಹಸ್ತಪ್ರತಿಗಳ ಶೋಧಕ್ಕೆ ತೊಡಗಲಾಯಿತು. ಸಾಲಾರಜಂಗ ವಸ್ತು ಸಂಗ್ರಹಾಲಯ, ಆಂಧ್ರಪ್ರದೇಶ ಆರ್ಕೀವ್ಸ ಹೈದರಾಬಾದ, ಭಾರತೀಯ ಪುರಾತತ್ವ ಇಲಾಖೆ ವಸ್ತು ಸಂಗ್ರಹಾಲಯ, ಗೋಳಗುಮ್ಮಟ ಬಿಜಾಪುರ ಈ ಕೇಂದ್ರಗಳಲ್ಲಿ ಕೆಳಗಿನ ಹಸ್ತಪ್ರತಿಗಳು ದೊರೆತವು.

೧. ಕಾಜಿ ನೂರುಲ್ಲಾ : ತಾರೀಖೆ ಅಲಿ ಆದಿಲಶಹ [ದಖಣಿ]

೨. ಮೀರ್ ರಫೀಯುದ್ದೀನ ಶಿರಾಜಿ : ತದ್ಕಿರಾತ-ಅಲ್-ಮುಲ್ಕ [ಪರ್ಶಿಯನ್]

೩. ಫಿತೂರಖಾನ ವಲ್ಲದ ಅಸದಖಾನ ಲ್ಯಾರಿಯ : **ಹಪ್ತ ಕುರ್ಸೀ [ಪರ್ಶಿಯನ್]**

೪. ಮೀರ ಅಹಮದ ಅಲಿ ಖಾನ : **ಗುಲದಸ್ತಾ ಎ ಬಿಜಾಪುರ [ದಖಣಿ]**

೫. ಜುಹೂರ್ ಬಿನ್ ಜುಹೂರಿ : **ಮಹಮ್ಮದನಾಮಾ [ಪರ್ಶಿಯನ್]**

ಇದಲ್ಲದೆ, ಫೆರಿಸ್ತಾನ ತಾರೀಖ–ಇ–ಫೆರಿಸ್ತಾದ ಇಂಗ್ಲಿಷ್ ಮತ್ತು ಉರ್ದು ಅನುವಾದ, ಅಬ್ದುಲ್ಲಾ ದೇಹಲವಿ ವಿರಚಿತ ಇಬ್ರಾಹೀಮನಾಮಾದ ಹಿಂದಿ ಮತ್ತು ಉರ್ದು ಅನುವಾದ, ಕವಿ ನುಸ್ರತಿಯ 'ಅಲಿನಾಮಾ' ಘುತೂಹತ್ ಅಲಂಗೀರದ ಇಂಗ್ಲಿಶ್ ಅನುವಾದ ಮತ್ತು ಹಲವು ನೂರು ಪರ್ಶಿಯನ್ ಮೂಲ ಮತ್ತು ಮರಾಠೀ ಅನುವಾದದ ಆದಿಲಶಾಹೀ ಫರ್ಮಾನುಗಳು ದೊರೆತವು. ಉಳಿದ ಹಸ್ತಪ್ರತಿಗಳನ್ನು ದೊರಕಿಸಬೇಕಾಗಿದೆ.

ಹೀಗೆ ಸಾಮಗ್ರಿಯನ್ನು ಸಂಗ್ರಹಿಸಿ ಅನುವಾದದ ಕೆಲಸ ಪ್ರಾರಂಭ ಮಾಡಲಾಯಿತು. ಕನ್ನಡ ಭಾಷೆಗೆ ಅನುವಾದ ಮಾಡುವ ಪರ್ಶಿಯನ್, ದಖಣಿ ಮತ್ತು ಉರ್ದು ಭಾಷೆಗಳನ್ನು ಬಲ್ಲ ಈ ಕೆಳಗಿನ ವಿದ್ವಾಂಸರನ್ನು ಅನುವಾದ ಕಾರ್ಯದಲ್ಲಿ ತೊಡಗಿಸಿಕೊಳ್ಳಲಾಯಿತು.

೧. ಮೌಲಾನಾ ಮಹಿಬೂಬುರ್ ರಹಮಾನ ಮದನಿ ವಿಜಯಪುರ.

೨. ಶ್ರೀ ಬಿ. ಜಯಾಚಾರ್ಯ, ನ್ಯಾಯವಾದಿಗಳು ಯಾದಗಿರಿ.

೩. ಶ್ರೀಮತಿ ಬಾನು ಮುಷ್ತಾಕ್ ನ್ಯಾಯವಾದಿಗಳು ಹಾಸನ.

೪. ಡಾ. ಅಬ್ದುಲ್ ಹಮೀದ, ಶಿಕ್ಷಣ ತಜ್ಞರು, ತಿಪಟೂರು.

೫. ಶ್ರೀ ಎಂ.ಎನ್ ನದಾಫ, ವಿಜಯಪುರ.

೬. ಪ್ರೊ ವಸಂತ ಕುಷ್ಟಗಿ, ಸಾಹಿತಿಗಳು ಕಲಬುರಗಿ.

೭. ಶ್ರೀಮತಿ ರತ್ನಾ ಮಣ್ಣೂರ, ಕಲಬುರಗಿ.

೮. ಡಾ. ಅಮೀರುದ್ದೀನ ಕಾಜಿ ವಿಜಯಪುರ.

೯. ಶ್ರೀ ಹಸನ ನಯೀಮ ಸುರಕೋಡ, ರಾಮದುರ್ಗ.

೧೦. ಡಾ. ಬಿ. ರಘೋತ್ತಮರಾವ ದೇಸಾಯಿ, ಬೆಂಗಳೂರು.

೧೧. ಶ್ರೀಮತಿ ವಿದ್ಯಾ ಗುಮಾಸ್ತೆ, ವಿಜಯಪುರ.

೧೨. ಡಾ. ಆರ್.ಕೆ.ಕುಲಕರ್ಣಿ, ವಿಜಯಪುರ.

೧೩. ಡಾ. ಮುಹಮ್ಮದ ಸಿಬ್ಘತ್‌ಉಲ್ಲಾಹ್, ಬೆಂಗಳೂರು

೧೪. ಡಾ. ಮಹನೂರ್ ಜಮಾನಿ ಬೇಗಂ, ಬೆಂಗಳೂರು

೧೫. ಪ್ರೊ. ಎ.ಎಚ್. ಮಾಸಾಪತಿ, ಬೆಂಗಳೂರು

೧೬. ಫಕೀರ್ ಮುಹಮ್ಮದ ಕಟ್ಪಾಡಿ, ಬೆಂಗಳೂರು

೧೭. ಮೌಲಾನಾ ಸಯ್ಯದ್ ರಶೀದ್ ಅಲ್ ಖಾಸಿಮಿ, ಬೆಂಗಳೂರು

೧೮. ಶ್ರೀ ಬೋಡೆ ರಿಯಾಜ್ ಅಹ್ಮದ್ ತಿಮ್ಮಾಪುರಿ, ಕಲಬುರಗಿ.

ಈ ಮಹನೀಯರು ಅನುವಾದ ಕಾರ್ಯದಲ್ಲಿ ತೊಡಗಿಕೊಂಡಿದ್ದಾರೆ. ಇವರ ಸಹಕಾರದಿಂದ ಮೊದಲ ಹಂತವಾಗಿ ಈ ಕೆಳಗಿನ

೧. ತಾರೀಖ–ಇ–ಫೆರಿಸ್ತಾ : ೪ ಸಂಪುಟಗಳು.

೨. ಬುಸಾತಿನೆ ಸಲಾತೀನ : ೫ನೆಯ ಸಂಪುಟ.

೩. ಇಬ್ರಾಹೀಮ ನಾಮಾ [ದಖಣಿ], ಗುಲದಸ್ತಾಯೆ ಬಿಜಾಪುರ [ದಖಣಿ], ಹಪ್ತ ಕುರ್ಸಿ [ಪರ್ಶಿಯನ್], ಭಾಗಶಃ ಘುತುಹತೆ ಅಲಂಗೀರ ಇವೆಲ್ಲ ಸೇರಿ ೬ನೆಯ ಸಂಪುಟ.

೪. ಮೊಹಮ್ಮದನಾಮಾ, ೭ನೆಯ ಸಂಪುಟ

೫. ಅಲಿನಾಮಾ–ತಾರೀಖೇ ಸಿಕಂದರಿ ೮ನೆಯ ಸಂಪುಟ

೬. 'ಊರುಸೇ–ಇರ್ಫಾನ್' (ಮನ್ ಲಗನ್) ೯ನೆಯ ಸಂಪುಟ

೭. 'ತಝ್ಕಿರತುಲ್ ಮುಲೂಕ್(ಬಾದಶಾಹರ ಚರಿತ್ರೆ)' ೧೦ನೆಯ ಸಂಪುಟ

೮. 'ಕಿತಾಬೆ ನವರಸ' ೧೧ನೆಯ ಸಂಪುಟ

೯. ರೌಜತುಲ್ ಔಲಿಯಾಯೆ ಬಿಜಾಪುರ ೧೨ನೆಯ ಸಂಪುಟ.

೧೦. ಕರ್ನಾಟಕದಲ್ಲಿಯ ಅರೇಬಿಕ್, ಪರ್ಶಿಯನ್, ಉರ್ದು ಶಾಸನಗಳ ಸೂಚಿ ೧೩ನೆಯ ಸಂಪುಟ

೧೧. ಫರ್ಮಾನುಗಳು ಭಾಗ ೧, ೧೪ನೆಯ ಸಂಪುಟ

೧೨. ಫರ್ಮಾನುಗಳು, ಸನದುಗಳು ಮತ್ತು ಕೈಫಿಯತ್ತುಗಳು ಭಾಗ ೨, ೧೫ನೆ ಸಂಪುಟ

೧೩. ತಾರೀಖ–ಇ–ಅಲಿ ಆದಿಲಶಹ, ೧೬ನೆಯ ಸಂಪುಟ

ಹೀಗೆ ೧೬ ಸಂಪುಟಗಳು ಪ್ರಕಟವಾಗಿವೆ. ಇದೀಗ ೧೭ ನೆಯ ಸಂಪುಟವಾಗಿ 'ತುಹಫತ್-ಅಲ್-ಮುಜಾಹಿದೀನ, ಅಸದಬೇಗನ ನೆನಪುಗಳು, ಆದಿಲಶಾಹಿಗಳ ಸ್ಥಾನೀಯ ಆಡಳಿತ' ಮೂರು ಕೃತಿಗಳನ್ನೊಳಗೊಂಡ ೧೭ನೆಯ ಸಂಪುಟ ಪ್ರಕಟವಾಗುತ್ತಿದೆ. ಇದನ್ನು ಕನ್ನಡಕ್ಕೆ ಡಾ. ಆರ್. ಕೆ. ಕುಲಕರ್ಣಿ ಅವರು ಅನುವಾದ ಮಾಡಿದ್ದಾರೆ. ಅವರಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

'ಆದಿಲಶಾಹಿ ಸಾಹಿತ್ಯ ಅನುವಾದ' ಯೋಜನೆಗೆ ಅನುದಾನ ನೀಡಿದ ಕರ್ನಾಟಕ ಸರ್ಕಾರಕ್ಕೆ, ಯೋಜನೆಯನ್ನು ಯಶಸ್ವಿಯಾಗಿ ಕಾರ್ಯಗತಗೊಳಿಸುವಲ್ಲಿ ಸಹಕರಿಸುತ್ತಿರುವ ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಎಲ್ಲ ಅಧಿಕಾರಿಗಳಿಗೆ ಮತ್ತು ಈ ದಿಶೆಯಲ್ಲಿ ನಿರಂತರ ಸಹಾಯಹಸ್ತ ನೀಡುತ್ತಿರುವ ಬಿ.ಎಲ್.ಡಿ.ಇ. ಸಂಸ್ಥೆಯ ಅಧ್ಯಕ್ಷರಾದ ಶ್ರೀ ಎಂ.ಬಿ.ಪಾಟೀಲ ಅವರಿಗೆ, ಸಂಶೋಧನ ಕೇಂದ್ರದ ಅಧ್ಯಕ್ಷರಾದ ಶ್ರೀ ಶಿವಯೋಗಿ ತಂಬಾಕೆ ಅವರಿಗೆ ಕೃತಜ್ಞತೆಗಳು.

ಸಂಪುಟಗಳು ಪ್ರಕಟವಾಗುವ ಪ್ರತಿ ಹಂತದಲ್ಲಿ ಸಹಕಾರ ನೀಡಿದ, ಈ ಹಿಂದೆ ವಿಜಯಪುರ ಜಿಲ್ಲಾಧಿಕಾರಿಗಳಾಗಿದ್ದ ಶ್ರೀ ಶಿವಯೋಗಿ ಕಳಸದ, ಶ್ರೀ ರಿತ್ವಿಕ್ ರಂಜನ್ ಪಾಂಡೆ, ಶ್ರೀ ಡಿ ರಂದೀಪ ಮತ್ತು ಇಂದಿನ ಜಿಲ್ಲಾಧಿಕಾರಿಗಳಾದ ಶ್ರೀ ಕೆ ಬಿ ಶಿವಕುಮಾರ ಅವರನ್ನು, ಈ ಯೋಜನೆಯ ಸಮಿತಿಯ ಅಧ್ಯಕ್ಷರ ಮಾರ್ಗದರ್ಶನವನ್ನು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರನ್ನು ಹಾಗೂ ಬಿ.ಎಲ್.ಡಿ.ಇ. ಸಂಸ್ಥೆಯ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರದ ಕಾರ್ಯದರ್ಶಿಗಳಾದ ಡಾ. ಎಂ.ಎಸ್. ಮದಭಾವಿ ಅವರ ಶ್ರಮವನ್ನು ಪ್ರೀತಿಯಿಂದ ನೆನೆಯುತ್ತೇವೆ.

ಮುಖಪುಟ ವಿನ್ಯಾಸಗೊಳಿಸಿದ ಶ್ರೀ ಕೆ.ಕೆ.ಮಕಾಳಿ ಹಾಗೂ ಅಂದವಾಗಿ ಮುದ್ರಿಸಿದ ಬೆಂಗಳೂರಿನ ಪ್ರಿಂಟ್ ಪಾಯಿಂಟ್‌ನ ಶ್ರೀ ಬಿ.ಸಿ.ಪಾಟೀಲ (ಹೆಬ್ಬಾಳ) ಮತ್ತು ಅವರ ಸಿಬ್ಬಂದಿಯನ್ನು ನೆನೆಯುತ್ತೇವೆ.

■

*

ನಿರ್ದೇಶಕರ ಮಾತು

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ

೧. ತುಹಫತುಲ್ ಮುಜಾಹಿದೀನ

ಅರೇಬಿಕ್ ಭಾಷೆಯಲ್ಲಿ ರಚಿತವಾಗಿರುವ ಶೇಖ ಝೈನುದ್ದೀನ ಮಖದುಮ್ ನ 'ತುಹಫತುಲ್ ಮುಜಾಹಿದೀನ' ಗ್ರಂಥವು ಒಂದು ಅಪರೂಪದ ಐತಿಹಾಸಿಕ ಗ್ರಂಥವಾಗಿದೆ. ಅರೇಬಿಕ್‌ದಲ್ಲಿ ತುಹಫತುಲ್ ಮುಜಾಹಿದೀನ ಎಂದರೆ 'ಹುತಾತ್ಮರ (ಹೋರಾಟದ) ಮೆರವಣಿಗೆ' ಎಂದು ಕನ್ನಡದಲ್ಲಿ ಅರ್ಥ. ಮುಸ್ಲೀಮರು ಕೇರಳದಲ್ಲಿ ಕಾಲಿಟ್ಟಂದಿನಿಂದ ಅವರು ಇಲ್ಲಿ ಸ್ಥಾಯಿಯಾಗಬೇಕಾದರೆ ಏನೆಲ್ಲ ಹೋರಾಟ ಮಾಡಬೇಕಾಯಿತು ಎಂಬುದರ ಚಿತ್ರಣ ಇಲ್ಲಿದೆ. ಕ್ರಿ. ಶ.೧೬ನೆಯ ಶತಮಾನ ಆರಂಭದಿಂದ ೧೫೮೩ ರ ವರೆಗೆ ನಡೆದ ಘಟನೆಗಳು, ವಿದ್ಯಮಾನಗಳು ಸಮಪ್ರಮಾಣವಾಗಿ ಇಲ್ಲಿ ದಾಖಲಾಗಿರುವುದಲ್ಲದೆ ಅದಕ್ಕಿಂತ ಮೊದಲಿನ ಕಾಲಘಟ್ಟಗಳಲ್ಲಿ ಮಲಬಾರದಲ್ಲಿ ವಿಶೇಷತಃ ಕೇರಳದಲ್ಲಿ ಕಂಡು ಬಂದ ಸ್ಥಿತ್ಯಂತರಗಳ ಹಿನ್ನೋಟವನ್ನು ಇಲ್ಲಿ ಕಾಣಬಹುದಾಗಿದೆ.

ಕೇರಳದಲ್ಲಿ ಇಸ್ಲಾಂ ಧರ್ಮ ಕಾಲಿಟ್ಟದ್ದು ಹೇಗೆ? ಮತ್ತು ಅದು ಹೇಗೆ ವಿಸ್ತಾರ ಪಡೆಯಿತು ಎಂಬುದನ್ನು ತಿಳಿಸುವುದಲ್ಲದೆ, ಮಲಬಾರದ ಹಿಂದುಗಳಲ್ಲಿದ್ದ ಧಾರ್ಮಿಕ, ಕೌಟುಂಬಿಕ ಹಾಗೂ ಸಾಮಾಜಿಕ ಪದ್ಧತಿಗಳ ಆಚರಣೆಗಳನ್ನು (ಇಷ್ಟ, ಅನಿಷ್ಟ ಎಲ್ಲವನ್ನೂ) ಸವಿಸ್ತಾರವಾಗಿ ಚಿತ್ರಿಸುವ ಐತಿಹಾಸಿಕ ದಾಖಲೆ ಇದಾಗಿದೆ. ಇದನ್ನು ಬರೆದ ಶೇಖ ಝೈನುದ್ದೀನನು ತಾನು ಪ್ರತ್ಯಕ್ಷ ಕಂಡದ್ದನ್ನು ಕೇಳಿದ್ದನ್ನು ಮತ್ತು ವಿಶ್ವಾಸಾರ್ಹ ಆಕರಗಳಿಂದ ದೊರೆತ ವಿಷಯಗಳನ್ನು ವಸ್ತುನಿಷ್ಠವಾಗಿ ದಾಖಲಿಸಿದ್ದಾನೆ.

ಅಂತೆಯೇ ಭಾರತದ ಬಹುತೇಕ ಮುಸ್ಲಿಮ್ ಗ್ರಂಥಕಾರರು ಈ ಗ್ರಂಥವನ್ನು ಉಲ್ಲೇಖಿಸುತ್ತಾರೆ. ಬಿಜಾಪುರ ಆದಿಲಶಾಹಿಗಳಿಗೂ ಮತ್ತು ಈ ಗ್ರಂಥಕ್ಕೂ ಇರುವ ಸಂಬಂಧವೆಂದರೆ, ಈ ಗ್ರಂಥವನ್ನು ಶೇಖ ಝೈನುದ್ದೀನನಿಂದ ಬರೆಸಿದವನು ಬಿಜಾಪುರದ ಆದಿಲಶಾಹಿಗಳಲ್ಲಿಯ ೪ನೆಯ ಬಾದಶಾಹ ಮೊದಲ ಅಲಿ ಆದಿಲಶಹನು. ಅದನ್ನು ಲೇಖಕ ತನ್ನ ಈ ಗ್ರಂಥದಲ್ಲಿ ಹೇಳಿಕೊಂಡಿದ್ದಾನೆ ಮತ್ತು 'ಅತ್ಯಂತ ಪ್ರಸಿದ್ಧ, ಪರಮ ದಯಾಳು, ಮುಸಲ್ಮಾನ ದೊರೆಯಾಗಿದ್ದ ಬಿಜಾಪುರದ ಸುಲ್ತಾನ ಅಲಿ ಆದಿಲಶಹನಿಗೆ ಈ ಗ್ರಂಥವು ಸಮರ್ಪಿತ' ಎಂದು ನಮೂದಿಸುತ್ತಾನೆ.

ಶೇಖ ಝೈನುದ್ದೀನನು ಕ್ರಿ. ಶ ೧೬ನೆಯ ಶತಮಾನದಲ್ಲಿ ಉತ್ತರ ಮಲಬಾರದ ಮಾಹೆ ಸಮೀಪವಿರುವ ಚೆಂಬಾರಿ ಎಂಬ ಹಳ್ಳಿಯಲ್ಲಿಯ ಶೇಖ ಕುಟುಂಬದಲ್ಲಿ ಜನಿಸಿದನು. ಇಸ್ಲಾಂ ಧರ್ಮಶಾಸ್ತ್ರ ಪಾಂಡಿತ್ಯಕ್ಕೆ ಹೆಸರಾದ ಮನೆತನ ಅದಾಗಿತ್ತು. ಕಾಲಾಂತರದಲ್ಲಿ ಶೇಖ ಕುಟುಂಬವು ಕೇರಳದ ಪೊನ್ನಾನಿ ಪಟ್ಟಣಕ್ಕೆ ಬಂದು ನೆಲೆಸಿತು. ಕೇರಳದ ಮಕ್ಕಾ ಎಂದು ಹೆಸರಾಗಿದ್ದ ಪೊನ್ನಾನಿಗೆ ಪ್ರಾಚೀನ ಕಾಲದಿಂದಲೂ ಅರಬ ಜಗತ್ತಿನೊಂದಿಗೆ ಸಂಬಂಧವಿತ್ತು.

ಝೈನುದ್ದೀನನು ಮಕ್ಕಾದಲ್ಲಿ ಹತ್ತು ವರ್ಷವಿದ್ದು ಇಸ್ಲಾಂ ಧರ್ಮದ ಬಗ್ಗೆ ಹಲವಾರು ವಿದ್ವಾಂಸರಲ್ಲಿ ಅಭ್ಯಾಸ ಮಾಡಿದನು. ಮಕ್ಕಾದ ವಿದ್ವತ್ ಪ್ರಪಂಚ ಈತನನ್ನು ಖಾದರಿಯಾ ಸೂಫೀ ಪಂಥದ ಶೇಖನೆಂದು ಸ್ವೀಕರಿಸಿತು. ಮಕ್ಕಾದಿಂದ ಪೊನ್ನಾನಿಗೆ ಮರಳಿ ಅಲ್ಲಿಯ ಮಸೀದಿಯಲ್ಲಿ ಇಸ್ಲಾಂ ಧರ್ಮದ ಉಚ್ಚ ಶಿಕ್ಷಣ ಕೇಂದ್ರವನ್ನು ತೆರೆದು ಅಲ್ಲಿ ೩೬ ವರುಷ ಬೋಧಕನಾಗಿದ್ದನು. ಜೊತೆಗೆ ಅಂದಿನ ಅರಬ ಜಗತ್ತು, ಮೊಘಲರು, ಆದಿಲಶಾಹಿಗಳು ಮುಂತಾದ ಅನೇಕ ರಾಜಕೀಯ ಧುರೀಣರು, ಸಾಮ್ರಾಟರೊಂದಿಗೆ ನಿಕಟ ಸಂಪರ್ಕ ಹೊಂದಿದ್ದನು.

ಹಿಂದು ಅರಸರು, ಪ್ರಜೆಗಳು ಇಸ್ಲಾಂ ಧರ್ಮದ ಅನುಯಾಯಿಗಳೊಂದಿಗೆ ಸೌಹಾರ್ದತೆಯಿಂದ ಇದ್ದುದನ್ನು ಚಿತ್ರಿಸುತ್ತ, ಅದೇ ಕಾಲಕ್ಕೆ ಭಾರತಕ್ಕೆ ಬಂದ ಪೋರ್ತುಗೀಸರು ಹೇಗೆ ತಮ್ಮ ಮೇಲೆ ದಬ್ಬಾಳಿಕೆ ದೌರ್ಜನ್ಯಗಳನ್ನು ಎಸಗಿದರು ಎಂಬುದನ್ನೂ ಚಿತ್ರಿಸುತ್ತಾನೆ.

ಗ್ರಂಥದಲ್ಲಿ ನಾಲ್ಕು ಭಾಗಗಳಿದ್ದು ಮೊದಲಿನ ಮೂರು ಭಾಗಗಳಲ್ಲಿ ಜಿಹಾದದ ಅವಶ್ಯಕತೆ, ಮಲಬಾರಕ್ಕೆ ಇಸ್ಲಾಂದ ಆಗಮನ ಮತ್ತು ಮಲಬಾರ ಹಿಂದುಗಳಲ್ಲಿಯ ಕೆಲವು ವಿಚಿತ್ರ ಪದ್ಧತಿಗಳು, ಆಚರಣೆಗಳನ್ನು ವಿವರಿಸಿದ್ದಾನೆ. ನಾಲ್ಕನೆಯ ಭಾಗವನ್ನು ೧೪ ಅಧ್ಯಾಯಗಳಲ್ಲಿ ವಿಂಗಡಿಸಿದ್ದು, ಪೋರ್ತುಗೀಸರ ಆಗಮನದೊಂದಿಗೆ ಇಸ್ಲಾಂ ಧರ್ಮದ ಮೇಲಿನ ದಬ್ಬಾಳಿಕೆ ದೌರ್ಜನ್ಯಗಳು, ಸ್ಥಳೀಯ ಹಿಂದು ಅರಸ ಝಾಮೋರಿನ್ ಮತ್ತು ಪ್ರಜೆಗಳು ಸ್ಪಂದಿಸಿದ ವಿವರಗಳಿವೆ.

ಪ್ರಸ್ತುತ ಗ್ರಂಥವನ್ನು ಎಸ್.ಎಸ್. ಮುಹಮ್ಮದ ಹುಸೇನ ನೈನಾರ ಅವರು ಇಂಗ್ಲೀಷ್ ಭಾಷೆಗೆ ಅನುವಾದಿಸಿದ್ದು, ಅದು ಕೌಲಾಲಂಪುರದ ಇಸ್ಲಾಮಿಕ್ ಬುಕ್ ಟ್ರಸ್ಟ್ ಅವರು ಪ್ರಕಟಿಸಿದ್ದಾರೆ. ಕನ್ನಡ ಅನುವಾದವು ಇಂಗ್ಲೀಷ್ ಅನುವಾದವನ್ನು ಅವಲಂಬಿಸಿದೆ. ಇಂಗ್ಲೀಷ್ ಲೇಖಕ ಮತ್ತು ಪ್ರಕಾಶಕರಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

೨. ವಾಕಿಯಾತೆ ಅಸದಬೇಗ (ಅಸದಬೇಗನ ನೆನಪುಗಳು.)

ಕಾಜವಿನ್ ನಗರದಲ್ಲಿ ಹುಟ್ಟಿ ಬೆಳೆದ ಅಸದಬೇಗನು ಭಾರತಕ್ಕೆ ಬಂದು ಮೊಘಲರಲ್ಲಿ ಆಶ್ರಯ ಪಡೆದನು. ಪ್ರತಿಭಾವಂತ ಕವಿ ಮತ್ತು ಶ್ರೇಷ್ಠ ಗದ್ಯ ಲೇಖಕನೆಂದು ಪ್ರಸಿದ್ಧನಾಗಿದ್ದನು. ಅಕಬರ ಬಾದಶಹನ ಖ್ಯಾತಿವೆತ್ತ ಮಂತ್ರಿ, ಅಬುಲ್ ಫಜಲ್‌ನ ಸೇವೆಯಲ್ಲಿ ಸೇರ್ಪಡೆಯಾದನು. ಕ್ರಿ. ಶ. ೧೬೦೨ರಲ್ಲಿ ಅಬುಲ್ ಫಜಲ್‌ನ ಕೊಲೆಯಾದ ನಂತರ ಅಕಬರನ ಆಸ್ಥಾನದಲ್ಲಿ ನೇಮಕಗೊಂಡನು.

ಈ ದಿನಗಳಲ್ಲಿ ಅವನು ಬಿಜಾಪುರಕ್ಕೆ ರಾಯಭಾರಿಯಾಗಿ ಬಂದನು. ಎರಡನೆಯ ಇಬ್ರಾಹಿಮ ಆದಿಲಶಾಹನು ಇಲ್ಲಿ ಆಳುತ್ತಿದ್ದನು. ಅಕಬರನು ಇಡೀ ಉತ್ತರಭಾರತವನ್ನು ತನ್ನ ಅಧೀನದಲ್ಲಿ ತೆಗೆದುಕೊಂಡ ಮೇಲೆ ಆತನ ದೃಷ್ಟಿ ದಕ್ಷಿಣ ಭಾರತದತ್ತ ತಿರುಗಿತ್ತು. ಈ ಹಂತದಲ್ಲಿ ಮೊಘಲರ ಶಕ್ತಿಯನ್ನು ಕಂಡ ಎರಡನೆಯ ಇಬ್ರಾಹಿಮ ಆದಿಲಶಹನು ಅಕಬರನ ಸ್ವಾಮಿತ್ವವನ್ನು ಒಪ್ಪಿಕೊಂಡು ಬಿಟ್ಟನು. ಅದರ ಅಂಗವಾಗಿ, ಇಬ್ರಾಹಿಮ ಆದಿಲಶಹನ ಮಗಳನ್ನು ಅಕಬರನ ಮಗನಿಗೆ ಕೊಟ್ಟು ಮದುವೆ ಮಾಡುವುದೆಂದು ನಿರ್ಧರಿಸಿತ್ತು.

ಮದುವೆಯ ಮಾತುಕತೆ, ಶಾಸ್ತ್ರಗಳನ್ನು ಪೂರೈಸಲು ಅಕಬರನ ರಾಯಭಾರಿಯಾಗಿ ಮೊದಲು ಬಂದ ಮೀರ ಜಮಾಲುದ್ದೀನನು ತಿರುಗಿ ಬರದೇ ಇದ್ದಾಗ ಅಕಬರನು ಅಸದಬೇಗನನ್ನು ಬಿಜಾಪುರಕ್ಕೆ ಕಳಿಸಿದನು. ಅಸದಬೇಗನು ತನ್ನ ರಾಯಭಾರವನ್ನು ಯಶಸ್ವಿಯಾಗಿ ಪೂರೈಸಿದನು. ಈ ಎಲ್ಲ ವಿವರಗಳನ್ನು ತನ್ನ ನೆನಪುಗಳಲ್ಲಿ ಬರೆದಿಟ್ಟಿದ್ದಾನೆ. ಜೊತೆಗೆ ಅಂದಿನ ಉತ್ತರ ಭಾರತದ ಇನ್ನಿತರ ವಿವರಗಳೂ ಇವೆ. ಮೂಲತಃ ಪರ್ಶಿಯನ್ನ ಭಾಷೆಯಲ್ಲಿ ಬರೆದ ಗ್ರಂಥ ಸಾಕಷ್ಟು ದೊಡ್ಡದಿದೆ. ಬಿಜಾಪುರಕ್ಕೆ ಸಂಬಂಧಪಟ್ಟ ವಿಷಯಗಳನ್ನು ಮಾತ್ರ ಇಲ್ಲಿ ತೆಗೆದುಕೊಂಡಿದೆ. ಜೊತೆಗೆ ಪ್ರಾಸಂಗಿಕವಾಗಿ ಅಬುಲ್ ಫಜಲ್‌ನ ಕೊಲೆ ಮತ್ತು ಜಹಾಂಗೀರನ ಪಟ್ಟಾಭಿಷೇಕದ ವಿವರಗಳನ್ನೂ ಸೇರಿಸಿದೆ.

ಕಳೆದ ಶತಮಾನದ ಮೊದಲಭಾಗದಲ್ಲಿ ಬಿಜಾಪುರ ಆದಿಲಶಾಹಿಗಳ ಬಗ್ಗೆ ಅಧ್ಯಯನ ಮಾಡಿದವರಲ್ಲಿ ಮುಂಬಯಿ ವಿಶ್ವವಿದ್ಯಾಲಯದ ಡಾ. ಪಿ. ಎಮ್ ಜೋಶಿ ಪ್ರಮುಖರು. ಅವರು ೧೯೫೦ರಲ್ಲಿ ಸಂಭಾವನಾ ಗ್ರಂಥಕ್ಕೆ ಬರೆದ ಲೇಖನ

ಮತ್ತು ಇಲಿಯಟ್ಟ ಮತ್ತು ಡೌಸನ್ನರ ಸಂಪುಟದಲ್ಲಿಯ ಅಸದ ಬೇಗನ ಕುರಿತಾದ ಎರಡು ಲೇಖನಗಳನ್ನು ಇಲ್ಲಿ ಬಳಸಿಕೊಂಡಿದೆ. ಇಂಗ್ಲೀಷ್ ಭಾಷೆಯಲ್ಲಿಯ ಎರಡೂ ಲೇಖನಗಳನ್ನು ಕನ್ನಡಕ್ಕೆ ಅನುವಾದಿಸಿದೆ.

೩. ಆದಿಲಶಾಹಿಗಳ ಸ್ಥಾನೀಯ ಆಡಳಿತ.

ಜಪಾನದ ಸಂಶೋಧಕ ಡಾ. ಫುಕುಜಾವಾ ಹಿರೋಶಿ ಎಂಬವರು ಆದಿಲಶಾಹಿಗಳ ಸ್ಥಾನೀಯ ಆಡಳಿತ ಕುರಿತು ವಿಶೇಷ ಅಧ್ಯಯನ ಮಾಡಿ ಬರೆದ ಇಂಗೀಷ್ ಲೇಖನ ಈ ಮೂರೂ ವಿಷಯಗಳ ಇಂಗ್ಲೀಷ್ ಪುಸ್ತಕ/ಲೇಖನಗಳನ್ನು ಡಾ. ಆರ್.ಕೆ. ಕುಲಕರ್ಣಿ ಅವರು ಕನ್ನಡಕ್ಕೆ ಅನುವಾದ ಮಾಡಿದ್ದಾರೆ. ಅವರಿಗೆ ಕೃತಜ್ಞತೆಗಳು.

ಕರಡು ತಿದ್ದುವಲ್ಲಿ ಸಹಾಯ ಮಾಡಿದ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರದ ಕಾರ್ಯದರ್ಶಿಗಳಾದ ಡಾ.ಎಂ.ಎಸ್.ಮದಭಾವಿ, ಸಂಯೋಜನಾಧಿಕಾರಿಗಳಾದ ಡಾ. ವಿ.ಡಿ.ಐಹೊಳ್ಳಿ ಅವರನ್ನು ಇಲ್ಲಿ ಪ್ರೀತಿಯಿಂದ ನೆನೆಯುತ್ತೇನೆ.

ಅಂದವಾಗಿ ಮುದ್ರಿಸಿದ ಬೆಂಗಳೂರಿನ ಬಿ.ಸಿ.ಪಾಟೀಲ (ಹೆಬ್ಬಾಳ) ಮತ್ತು ಅವರ ಸಿಬ್ಬಂದಿಗೆ ಕೃತಜ್ಞತೆಗಳು.

■

*

ಶೇಖ ಝೈನುದ್ದೀನ ಮಖದುಂನನ್ನು ಕುರಿತು ಸಂಕ್ಷಿಪ್ತ ಪರಿಚಯ

ತಲೆತಲಾಂತರದಿಂದ ಇಸ್ಲಾಂ ಧರ್ಮಶಾಸ್ತ್ರ ಪಾಂಡಿತ್ಯಕ್ಕೆ ಪ್ರಸಿದ್ಧವಾಗಿದ್ದ ಶೇಖ ಕುಟುಂಬದಲ್ಲಿ ಝೈನುದ್ದಿನ ಶೇಖನು ಹಿ.೯ನೆಯ ಶತಮಾನದಲ್ಲಿ (ಕ್ರಿ.ಶ.೧೬ನೆಯ ಶತಮಾನದಲ್ಲಿ) ಉತ್ತರ ಮಲಬಾರದ ಮಾಹೆ ಸಮೀಪವಿರುವ ಚೆಂಬಾಲಿ ಎಂಬ ಊರಲ್ಲಿ ಜನಿಸಿದ್ದನು. ಕಾಲಾಂತರದಲ್ಲಿ ಶೇಖ ಕುಟುಂಬವು ಕೇರಳದ ಪೊನ್ನಾನಿ ಪಟ್ಟಣಕ್ಕೆ ಬಂದು ನೆಲೆಸಿತು. ಕೇರಳದ ಮಕ್ಕಾ ಎಂದು ಹೆಸರಾಗಿದ್ದ ಪೊನ್ನಾನಿಗೆ ಪ್ರಾಚೀನ ಕಾಲದಿಂದಲೂ ಅರಬ ಜಗತ್ತಿನೊಡನೆ ಸಂಬಂಧವಿತ್ತು. ಝೈನುದ್ದಿನನಿಂದಾಗಿ ಪೊನ್ನಾನಿಯ ಕೀರ್ತಿ ಇನ್ನೂ ಹೆಚ್ಚಿತು.

'ತುಹಫತ್ ಅಲ್-ಮುಜಾಹಿದೀನ" (ಹುತಾತ್ಮರ ಜಯ ಮೆರೆಯಲಿ) ಈ ಗ್ರಂಥವನ್ನು ಬರೆದಿರುವ ಝೈನುದ್ದಿನನಲ್ಲಿ ಇಸ್ಲಾಂ ಧರ್ಮ ಶ್ರದ್ಧೆ, ವಿದ್ವತ್ತು, ಚಾರಿತ್ರ್ಯ ಶುದ್ಧಿ, ವಾಕ್ಪಟುತ್ವ, ಲೇಖನ ಕೌಶಲ್ಯ, ಲೋಕಕಲ್ಯಾಣ ಗುಣ ಇವೆಲ್ಲ ಮೇಳೈಸಿದ್ದವು. ಝೈನುದ್ದೀನನು ಮಕ್ಕಾದಲ್ಲಿ ಹತ್ತು ವರ್ಷವಿದ್ದು ಹಲವಾರು ಇಸ್ಲಾಂ ಗುರುಗಳಲ್ಲಿ ಅಭ್ಯಸಿಸಿ ಅದ್ವಿತೀಯ ಇಸ್ಲಾಂ ವಿದ್ವಾಂಸನೆನಿಸಿದನು. ಮಕ್ಕಾದ ವಿದ್ವತ್ಪ್ರಪಂಚ ಈತನನ್ನು ಖಾದಿರಿಯತ್ ಸೂಫಿ ಪಂಥದ ಶೇಖನೆಂದು ಸ್ವೀಕರಿಸಿತು. ಮಕ್ಕಾದಿಂದ ಮರಳಿದ ಬಳಿಕ ಪೊನ್ನಾನಿಯ ಮಸೀದಿಯಲ್ಲಿ ಉಚ್ಚ ಶಿಕ್ಷಣ ಕೇಂದ್ರ ತೆರೆದು ಅಲ್ಲಿಯೇ ಮೂವತ್ತಾರು ವರ್ಷ ಬೋಧಕನಾಗಿದ್ದನು.

ಝೈನುದ್ದೀನನ ಇನ್ನೊಂದು ಮಹತ್ವದ ಮುಖವೆಂದರೆ ಆ ಕಾಲದ ಹಿಂದುಸ್ಥಾನದಲ್ಲಿ ಹಾಗೆಯೇ ಅರಬ ಜಗತ್ತಿನಲ್ಲಿದ್ದ ರಾಜಕೀಯ ಧುರೀಣರೊಡನೆ ಸಾಮ್ರಾಟರು ಸಾಮಂತರೊಡನೆ ಆಪ್ತ ಸಂಬಂಧ ಹೊಂದಿದ್ದನು. ಸಾತ್ವಿಕ ಮುಸ್ಲಿಂ

ಚಿಂತಕನೂ, ಧರ್ಮಜ್ಞನೂ ಆಗಿದ್ದ ಈತನು ಪೋರ್ಚುಗೀಜರ ದಬ್ಬಾಳಿಕೆ, ದೌರ್ಜನ್ಯಗಳಿಂದ ತನ್ನ ಜನರನ್ನು ಮುಕ್ತಗೊಳಿಸಬೇಕೆಂದು ಉತ್ಕಟ ಆಕಾಂಕ್ಷೆಯುಳ್ಳ ಮಲಬಾರಿಯಾಗಿದ್ದನು. ಇದೇ ಕಾರಣಕ್ಕಾಗಿ ಮೊಘಲ ಸಾಮ್ರಾಟನೊಡನೆ ವಿಜಯಪುರದ ಸುಲ್ತಾನ ಇಬ್ರಾಹಿಮ ಅಲಿ ಆದಿಲ್‌ಶಾಹ, ಮುಹಮ್ಮದ್ ಅಲಿ ಆದಿಲ್‌ಶಾಹ ಮತ್ತು ಕಾಲಿಕತ್ತದ ಝಮೋರಿನ್ನನೊಡನೆ ನಿಕಟ ಸಂಪರ್ಕ ಇಟ್ಟುಕೊಂಡಿದ್ದನು. ಪ್ರಸ್ತುತ ಪಂಥದುದ್ದಕ್ಕೂ ಮಲಬಾರದ ಹಿಂದು ಅರಸರು ಮತ್ತು ಹಿಂದು ಪ್ರಜೆಗಳು ಹೇಗೆ ಇಸ್ಲಾಂ ಧರ್ಮದ ಅನುಯಾಯಿಗಳೊಡನೆ ಸೌಹಾರ್ದತೆಯಿಂದ ಇದ್ದರು ಎನ್ನುವುದನ್ನು ಮೆಚ್ಚುತ್ತ ಎತ್ತಿ ತೋರಿದ್ದಾನೆ.

ಅರೇಬಿಕ್ ಭಾಷೆಯಲ್ಲಿ ರಚಿತವಾಗಿರುವ ಗ್ರಂಥ 'ತುಹಫತ್ ಅಲ್-ಮುಜಾಹಿದೀನ' ವು ಒಂದು ಅಪರೂಪದ ಐತಿಹಾಸಿಕ ದಾಖಲೆ ೧೬ನೆಯ ಶತಮಾನದ ಆರಂಭದಿಂದ ೧೫೭೮ರ ವರೆಗೆ ನಡೆದ ಘಟನೆಗಳು, ವಿದ್ಯಮಾನಗಳು ಸಪ್ರಮಾಣವಾಗಿ ಇಲ್ಲಿ ದಾಖಲಾಗಿರುವುದಲ್ಲದೆ ಅದಕ್ಕಿಂತ ಮೊದಲಿನ ಕಾಲಘಟ್ಟಗಳಲ್ಲಿ ಮಲಬಾರದಲ್ಲಿ ವಿಶೇಷತ: ಕೇರಳದಲ್ಲಿ, ಕಂಡುಬಂದ ಸ್ಥಿತ್ಯಂತರಗಳ ಹಿನ್ನೋಟವನ್ನು ನಾವು ಕಾಣಬಹುದು.

ಕೇರಳವನ್ನು ಕುರಿತು ಬರೆದ ಮೊಟ್ಟ ಮೊದಲು ಕೃತಿ ಇದಾಗಿದೆ. ಇಸ್ಲಾಂ ಧರ್ಮ ಕೇರಳಕ್ಕೆ ಹೇಗೆ ಕಾಲಿಟ್ಟಿತು ಮತ್ತು ಪಸರಿಸಿತು ಎನ್ನುವುದನ್ನು ತಿಳಿಸುವುದಲ್ಲದೇ ಮಲಬಾರದ ಹಿಂದುಗಳಲ್ಲಿದ್ದ ಧಾರ್ಮಿಕ, ಕೌಟುಂಬಿಕ ಹಾಗೂ ಸಾಮಾಜಿಕ ಪದ್ಧತಿಗಳನ್ನು ಆಚರಣೆಗಳನ್ನು (ಇಷ್ಟ, ಅನಿಷ್ಟ ಎಲ್ಲವನ್ನೂ) ಕೂಲಂಕಷವಾಗಿ ಚಿತ್ರಿಸುವ ಐತಿಹಾಸಿಕ ಗ್ರಂಥ ಇದಾಗಿದೆ. ಗ್ರಂಥ ಕರ್ತೃ ಝೈನುದ್ದೀನ ಶೇಖನು ತಾನು ಪ್ರತ್ಯಕ್ಷ ಕಂಡದ್ದನ್ನು, ಕೇಳಿದ್ದನ್ನು ಮತ್ತು ವಿಶ್ವಾಸಾರ್ಹವಾದ ಆಕರಗಳಿಂದ ದೊರೆತ ವಿಷಯಗಳನ್ನು ವಸ್ತುನಿಷ್ಠವಾಗಿ ದಾಖಲಿಸಿದ್ದಾನೆ.

ಈ ಗ್ರಂಥಕಾರನ ಕಾಲದಲ್ಲಿ ಅತ್ಯಂತ ಪ್ರಸಿದ್ಧ, ಪರಮ ದಯಾಳು, ಮುಸಲ್ಮಾನ ದೊರೆಯಾಗಿದ್ದ ವಿಜಯಪುರದ ಸುಲ್ತಾನ ಅಲಿ ಆದಿಲ್ ಶಾಹನಿಗೆ ಈ ಗ್ರಂಥ ಸಮರ್ಪಿತವಾಗಿದೆ.

■

*

ಪ್ರವೇಶ

ಪರಮ ದಯಾಳು, ಕೃಪಾಕರ ಅಲ್ಲಾಹನ ಹೆಸರಿನಲ್ಲಿ ಬೇರೆಲ್ಲ ಧರ್ಮಗಳಿಗಿಂತ ಇಸ್ಲಾಮ ಧರ್ಮವನ್ನು ಶ್ರೇಷ್ಠವಾಗಿ ಸೃಷ್ಟಿಸಿದ ಮತ್ತು ಅದರ ಅನುಯಾಯಿಗಳ ಘನತೆಯನ್ನು ಕಾಲಕ್ರಮದಲ್ಲಿ ಹಂತ–ಹಂತವಾಗಿ ಮೇಲೇರಿಸಿದ ಆ ಅಲ್ಲಾಹನಿಗೆ ಎಲ್ಲ ಸ್ತುತಿ ಸಲ್ಲುತ್ತದೆ. ಸತ್ಯ ಧರ್ಮದ ಪಥವನ್ನು ನಿರ್ಮಿಸಿದ ಅಲ್ಲಾಹನ ದೂತನಿಗೆ ಅವನ ಆಶೀರ್ವಾದ ಮತ್ತು ಶಾಂತಿ ಲಭಿಸಲಿ. ಹಾಗೆಯೇ ಆತನ ಕುಟುಂಬ ಆತನ ಪೀಳಿಗೆ ಮತ್ತು ಒಡನಾಡಿಗಳ ಮೇಲೆಲ್ಲ ದೈವ ನಿರ್ಣಯದ ದಿನ ಬರುವವರೆಗೆ ಭಗವಂತನ ಕೃಪಾಶೀರ್ವಾದ ಹಾಗೂ ಶಾಂತಿ ಸುರಿಯಲಿ.

ಅಲ್ಲಾಹ ಸದಾಕಾಲ ಎತ್ತರದಲ್ಲಿರಲಿ. ಮಾನವನ ಭೌತಿಕ ಅವಶ್ಯಕತೆಗಳನ್ನೇ ಬೇರ್ಪಡಿಸುವುದಲ್ಲದೆ ಅವನ ಮೇಲೆ ಬುದ್ಧಿ, ಸಾರಾಸಾರ ವಿವೇಕ–ಇಂಥಹ ಮಹತ್ವದ ಕೃಪೆಗಳನ್ನು ಆ ದಯಾಘನನು ಧಾರೆಯೆರೆದಿದ್ದಾನೆ. ಹಾಗೆಯೇ ಭಗವಂತನು ಮನುಷ್ಯನಿಗೆ ಬಾಳಿದ ಪರಮ ಸುಖದ, ತೃಪ್ತಿಯ, ದಾರಿಯನ್ನೂ ತಿಳಿಸಿದ್ದಾನೆ. ಈ ಗುರಿಯನ್ನು ಮನುಷ್ಯ ತಲುಪಬೇಕೆಂದು ಅಲ್ಲಾಹನು ತನ್ನ ಅಸಂಖ್ಯ ದೂತರನ್ನೂ ಇಲ್ಲಿಗೆ ಕಳಿಸಿದ್ದಾನೆ. ಆ ದೂತರೆಂದರೆ ಬಹಳ ದೊಡ್ಡ ನೇತಾರರು, ಮಾರ್ಗದರ್ಶಕರು ಮತ್ತು ಒಳ್ಳೆಯ ಹಾಗೆಯೇ ಎಚ್ಚರಿಕೆಯ ಸಂದೇಶಗಳನ್ನು ಹೊತ್ತು ತಂದವರು; ಅವರೆಲ್ಲ ಅಲ್ಲಾಹನ ಕುರಿತ ಸರಿಯಾದ ತಿಳಿವಳಿಕೆ ಜನರಿಗೆ ಲಭಿಸುವಂತೆ ಮಾರ್ಗದರ್ಶನ ಮಾಡಿದವರು.

ಉಳಿದ ಸಮುದಾಯಗಳಿಗಿಲ್ಲದ ವಿಶೇಷವಾದ ಗೌರವವನ್ನು ಮುಸಲ್ಮಾನರಾದ ನಮಗೆ ಕೊಟ್ಟಿದ್ದಾನೆ. ಅದೆಂದರೆ ಮಹಮ್ಮದನ ಸಮುದಾಯದವರಾಗಿರುವ ಮುಸಲ್ಮಾನರನ್ನು ಪರಮಾತ್ಮನು ಬಹಳ ಉನ್ನತ ಸ್ಥಾನದಲ್ಲಿಟ್ಟಿದ್ದಾನೆ. ಅವನ ಸೃಷ್ಟಿಯಲ್ಲಿಯೇ ಇವರು ಪರಮೋನ್ನತ ಶ್ರೇಣಿಯಲ್ಲಿದ್ದವರು. ಮುಸಲ್ಮಾನರನ್ನು ಎತ್ತರದ

ಸ್ಥಾನದಲ್ಲಿಟ್ಟಿರುವ ಅಲ್ಲಾಹ ಹೀಗೆ ಹೇಳಿದ್ದಾನೆ. "ಮಾನವ ಕುಲಕ್ಕೆ ಉನ್ನತ ಸ್ಥಾನದಲ್ಲಿ ಇರುವವರು ನೀವು".

ಪ್ರವಾದಿ ಮಹಮ್ಮದನು ಹೇಳಿದನು : "ಅದಮ್ಮನ ಮಕ್ಕಳ ನೇತಾರನು ನಾನೇ. ಈ ಮಾತನ್ನು ನಾನು ಸೊಕ್ಕಿನಿಂದ ಹೇಳುತ್ತಿಲ್ಲ. ಪ್ರವಾದಿ ಮಹಮ್ಮದನು ಅದಮ್ಮನ ಮಕ್ಕಳ ನೇತಾರನೆಂದರೆ ಅವರೆಲ್ಲರಿಗಿಂತಲೂ ಅನನ್ಯನಾಗಿ ಶ್ರೇಷ್ಠನೆಂದು ಅರ್ಥ. ಸಮುದಾಯದ ಶ್ರೇಷ್ಠತೆಯು ಪ್ರವಾದಿಯ ಶ್ರೇಷ್ಠತೆಯ ಸಹಜ ಪರಿಣಾಮವಾಗಿದೆ. ಆದ್ದರಿಂದ ಒಂದು ಸಮುದಾಯವಾಗಿ ಮುಸಲ್ಮಾನರು ಉಳಿದವರಿಗಿಂತ ಶ್ರೇಷ್ಠರಾಗಿದ್ದಾರೆ.

ಪ್ರವಾದಿಯ ಸಂಗಾತಿಯಾಗಿದ್ದ ವಿಖ್ವಾದನನ್ನು ಉದ್ಧರಿಸುತ್ತ ಇಮಾಮ ಅಹಮ್ಮದ ಹೇಳುತ್ತಾನೆ : ಪ್ರವಾದಿಯು ಹೇಳಿದನು. "ಶ್ರೇಷ್ಠ ಸಂತರ ಕೀರ್ತಿ ಅಥವಾ ಕ್ಷುಲ್ಲಕ ಜನರ ಅಲ್ಪತ್ವವನ್ನು ಕುರಿತು ತನ್ನ ಸಂದೇಶವನ್ನು ಅಲ್ಲಾಹನು ಭೂಮಿಯ ಮೇಲಿರುವ ಎಲ್ಲ ಮಹಾಲಯಗಳಿಗೆ ಹಾಗೆಯೇ ಗುಡಿಸಲುಗಳಿಗೆ ಮುಟ್ಟುವಂತೆ ಮಾಡುತ್ತಾನೆ. ಅಲ್ಲಾಹನು ಅವರನ್ನು ಮೇಲೆತ್ತುತ್ತಾನೆ. ಇಲ್ಲವೆ ಸುಬ್ಜಗೊಳಿಸಿ ತನ್ನ ಸನ್ನಿಧಿಗೆ ಶರಣಾಗುವಂತೆ ಮಾಡುತ್ತಾನೆ." ನಾನು ಹೇಳುವುದೇನೆಂದರೆ ಎಲ್ಲ ಧರ್ಮ ಇರುವುದು ಅಲ್ಲಾಹನಿಗಾಗಿ.

ಈಗ ಗೊತ್ತಿರುವ ಸತ್ಯವೆಂದರೆ ಅಲ್ಲಾಹನ ಕೀರ್ತಿ ಇನ್ನೂ ಎತ್ತರಕ್ಕೇರಲಿ. ಮಾನವರು ವಾಸಿಸುತ್ತಿರುವ ಎಲ್ಲ ಭೂ ಪ್ರದೇಶಗಳಿಗೆ ಖಡ್ಗದ ಬಲದಿಂದ ಮತ್ತು ಕೆಲವು ಪ್ರದೇಶಗಳಲ್ಲಿ ಕೇವಲ ತತ್ವ ಬೋಧನೆಯಿಂದ ಇಸ್ಲಾಮ ಧರ್ಮವು ಹಬ್ಬುವಂತೆ ಅಲ್ಲಾಹನು ಮಾಡಿದನು. ಮಲಬಾರದ ಜನರು ಇಸ್ಲಾಮ ಧರ್ಮವನ್ನು ಯಾವ ಭೀತಿ ಅಥವಾ ಒತ್ತಾಯಕ್ಕೆ ಒಳಗಾಗದೇ ತಾವೇ ತಾವಾಗಿ ಸ್ವೀಕರಿಸುವಂತೆ ಮಾಡುವಲ್ಲಿ ಅಲ್ಲಾಹ ಬಹು ಕರುಣಾಳು ಆಗಿದ್ದಾನೆ. ಇಸ್ಲಾಮ ಧರ್ಮದ ಸ್ವೀಕಾರ ಕೆಳಗಿನಂತೆ ನಡೆಯಿತು : ವಿದೇಶಿ ಮುಸಲ್ಮಾನರ ಗುಂಪೊಂದು ಮಲಬಾರದ ಬಂದರಗಳಿಗೆ ಬಂದು ಅಲ್ಲಿಯೇ ನೆಲೆಯೂರಿದರು. ಕಾಲಕ್ರಮೇಣ ದಿನೇ ದಿನೇ ಈ ಪಟ್ಟಣಗಳ ನಿವಾಸಿಗಳು ಇಸ್ಲಾಮನ್ನು ಅಪ್ಪಿಕೊಂಡರು. ಬಹು ಬೇಗನೆ ಇಸ್ಲಾಮವು ಈ ಎಲ್ಲ ಪ್ರದೇಶದಲ್ಲಿ ದ್ರುತಗತಿಯಲ್ಲಿ ವಿಸ್ತರಿಸಿತು. ಮುಸಲ್ಮಾನ ಸಮುದಾಯದ ನೆಲೆಯೂರಿಕೆ ಆರಂಭವಾಯಿತು. ಆ ಕಾಲದಲ್ಲಿ ಮುಸಲ್ಮಾನೇತರ ರಾಜರು ಆಳುತ್ತಿದ್ದರು. ಅವರಾರಲ್ಲೂ ಯಾವ ಪ್ರಕಾರದ ಧರ್ಮ ಇಲ್ಲವೆ ವಿರೋಧ ಬರಲಿಲ್ಲ. ಈ ಆಳರಸರ ಕುರಿತು ಹೇಳಬೇಕೆಂದರೆ ಇವರೆಲ್ಲ ತಮ್ಮ ಪ್ರಾಚೀನ ಧರ್ಮ ಮತ್ತು ಅದರ ವಿಧಿ ವಿಧಾನಗಳಿಗೆ ಕಟಿಬದ್ಧವಾಗಿ ಧರ್ಮಾಚರಣೆಯಲ್ಲಿದ್ದರು.

ಈ ತೆರನಾಗಿ ಮುಸಲ್ಮಾನರು ಅಲ್ಲಾಹನ ಅಪರಿಮಿತ ದಯೆ ಮತ್ತು ಆಶೀರ್ವಾದದಿಂದ ಶಾಂತಿ ಮತ್ತು ಸಮೃದ್ಧಿಯಿಂದ ಬಾಳತೊಡಗಿದರು. ಆದರೆ ಈ

ಸ್ಥಿತಿ ಬಹಳ ದಿನ ಉಳಿಯಲಿಲ್ಲ. ಅಲ್ಲಾಹನ ಹರಕೆಯನ್ನು ಮರೆತು ಅವನನ್ನು ಧಿಕ್ಕರಿಸುತ್ತ ಮುಸಲ್ಮಾನರು ದಾರಿ ತಪ್ಪಿ ಪಾಪದ ಜೀವನ ನಡೆಸತೊಡಗಿದರು. ಆದ್ದರಿಂದ ಅಲ್ಲಾಹನು ಕ್ರೂರ ಮತ್ತು ದುಷ್ಟ ಪೋರ್ಚುಗೀಸ ಯೂರೋಪಿಯನ್ನರನ್ನು ಇವರ ಮೇಲೆ ಅಧಿಕಾರ ನಡೆಸಲು ಕಳಿಸಿದನು.

ಪೋರ್ಚುಗೀಸರು ಮುಸಲ್ಮಾನರ ವಾಸಸ್ಥಾನಗಳ ಮೇಲೆ ಮುತ್ತಿಗೆ ಹಾಕಿದರು ಹಾಗೂ ಅವರನ್ನು ಎಲ್ಲ ಪ್ರಕಾರದ ದಬ್ಬಾಳಿಕೆಗೆ ಒಳಗು ಮಾಡಿದರು. ಪೋರ್ಚುಗೀಸರು ಮುಸಲ್ಮಾನರ ಮೇಲೆ ರಾಜಾರೋಷವಾಗಿ ಅಸಹ್ಯ ಕುಕೃತ್ಯಗಳನ್ನು ಮತ್ತು ದೌರ್ಜನ್ಯಗಳನ್ನು ಎಸಗಿದ್ದನ್ನು ಎಣಿಸಲು ಸಾಧ್ಯವಿಲ್ಲ. ಈ ಪೋರ್ಚುಗೀಸರ ದುಷ್ಟ ಆಳ್ವಿಕೆ ಎಂಭತ್ತು ವರ್ಷಗಳಿಗೂ ಮಿಕ್ಕಿ ಸಾಗಿತು. ಆ ಅವಧಿಯಲ್ಲಿ ಮುಸಲ್ಮಾನರ ಸ್ಥಿತಿ ಅತಿ ಚಿಂತಾಜನಕವಾಗಿತ್ತು. ಅವರು ನಿರ್ಗತಿಕರಾಗಿ ಅಶಕ್ತರೂ ದುರ್ಬಲರು ಆಗಿದ್ದರು. ಈ ದುರ್ಗತಿಯ ಕೂಪದಿಂದ ಹೊರಬರಲು ಅವರಿಗೆ ದಾರಿಯೇ ಇರಲಿಲ್ಲ. ಬೇರೆ ಪ್ರದೇಶವನ್ನು ಆಳುತ್ತಿದ್ದ ಸೈನಿಕ ಸಾಮರ್ಥ್ಯ ಮತ್ತು ಆರ್ಥಿಕ ಪ್ರಾಬಲ್ಯ ಹೊಂದಿದ್ದ ಸುಲ್ತಾನರು ಮತ್ತು ಅಮೀರರು ಈ ಮಲಬಾರ ಮುಸಲ್ಮಾನರನ್ನು ರಕ್ಷಿಸಿ ಉಳಿಸಲು ಮುಂದೆ ಬರಲಿಲ್ಲ. ಕಾರಣವೆಂದರೆ ಈ ಸುಲ್ತಾನರು ಮತ್ತು ಅಮೀರರು ಧರ್ಮಾಸಕ್ತರಿರಲಿಲ್ಲ ಮತ್ತು ಮುಂಬರುವ ಜೀವನಕ್ಕಿಂತ (ಸ್ವರ್ಗಕ್ಕಿಂತ) ಇಹ ಜೀವನದಲ್ಲಿ ಅವರಿಗೆ ಆಸಕ್ತಿ ಇತ್ತು. ಈ ಕ್ಷಣಿಕ ಲೋಕದ ಸೌಖ್ಯದಲ್ಲಿ ಮಗ್ನರಾಗಿದ್ದರು. ಇಂಥವರು ಅಲ್ಲಾಹನ ಮಾರ್ಗದಲ್ಲಿ ಹೋರಾಡಲು (ಜಿಹಾದದಲ್ಲಿ ತೊಡಗಿಸಿಕೊಳ್ಳಲು) ಮತ್ತು ತಮ್ಮ ಸಂಪತ್ತನ್ನು ಪರಮಾತ್ಮನಲ್ಲಿಯ ಶ್ರದ್ಧೆಗೋಸ್ಕರ ವ್ಯಯಿಸಲು ಸಿದ್ಧರಿರಲಿಲ್ಲ. ಇಂಥ ಸನ್ನಿವೇಶದಲ್ಲಿ ಈ ಗ್ರಂಥವನ್ನು ರಚಿಸಲು ಕೈಕೊಂಡಿದ್ದೇನೆ. ಕ್ರಾಸ್‌ನ್ನು ಪೂಜಿಸುವ ಪೋರ್ಚುಗೀಸರ ವಿರುದ್ಧ ಧರ್ಮಯುದ್ಧದಲ್ಲಿ ತೊಡಗಲು ಮುಸಲ್ಮಾನ ಧರ್ಮದ ಅನುಯಾಯಿಗಳಿಗೆ ಸ್ಫೂರ್ತಿ ತುಂಬಲು ಈ ಪುಸ್ತಕವನ್ನು ಬರೆಯಲು ತೊಡಗಿದ್ದೇನೆ. ಈ ನನ್ನ ಪ್ರಯತ್ನಕ್ಕೆ ಸಮರ್ಥನೆ ನೀಡುವ ಸಂಗತಿಯೆಂದರೆ ಪೋರ್ಚುಗೀಸರು ಮುಸಲ್ಮಾನರ ಎಲ್ಲ ವಸತಿ ಸ್ಥಾನಗಳನ್ನು ಮುತ್ತಿಗೆ ಹಾಕಿ ಅವುಗಳನ್ನೆಲ್ಲ ಕೈವಶ ಮಾಡಿಕೊಡದ್ದರಿಂದ ಪ್ರತಿಯೊಬ್ಬ ಮುಸಲ್ಮಾನನು ಜಿಹಾದದಲ್ಲಿ ತೊಡುಗುವುದು ಅವನ ಕರ್ತವ್ಯವಾಗಿದೆ. ಅವರು ಅಸಂಖ್ಯ ಮುಸಲ್ಮಾನರನ್ನು ಕೊಂದಿದ್ದಾರೆ. ಕೈಗೆ ಸಿಕ್ಕು ಬಂಧಿತರಾಗಿ ಕೂಡಿಹಾಕಲ್ಪಟ್ಟವರ ಸಂಖ್ಯೆ ಹೇಳತೀರದು. ಅನೇಕರನ್ನು ಒತ್ತಾಯದಿಂದ ಕ್ರಿಶ್ಚನ್ ಧರ್ಮಕ್ಕೆ ಮತಾಂತರಗೊಳಿಸಲಾಗಿದೆ. ಕಟ್ಟಿಕೊಂಡು ಹೋಗಿ ಮುಸಲ್ಮಾನ ಮಹಿಳೆಯರನ್ನು ಕೆಡಿಸಿ ಅವರಿಂದ ಕ್ರಿಶ್ಚನ್ನ ಮಕ್ಕಳನ್ನು ಹಡೆವಂತೆ ಮಾಡುವುದು. ಸಿಕ್ಕಾಪಟ್ಟಿಯಾಗಿ ಅವಿರತವಾಗಿ ಸಾಗಿತ್ತು. ಹೀಗೆ ಮಾಡಿ ಆ ರೀತಿಯಾಗಿ ಹುಟ್ಟಿದ ಮಕ್ಕಳನ್ನು ಅವರು ಬೆಳೆದ ಮೇಲೆ ಮುಸಲ್ಮಾನರನ್ನು ಹಣಿದು ತ್ರಸ್ತಗೊಳಿಸುವುದೇ ಅವರ ಉದ್ದೇಶವಾಗಿತ್ತು. ಆ ದಿಶೆಯಲ್ಲಿ ಆ ಮಕ್ಕಳನ್ನು ಸಿದ್ಧಗೊಳಿಸಲಾಗುತ್ತಿತ್ತು.

ನಾನು ಈ ಗ್ರಂಥಕ್ಕೆ 'ತುಹಫತ್ ಅಲ್-ಮುಜಾಹಿದ್ದೀನ" ಎಂದು ಶೀರ್ಷಿಕೆಯನ್ನು ಕೊಟ್ಟಿದ್ದೇನೆ. ಪೋರ್ಚುಗೀಸರನ್ನು ಕುರಿತು ಈ ಸಂಕ್ಷಿಪ್ತ ವಿವರದಲ್ಲಿ ಧರ್ಮಕ್ಕಾಗಿ ಹೋರಾಡಿ ಮಡಿದ ಮುಸಲ್ಮಾನ ಧರ್ಮಯೋಧರಿಗೆ ಸಲ್ಲಿಸಿದ ಕೀರ್ತಿ ನಮನ ಇದು. ಮಲಬಾರ ಭೂಮಿಯಲ್ಲ ಇಸ್ಲಾಮ ಧರ್ಮದ ವಿರುದ್ಧ ಪೋರ್ಚುಗೀಸರು ಎಸಗಿದ ದೌರ್ಜನ್ಯಗಳನ್ನು ಇಲ್ಲಿ ವಿವರಿಸಲಾಗಿದೆ. ಇದಲ್ಲದೆ ಇಲ್ಲಿ ಮಲಬಾರದಲ್ಲಿ ಇಸ್ಲಾಮದ ಪ್ರವೇಶ ಮತ್ತು ಬೆಳವಣಿಗೆಯ ಇತಿಹಾಸ, ಜಿಹಾದಕ್ಕೆ ಸಂಬಂಧಪಟ್ಟ ವಿವರ ಜಿಹಾದಕ್ಕೆ ಸಿಗುವ ಪುಣ್ಯಕ್ಷೇತ್ರಫಲ. ಹಾಗೂ ಕುರಾನದಲ್ಲಿ ಮತ್ತು ಪ್ರವಾದಿ ಪರಂಪರೆಯಲ್ಲಿ ಅದಕ್ಕಿರುವ ಮಹತ್ವ ಇವೆಲ್ಲವುಗಳ ವಿವರಣೆಯುಂಟು. ಅದರಂತೆಯೇ ಮಲಬಾರದಲ್ಲಿರುವ ಹಿಂದುಗಳಲ್ಲಿಯ ವಿಚಿತ್ರ ರೂಢಿಗಳನ್ನು ಸಂಪ್ರದಾಯ ಪದ್ಧತಿಗಳನ್ನು ದಾಖಲಿಸಲಾಗಿದೆ.

ಎಲ್ಲ ಪ್ರಭುಗಳಲ್ಲಿಯೇ ಅತ್ಯಂತ ಗೌರವಾನ್ವಿತನಾದವನೂ ಪರಮ ಉದಾತ್ತನೂ ಆಗಿರುವ ಮತ್ತು ನಾಸ್ತಿಕರನ್ನು ಮರ್ದನ ಮಾಡುವಲ್ಲಿ ಅತ್ಯಂತ ಸಂತೋಷ ಪಡುವವನೂ ಮತ್ತು ದೈವಾಜ್ಞೆಯನ್ನು ಎತ್ತಿ ಹಿಡಿಯುವಲ್ಲಿ ಬಹು ದೊಡ್ಡ ಕೀರ್ತಿಯನ್ನು ಕಂಡವನು ಆಗಿರುವ ಆ ವ್ಯಕ್ತಿಗೆ ಈ ಪುಸ್ತಕವನ್ನು ಅರ್ಪಿಸುತ್ತೇನೆ. ಅಲ್ಲಾಹನ ಭಕ್ತರ ಸೇವೆಗಾಗಿ ತನ್ನ ಮನಸ್ಸನ್ನು ಮುಡುಪಾಗಿಟ್ಟಿದ್ದಾನೆ. ಅವನ ಉನ್ನತ ಧೈರ್ಯವು ಅಲ್ಲಾಹನ ವೈರಿಗಳನ್ನು ನಾಶಮಾಡುವಂತೆ ಪ್ರೇರೇಪಿಸುತ್ತದೆ. ಅಲ್ಲಾಹನ ನಾಡಿನಿಂದ ಪಾಖಂಡವಾದವನ್ನು ಮತ್ತು ಪ್ರಮಾದವನ್ನು ನಿರ್ನಾಮ ಮಾಡುತ್ತಲಿರುವ ಈತನು ಇಸ್ಲಾಂ ಧರ್ಮವನ್ನು ಪುನಶ್ಚೇತನಗೊಳಿಸುವವನಾಗಿದ್ದಾನೆ. ಈತನ ಮುಖ್ಯ ಉದ್ದೇಶವು ವಿದ್ವಾಂಸರನ್ನು ಪ್ರೀತಿಯಿಂದ ಕಾಣುವುದು ಮತ್ತು ಅಶಕ್ತರಿಗೆ ಹಾಗೆಯೇ ಅಪರಿಚಿತರಿಗೆ ಸಹಾಯಮಾಡುವುದಾಗಿದೆ. ಈತನು ಬಹುದೊಡ್ಡ ಆಡಳಿತಗಾರನು. ವಯಸ್ಸು ಚಿಕ್ಕದಾಗಿದ್ದರೂ ಹಗಲು ರಾತ್ರಿಗಳೆಲ್ಲ ಇವನನ್ನು ಸುಸಂಸ್ಕೃತಗೊಳಿಸಿವೆ. ವೈರಿಗಳು ದ್ವೇಷಿಸುತ್ತಿದ್ದರು. ಇವನು ಚಿರಂತನ ಕೀರ್ತಿಯ ಒಡೆಯನಾಗಿದ್ದಾನೆ. ಆತನ ಔದಾರ್ಯದ ಉದಾತ್ತ ಕಾರ್ಯಗಳು ಈ ಸಮಸ್ತ ಭೂಮಿಯನ್ನು ಆವರಿಸಿವೆ. ಈತನ ಸುಕೃತಿಗಳ ಗುಣವು ಸಮಸ್ತ ವಿಶ್ವದ ಮೂಲೆ ಮೂಲೆಗೂ ಪಸರಿಸಿದೆ. ಬಲಾಢ್ಯರೆಲ್ಲ ಅವನೆದುರು ನತಮಸ್ತಕರಾಗಿದ್ದಾರೆ. ಅರೇಬಿಯಾ ಮತ್ತು ಅರಬೇತರ ರಾಜ್ಯಗಳಲ್ಲಿಯ ಎಲ್ಲ ವೀರಸಂಜಾತರು ಇವನ ಪರಮಾಧಿಕಾರಕ್ಕೆ ಶರಣಾಗಿದ್ದಾರೆ. ಈತನು ಉದಾತ್ತ ಸಾರ್ವಭೌಮನು. ದೂರ ದೂರದಿಂದ ಬರುವ ಎಲ್ಲ ವಿದ್ವಾಂಸರ ಮೇಲೆ ಈತನ ಹಸ್ತದಿಂದ ರತ್ನಗಳ ಮಳೆ ಸುರಿಯುತ್ತದೆ. ಈ ಸುಸಂಸ್ಕೃತ ರಾಜನ ದಯೆಯು ಈತನ ಹಿಂದಿನ ಎಲ್ಲ ಉದಾರ ಚಿತ್ತದ ಅರಸರ ಅಂತಸ್ತನ್ನು ಹೆಚ್ಚಿಸುತ್ತದೆ. ಹೋದಲ್ಲೆಲ್ಲ ಯಶಸ್ಸನ್ನು ಗೆಲವನ್ನು ಪಡೆಯುತ್ತಿರುವ ಈ ರಾಜನು ಪರಿಶುದ್ಧವಾದ ಕಳಕಳಿಯ

ಕಾರ್ಯಗಳಲ್ಲೆಲ್ಲ ಸಂತೋಷ ಪಡೆಯುತ್ತಾನೆ. ಈತನ ಸಾಹಸಕೃತ್ಯಗಳನ್ನು ಎಲ್ಲ ಸಭೆಗಳಲ್ಲಿ ಪಟ್ಟಣಗಳಲ್ಲಿ ಬಹುವಾಗಿ ಗಣನೆಗೆ ತಂದುಕೊಳ್ಳಲಾಗುತ್ತದಲ್ಲದೆ ಈತನ ಉದಾರ ಕೃತಿಗಳ ಇತಿಹಾಸ ಎಲ್ಲ ದೇಶಗಳಿಗೆ ಪಸರಿಸಿದೆ. ಪಾಖಂಡಿಗಳನ್ನು ನಿರ್ಮೂಲನಗೊಳಿಸಲು ಮತ್ತು ಪಾಪಿಗಳನ್ನು ನಿರ್ನಾಮ ಮಾಡಲು ಈತನು ಶ್ರಮಿಸುತ್ತಿದ್ದಾನೆ. ದಯೆಯ ಮತ್ತು ನ್ಯಾಯದ ಧ್ವಜವನ್ನು ಹಾರಿಸುತ್ತ ಒಳ್ಳೆಯವರಿಗೆ ತನ್ನ ಉದಾರ ಹಸ್ತ ಚಾಚುತ್ತಾನೆ. ಹೀಗಿರುವನು ಬಲಾಢ್ಯನಾದ ವಿಜಯಶಾಲಿಯಾದ ಮತ್ತು ದಯೆಯಿಂದ ಕೂಡಿದ ಸುಲ್ತಾನ ಅಲಿ ಆದಿಲ್‌ಶಾಹ. ಅಲ್ಲಾಹನು ಇಸ್ಲಾಮ ಧರ್ಮದ ಶ್ರದ್ಧೆಯ ಅಡಿಪಾಯವನ್ನು ತನ್ನ ಶಕ್ತಿಯಿಂದ ಇನ್ನಷ್ಟು ಎತ್ತರಿಸಿ ಬಲಿಷ್ಠಗೊಳಿಸಲಿ, ಈ ರಾಜನು ತನ್ನ ಧಗಧಗಿಸುವ ಜ್ವಾಲೆಯಿಂದ ಧರ್ಮದ್ರೋಹಿಗಳನ್ನು ದಮನ ಮಾಡಿ ಅವರ ಎಲ್ಲ ಬಣಗಳನ್ನು ಚೆಲ್ಲಾಪಿಲ್ಲಿ ಮಾಡಲಿ. ಸುಲ್ತಾನನ ರಾಜ್ಯವು ಪೂರ್ವ ಪಶ್ಚಿಮಗಳನ್ನೆಲ್ಲ ಆವರಿಸಲಿ; ಅವನ ಪ್ರಭುತ್ವ ಭೂ ಸಮುದ್ರಗಳನ್ನೆಲ್ಲ ಒಳಗೊಂಡು ಅರಬರು ಮತ್ತು ಅರಬೇತರರ ಮೇಲೆ ಅವನ ಸ್ವಾಮಿತ್ವ ಸ್ಥಾಪಿತವಾಗಲಿ; ಈ ನೇತಾರನ ಸದ್ಗುಣಗಳಿಗೆ ಸಾಕ್ಷಿಯಾಗಿ ಪೂರ್ವ ಹಾಗೂ ಪಶ್ಚಿಮ ದೇಶಗಳು ಘೋಷಿಸುತ್ತವೆ ಅದ್ಭುತ ಶಕ್ತಿ ಧಾರಣ ಜೀವಿಗಳು (ಜಿನ್ಸ್) ಮತ್ತು ಮಾನವರು ಅವನ ಸೇವೆಗೈಯುತ್ತಲಿದ್ದಾರೆ. ಜ್ಞಾನಿಗಳ ಮೇಲೆ ಪ್ರೇಮ ಮತ್ತು ದೈವಶ್ರದ್ಧೆ ಈತನ ಹುಟ್ಟುಗುಣ. ವಿದ್ವಾಂಸರ ಅಂತಸ್ತನ್ನು ಎತ್ತರಿಸುವುದು ಮತ್ತು ಅವರಿಗೆ ಗೌರವ ಸಲ್ಲಿಸುವುದು ಇದೆಲ್ಲವನ್ನು ಪರಮೋನ್ನತ ಶಾಸನದ ಪ್ರಕಾರವೇ ಮಾಡುತ್ತಾನೆ. ಈತನ ದಯಾಳುತನ ಮತ್ತು ವಿಶ್ವಕ್ಕೆ ಅವನು ನೀಡುವ ನ್ಯಾಯ ನಿರಂತರವಾಗಿ ಸಾಗುವಂತೆ ಅಲ್ಲಾಹನು ಕರುಣಿಸಲು ಹಾಗೆಯೇ ಅವನು ಜಗತ್ತಿನ ಜನರ ಮೇಲೆ ತನ್ನ ಔದಾರ್ಯ ಮತ್ತು ಸಾತ್ವಿಕ ಸಂಪತ್ತು ಇವುಗಳನ್ನು ಪ್ರವಾದಿ ಮಹಮ್ಮದ ಮತ್ತು ಆತನ ಸಂತಾನದ ಮುಖಾಂತರ ಧಾರೆಯೆರೆಯಲಿ.

ಈ ಗ್ರಂಥದಲ್ಲಿ ನಾಲ್ಕು ಭಾಗಗಳಿದ್ದು, ನಾಲ್ಕನೆಯ ಭಾಗದಲ್ಲಿ ಹದಿನಾಲ್ಕು ಅಧ್ಯಾಯಗಳಿವೆ.

ಭಾಗ ಒಂದು: ಜಿಹಾದದ ಅವಶ್ಯಕತೆ ಕುರಿತು ಮತ್ತು ಅದಕ್ಕೆ ಸಂಬಂಧಿಸಿದ ಬೋಧನೆಗಳನ್ನು ಒಳಗೊಂಡ ವ್ಯವಸ್ಥಿತ ನಿರೂಪಣೆ.

ಭಾಗ ಎರಡು: ಮಲಬಾರಕ್ಕೆ ಇಸ್ಲಾಮದ ಆಗಮನ ಹಾಗೂ ಅದರ ಪ್ರಸರಣಕ್ಕೆ ಸಂಬಂಧಿಸಿದ ಇತಿಹಾಸ.

ಭಾಗ ಮೂರು: ಮಲಬಾರದ ಹಿಂದುಗಳಲ್ಲಿರುವ ಕೆಲವು ವಿಚಿತ್ರ ಪದ್ಧತಿಗಳು, ಆಚರಣೆಗಳು.

ಭಾಗ ನಾಲ್ಕು: ಹದಿನಾಲ್ಕು ಅಧ್ಯಾಯಗಳನ್ನೊಳಗೊಂಡ ಈ ಭಾಗದಲ್ಲಿ ಮಲಬಾರಕ್ಕೆ ಪೋರ್ಚುಗೀಸರು ಬಂದದ್ದನ್ನು ಮತ್ತು ಅವರ ದೌರ್ಜನ್ಯಗಳನ್ನು ವರ್ಣಿಸಲಾಗಿದೆ.

ಅಧ್ಯಾಯ ಒಂದು: ಪೋರ್ಚುಗೀಸರು ಮಲಬಾರಕ್ಕೆ ಬಂದದ್ದು; ಮುಸಲ್ಮಾನರೊಡನೆ ಮತ್ತು ಅರಸು ಝುಮೊರಿನ್ನನೊಡನೆ ಅವರ ವೈರತ್ವ; ಕೋಚಿ, ಕನ್ನೂರ, ಕೊಲ್ಲಂ ಪಟ್ಟಣಗಳಲ್ಲಿ ಅವರು ಕೋಟೆಗಳನ್ನು ಕಟ್ಟಿಸಿದ್ದು ಹಾಗೂ ಗೋವಾ ಬಂದರವನ್ನು ಕೈವಶ ಮಾಡಿಕೊಂಡದ್ದು.

ಅಧ್ಯಾಯ ಎರಡು: ಮಲಬಾರದಲ್ಲಿ ಪೋರ್ಚುಗೀಸರ ಕ್ರೌರ್ಯಗಳು.

ಅಧ್ಯಾಯ ಮೂರು: ಪೋರ್ಚುಗೀಸರೊಡನೆ ಝುಮೊರಿನ್ ಮಾಡಿಕೊಂಡ ಒಪ್ಪಂದ ಮತ್ತು ಅವರು ಕಾಲಿಕಟ್ಟದಲ್ಲಿ ಕೋಟೆಯೊಂದನ್ನು ಕಟ್ಟಿಸಿದ್ದು.

ಅಧ್ಯಾಯ ನಾಲ್ಕು: ಅರಸ ಝುಮೊರಿನ್ ಮತ್ತು ಪೋರ್ಚುಗೀಸರ ಮಧ್ಯ ತುರಸಿನ ಪೈಪೋಟಿ ಹಾಗೂ ಕಾಲಿಕಟ್ಟ ಕೋಟೆಯುನ್ನು ಝುವೊರಿನ್ ಕೈವಶಮಾಡಿಕೊಂಡದ್ದು.

ಅಧ್ಯಾಯ ಐದು: ಝುಮೋರಿನ್ ಮತ್ತು ಪೋರ್ಚುಗೀಸರ ಒಪ್ಪಂದ ಮತ್ತು ಛಲಿಯಮ್‌ದಲ್ಲಿ ಪೋರ್ಚುಗೀಸರು ಕೋಟೆ ಕಟ್ಟಿಸಿದ್ದು.

ಅಧ್ಯಾಯ ಆರು: ಪೋರ್ಚುಗೀಸರೊಡನೆ ಝುಮೊರಿನ್ನನ ಮೂರನೆಯ ಒಪ್ಪಂದ.

ಏಳನೆಯ ಅಧ್ಯಾಯ : ಗುಜರಾತದ ಸುಲ್ತಾನ ಬಹಾದುರಶಾಹ ಬಿನ್ ಮುಝಾಫರನು ಪೋರ್ಚುಗೀಸರೊಡನೆ ಒಪ್ಪಂದ ಮಾಡಿಕೊಂಡು ಪೋರ್ಚುಗೀಸರಿಗೆ ಕೆಲವು ಕೋಟೆಗಳನ್ನು ಬಿಟ್ಟುಕೊಟ್ಟದ್ದು.

ಅಧ್ಯಾಯ ಎಂಟು: ಈಜಿಪ್ತದಲ್ಲಿಯ ಟರ್ಕಿ ಕಲೀಫ ಸುಲೈಮಾನ ಶಾಹನ ವೈಸರಾಯ್ ಸುಲೈಮಾನ ಬಾಷಾನು ದೀವ ಮತ್ತು ಸುತ್ತು ಮುತ್ತಲಿನ ಸ್ಥಳಗಳಿಗೆ ಭೆಟ್ಟಿಯಿತ್ತದ್ದು ಮತ್ತು ಅವನು ಯಶಸ್ಸು ಸಾಧಿಸದೆ ಈಜಿಪ್ತಕ್ಕೆ ಮರಳಿದ್ದು.

ಒಂಬತ್ತನೆಯ ಅಧ್ಯಾಯ: ಝುಮೊರಿನ್ ಮತ್ತು ಪೋರ್ಚುಗೀಸರ ಮಧ್ಯದ ನಾಲ್ಕನೆಯ ಒಪ್ಪಂದ !

ಹತ್ತನೆಯ ಅಧ್ಯಾಯ : ಝುಮೊರಿನ್ ಮತ್ತು ಪೋರ್ಚುಗೀಸರ ಮಧ್ಯ ಹೊಸ ಮನಸ್ತಾಪ.

ಹನ್ನೊಂದನೆಯ ಅಧ್ಯಾಯ: ಝುಮೊರಿನ್ ಮತ್ತು ಪೋರ್ಚುಗೀಸರ ನಡುವೆ ಆದ ಐದನೆಯ ಒಡಂಬಡಿಕೆ

ಹನ್ನೆರಡನೆಯ ಅಧ್ಯಾಯ: ಝುಮೊರಿನ್ ಮತ್ತು ಪೋರ್ಚುಗೀಸರ ನಡುವಿನ ಮನಸ್ತಾಪದ ಕಾರಣಗಳು ಮತ್ತು ಪೋರ್ಚುಗೀಸರ ಮೇಲಿನ ನೌಕಾ ಸೈನ್ಯದ ದಾಳಿ.

ಹದಿಮೂರನೆಯ ಅಧ್ಯಾಯ: ಛಾಲಿಯಂ ಕೋಟೆಯನ್ನು ಗೆದ್ದು ಮುಸಲ್ಮಾರ (ಇಸ್ಲಾಮದ) ಗೌರವವನ್ನು ಮರಳಿ ಪಡೆದದ್ದು.

ಹದಿನಾಲ್ಕನೆಯ ಅಧ್ಯಾಯ: ಛಾಲಿಯಂ ಕೋಟೆಯನ್ನು ಕಳೆದುಕೊಂಡ ಬಳಿಕ ಪೋರ್ಚುಗೀಸರಿಗೆ ಒದಗಿದ ಕಷ್ಟದ ಸ್ಥಿತಿ.

– ಲೇಖಕನು

■

ಭಾಗ ಒಂದು

*

ಜಿಹಾದದ ಅವಶ್ಯಕತೆ ಮತ್ತು ಅದಕ್ಕೆ ಸಂಬಂಧಿಸಿದ ಆದೇಶಗಳ ಕುರಿತು ವ್ಯವಸ್ಥಿತ ನಿರೂಪಣೆ

ಇದನ್ನು ತಿಳಿಯಿರಿ : ಎರಡು ಪ್ರಕಾರದ ನಾಸ್ತಿಕರಿದ್ದಾರೆ. ಮೊದಲ ಪ್ರಕಾರದವರು ಶಾಶ್ವತವಾಗಿ ತಮ್ಮ ದೇಶಗಳಲ್ಲಿಯೇ ಇರುತ್ತಾರೆ. ಅಂಥವರ ಮೇಲೆ ಧರ್ಮಯುದ್ಧ ಮಾಡುವುದು ಸಾಮುದಾಯಿಕ ಕರ್ತವ್ಯ. ಅಂದರೆ ಕೆಲವು ಮುಸಲ್ಮಾನರು ಆ ಕರ್ತವ್ಯವನ್ನು ಮಾಡಿದರೆ ಉಳಿದವರೆಲ್ಲ ಆ ಕರ್ತವ್ಯದಿಂದ ಮುಕ್ತರಾದಂತೆ. ಯಾರೂ ಈ ಕಾರ್ಯವನ್ನು ಮಾಡದಿದ್ದರೆ ಇಡೀ ಸಮುದಾಯವೇ ಈ ವಿಷಯದಲ್ಲಿ ಉಪೇಕ್ಷೆಗೈದ ಪಾಪಕ್ಕೆ ಗುರಿಯಾಗುತ್ತದೆ.

ಎರಡನೆಯ ಪ್ರಕಾರದ ನಾಸ್ತಿಕರು ನಾವು ಇಂದು ಎದುರಿಸುತ್ತಿರುವ ಸ್ಥಿತಿಯಲ್ಲಿರುವ ಮುಸಲ್ಮಾನ ಪ್ರದೇಶಗಳ ಮೇಲೆ ದಾಳಿ ಮಾಡುತ್ತಾರೆ. ಇಂಥ ಪರಿಸ್ಥಿತಿಯಲ್ಲಿ ಈ ಇಸ್ಲಾಂ ವಿರೋಧಿಗಳೊಡನೆ ಯುದ್ಧ ಮಾಡುವುದು ಪಟ್ಟಣದಲ್ಲಿರುವ ದೈಹಿಕವಾಗಿ ಸದೃಢವಾಗಿರುವ ಪ್ರತಿಯೊಬ್ಬ ವಯಸ್ಕ ಪುರುಷ ಮತ್ತು ಮಹಿಳೆಯ ಹೊಣೆಗಾರಿಕೆಯಾಗಿದೆ. ಈ ಪವಿತ್ರ ಕಾರ್ಯಕ್ಕಾಗಿ ಗುಲಾಮನೂ, ತನ್ನ ಒಡೆಯನ ಪತ್ನಿಯ ತನ್ನ ಪತಿಯ ಸಾಲಗಾರನು. ಸಾಲಕೊಟ್ಟವನ ಮತ್ತು ಮಕ್ಕಳು ಪಾಲಕನ ಅನುಮತಿಗೆ ಕಾಯಬೇಕಿಲ್ಲ. ಪ್ರಯಾಣದಲ್ಲಿದ್ದಾಗ ಪ್ರಾರ್ಥನೆ ಸಲ್ಲಿಸುತ್ತಿದ್ದವರನ್ನು ಹೊರತುಪಡಿಸಿ ಉಳಿದವರೆಲ್ಲರಿಗೂ ಇದು ಕಡ್ಡಾಯವಾಗಿದೆ. ಉಳಿದವರೆಲ್ಲರೂ (ಪ್ರಯಾಣದಲ್ಲಿ ಪ್ರಾರ್ಥನೆ ಸಲ್ಲಿಸುವವರಿದ್ದರು.) ಹೋರಾಡುವವರ ಸಂಖ್ಯೆ ಕಡಿಮೆಯಾಗಿದ್ದರೆ ಈ ಯುದ್ಧ ಕಾರ್ಯದಲ್ಲೂ ತೊಡಗಲೇ ಬೇಕು. (ಇಲ್ಲಿ ಪ್ರದೇಶವೆಂದರೆ ಪ್ರಯಾಣದಲ್ಲಿದ್ದಾಗ ದಿನ ನಿತ್ಯದ ಪ್ರಾರ್ಥನೆಯನ್ನು ಹ್ರಸ್ವಗೊಳಿಸಲು ಬೇಕಾದ ಅವಶ್ಯವಾದ ಸ್ಥಳ. ಒಂದು ಪ್ರದೇಶದಲ್ಲಿಯ ಜನ ಹೋರಾಟದಲ್ಲಿ ಯಶಸ್ವಿಯಾಗದಿದ್ದರೆ, ಮುಂದಿನ ಪ್ರದೇಶದವರು ಆ ಹೊಣೆಗಾರಿಕೆಯನ್ನು ಹೊರಬೇಕು ಹಾಗೆಯೇ ಮುಂದಿನ ಪ್ರದೇಶಗಳ ಜವಾಬ್ದಾರಿ ಅದಾಗಿದೆ.) ಈ ಹೋರಾಟಗಳಲ್ಲಿರುವ ತನ್ನ ಒಡನಾಡಿಗಳೊಡನೆ ಮುಸಲ್ಮಾನ ಸೈನ್ಯದ ನೇತಾರನು (ಅಮೀರನು) ಯುದ್ಧಕ್ಕೆ

ಸಂಬಂಧಿಸಿದ ವಿಷಯಗಳನ್ನು ಚರ್ಚಿಸಬೇಕು. ಆ ಬಳಿಕ ಆತನು ಒಳ್ಳೆಯ ಶಿಸ್ತುಬದ್ಧವಾದ ಸಾಲುಗಳಲ್ಲಿ ತನ್ನ ಸೈನಿಕರನ್ನು ಸನ್ನದ್ಧಗೊಳಿಸಬೇಕು. ಯುದ್ಧ ಮುಗಿದ ಮೇಲೆ ಯುದ್ಧದಲ್ಲಿ ಲೂಟಿಗೈದ ವಸ್ತುಗಳನ್ನು ಸಂಗ್ರಹಿಸುವುದು ಮತ್ತು ಅವುಗಳನ್ನು ಸರಿಯಾಗಿ ಹಂಚುವುದು ಧುರೀಣನ ಅಥವಾ ಸೈನ್ಯಾಧಿಕಾರಿಯ ಜವಾಬ್ದಾರಿಯಾಗಿದೆ. ಮೃತನ ವಸ್ತುಗಳನ್ನು ಅಂದರೆ ಅವನ ಪೋಷಾಕು, ಬೂಟುಗಳು ಇಲ್ಲವೆ ಪಾದತ್ರಾಣಗಳು, ಟೊಂಕದ ಪಟ್ಟಿ, ಹಣ ಸಹಿತ ಹಣದ ಚೀಲ, ಕೈಗಡಗ, ಸಮರ ಶಸ್ತ್ರಾಸ್ತ್ರಗಳು, ಯುದ್ಧಾಶ್ವ, ಥಡಿ ಮತ್ತು ಲಗಾಮು ಇತ್ಯಾದಿಗಳನ್ನು ಅವನನ್ನು ಕೊಂದ ಯೋಧನಿಗೆ ಸೈನ್ಯಾಧಿಕಾರಿ ಒಪ್ಪಿಸಬೇಕು. ಯುದ್ಧದಲ್ಲಿ ದೊರೆತ ಇನ್ನುಳಿದ ವಸ್ತುಗಳನ್ನು ಸರಿಯಾಗಿ ಐದು ಭಾಗಗಳನ್ನಾಗಿ ವಿಂಗಡಿಸಬೇಕು. ಈ ಐದು ಭಾಗಗಳಲ್ಲಿ ಒಂದನ್ನು ಮತ್ತೆ ಐದು ಭಾಗಗಳನ್ನಾಗಿ ಮಾಡಿ ಆ ಭಾಗಗಳಲ್ಲಿ ಒಂದು ಭಾಗವನ್ನು ಮುಸಲ್ಮಾನರ ಸಾರ್ವಜನಿಕ ಕಲ್ಯಾಣಕ್ಕಾಗಿ ಅಂದರೆ ದೇಶದ ಸರಹದ್ದುಗಳನ್ನು ಬಲಪಡಿಸಲು, ಕೋಟೆಗಳನ್ನು ಸೇತುವೆಗಳನ್ನು, ಮಸೂತಿಗಳನ್ನು ಕಟ್ಟಿಸಲು ಹಾಗೆಯೇ ಖಾದಿಸ ಮತ್ತು ಇಮಾಮಗಳ ಸಂಭಾವನೆಗಳನ್ನು ಕೊಡಲು ಉಪಯೋಗಿಸಬೇಕು. ಎರಡನೆಯ ಭಾಗವನ್ನು ಪ್ರವಾದಿಯವರ ಬಂಧುಗಳಿಗೆ ಹಾಶಿಮ ಮತ್ತು ಮುತ್ತಾಲಿಬ್‌ಗಳಿಗೆ ಹಂಚಿಕೊಡಬೇಕು. ಮೂರು, ನಾಲ್ಕು ಮತ್ತು ಐದು ಈ ಭಾಗಗಳಲ್ಲಿಯ ಸಂಪತ್ತನ್ನು ಅನಾಥರಿಗೆ ಬಡವರಿಗೆ ಮತ್ತು ಯಾತ್ರಿಕರಿಗೆ ಹಂಚಬೇಕು.

ಇನ್ನುಳಿದ ಮುಖ್ಯ ನಾಲ್ಕು ಭಾಗಗಳು ಸದಾ ಕಾಲ ಯುದ್ಧದಲ್ಲಿ ತೊಡಗಿದ್ದ ಯೋಧರಿಗೆ ಸಲ್ಲತಕ್ಕದ್ದು.

ಕಾಫಿರರ ವಿರುದ್ಧ ಹೋರಾಡುವ ಮೊದಲು ಹೋರಾಟದಲ್ಲಿ ತೊಡಗುವ ಯೋಧರೆಲ್ಲ ಅಲ್ಲಾದೆ ಕೈಜೋಡಿ ನಮಸ್ಕರಿಸುತ್ತ ಗೆಲುವಿಗಾಗಿ ಪ್ರಾರ್ಥಿಸುವ ಪದ್ಧತಿಯನ್ನು ಪಾಲಿಸಲೇಬೇಕು. ಅವರಿಗೆ ಅಲ್ಲಾಹನಲ್ಲಿ ಭಕ್ತಿ ಮತ್ತು ಭಯ ಇರಬೇಕು; ಅವರು ಎಲ್ಲವನ್ನು ಭಗವಂತನಿಗೆ ಒಪ್ಪಿಸಬೇಕು. (ಅವನು ಉನ್ನತ ಸ್ಥಾನದಲ್ಲಿರಲಿ) ಯಾವಾಗಲೂ ಅವರು ಅವನ (ಭಗವಂತನ) ಸ್ಮರಿಸುತ್ತಿರಬೇಕು. ನಿಜವಾಗಿಯೂ ಅಲ್ಲಾಹನು ನಾವು ನಮ್ಮ ಈ ವ್ರೈತಗಳನ್ನು ಮತ್ತು ವಾಂಛೆಗಳನ್ನು ಈಡೇರಿಸಿಕೊಳ್ಳಲು ಸಹಾಯ ಮಾಡುತ್ತಾನೆ. ಯುದ್ಧದಲ್ಲಿ ಲೂಟಿಗೈದ ವಸ್ತುಗಳನ್ನು ಹಂಚುವಲ್ಲಿ ಯೋಧರು ಆತ್ಮವಂಚನೆಯಿಂದ ಎಚ್ಚರದಿಂದ ಇರಬೇಕು. ಈ ಬಗೆಯ ದ್ರೋಹದ ವಿಷಯದಲ್ಲಿ ಅವರಿಗೆ ಗರಿಷ್ಠ ಭೀತಿಯಿರಬೇಕು. ಯಾಕೆಂದರೆ ಇದಕ್ಕೆ ಸಂಬಂಧಿಸಿ ಅತ್ಯುಗ್ರ ಶಿಕ್ಷೆಯ ಎಚ್ಚರಿಕೆಗಳು ಪ್ರವಾದಿಯವರಿಂದಲೇ ಬಂದಿವೆ.

ಮಲಬಾರದಲ್ಲಿರುವ ಮುಸಲ್ಮಾನರ ಮೇಲೆ ಅಧಿಕಾರ ಚಲಾಯಿಸುವ ಬಲಿಷ್ಠನಾದ ಮತ್ತು ಅವರ ಬಗೆಗೆ ಕಾಳಜಿಯಿರುವ ಯಾವೊಬ್ಬ ಧುರೀಣನೂ ಇಲ್ಲವೆಂಬುದು

ಸರ್ವವಿದಿತವಿದೆ. ಇಲ್ಲಿಯ ಮುಸಲ್ಮಾನರೆಲ್ಲ ಇಸ್ಲಾಮೇತರ ಆಳಿಕೆಗಾರರ ಪ್ರಜೆಗಳಾಗಿದ್ದಾರೆ. ಹೀಗಿದ್ದರೂ ತಮ್ಮ ಮೇಲೆ ಹಿಡಿತ ಸಾಧಿಸಬೇಕೆನ್ನುವ ವಿದೇಶಿ ವೈರಿಗಳೊಡನೆ ಇವರು ಹೋರಾಟ ಮುಂದುವರಿಸಿದರು. ಮುಸಲ್ಮಾನ ಸ್ನೇಹಿತ ರಾಜನಾದ ಝುಮೊರಿನ್ ಈತನ ಉದಾರ ಸಹಾಯ ಪಡೆದುಕೊಂಡು ಇಲ್ಲಿಯ ಮುಸಲ್ಮಾನರು ತಮಗೆ ಸಾಧ್ಯವಿರುವ ಮಿತಿಯಲ್ಲಿ ತಮ್ಮ ಸಂಪತ್ತನ್ನು ಈ ಹೋರಾಟಕ್ಕಾಗಿ ವ್ಯಯಿಸಿದ್ದಾರೆ. ಮೊದಲಿನಿಂದಲೂ ಝುಮೋರಿನ್ನನು ಈ ದಿಶೆಯಲ್ಲಿ ಹೇರಳವಾಗಿ ತನ್ನ ಸಂಪತ್ತನ್ನು ಖರ್ಚು ಮಾಡುತ್ತಲೇ ಇದ್ದಾನೆ. ಆದರೂ ಕೂಡ ಈ ವೈರಿಗಳು ದೊಡ್ಡ ಸಂಖ್ಯೆಯಲ್ಲಿ ಮುಸಲ್ಮಾನರನ್ನು ಕೊಲ್ಲುವುದರಲ್ಲಿ, ಅವರನ್ನು ವ್ಯಾಪಾರಿ ಮತ್ತು ಔದ್ಯೋಗಿಕ ಸ್ಥಾನಗಳಿಂದ ಕಿತ್ತೆಸುವಲ್ಲಿ ಸಮರ್ಥರಾಗಿದ್ದಾರೆ. ಅವರ ಮನೆ ಮಠಗಳನ್ನು ಹಾಳುಗೆಡುಹಿದ್ದಾರೆ. ಇದರ ಪರಿಣಾಮವಾಗಿ ಮಲಬಾರ ಮುಸಲ್ಮಾನರು ದುರ್ಬಲರಾದರು ಅವರ ಬಡತನ ಮತ್ತು ರಿಕ್ತಸ್ಥಿತಿ ಮತ್ತಷ್ಟು ಉಲ್ಬಣಿಸಿ ಅವರೆಲ್ಲ ಶಕ್ತಿಹೀನರು ಮತ್ತು ಅಸಹಾಯಕರು ಆದರು.

ಮುಸಲ್ಮಾನ ಸುಲ್ತಾನರು ಮತ್ತು ಅಮೀರರು (ಅವರಲ್ಲಿ ಇಸ್ಲಾಮಕ್ಕೆ ಸಹಾಯ ಮಾಡುವಂತಹರನ್ನು ಅಲ್ಲಾಹನು ಎತ್ತರಿಸಲಿ) ಜಿಹಾದವು ಅವರ ಕರ್ತವ್ಯವಾಗಿದ್ದರೂ, ಮಲಬಾರದ ಮುಸಲ್ಮಾನರ ಸ್ಥಿತಿಗತಿ ಕುರಿತು ಏನೂ ಆಸಕ್ತಿವಹಿಸಲಿಲ್ಲ. ಆ ಸುಲ್ತಾನರಲ್ಲಿ ಯಾವನೇ ಆಗಲಿ ಸಂಪತ್ತು ಮತ್ತು ಸಿದ್ಧತೆಗಳಿಂದ ಸನ್ನದ್ಧನಾಗಿ ಮುಂದೆ ಬಂದು ಮಲಬಾರದಿಂದ ಇಸ್ಲಾಮದ ವೈರಿಗಳನ್ನು ಒದ್ದೋಡಿಸಿ ಅವರಿಂದ ಬಂದರಗಳನ್ನು ಮುಕ್ತಗೊಳಿಸಲು ಆವ್ಹಾನ ಹೊತ್ತರೆ ಆ ವ್ಯಕ್ತಿ ಅಲ್ಲಾಹನ ಸಹಾಯ ಮತ್ತು ಬೆಂಬಲ ಪಡೆಯಲು ಯೋಗ್ಯನಾದ ಸುದೈವಿಯಾಗುವನು. ಯಾಕೆಂದರೆ ಹೀಗೆ ಮಾಡುವುದರಿಂದ ಈ ಉದಾತ್ತ ಕರ್ತವ್ಯದಿಂದ ಅಲ್ಲಾನು ವಿಧಿಸಿರುವ ನೈತಿಕ ಜವಾಬ್ದಾರಿಯ ಆಜ್ಞೆಯನ್ನು ಪೂರ್ಣಗೊಳಿಸುವುದು ಅಲ್ಲದೆ ಉಪೇಕ್ಷೆಯೆಂಬ ಅತಿ ಕೆಟ್ಟದಾದ ಪಾಪದಿಂದ ಎಲ್ಲ ಮುಸಲ್ಮಾನರನ್ನು ಮುಕ್ತಗೊಳಿಸುವ ಕೃತಿ ಅದಾಗುತ್ತದೆ. ಹೀಗಾಗಿ ಅವನು ಅಲ್ಲಾಹನ, ಅವನ ದಿವ್ಯದೂತರ ಮತ್ತು ಅವನಿಗೆ (ಅಲ್ಲಾಹನಿಗೆ) ಸಮೀಪವಿರುವ ಎಲ್ಲರ ಸಂದೇಶವಾಹಕರ, ಹಾಗೆಯೇ ಎಲ್ಲರ ಸಂತೋಷವನ್ನು ಸಂಪಾದಿಸುತ್ತಾನೆ. ಪೂರ್ವ ಮತ್ತು ಪಶ್ಚಿಮ ದೇಶಗಳಲ್ಲಿಯ ಎಲ್ಲ ಜನರ ಸೀಮಾತೀತ ಹೊಗಳಿಕೆಗೆ ಪಾತ್ರನಾಗುತ್ತಾನೆ. ನಂತರ ಸ್ವರ್ಗದಲ್ಲಿ ಅಸಂಖ್ಯ ಪ್ರಶಸ್ತಿ-ಪುರಸ್ಕಾರಗಳನ್ನು ಪಡೆಯುವನು. ಸಮಾಜದಲ್ಲಿಯ ದುರ್ಬಲರು ಮತ್ತು ಅಲ್ಲಾಹನ ಸಾತ್ವಿಕ ಹಾಗೂ ಪರಿಶುದ್ಧ ಭಕ್ತಿಯ ಸೇವಕರು ಅವನ ಕಲ್ಯಾಣಕ್ಕಾಗಿ, ಕಳಕಳಿಯಿಂದ ಪ್ರಾರ್ಥಿಸುವರು. ಈ ದೇವತಾ ಕರ್ತವ್ಯದ ಹೋರಾಟಕ್ಕಾಗಿ ಮತ್ತು ಸ್ವಂತ ಸಂಪತ್ತನ್ನು ಖರ್ಚುಮಾಡಿದ್ದಕ್ಕಾಗಿ ಹೀಗೆ ಪುರಸ್ಕೃತಗೊಳ್ಳುವುದಲ್ಲದೆ ದಮನಿತ ಜನರನ್ನು ಸಂಕಟ ಸ್ಥಿತಿಯಿಂದ ಬಿಡುಗಡೆ ಮಾಡಿದ್ದಕ್ಕಾಗಿ ಅವನಿಗೆ ಯೋಗ್ಯ ಪ್ರಶಸ್ತಿ-ಪುರಸ್ಕಾರ ಲಭಿಸುವುದು. ಪ್ರವಾದಿಗಳು

ಹೇಳಿದ್ದನ್ನು ಇಮಾಮ ಮುಸ್ಲಿಮ ಇವರು ವರದಿ ಮಾಡಿದ್ದಾರೆ: " ಯಾರಾದರೂ ಆಸ್ತಿಕನೊಬ್ಬನನ್ನು ಸಂಕಟದಿಂದ ಈ ಜಗತ್ತಿನಲ್ಲಿ ಪಾರುಮಾಡಿದರೆ, ದೈವನಿರ್ಣಯದ ದಿನ ಅಲ್ಲಾಹನು ಅವನನ್ನು ದುಃಖದಿಂದ ಮುಕ್ತಗೊಳಿಸುವನು". ಒಬ್ಬ ಆಸ್ತಿಕನ ಒಂದು ದುಃಖವನ್ನು ಪರಿಹಾರ ಮಾಡಿದರೆ ಇಂಥ ಪ್ರತಿಫಲ ದೊರೆತರೆ ಅಲ್ಲಾಹನ ಕೈಂಕರ್ಯಕ್ಕಾಗಿ ಧರ್ಮಯುದ್ಧದಲ್ಲಿ ತೊಡಗಿದ ವ್ಯಕ್ತಿಯ ಅಸಂಖ್ಯ ನಿಕೃಷ್ಟ ಜನರನ್ನು ಗಂಭೀರ ದುಃಖಗಳಿಂದ ಮುಕ್ತಗೊಳಿಸಿದರೆ ಅದೆಂಥ ದೊಡ್ಡ ಪ್ರಮಾಣದ ಪ್ರತಿಫಲಗಳು ಅವನಿಗಾಗಿ ದಾರಿ ಕಾಯುತ್ತಿವೆ ! ಸುಭಾನಲ್ಲಾಹ ! ಅಲ್ಲಾಹನು ಒಬ್ಬನೇ ಅದನ್ನು ಮೌಲ್ಯಮಾಪನ ಮಾಡಬಲ್ಲನು.

ಆ ಅಲ್ಲಾಹನ ಕೀರ್ತಿ ಉನ್ನತವಾಗಿರಲಿ. ತುಳಿತಕ್ಕೊಳಗಾದ ಜನರನ್ನು ಬಿಡುಗಡೆಗೊಳಿಸಲು ಹೋರಾಟ ಕೈಕೊಳ್ಳಲು ಮುಸಲ್ಮಾನರನ್ನು ಅವನು (ಅಲ್ಲಾಹ) ಪ್ರೇರೇಪಿಸುತ್ತಾನೆ. ಖುರಾನದಲ್ಲಿ ಅಲ್ಲಾಹ ಹೇಳುತ್ತಾನೆ : "ಅಲ್ಲಾಹನ ಸಲುವಾಗಿ ಮತ್ತು ದುರ್ಬಲರಾಗಿದ್ದುಕೊಂಡು ಹಿಂಸೆಗೊಳಗಾಗಿರುವ (ದಮನಕ್ಕೊಳಗಾದ) ಪುರುಷರು, ಮಹಿಳೆಯರು ಮತ್ತು ಮಕ್ಕಳಿಗಾಗಿ ನೀವೇಕೆ ಹೋರಾಟ ಮಾಡಬಾರದು? ಆ ದೀನ ಜನರು ಗೋಳಿಡುತ್ತಾರೆ. "ಓ ಪ್ರಭುವೆ, ದಮನಕಾರಿಗಳಾಗಿರುವ ಈ ಜನರ ಈ ಪಟ್ಟಣದಿಂದ ನಮ್ಮನ್ನು ಉಳಿಸು; ನಮ್ಮನ್ನು ರಕ್ಷಿಸುವಂತಹನನ್ನು ಹುಟ್ಟಿಸಿ ಬೆಳೆಸು; ನಮಗೆ ಸಹಾಯಮಾಡುವವನನ್ನು ಬೆಳೆಸು." (ಖುರಾನ್ ೪:೭೫)

ಇದಲ್ಲದೆ, ಜಿಹಾದದ ಮಹತ್ವವನ್ನು, ಅದರ ಗುಣವನ್ನು ಎತ್ತಿ ತೋರಿಸುವ ಅನೇಕ ಶ್ಲೋಕಗಳು ಖುರಾನದಲ್ಲಿ ಹಾಗೆಯೇ ಪ್ರವಾದಿಯವರ ಸೂಕ್ತಿಗಳಲ್ಲಿ ಉಂಟು; ಮುಸಲ್ಮಾನ ಸೈನ್ಯವನ್ನು ಸಲುಹಲು ಖರ್ಚು ಮಾಡುವ ಸಂಪತ್ತನ್ನು ಕುರಿತು ಮತ್ತು ಆ ಕಾರಣಕ್ಕಾಗಿ (ಜಿಹಾದಕ್ಕಾಗಿ) ಆತ್ಮಾಹುತಿ ಮಾಡುವದನ್ನು ಕುರಿತು ಗುಣಗಾನಗೈವ ವರ್ಣನೆಗಳೂ ಉಂಟು. ಅವುಗಳಲ್ಲಿ ಕೆಲವು ಕೆಳಗಿನಂತಿವೆ :

"ಹೋರಾಟ ಮಾಡಬೇಕೆಂದು ವಿಧಿಸಲಾಗಿದೆ. ಆದರೆ ಅದು ನಿನಗೆ ಸರಿ ಬರುವುದಿಲ್ಲ. ಆದರೆ ನಿನಗೆ ಒಳ್ಳೆಯದಾಗಿರುವುದನ್ನು ನೀನು ತಿರಸ್ಕರಿಸುವ ಸಾಧ್ಯತೆಯಿದೆ ಮತ್ತು ನಿನಗೆ ಅಹಿತವಾದದ್ದನ್ನು ನೀನು ಪ್ರೀತಿಸುತ್ತೀ. ಅಲ್ಲಾಹನಿಗೆ ಗೊತ್ತುಂಟು, ನಿನಗೆ ಗೊತ್ತಿಲ್ಲ" (ಖುರಾನ, ೨:೨೧೬)

"ಅಲ್ಲಾಹನು ತನ್ನಲ್ಲಿ ಶ್ರದ್ಧೆಯುಳ್ಳವರ (ಆಸ್ತಿಕರ) ದೇಹಗಳನ್ನು ಮತ್ತು ವಸ್ತುಗಳನ್ನು ಕೊಂಡುಕೊಂಡಿರುತ್ತಾನೆ. ಅವರಿಗೆ ಸ್ವರ್ಗದ ಉದ್ಯಾನವೇ ಪ್ರತಿಫಲವಾಗಿದೆ.- ಭಗವಂತನಿಗಾಗಿ ಅವರು ಯುದ್ಧ ಮಾಡುತ್ತಾರೆ. ಕೊಲ್ಲುತ್ತಾರೆ ಮತ್ತು ಕೊಲ್ಲಲ್ಪಡುತ್ತಾರೆ. ಇದು ಸತ್ಯವಾಗಿಯೂ ಪರಮಾತ್ಮನ ಕರ್ತವ್ಯವಾಗಿದೆ. ಈ ಮಾತನ್ನು ಥೊರಾ,

ದೇವವಾಣಿ ಮತ್ತು ಖುರಾನದಲ್ಲುಂಟು ; ಹೀಗಿರುವಾಗ ಅಲ್ಲಾಹನಿಗಿಂತ ಈ ಒಡಂಬಡಿಗೆಯನ್ನು ಈಡೇರಿಸುವಲ್ಲಿ ಇನ್ನಾರು ಹೆಚ್ಚು ನಂಬಿಗಸ್ಥರು? ನೀನು ದೇವನೊಡನೆ ಮಾಡಿಕೊಂಡಿರುವ ಪವಿತ್ರ ಕಾರ್ಯಕ್ಕಾಗಿ ಸಂತೋಷಪಡು. ಇದು ಅತ್ಯುತ್ಕೃಷ್ಟವಾದ ಸಾಧನೆ." ಖುರಾನ್, ೯:೧೧೧)

ಅಲ್ಲಾಹನಿಗಾಗಿ ತಮ್ಮ ಸಂಪತ್ತನ್ನು ವ್ಯಯಮಾಡುವವರನ್ನು ಕುರಿತು ಒಂದು ಕಾಳಿನ ನೀತಿ ಕಥೆಯನ್ನು ಹೇಳಲಾಗುತ್ತದೆ : ಕಾಳೊಂದು ಏಳು ತೆನೆಗಳನ್ನು ಬೆಳೆಯುತ್ತದೆ. ಪ್ರತಿ ತೆನೆಗೂ ನೂರು ಕಾಳಾಗುತ್ತವೆ. ಯಾರ ಮೇಲೆ ಅಲ್ಲಾಹನ ಪ್ರೀತಿಯಿರುತ್ತದೆಯೊ ಅವನ ಸಂಪತ್ತನ್ನು ಅವನು ಅನೇಕ ಪಟ್ಟು ವೃದ್ಧಿಸುತ್ತಾನೆ; ಅಲ್ಲಾಹನು ಎಲ್ಲರ ಕಾಳಜಿವಹಿಸುತ್ತಾನೆ. ಅವನಿಗೆ ಎಲ್ಲವೂ ತಿಳಿದಿರುತ್ತದೆ". (ಖುರಾನ, ೨:೨೬೧)

"ಅಲ್ಲಾಹನ ಕಾರ್ಯದಲ್ಲಿ ಮಡಿದವರನ್ನು ಮೃತರೆಂದು ತಿಳಿಯಬೇಡ. ಅಷ್ಟೇ ಅಲ್ಲ ಆ ಪ್ರಭುವಿನಿಂದ ಶಕ್ತಿಸಂಪನ್ನತೆ ಪಡೆಯುತ್ತ ಅವನ ಸಾನ್ನಿಧ್ಯದಲ್ಲಿ ಜೀವಿಸುತ್ತಾರೆ. ಅಲ್ಲಾಹನು ನೀಡುವ ಔದಾರ್ಯವನ್ನು ಸಂತೋಷದಿಂದ ಸವಿಯುತ್ತಲಿದ್ದಾರೆ : ಹಿಂದೆ ಉಳಿದವರ ಬಗ್ಗೆ ಇನ್ನೂ ಅವರನ್ನು ಕೂಡದವರನ್ನು ಕುರಿತು, ಆ ಹುತಾತ್ಮರು ಗೆಲವಿನಲ್ಲಿರುತ್ತಾರೆ. ಯಾಕೆಂದರೆ ಅವರಿಗೆ ಅಂಜಿಕೆಯಿಲ್ಲ ಮತ್ತು ಅವರು ವ್ಯಥೆ ಪಡಬೇಕಾಗಿಲ್ಲ." (ಖುರಾನ, ೩:೧೬೯-೧೭೦)

ಅಲ್-ಬುಖಾರಿ ಮತ್ತು ಮುಸ್ಲಿಮ ಇವರು ಹುರಾಯರಾಹ ಹೇಳಿದ್ದನ್ನು ನಿರೂಪಿಸುತ್ತಾರೆ : ಅಲ್ಲಾಹನ ದೂತನು (ಸಂದೇಶ ತಂದವನು) ಹೇಳಿದನು : "ಅಲ್ಲಾಹನಲ್ಲಿ ಮತ್ತು ಶ್ರದ್ಧೆಯಿಂದ ಪ್ರೇರೇಪಿತನಾಗಿ ಜಿಹಾದದಲ್ಲಿ ತೊಡಗಿದವನು ಲಾಭವನ್ನೇ ಪಡೆಯುತ್ತಾನೆ. ಯುದ್ಧದಲ್ಲಿ ಲೂಟಿಗೈದ ವಸ್ತುಗಳನ್ನು ಅವನು ಪಡೆಯುತ್ತಾನೆ; ಒಂದು ವೇಳೆ ಯುದ್ಧದಲ್ಲಿ ಸತ್ತು ಮರಳಿ ಬಾರದೆ ಹೋದರೆ, ಖಚಿತವಾಗಿಯೂ ಅವನು ಸ್ವರ್ಗವನ್ನು ಪಡೆಯುತ್ತಾನೆ."

ಅಬೂ ಹುರಾಯರಾಹ ಹೇಳುವಂತೆ ಅಲ್ಲಾಹನ ದೂತನು ಈ ರೀತಿ ಹೇಳಿದನು : "ಯಾವನ ವಶದಲ್ಲಿ ನನ್ನ ಆತ್ಮವಿದೆಯೊ ಅವನ ಆಣೆ ಮಾಡಿ ನಾನು ಹೇಳುವುದೇನೆಂದರೆ ಪಟ್ಟಣದಲ್ಲಿ ನಾನು ಇರದಿದ್ದರೆ ದೈವಶ್ರದ್ಧೆಯುಳ್ಳವರೆಲ್ಲ ಸಂಕಟಪಡುತ್ತಾರೆ ಮತ್ತು ನನ್ನ ಅನುಪಸ್ಥಿತಿಯಲ್ಲಿ ಅವರು ಅಲ್ಲಿ ಇರಲು ಒಪ್ಪಲಾರದೆಂಬ ಭಯ ನನಗೆ ಇರದಿದ್ದರೆ- ಅವರು ಅಲ್ಲಿಯೇ ಇರಬೇಕೆಂದು ಅವರ ಮನವೊಲಿಸಲು ನನ್ನಲ್ಲಿ ಏನೂ ಇಲ್ಲ. ಅಲ್ಲಾಹನಿಗಾಗಿ ಹೂಡಿರುವ ಯುದ್ಧಗಳಲ್ಲಿ ಭಾಗವಹಿಸದೆ ನಾನು ದೂರ ಉಳಿಯುತ್ತಿರಲಿಲ್ಲ. ಇದಕ್ಕೂ ಮುಂದೆ ಹೋಗಿ, ಆಣೆ ಮಾಡಿ

ಹೇಳುವುದಾದರೆ, ಅಲ್ಲಾಹನಿಗಾಗಿ ಕೊಲ್ಲಲ್ಪಟ್ಟು ಮರಳಿ ಈ ಜೀವನಕ್ಕೆ ಬಂದು ಮತ್ತೆ ಹತನಾಗಿ, ಮತ್ತೆ ಈ ಜೀವನಕ್ಕೆ ತಿರುಗಿ ಬಂದು, ಮತ್ತೆ ಈ ಧರ್ಮಕಾರ್ಯಕ್ಕೆ ಮೃತನಾಗಲು ಬಯಸುತ್ತೇನೆ."

ಹುರಾಯರಾಹನು ಹೇಳಿದ್ದರ ವಿವರದಲ್ಲಿ ಇನ್ನೊಂದು ಮಾತು ಹೀಗಿದೆ : ಪ್ರವಾದಿಯು ಹೇಳಿದನು : "ಅಲ್ಲಾಹನಿಗಾಗಿ ಹೋರಾಟದಲ್ಲಿ ತೊಡಗಲು ಮುಂದೆದ್ದು ಹೋಗಿರುವ ಮಜಾಹಿದನು ಯುದ್ಧದಿಂದ ಮರಳಿ ಬರುವವರೆಗೆ ಸದಾಕಾಲ ಪ್ರಾರ್ಥನೆಗೈಯುತ್ತ, ಉಪವಾಸ ವ್ರತದಲ್ಲಿದ್ದೂ ಪವಿತ್ರ ಧಾರ್ಮಿಕ ಶ್ಲೋಕಗಳನ್ನು ಪಠಿಸುತ್ತಿರುವವನಿಗೆ ಸಮನಾಗಿದ್ದಾನೆ."

ಹುರಾಯರಾಯ ಇನ್ನೂ ಮುಂದೆ ಹೇಳುತ್ತಾನೆ : "ಅಲ್ಲಾಹನ ದೂತನು ಹೇಳಿದನು : ಅಲ್ಲಾಹನು ತನಗಾಗಿ (ಧರ್ಮಕಾರ್ಯಕ್ಕಾಗಿ) ನಡೆದ ಯುದ್ಧದಲ್ಲಿ ಭಾಗವಹಿಸಿದ ಪ್ರತಿಯೊಬ್ಬನಿಗಾದ ಗಾಯ ಅಥವಾ ಪೆಟ್ಟು ಇವುಗಳನ್ನು ಗಮನಿಸುತ್ತಾನೆ. ಪುನರ್ಜೀವ ಕೊಡುವ ದಿನದಂದು ತನ್ನ ಗಾಯಗಳಿಂದ ರಕ್ತ ಸೋರುತ್ತಿರಲು ಅಲ್ಲಾಹನೆದುರು ಹಾಜರಾಗುತ್ತಾನೆ. ಅವನ ರಕ್ತದ ಬಣ್ಣ ರಕ್ತದ ಬಣ್ಣವೇ ಆಗಿದ್ದರೂ ಅದಕ್ಕೆ ಕಸ್ತೂರಿ ಸುಗಂಧ ದ್ರವ್ಯದ ಪರಿಮಳವಿರುತ್ತದೆ."

ಅನ್ಸಾರಿ(ಅನಾಸ) ನಿರೂಪಿಸುವಂತೆ ಅಲ್ಲಾಹನ ದೇವದೂತನು ಹೇಳುತ್ತಾನೆ : "ಅಲ್ಲಾಹನ ಸಲುವಾಗಿ ನಾವು ಕಳೆದ ಸೂರ್ಯೋದಯ ಅಥವಾ ಸೂರ್ಯಾಸ್ತ ಕಾಲವು ಈ ಜಗತ್ತು ಮತ್ತು ಅದು ಒಳಗೊಂಡಿರುವುದಕ್ಕಿಂತ ಹೆಚ್ಚು ಉತ್ತಮವಾದದ್ದಾಗಿದೆ."

ಅನಾಸನು ಮುಂದೆ ಹೇಳುತ್ತಾನೆ–"ಅಲ್ಲಾಹನ ದೂತನು ಹೇಳಿದನು : "ಸ್ವರ್ಗದಲ್ಲಿ ಪ್ರವೇಶ ಪಡೆದವರಲ್ಲಿ ಯಾರೂ, ಹುತಾತ್ಮತೆಯೊಂದನ್ನು ಬಿಟ್ಟು ಭೂಮಿಯ ಮೇಲಿರುವ ಯಾವುದೇ ಅಮೂಲ್ಯವಾದದ್ದು ಸಿಕ್ಕರೂ ಭೂಮಿಗೆ ಬರಲು ಇಚ್ಛಿಸುವುದಿಲ್ಲ. ಅವನು ಹೀಗೆ ಹತ್ತು ಸಾರಿ ಕೊಲ್ಲಲ್ಪಡಲು (ಹುತಾತ್ಮನಾಗಲು) ಈ ಭೂಮಿಗೆ ಬರಲು ಹಂಬಲಿಸುತ್ತಾನೆ. ಯಾಕೆಂದರೆ ಹುತಾತ್ಮತೆಯನ್ನು ಅವನು ಅಷ್ಟು ಘನವಾದದ್ದು ಎಂದು ತಿಳಿಯುತ್ತಾನೆ."

ಜಬೀರನು ಹೇಳುತ್ತಾನೆ : ಉಹುದ ಸಂಗ್ರಾಮದ ದಿನ ಒಬ್ಬನು ಪ್ರವಾದಿಯನ್ನು ಕೇಳಿದನು : ಈ ಸಂಗ್ರಾಮದಲ್ಲಿ ಹತನಾದಡೆ ನಾನು ಎಲ್ಲಿರುವೆ ? 'ಸ್ವರ್ಗದಲ್ಲಿ' ಎಂದು ಪ್ರವಾದಿ ಉತ್ತರಿಸಿದರು. ಇದನ್ನು ಕೇಳುತ್ತಲೇ ಅವನು ತನ್ನ ಕೈಯಲ್ಲಿದ್ದ ಖಜೂರನ್ನು ಬೀಸಾಡಿ ಒಗೆಯುತ್ತ ಸಂಗ್ರಾಮ ಭೂಮಿಗೆ ಧಾವಿಸಿದನು ಮತ್ತು ತನ್ನ ಪ್ರಾಣ ಹೋಗುವವರೆಗೆ ಭೀಕರವಾಗಿ ಹೋರಾಡಿದನು."

ಸಾಹಿಬಿನ್ ಸಾದನು ಪ್ರವಾದಿಯು ಹೀಗೆ ಹೇಳುತ್ತಾರೆ ಅನ್ನುತ್ತಾನೆ : ವೈರಿಯಿಂದ ಒಂದು ದಿನ ಜಾಗ್ರತವಾಗಿ ರಕ್ಷಣೆ ಮಾಡುವುದು ಈ ಪ್ರಪಂಚ ಮತ್ತು ಅದರಲ್ಲಿರುವ ಎಲ್ಲ ವಸ್ತುಗಳಿಗಿಂತ ಶ್ರೇಷ್ಠವಾಗಿದೆ."

ಅಬೂ ಮೂಸಾ ಹೇಳುತ್ತಾನೆ. "ಒಮ್ಮೆ ಪ್ರವಾದಿಗಳಿದ್ದಲ್ಲಿಗೆ ಒಬ್ಬ ಮನುಷ್ಯ ಬಂದು ಕೇಳಿದನು "ಕೀರ್ತಿ ಹಾಗೂ ಸಂಪತ್ತಿನ ಪ್ರಾಪ್ತಿಗಾಗಿ ಹೋರಾಡುವವರಿದ್ದಾರೆ. ಅಲ್ಲಾಹನ ಧರ್ಮಕರ್ತವ್ಯಕ್ಕೋಸುಗ ಹೋರಾಡುವವನು ಯಾರು?" ಅಲ್ಲಾಹನ ದೂತನು ಉತ್ತರಿಸಿದನು : "ಅಲ್ಲಾಹನ ಆಜ್ಞೆಯನ್ನು ಉನ್ನತವೆಂದು ಮನ್ನಿಸುವವನು."

ಅಬೂ ಸಯ್ಯದ ಅಲ್ ಖುದ್ರಿ ಹೇಳುತ್ತಾನೆ : ಪ್ರವಾದಿಯು ಸಾರಿದನು : "ತನ್ನ ಪ್ರಾಣ ಹಾಗೂ ಸಂಪತ್ತನ್ನು ಅಲ್ಲಾಹನಿಗೆ ಅರ್ಪಿಸುತ್ತ ಯಾವ ಆಸ್ತಿಕನು ಅಲ್ಲಾಹಗೋಸ್ಕರ ಯುದ್ಧ ಮಾಡುವನೋ ಅವನು ಮನುಷ್ಯ ಕುಲದಲ್ಲಿಯೇ ಸರ್ವೋತ್ತಮನು."

ಅಬೂ ಹುರಾಯರಾಹನ ಆಧಾರದ ಮೇಲೆ (ಅವನ ಬರಹಗಳ ಆಧಾರದ ಮೇಲೆ) ಅಲ್-ಬುಖಾರಿ ವರದಿ ಮಾಡುತ್ತಾನೆ : "ಅಲ್ಲಾಹನ ದೂತನು ಹೇಳಿದನು : ತನಗಾಗಿ ಹೋರಾಟ ಮಾಡಿದವರಿಗಾಗಿ ಅಲ್ಲಾಹನು ಸ್ವರ್ಗದಲ್ಲಿ ಒಂದು ನೂರು ಶ್ರೇಷ್ಠವಾದ ಶ್ರೇಣಿಗಳನ್ನು ಕಾಯ್ದಿರಿಸಿದ್ದಾನೆ. ಎರಡು ಶ್ರೇಣಿಗಳ ಅಂತರವು ಭೂಮಿ ಮತ್ತು ಆಕಾಶ ಇವುಗಳ ಅಂತರದಷ್ಟಿದೆ. ನೀನು ಅಲ್ಲಾಹನಿಗೆ ಕೇಳಲು ಇಚ್ಛಿಸಿದರೆ, ಫಿರ್ದಾವ್ಯ ಕೇಳು, ಫಿರ್ದಾವ್ಯವು ಸ್ವರ್ಗದ ಕೇಂದ್ರವಾಗಿದ್ದು ಅತ್ಯಂತ ವೈಭವಪೂರ್ಣವಾಗಿದೆ. ಪರಮ ದಯಾಳು ಅಲ್ಲಾಹನ ಸಿಂಹಾಸನವು ಅದರ ಮೇಲಿದೆ. ಅದರಿಂದ ಸ್ವರ್ಗದ ಹೊಳೆಗಳು ಉಗಮಿಸುತ್ತವೆ."

ಅಬೂ ಅಬ್ಬನು ಹೇಳುತ್ತಾನೆ : ಪ್ರವಾದಿಯು ಹೇಳಿದ್ದಾರೆ "ಅಲ್ಲಾಹನ ಕಾರ್ಯದಲ್ಲಿ ಯಾರ ಪಾದಗಳಿಗೆ ಹುಡಿ ಹತ್ತಿದೆಯೊ ಅವನನ್ನು ನರಕದ ಜ್ವಾಲೆಯು ಮುಟ್ಟಲಾರದು."

ಅಬೂ ಖಾಯಸ್‌ನು ಸೈದ ಹೇಳುವುದನ್ನು ಕೇಳಿದ್ದೆನೆಂದು ವರದಿಮಾಡುತ್ತಾನೆ : "ಅಲ್ಲಾಹನ ಕಾರ್ಯದಲ್ಲಿ ಬಾಣ ಬಿಟ್ಟ (ಯುದ್ಧಮಾಡಿದ) ಅರಬರಲ್ಲಿ ನಾನೇ ಮೊದಲಿಗನು. ಅಲ್ಲಾಹನ ದೂತನೊಡಗೂ ನಾವೆಲ್ಲರೂ ಹೋರಾಡುತ್ತಿದ್ದೆವು. ನಮಗೆ ತಿನ್ನಲು ಏನು ಇಲ್ಲದಾಗ ಗಿಡಗಳ ಎಲೆಗಳನ್ನು ತಿನ್ನುತ್ತಿದ್ದೆವು. ಆದ್ದರಿಂದ ನಮ್ಮ ಮಲವು ಒಂಟಿ ಮತ್ತು ಕುರಿಗಳ ಲದ್ದಿಯಂತೆ ಕಾಣುತ್ತಿತ್ತು."

ಅಬೂ ಹುರಾಯರಾಹ ವಿವರಿಸುವುದು ಹೀಗೆ : "ಪ್ರವಾದಿಯು ಹೇಳಿದ್ದಾರೆ : ಯಾರು ಅಲ್ಲಾಹನಲ್ಲಿ ಶ್ರದ್ಧೆ ಉಳ್ಳವನಾಗಿ, ಅವನ ಭರವಸೆಯಲ್ಲಿ ನಂಬಿಕೆಯುಳ್ಳವನಾಗಿ ಅಲ್ಲಾಹನಿಗಾಗಿ ಕೈಕೊಂಡ ಧರ್ಮಯುದ್ಧದಲ್ಲಿ ತನ್ನ ಕುದುರೆಯನ್ನು ತೊಡಗಿಸುತ್ತಾನೆಯೊ ಮತ್ತು ಅದಕ್ಕೆ ಆಹಾರ ಹಾಗೂ ನೀರನ್ನು ನೀಡುತ್ತಾನೆಯೊ ಪುನರ್ಜನ್ಮ ಪಡೆಯುವ

ದಿನ ಅವನ ಕುದುರಿಯ ಲದ್ದಿಯು (ದೇವನ) ತಕ್ಕಡಿಯಲ್ಲಿ ಆತನ ಪರವಾಗಿ ಭಾರವಾಗಿಸುತ್ತದೆ.

ಅಬೂ ಹುರಾಯರಾಹನನ್ನು ಉದ್ಧರಿಸಿ ಮುಸ್ಲಿಮ್ ವರದಿ ಮಾಡುತ್ತಾನೆ : "ಪ್ರವಾದಿಯು ಹೇಳಿದರು. ಎಂದಾದರೂ ಒಬ್ಬನು ಯುದ್ಧ ಮಾಡದೇ ಸತ್ತರೆ, ಎಂದೂ ಕೂಡ ಮನಸ್ಸಿನಲ್ಲಿಯೂ ಆ ಬಗ್ಗೆ ವಿಚಾರ ಮಾಡದೇ ಸತ್ತರೆ, ಅವನ ಸಾವು ಆಷಾಢಭೂತಿಯ ವಂಚನೆಯ ಸಾವಾಗುತ್ತದೆ."

ಅಬು ಹುರಾಯರಾಹ ಮತ್ತು ಹೇಳುತ್ತಾನೆ : ಪ್ರವಾದಿಯು ಹೇಳಿದ್ದಾರೆ : "ನಾಸ್ತಿಕನು ಮತ್ತು ಅವನನ್ನು ಕೊಂದವನು ಕೂಡಿಯೇ ನರಕಕ್ಕೆ ಬರುವುದಿಲ್ಲ."

ಅಬು ಹುರಾಯರಾಹ ಮುಂದೆ ಹೇಳುವುದೇನೆಂದರೆ : ಪ್ರವಾದಿಯ ಹೇಳಿದ್ದಾರೆ : "ಯಾರಿಗೇ ಆಗಲಿ ಜೀವನದಲ್ಲಿ ಸರ್ವೋತ್ಕೃಷ್ಟ ಕಾರ್ಯವೆಂದರೆ ಅಲ್ಲಾಹನಿಗಾಗಿ (ಧರ್ಮಕ್ಕಾಗಿ) ತನ್ನ ಕುದುರೆಯ ಸರ್ಜು ಸರಂಜಾಮವನ್ನು (ನೊಗವನ್ನು) ಕೈಯಲ್ಲಿ ಹಿಡಿದಿರುವುದಾಗಿದೆ; ಗದ್ದಲ, ಅಬ್ಬರದ ಧ್ವನಿ ಇದ್ದಲ್ಲೆಲ್ಲ ಅವನು ಸಾಯಲು ಇಲ್ಲವೆ ಕೊಲ್ಲಲು ಧಾವಿಸುತ್ತಾನೆ; ಇಲ್ಲವೆ ಇನ್ನೊಬ್ಬನು ಶ್ರೇಷ್ಠ ಸ್ಥಾನದಲ್ಲಿ ಇರುವವನೆಂದರೆ ತನ್ನ ಕುರಿಗಳನ್ನು ತಗ್ಗು ದಿನ್ನೆಗಳಲ್ಲಿ ಮೇಯಿಸುತ್ತ ತಪ್ಪದೇ ಸರಿಯಾದ ವೇಳೆಗೆ ನಮಾಜ ಮಾಡುತ್ತ ಯೋಗ್ಯವಿದ್ದವರಿಗೆ ಝಕಾಹ (ಕರ್ತವ್ಯದ ದಾನ) ನೀಡುತ್ತ ಹಾಗೆಯೇ ತನ್ನ ಮರಣದವರೆಗೆ ಅಲ್ಲಾಹನ ಪೂಜೆಗೈಯುತ್ತ ಇರುವವನಾಗಿದ್ದಾನೆ. ಇಂಥ ಜನರು ಯಶಸ್ಸಿನ ದಾರಿಯಲ್ಲಿರುತ್ತಾರೆ."

ಜಾಬಿರ ಬಿನ್ ಸಮುರಾಹ ವರದಿ ಮಾಡುತ್ತಾನೆ : ಪ್ರವಾದಿಯು ಹೇಳಿದ್ದಾರೆ : "ಈ ಧರ್ಮವು ನಿಶ್ಚಿತವಾಗಿಯೂ ಉಳಿಯುತ್ತದೆ. ಮುಸಲ್ಮಾನರಲ್ಲಿ ಕೊನೆಯ ದಿನದವರೆಗೆ ಅದಕ್ಕಾಗಿ ಹೋರಾಡುವ ಒಂದು ಗುಂಪು ಇದ್ದೆ ಇರುತ್ತದೆ."

ಪ್ರವಾದಿಯವರು ಹೇಳಿದ್ದನ್ನು ಕೇಳಿದ್ದಾಗಿ ಸಲ್ಮಾನ ಅಲ್-ಫಾರಿಸ್ತಾ ಹೇಳುತ್ತಾನೆ : "ವೈರಿಗಳ ವಿರುದ್ಧವಾಗಿ ಒಂದು ಹಗಲು ಮತ್ತು ಒಂದು ರಾತ್ರಿ ಜಾಗ್ರತವಾಗಿ ಕಾಯುವುದು ಸದ್ಗುಣದ ದೃಷ್ಟಿಯಿಂದ ಒಂದು ತಿಂಗಳ ಉಪವಾಸ ಮಾಡುವುದು ಮತ್ತು ಇಡೀ ರಾತ್ರಿ ಪ್ರಾರ್ಥನೆ ಮಾಡುವುದು ಇವುಗಳಿಗಿಂತ ಶ್ರೇಷ್ಠನಾದದ್ದು. ಹಾಗೆ ಮಾಡುವಾಗ ಅವನು ಮೃತನಾದರೂ ಅವನು ಪಡೆಯುವ ಪ್ರತಿಫಲವು ಮತ್ತು ಉನ್ನತ ಮರ್ಯಾದೆಯ ಅಂತಸ್ತವು ಅವನು ನಿರ್ವಹಿಸಬಹುದಾಗಿದ್ದ ಮಹತ್ಕಾರ್ಯದ ಯಶಸ್ಸು ಎರಡೂ ಒಂದೇ. ಅವನಿಗೆ ಲಭಿಸುವ ಕೊಡುಗೆಗಳು ಖಚಿತ ಮತ್ತು ಅವನು ಎಲ್ಲ ಕಷ್ಟಗಳಿಂದ ಮುಕ್ತನಾಗುವನು."

ಉಕ್ಬಾರಬಿನ್ ಅಮೀರ ವರದಿ ಮಾಡುವುದು ಹೀಗೆ : ಒಮ್ಮೆ ಉಪದೇಶ ವೇದಿಕೆಯಿಂದ ಪ್ರವಾಸಿಯು ಹೇಳುವುದನ್ನು ಕೇಳಿದೆನು, "ನಿಮ್ಮ ವೈರಿಗಳ ವಿರುದ್ಧ ಎಷ್ಟು ಸಾಧ್ಯವೋ ಅಷ್ಟು ಸಿದ್ಧತೆಯನ್ನು ಮಾಡಿಕೊಳ್ಳಿರಿ. ಕೇಳಿರಿ, ಧನುರ್ವಿದ್ಯೆಯು ನಿಮ್ಮ ಬಲ, ಧನುರ್ವಿದ್ಯೆಯು ನಿಮ್ಮ ಬಲ, ಧನುರ್ವಿದ್ಯೆ ನಿಮ್ಮ ಬಲ." ಮತ್ತೊಂದೆಡೆಯಲ್ಲಿ, ಉಕ್ಬಾಹ ಬಿನ್ ಅಮೀರ ಪ್ರವಾದಿಯು ಹೇಳಿದರೆಂದು ಹೇಳುತ್ತಾನೆ : "ಯಾರು ಧನುರ್ವಿದ್ಯೆಯನ್ನು ಕಲಿತು ನಂತರ ಅದನ್ನು ತ್ಯಜಿಸಿದರೊ ಅವನು ನಮ್ಮವನಲ್ಲ."

ಅಬೂ ಮಸೂದ ಅಲ್-ಅವ್ಯಾರಿ ಬರೆಯುತ್ತಾನೆ : ಒಮ್ಮೆ ಒಬ್ಬ ಮನುಷ್ಯನು ಹೆಣ್ಣು ಕುದುರೆಯನ್ನೊಂದು ಹೂಡಿಕೊಂಡು ಪ್ರವಾದಿಯ ಹತ್ತಿರ ಬಂದು ಹೇಳಿದನು : "ಅಲ್ಲಾಹನ ಕಾರ್ಯಕ್ಕಾಗಿ ಇದನ್ನು ಸಮರ್ಪಿಸುತ್ತೇನೆ.' ಪ್ರವಾದಿಯು ಅದಕ್ಕೆ ಪ್ರತಿಯಾಗಿ ಹೇಳಿದರು." ಇದಕ್ಕಾಗಿ ನೀನು ಏಳು ನೂರು ನೊಗ ಹೂಡಿದ ಹೆಣ್ಣು ಕುದುರೆಗಳನ್ನು ಪುನರ್ಜನ್ಮ ಪಡೆವ ದಿನ ಪಡೆಯುವಿ."

ಮಾಸ್ರೂಕ್ ಹೇಳುತ್ತಾನೆ : ನಾವು ಅಬುಲ್ಲಾಹ ಬಿನ್ ಮಸೂದನನ್ನು ಖುರಾನದ ಕೆಳಗೆ ಶ್ಲೋಕ ಕುರಿತು ಕೇಳಿದೆವು : "ಅಲ್ಲಾಹನ ಪಥದಲ್ಲಿ ಕೊಲ್ಲಲ್ಪಟ್ಟವರನ್ನು ಮೃತರೆಂದು ತಿಳಿಯಬೇಡ. ಅಷ್ಟೇ ಅಲ್ಲ, ಅಲ್ಲಾಹನ ಸನ್ನಿಧಿಯಲ್ಲಿರುವ ಅವರು ಬದುಕುವುದಕ್ಕಾಗಿ ಜೀವದ್ರವ್ಯ ಪಡೆಯುತ್ತಾರೆ. ಅವರು ಅಲ್ಲಾಹನು ಕೊಟ್ಟಿರುವ ಔದಾರ್ಯವನ್ನು ಸಂತಸದಿಂದ ಸವಿಯುತ್ತಾರೆ : ಅವರೊಡನೆ ಸ್ವರ್ಗದಲ್ಲಿ ಕೂಡದೇ ಹಿಂದುಳಿದವರ ವಿಷಯಕ್ಕೆ ಹೇಳುವುದಾದರೆ, ಅವರಿಗೆ ಯಾವುದೇ ಭಯವಿಲ್ಲ. ಅವರು ದುಃಖ ಪಡಬೇಕಿಲ್ಲ." ಪ್ರವಾದಿಯವರಿಂದ ತಾನು ತಿಳಿದದ್ದನ್ನು ಕೆಳಗಿನಂತೆ ಅಬ್ಲುಲ್ಲಾಹ ಬಿನ್ ಮಸೂದ ವಿವರಿಸಿದನು : "ಅಲ್ಲಾಹನಿಗಾಗಿ ಮೃತರಾದವರ ಆತ್ಮಗಳು ನಲಿ ನಲಿಯುತ ಪಟಪಟನೆ ಹಸಿರು ಬಣ್ಣದ ಹಕ್ಕಿಗಳ ರೂಪದಲ್ಲಿ ಸ್ವರ್ಗದಲ್ಲಿ ಹಾರಾಡುತ್ತಿವೆ. ಪವಿತ್ರವಾದ ಸಿಂಹಾಸನದಿಂದ ಕೆಲವು ದೀಪಗಳು ಅವರಿಗಾಗಿ ನೇತಾಡುತ್ತಿವೆ. ಅವು ಆ ದೀಪಗಳು ಸುತ್ತೆಲ್ಲ ಹಾರಾಡುತ್ತಿವೆ. ಕಾಣಿಸಿಕೊಂಡು ಅವರಿಗೆ ಅವರೆದುರು ಅಲ್ಲಾಹನು ಏನಾದರೂ ಬೇಡುವ ಆಶೆಯಾಗಿದೆಯೊ ಎಂದು ಕೇಳುತ್ತಾನೆ. ಅವರು ಹೇಳುತ್ತಾರೆ : 'ನಾವು ಮತ್ತೇನನ್ನು ಬಯಸೋಣ? ನಾವು ಸಧ್ಯ ಪರಮಾನಂದದ ಸ್ವರ್ಗದಲ್ಲಿ ನಮಗೆ ಬೇಕಾದಲ್ಲಿ ವಿಹರಿಸುತ್ತಿದ್ದೇವೆ.' ಮೂರು ಸಲ ಈ ಪ್ರಶ್ನೆಯನ್ನು ಕೇಳಲಾಯಿತು. ಯಾವುದಾದರೂ ಒಂದು ಕೊಡುಗೆಗಾಗಿ ಕೇಳದಿದ್ದರೆ ಅಲ್ಲಾಹನು ತಮ್ಮನ್ನು ಬಿಡುವುದಿಲ್ಲ. ಎನ್ನುವುದನ್ನು ಗ್ರಹಿಸಿದ ಅವರು ಕೊನೆಯದಾಗಿ ಪ್ರಾರ್ಥಿಸಿದರು : 'ಓ ಪ್ರಭುವೆ, ನಮ್ಮ ಆತ್ಮಗಳು ನಮ್ಮ ದೇಹಗಳಿಗೆ ಮರಳಿ ಬರಲೆಂದು ಅಪೇಕ್ಷೆಯಾಗಿದೆ.

ಯಾಕೆಂದರೆ ಮತ್ತೆ ನಿನ್ನ ಕೈಂಕರ್ಯದ ಕಾರ್ಯಕ್ಕಾಗಿ ಹೋರಾಟ ಮಾಡಿ ಮೃತರಾಗುತ್ತೇವೆ.' ಮತ್ತೊಂದು ಆಶೆ ಅವರಿಗಿಲ್ಲದ್ದರಿಂದ, ಅಲ್ಲಾಹನು ಮರೆಯಾದನು"

ಅಬ್ದುಲ್ಲಾ ಬಿನ್ ಅಮರ ಬಿನ್ ಅಲ್-ಆಸ ವರದಿ ಮಾಡುತ್ತಾನೆ : ಪ್ರವಾದಿಯು ಹೇಳಿದ್ದಾರೆ : "ಅಲ್ಲಾಹನ ಕಾರ್ಯದಲ್ಲಿ ಯಾರಾದರೂ ಮಡಿದರೆ ಋಣ ಒಂದನ್ನು ಬಿಟ್ಟು ಆತನು ಎಲ್ಲದರಿಂದಲೂ ಮುಕ್ತನಾಗುವನು."

'ಬಡ್ರ' ಈ ಸ್ಥಳದಲ್ಲಿ ಪ್ರವಾದಿಯು ಮತ್ತು ಅವರ ಸಂಗಾತಿಗಳು ಬಹುದೇವತಾ ಆರಾಧಕರೊಡನೆ ಹೋರಾಟದಲ್ಲಿದ್ದಾಗಿನ ದೃಶ್ಯದ ವರ್ಣನೆಯನ್ನು ಅನಾಸ ಕೊಡುತ್ತಾನೆ : ಪ್ರವಾದಿಯು ತನ್ನ ಒಡನಾಡಿಗಳಿಗೆ ಹೇಳಿದರು. : "ಸ್ವರ್ಗಕ್ಕೆ ಏರಿರಿ ! ಅದು ಆಕಾಶ ಮತ್ತು ಭೂಮಿಯಷ್ಟು ವಿಸ್ತಾರವಾಗಿದೆ" "ವಾಹ್! ವಾಹ್!" ಎಂದು ಉಮಯರ ಬಿನ್ ಅಲ್-ಹಮಾಮ್ ಕೂಗಿದನು. "ನೀನು ಹೀಗೆ ಕೂಗಲು ಕಾರಣವೇನು ?" ಪ್ರವಾದಿ ಕೇಳಿದರು. "ಓ ಅಲ್ಲಾಹನ ದೂತನೆ, ಅಲ್ಲಾಹನ ಸ್ಮರಿಸಿ ಹೇಳುತ್ತೇನೆ. ಮತ್ತಾವ ಕಾರಣಕ್ಕೂ ಅಲ್ಲ, ಸ್ವರ್ಗದ ನಿವಾಸಿಗಳಲ್ಲಿ ನಾನೂ ಒಬ್ಬನೆಂಬ ಭರವಸೆ ಸಿಕ್ಕ ಆನಂದಕ್ಕಾಗಿ! ಎಂದನು. ಪ್ರವಾದಿಯು ತತ್‌ಕ್ಷಣವೇ ಉತ್ತರಿಸಿದರು. "ಖಚಿತವಾಗಿಯೂ ಈ ಒಳಗಾಗಿಯೇ ಅವರಲ್ಲಿ ಒಬ್ಬನಾಗಿ ನೀನಿರುವಿ ತನ್ನ ಚಿಕ್ಕದಾದ ಬತ್ತಳಿಕೆಯಿಂದ ಉತ್ತತ್ತಿಗಳನ್ನು ತಿನ್ನುತ್ತಿದ್ದ ಉಮಯರ ಬಿನ್ ಅಲ್-ಹುಮಾಯನು ಅವುಗಳನ್ನು ಬದಿಯಲ್ಲಿ ಎಸೆದು ಅನ್ನುತ್ತಾನೆ" : ಈ ಉತ್ತತ್ತಿಯನ್ನು ತಿನ್ನುವುದನ್ನು ಮುಗಿಸುವವರೆಗೆ ನಾನು ಬದುಕಿದರೆ, ನನಗೆ ಅದು ನನ್ನ ಬಾಳಿನ ಸುಧೀರ್ಘ ಕಾಲವಾಗುತ್ತದೆ!' ಹೀಗೆ ಹೇಳುತ್ತ ಶತ್ರುಗಳೊಡನೆ ಹೋರಾಡುತ್ತ ಮೃತನಾದನು."

ಅಲ್-ತಿಮಿಧಿ ಮತ್ತು ಅಬೂ ದಾವೂದ ಇಬ್ಬರೂ ಫುದಾಲಾಹ ಬಿನ್ ಉಬಾಯ್ದ ವರದಿ ಮಾಡಿದ್ದನ್ನು ಹೇಳುತ್ತಾರೆ : ಪ್ರವಾದಿಯು ಹೇಳಿದನು "ಅಲ್ಲಾಹನ ಕಾರ್ಯದಲ್ಲಿ ವೈರಿಗಳ ವಿರುದ್ಧ ಜಾಗ್ರತವಾಗಿದ್ದು ಮಡಿದವನೊಬ್ಬನನ್ನು ಬಿಟ್ಟು ಪ್ರತಿಯೊಬ್ಬ ವ್ಯಕ್ತಿಯ ಕೃತಿಗಳು ಅವನ ಸಾವಿನಿಂದ ಕೊನೆಗೊಳ್ಳುತ್ತವೆ. ಅವನು ಮಾಡಿರುವ ಸುಕೃತಿಯು ಕೊನೆಯ ದಿನದವರೆಗೆ ಬೆಳೆಯುತ್ತಲೇ ಸಾಗುತ್ತದೆ. ಮೃತ್ಯುವಿನ ಎಲ್ಲ ಸಂಕಷ್ಟಗಳಿಂದ (ವೇದನೆಗಳಿಂದ) ಅವನು ಸುರಕ್ಷಿತನಾಗುವನು."

ಅಬೂ ಉಮಾಮಹನನ್ನು ಉದ್ಧರಿಸುತ್ತ ಅಬೂ ದಾವೂದ ವರದಿ ಮಾಡುತ್ತಾನೆ: ಪ್ರವಾದಿಯು ಹೇಳಿದ್ದಾರೆ: "ಯುದ್ಧದಲ್ಲಿ ಹೋರಾಟದ ಅಥವಾ ಯುದ್ಧಕ್ಕೆ ಸಿದ್ಧವಾಗುತ್ತಿರುವ ಯೋಧನಿಗೆ ಸಹಾಯಗೈಯದ ಆ ದಿಶೆಯಲ್ಲಿಯ ಪ್ರಯತ್ನಕ್ಕೆ ಸಹಕಾರ ನೀಡದ ಇಲ್ಲವೆ ಕನಿಷ್ಠ ಪಕ್ಷ ಹೋರಾಟದಲ್ಲಿ ತೊಡಗಿರುವ ಯೋಧನ ಅನುಪಸ್ಥಿತಿಯಲ್ಲಿ ಅವನ ಕುಟುಂಬಕ್ಕೆ ಸೇವೆ ಸಲ್ಲಿಸದ ವ್ಯಕ್ತಿಯು ಈ

ಲೋಕದಲ್ಲಿರುವಾಗಲೇ ಕೊನೆಯ ದಿನ ದೈವನಿರ್ಣಾಯಕ ದಿನವು ಬರುವ ಮೊದಲೇ, ದೈವೀ ಕ್ರೋಧಕ್ಕೊಳಗಾಗುತ್ತಾನೆ."

ಇಮ್ರಾನ ಬಿನ್ ಹುಸೇನ ವರದಿ ಮಾಡುತ್ತಾನೆ : ಪ್ರವಾದಿಯು ಹೇಳಿದ್ದಾರೆ : "ನನ್ನೊಡನೆ ಸದಾಕಾಲ ಸತ್ಯಕ್ಕಾಗಿ ಹೋರಾಡುವ ಪಡೆಯೇ ಇರುವುದು ಮತ್ತು ಕೊನೆಯಲ್ಲಿ ಅಲ್-ದಜ್ಜಾಲ ಕೊಲ್ಲಲ್ಪಡುವವರೆಗೆ ಅವರು ದೃಢವಾಗಿ ಶೂರತನದಿಂದ ವೈರಿಗಳನ್ನು ಎದುರಿಸುವರು."

ಅಲ್-ತಿರ್ಮಿಥೀ ಇಬ್ನ ಅಬ್ಬಾಸನನ್ನು ಉದ್ಧರಿಸುತ್ತ ಹೇಳುತ್ತಾನೆ : ಪ್ರವಾದಿಯರು ಹೀಗೆ ಹೇಳಿದ್ದಾನೆ : "ನರಕದ ಜ್ವಾಲೆಯು ಎರಡು ಬಗೆಯ ಕಣ್ಣುಗಳನ್ನು ಮುಟ್ಟಲಾರದು ಅವು ಅಲ್ಲಾಹನ ಭೀತಿಯಿಂದ ಅಳುವ ಕಣ್ಣುಗಳು ಮತ್ತು ಅಲ್ಲಾಹಗೋಸ್ಕರ ಯಾವಾಗಲೂ ಜಾಗ್ರತವಾಗಿರುವ ಕಣ್ಣುಗಳು."

ಅಬೂ ಹುರಾಯರಾಹ ಹೇಳುತ್ತಾನೆ : ಪ್ರವಾದಿ ಮುಹಮ್ಮದ ಪೈಗಂಬರ ಸಂಗಾತಿಗಳಲ್ಲೊಬ್ಬನು ಪರ್ವತ ತಪ್ಪಲಿನಲ್ಲಿ ಪ್ರಯಾಣಿಸುತ್ತಿದ್ದಾಗ ಸ್ಫಟಿಕದಂತೆ ಸ್ವಚ್ಛವಾಗಿರುವ ನೀರುಳ್ಳ ಹರಿಯುವ ನದಿಯನ್ನು ಕಂಡನು. ಅದರಿಂದ ಆಕರ್ಷಿಸಲ್ಪಟ್ಟ ಆತನು ತನ್ನ ಜನರಿಂದ ದೂರವಿರುವ ಆ ಪ್ರದೇಶದಲ್ಲಿ ನೆಲೆಯೂರಲು ಬಯಸಿದನು. ಈ ವಿಷಯ ತಿಳಿದ ಪ್ರವಾದಿಯವರು ಹೀಗೆ ಪ್ರತಿಕ್ರಿಯಿಸಿದರು : "ಅದಲ್ಲ ನಿಲ್ಲು. ಅಲ್ಲಾಹನಿಗಾಗಿ ಜಿಹಾದದಲ್ಲಿ ಭಾಗವಹಿಸಲು ಹೊರಡುವ ಮನುಷ್ಯನಿಗೆ ಲಭಿಸುವ ಪ್ರತಿಫಲ ಮತ್ತು ಸ್ಥಾನವು ಒಬ್ಬನು ಎಪ್ಪತ್ತು ವರ್ಷಗಳವರೆಗೆ ಮನೆಯಲ್ಲಿ ಪ್ರಾರ್ಥನೆ ಮಾಡಿ ಏನನ್ನು ಸಾಧಿಸುವನೊ ಅದಕ್ಕಿಂತ ಶ್ರೇಷ್ಠವಾಗಿದೆ. ಅಲ್ಲಾಹನು ನಿನ್ನ ಪಾಪಗಳನ್ನೆಲ್ಲ ಕ್ಷಮಿಸಿ ನಿನಗೆ ಸ್ವರ್ಗ ನೀಡುವನೆಂದು ನೀನರಿಯಿಯ? ಅಲ್ಲಾಹಗೋಸ್ಕರ ಹೋರಾಡು. ಒಂಟಿಯೊಂದು ಹಾಲು ಕರೆದ ಬಳಿಕ ಮತ್ತೆ ತನ್ನ ಕೆಚ್ಚಲಿನಲ್ಲಿ ಹಾಲು ಸೃಜಿಸುವ ಅವಧಿಯವರೆಗೆ ಅಲ್ಲಾಹನ ಕಾರ್ಯಕ್ಕಾಗಿ ಕಾದಾಡುವವನು ಸ್ವರ್ಗಕ್ಕೆ ಹೋಗುವ ಭರವಸೆಯನ್ನು ಹೊಂದಬಲ್ಲನು."

ಅಲ್-ತಿರ್ಮಿಧಿ ಮತ್ತು ಅಲ್-ನಸಾಯೀ ಇಬ್ಬರು ಅಬೂ ಹುರಾಯರಾಹನನ್ನು ಆಧರಿಸಿ ಬರೆಯುತ್ತಾರೆ : ಪ್ರವಾದಿಯು ಹೇಳಿದ್ದಾರೆ : "ಹುತಾತ್ಮನು ಮೃತ್ಯುವಿನ ತೀಕ್ಷ್ಣ ನೋವನ್ನು ಅನುಭವಿಸಲಾರ; ಅದು ಕೇವಲ ಹಗುರಾಗಿ ಕಚ್ಚಿದಂತೆ ಇರುವ ಕಡಿತ."

ಖುರಾಯ್ಮ ಬಿನ್ ಫಾತಿಕ ಹೇಳುತ್ತಾನೆ : "ಯಾರು ಅಲ್ಲಾಹನ ಕಾರ್ಯಕ್ಕಾಗಿ ತಮ್ಮ ಸಂಪತ್ತನ್ನು ಖರ್ಚು ಮಾಡುತ್ತಾರೊ ಅವರ ಸಂಪತ್ತು ಅಲ್ಲಾಹನ ಹತ್ತರ ಅದರ ಏಳು ನೂರು ಪಟ್ಟು ಜಮಾ ಆಗುತ್ತದೆ."

ಅಲೀ, ಅಬೂ ಅಲ್-ದರ್ದಾ, ಅಬೂ ಹುರಾಯರಾಹ, ಅಬೂ ಉಮಾಮಹ, ಅಬ್ದುಲ್ಲಾಹ ಬಿನ್ ಉಮರ, ಜಾಬೀರ ಬಿನ್ ಅಬ್ದುಲ್ಲಾಹ ಮತ್ತು ಇಮ್ರಾನ್ ಬಿನ್ ಹುಸೇನ ಇವರನ್ನೆಲ್ಲ ಉದ್ಧರಿಸುತ್ತ ಇಬ್ನ ಮಾಜಾಹ ಈತನು ದಾಖಲಿಸುತ್ತಾನೆ : ಪ್ರವಾದಿಯು ನುಡಿದಿದ್ದಾರೆ: "ಯಾರೇ ಇರಲಿ ಮನೆಯಲ್ಲಿದ್ದು ಅಲ್ಲಾಹನ ಕಾರ್ಯಕ್ಕಾಗಿ ಸಾಗಿರುವ ಹೋರಾಟಕ್ಕೆ ತನ್ನ ಸಂಪತ್ತನ್ನು ದಾನವಾಗಿ ಕೊಟ್ಟರೆ ಆತನು ವ್ಯಯಿಸಿದ ಪ್ರತಿ ದಿರ್ಹಾಮಕ್ಕೆ ಪ್ರತಿಯಾಗಿ ಏಳು ನೂರು ಪಟ್ಟು ಪಡೆಯುವನು. ಯಾರೇ ಆಗಲಿ ಅಲ್ಲಾಹನಿಗೋಸ್ಕರ ನಡೆಯುವ ಸಂಗ್ರಾಮದಲ್ಲಿ ಭಾಗವಹಿಸುತ್ತ ಅದಕ್ಕಾಗಿ ತನ್ನ ಸಂಪತ್ತನ್ನು ಖರ್ಚು ಮಾಡುತ್ತಿದ್ದರೆ ಅಂಥ ಪ್ರತಿ ದಿರ್ಹಾಮಕ್ಕೆ ಏಳು ಸಾವಿರ ಮಡಿಯಾಗಿ ಪಡೆಯುವನು." ನಂತರ ಪ್ರವಾದಿಯು ಖುರಾನದಿಂದ ಈ ಶ್ಲೋಕವನ್ನು ಓದಿ ಹೇಳಿದರು : "ಯಾರನ್ನು ಅಲ್ಲಾಹನು ಪ್ರೀತಿಸುತ್ತಾನೆಯೋ ಅವನಿಗೆ ಅನೇಕ ಪಟ್ಟು ಸಂಪತ್ತು ಕೊಡುತ್ತಾನೆ ; ಮತ್ತು ಅಲ್ಲಾಹನು ಎಲ್ಲರ ಕ್ಷೇಮ ತೆಗೆದುಕೊಳ್ಳುತ್ತಾನೆ, ಅವನಿಗೆ ಎಲ್ಲವೂ ಗೊತ್ತುಂಟು." (ಖುರಾನ, ೨ :೨೬೧)

ಇಬ್ನ ಅಬ್ಬಾಸನನ್ನು ಉಲ್ಲೇಖಿಸುತ್ತ ಅಬೂ ದಾವೂದ ಹೇಳುತ್ತಾನೆ: ಪ್ರವಾದಿಯು ತನ್ನ ಸಂಗಾತಿಗಳಿಗೆ ತಿಳಿಹೇಳಿದರು. "ಉಹುದ ಸಂಗ್ರಾಮದಲ್ಲಿ ಹುತಾತ್ಮರಾದ ನಿಮ್ಮ ಸಹೋದರರ ಆತ್ಮಗಳು ಹಸಿರು ಪಕ್ಷಿಗಳ ರೂಪ ಧರಿಸುವಂತೆ ಅಲ್ಲಾಹನು ಅನುಮತಿಸುತ್ತಾನೆ. ಅವರು ನಲಿ ನಲಿಯುತ್ತ ಸ್ವರ್ಗದ ಹೊಳೆಗಳ ಮೇಲೆ ಪಟ ಪಟನೆ ಹಾರಾಡುತ್ತಾರೆ. ಅಲ್ಲಿ ಹಣ್ಣುಗಳನ್ನು ಮೆಲ್ಲುತ್ತಾರೆ ಮತ್ತು ದಿವ್ಯ ಸಿಂಹಾಸನದ ಕೆಳಗೆ ನೇತುಬಿಟ್ಟಿರುವ ಸುವರ್ಣ ದೀಪಗಳ ಹತ್ತಿರ ವಿಶ್ರಾಂತಿ ಪಡೆಯುತ್ತಾರೆ. ಅಲ್ಲಿಯ ಆಹಾರ ಮತ್ತು ಪಾನೀಯಗಳ ಸವಿಯನ್ನು ಸವಿದ ಮೇಲೆ, ಅಲ್ಲಿಯ ಆಪ್ಯಾಯಮಾನವಾದ ವಿಶ್ರಾಂತಿ ಸ್ಥಳದಲ್ಲಿ ಸುಖಪಟ್ಟ ಮೇಲೆ, ಅವರು ತಮ್ಮ ತಮ್ಮಲ್ಲಿಯೇ ಮಾತಾಡ ತೊಡಗಿದರು : 'ನಾವಿಲ್ಲಿ ಸ್ವರ್ಗದಲ್ಲಿ ಈ ತೆರನಾಗಿ ಇದ್ದದ್ದನ್ನು, ನಮ್ಮ ಸಹೋದರರಿಗೆ ತಿಳಿಸುವವರಾರು, ಅವರು ಸ್ವರ್ಗವನ್ನು ತಿರಸ್ಕರಿಸಬೇಕಾಗಿಲ್ಲ ಮತ್ತು ಅದಕ್ಕಾಗಿ ಯುದ್ಧಕ್ಕೆ ಅಂಜಬೇಕಾಗಿಲ್ಲ ಎಂದು ತಿಳಿಸಿ ಹೇಳುವವರು ಯಾರು?' ಅಲ್ಲಾಹನು ಉತ್ತರಿಸಿದನು :" ಆ ಕೆಲಸವನ್ನು ನಿಮಗಾಗಿ ನಾನು ಮಾಡುವೆನು." ಹೀಗೆ ಹೇಳುತ್ತ ಖುರಾನದ ಈ ಶ್ಲೋಕವನ್ನು ಬಹಿರಂಗಗೊಳಿಸಿದನು. 'ಅಲ್ಲಾಹನ ದಾರಿಯಲ್ಲಿ ಸಾಗುವವರು ಮೃತರೆಂದು ನೀನು ಬಗೆಯದಿರು.'

ಅಬೂ ಮೂಸಾ ಅಲ್-ಆಶಾರೀಯನ್ನು ಉಲ್ಲೇಖಿಸುತ್ತ ಅಲ್-ಹ ವರದಿ ಮಾಡುತ್ತಾನೆ. ಏನೆಂದರೆ ಅಲ್ಲಾಹನ ದೂತನ ಹೇಳಿಕೆಯ ಪ್ರಕಾರ ಸ್ವರ್ಗವು ಖಡ್ಗದ ಛಾಯೆಯ ಕೆಳಗಿದೆ.

ಅನಾಸನು ಇಬ್ನ ಮಾಜಹ ಹೇಳಿದ್ದನ್ನು ವರದಿ ಮಾಡುತ್ತಾನೆ : ಅಲ್ಲಾಹನ ದೂತನು ಹೇಳಿದ್ದಾರೆ : "ಅಲ್ಲಾಹನ ದಾರಿಯಲ್ಲಿ ಜಿಹಾದಕ್ಕಾಗಿ ಪಯಣಿಸುವವನ ಮೈಮೇಲೆ ಬಿದ್ದ ಧೂಳಿ ಮತ್ತು ಮಣ್ಣು ಪುನರ್ಜನ್ಮದ ದಿನ ಕಸ್ತೂರಿಯಾಗುವುದು."

ಇಬ್ನ ಉಮರನನ್ನು ಉಲ್ಲೇಖಿಸುತ್ತ ತನ್ನ 'ಅಲ್-ಕಬೀರ' ಎಂಬ ಗ್ರಂಥದಲ್ಲಿ ಅಲ್-ತಬರಾನಿ ಬರೆಯುತ್ತಾನೆ : ಪ್ರವಾದಿಯು ಹೇಳಿದ್ದಾರೆ : "ತಾನು ಹಿಂದೆ ಮಾಡಿದ ಯಾವುದೇ ಪಾಪಗಳಿದ್ದರೂ ಯಾವನು ಅಲ್ಲಾಹನ ಕಾರ್ಯದಲ್ಲಿ ತಲೆಯೊಡೆದುಕೊಳ್ಳುತ್ತಾನೊ ಅವನು ಕ್ಷಮಿಸಲ್ಪಡುತ್ತಾನೆ."

ವಾಹಿಲಾಹ್ ಹೇಳುತ್ತಾನೆ : ಪ್ರವಾದಿ ಹೇಳಿದರು : "ನನ್ನೊಡನೆ ಕೂಡಿಕೊಂಡು ಯಾರಿಗೆ ಹೋರಾಡಲು ಅವಕಾಶ ಸಿಗಲಿಲ್ಲವೊ ಅವರು ಸಮುದ್ರದಲ್ಲಿ ಹೋರಾಡುವರು."

ಅಬೂ ಹುರಾಯರಾಹನನ್ನು ಉದ್ಧರಿಸುತ್ತ ಅಲ್-ದಯಾಲಾಸಿ ತನ್ನ 'ಮಸ್ನತ್ ಅಲ್-ಫಿರ್ದಾವು'ದಲ್ಲಿ ಬರೆಯುತ್ತಾನೆ. ಪ್ರವಾದಿಯ ಹೇಳಿದ್ದಾರೆ : "ಒಂದು ಗಂಟೆಯವರೆಗೆ ಅಲ್ಲಾನ ಕಾರ್ಯಕ್ಕಾಗಿ ಹೋರಾಡುವುದು ಹದಿನೈದು ಬಾರಿ ಹಜ್‌ಯಾತ್ರೆ ಮಾಡಿದ್ದಕ್ಕಿಂತ ಗುಣಶಃ ಶ್ರೇಷ್ಠವಾಗಿದೆ."

ಹಜ್ ಯಾತ್ರೆಯಲ್ಲಿ ಭಾಗವಹಿಸುವವನ ಸನ್ನಿವೇಶಕ್ಕಿಂತ ಧರ್ಮಯುದ್ಧದಲ್ಲಿ ತೊಡಗಿದವನ ಸ್ಥಿತಿ ಬೇರೆಯಾಗಿರುತ್ತದೆ. ಅಲ್ಲಾಹನಿಗೋಸ್ಕರ ಹೋರಾಟದಲ್ಲಿರುವ ಯೋಧನು ತನ್ನನ್ನು ಮತ್ತು ತನ್ನ ಸಂಪತ್ತನ್ನು ತ್ಯಜಿಸುತ್ತ ಅಲ್ಲಾಹನ ಕಡೆಗೆ ಪಯಣಿಸಲು ಹೊರಟಿರುತ್ತಾನೆ. ಅವನು ಧರ್ಮಯುದ್ಧದಲ್ಲಿ ತೊಡಗುವುದು ಇಡೀ ಸಮಾಜದ ಕಲ್ಯಾಣಕ್ಕಾಗಿದೆ. ಆದ್ದರಿಂದಲೇ ಅಲ್ಲಾಹನ ಪವಿತ್ರ ಕಾರ್ಯದಲ್ಲಿ ಒಂದು ಗಂಟೆ ಹೋರಾಡುವುದೆಂದರೆ ತಾತ್ವಿಕವಾಗಿ (ಗುಣಾತ್ಮಕವಾಗಿ) ಹದಿನೈದು ಸಲ ಹಜ್ ಯಾತ್ರೆ ಮಾಡುವಕಿಂತ ಮಿಗಿಲೆಂದು ತಿಳಿಯಬೇಕು.

■

ಭಾಗ ಎರಡು

*

ಮಲಬಾರಕ್ಕೆ ಇಸ್ಲಾಮದ ಆಗಮನ ಹಾಗೂ ಪ್ರಸರಣದ ಇತಿಹಾಸ

ಜ್ಯೂಜ ಮತ್ತು ಕ್ರಿಶ್ಚನ್ನರ ಗುಂಪೊಂದು ತಮ್ಮ ಕುಟುಂಬಗಳೊಂದಿಗೆ ದೊಡ್ಡ ಹಡಗೊಂದರಲ್ಲಿ ಮಲಬಾರದ ರೇವು ಪಟ್ಟಣ ಕೊಡುಂಗಲ್ಲೂರಕ್ಕೆ ಬಂದಿಳಿದರು. ಆಗಲೂ ಕೊಡುಂಗಲ್ಲೂರು ಅಲ್ಲಿಯ ರಾಜನ ರಾಜಧಾನಿಯಾಗಿತ್ತು. ರಾಜನಿಂದ ಹೊಲಗಳನ್ನು, ವಾಣಿಜ್ಯ ಬೆಳೆಗಳ ಪ್ರದೇಶಗಳನ್ನು ಮತ್ತು ಮನೆಗಳನ್ನು ಅವರು ಪಡೆದುಕೊಂಡರು; ಹೀಗೆ ಅಲ್ಲಿ ನೆಲೆಸಿದರು.

ಕೆಲವು ವರ್ಷಗಳಾದ ಮೇಲೆ ಅಲ್ಲಿಗೆ (ಕೊಡುಂಗಲ್ಲೂರಿಗೆ) ಒಬ್ಬ ಶೇಖನೊಡನೆ ಬಡಮುಸಲ್ಮಾನರ ಗುಂಪೊಂದು ಬಂದಿತು. ಸಿಲೋನದಲ್ಲಿರುವ ನಮ್ಮ ತಂದೆ ಆ್ಯಡಮ್ಮನ ಹೆಜ್ಜೆಗುರುತುಗಳನ್ನು ನೋಡಲು ಹೊರಟಿದ್ದರು. ಇವರ ಬರುವನ್ನು ಅರಿತ ರಾಜನು ಅವರಿಗೆ ಬರಲು ಹೇಳಿಕಳಿಸಿ, ಅವರನ್ನು ಉಪಚರಿಸಿ ಆತಿಥ್ಯಭಾವದಿಂದ ನಡೆಸಿಕೊಂಡನು. ಆ ಗುಂಪಿನ ನೇತಾರ ಶೇಖನು ಆ ರಾಜನಿಗೆ ಪ್ರವಾದಿ ಮಹಮ್ಮದ ಮತ್ತು ಇಸ್ಲಾಂ ಧರ್ಮವನ್ನು ಕುರಿತು ತಿಳಿಸಿದನು. ಚಂದ್ರನು ಎರಡು ಹೋಳಾದ ಪವಾಡನ್ನು ಕುರಿತು ಅವರು ಮಾತನಾಡಿದರು. ಅಲ್ಲಾಹನು ಎತ್ತರದಲ್ಲಿರಲಿ, ಅವನ ಕೀರ್ತಿ ಹಬ್ಬಲಿ. ಪ್ರವಾದಿಯ ಪವಿತ್ರ ಕಾರ್ಯದ ಸತ್ಯವನ್ನು ಅಲ್ಲಾಹನು ರಾಜನ ಮನಸ್ಸಿನಲ್ಲಿ ಹಾಕಿದನು. ಅವನು ಶೇಖನನ್ನು ಹೃತ್ಪೂರ್ವಕ ಸ್ವೀಕರಿಸಿದನಲ್ಲದೆ ಪ್ರವಾದಿಯು ಅವನ ಹೃದಯವನ್ನು ವಶಪಡಿಸಿಕೊಂಡನು. ಶೇಖ ಮತ್ತು ಅವನ ಸಂಗಡಿಗರು ಮರಳಿ ಹೋಗುವಾಗ ತನ್ನನ್ನು ಭೆಟ್ಟಿಯಾಗಲು ಕೇಳಿಕೊಂಡನು. ಯಾಕೆಂದರೆ ಅವರೊಡನೆ ಕೂಡಿಕೊಳ್ಳುವ ವಿಚಾರ ಅವನದಾಗಿತ್ತು. ತಾನು ಅವರೊಡನೆ ಹೊರಡುವ ವಿಷಯವನ್ನು ಗುಪ್ತವಾಗಿಡಬೇಕೆಂದು ಅವರಿಗೆ ಆಜ್ಞಾಪಿಸಿದನಲ್ಲದೆ ಮಲಬಾರದಲ್ಲಿ ಈ ಗುಪ್ತ ಮಾತು ಯಾರಿಗೂ ಗೊತ್ತಾಗದಿರಲಿಯೆಂದು ಹೇಳಿದನು.

ರಾಜನ ಇಚ್ಛೆಗನುಸಾರವಾಗಿ ಶೇಖ ಮತ್ತು ಅವನ ಸಂಗಡಿಗರು ಸಿಲೋನದಿಂದ ತಿರುಗಿ ಹೋಗುವಾಗ ಅವನನ್ನು ಭೆಟ್ಟಿಯಾದರು. ಯಾರಿಗೂ ತಿಳಿಯದಂತೆ ಹಡಗ ಮತ್ತು ಉಳಿದ ಅವಶ್ಯ ವಸ್ತುಗಳನ್ನೆಲ್ಲ ಸಿದ್ಧಗೊಳಿಸಬೇಕೆಂದು ರಾಜನು ಶೇಖನಿಗೆ ತಿಳಿಸಿದನು.

ವಿದೇಶಿ ವ್ಯಾಪಾರಸ್ಥರಿಗೆ ಸಂಬಂಧಿಸಿದ ಸಾಕಷ್ಟು ಹಡಗಗಳು ಬಂದರದಲ್ಲಿದ್ದವು. ಶೇಖನು ಅಲ್ಲಿಯ ಹಡಗೊಂದರ ಮಾಲಕನಿಗೆ ತನ್ನನ್ನು ಮತ್ತು ತನ್ನೊಡನಿರುವ ಬಡ ಜನರ ಗುಂಪನ್ನು ಹಡಗ ಹತ್ತಿಸಿಕೊಂಡು ತೆಗೆದುಕೊಂಡು ಹೋಗಲು ವಿನಂತಿಸಿದನು. ಆ ಮಾಲಕನು ತತ್‌ಕ್ಷಣ ಸಂತೋಷದಿಂದ ಹಾಗೆ ಮಾಡಲು ಒಪ್ಪಿದನು.

ಕಡಲ ಪ್ರಮಾಣಕ್ಕೆ ಗೊತ್ತುಪಡಿಸಿದ ದಿನವು ಸಮೀಪಿಸಲು ತನ್ನ ಕುಟುಂಬದ ಜನರಾಗಲಿ, ಮಂತ್ರಿಗಳಾಗಲಿ ಏಳು ದಿನಗಳವರೆಗೆ ತನ್ನನ್ನು ಭೆಟ್ಟಿ ಆಗಬಾರದೆಂದು ಆಜ್ಞೆ ಮಾಡಿದನು. ಆ ಬಳಿಕ ತನ್ನ ರಾಜ್ಯವನ್ನು ಹಲವಾರು ಪ್ರಾಂತಗಳನ್ನಾಗಿ ವಿಭಜಿಸಲು ತೊಡಗಿದನು ಮತ್ತು ಪ್ರತಿ ಪ್ರಾಂತಕ್ಕೂ ಸ್ಪಷ್ಟವಾದ ಸರಹದ್ದುಗಳನ್ನು ಗೊತ್ತು ಮಾಡಿದನು; ಪ್ರತಿಯೊಂದು ಪ್ರಾಂತಕ್ಕೂ ಆಡಳಿತಾಧಿಕಾರಿಯನ್ನು ನಿಯಮಿಸಿ ಒಂದು ಪ್ರಾಂತವು ಮತ್ತೊಂದು ಪ್ರಾಂತದಲ್ಲಿ ಅತಿಕ್ರಮಿಸದಂತೆ ಅವುಗಳ ಪ್ರದೇಶಗಳ ಕ್ಷೇತ್ರಗಳನ್ನು ನಿಗದಿಪಡಿಸಿದನು; ಹಾಗೆ ಮಾಡಿದ್ದರ ಬಗ್ಗೆ ವಿವರವಾಗಿ ಬರೆದಿಟ್ಟನು.

ಮಲಬಾರದಲ್ಲಿರುವ ಹಿಂದುಗಳಿಗೆ ಈ ಸಂಗತಿ ಸಂಪೂರ್ಣವಾಗಿ ಗೊತ್ತಿದೆ. ಆ ರಾಜನು ದಕ್ಷಿಣದಲ್ಲಿ ಸರಹದ್ದಾಗಿರುವ ಕುಮ್ಹರಿ (ಕನ್ಯಾಕುಮಾರಿ) ಮತ್ತು ಉತ್ತರದ ಸರಹದ್ದಾಗಿರುವ ಕಂಜರಕೂಟ (ಕಾಸರಗೋಡ) ಇವುಗಳ ಮಧ್ಯದಲ್ಲಿರುವ ಮಲಬಾರದ ಸಮಸ್ತ ಪ್ರದೇಶದ ಸಮ್ರಾಟನಾಗಿದ್ದನು.

ಆ ಬಳಿಕ ರಾಜನು ಶೇಖ ಮತ್ತು ಅವನ ಜನರೊಡನೆ ಹಡಗವೇರಿ ರಾತ್ರಿಯುದ್ದಕ್ಕೂ ಸಾಗಿ ಪಂಟಲಯಾನಿ ಎಂಬಲ್ಲಿಗೆ ಬಂದು, ಅಲ್ಲಿಳಿದು ಒಂದು ಹಗಲು ಒಂದು ರಾತ್ರಿ ಕಳೆದನು. ಅಲ್ಲಿಂದ ಅವರು ದರ್ಮಾದಮ್ ಕಡೆಗೆ ತೆರಳಿ, ಅಲ್ಲಿ ಮೂರು ದಿನಗಳಲ್ಲಿ ಕಳೆದರು. ಅಲ್ಲಿಂದ ಪ್ರಯಾಣಿಸುತ್ತ ಶುಹ್ರಕ್ಕೆ (ಶಾಹರ ಅಲ್-ಮುಕುಲ್ಲಾಕ್ಕೆ) ತಲುಪಿ, ಅಲ್ಲಿ ರಾಜನು ಶೇಖ ಮತ್ತು ಅವನ ಜನರೊಡನೆ ಹಲವಾರು ದಿನಗಳವರೆಗಿದ್ದನು. ಅಲ್ಲಿ ಇನ್ನೊಂದು ಯಾತ್ರಿಕರ ಗುಂಪು ಬಂದು ಅವರನ್ನು ಸೇರಿತು. ಮಲಬಾರದಲ್ಲಿ ಇಸ್ಲಾಂ ಧರ್ಮವನ್ನು ಬೋಧಿಸುವ ಮತ್ತು ಅಲ್ಲಿ ಪ್ರಾರ್ಥನೆಗಳನ್ನು ಸಲ್ಲಿಸುವುದಕ್ಕಾಗಿ ಮಸಜಿದ್‌ಗಳನ್ನು ಕಟ್ಟುವ ಉನ್ನತ ಕಾರ್ಯವನ್ನು ಹೊತ್ತ ಗುಂಪು ಅದಾಗಿತ್ತು.

ಶಹಾರ ಅಲ್-ಮುಕುಲ್ಲಾದಲ್ಲಿರುವಾಗ ರಾಜನು ಅಸ್ವಸ್ಥನಾದನು. ತನ್ನ ರೋಗವು ಹದಗೆಡುತ್ತಿರುವುದನ್ನು ಅರಿತು ಮತ್ತು ಗುಣಮುಖವಾಗುವುದು ಬಹು ದೂರವೆನಿಸಿ ಮಲಬಾರ ಕಡೆಗೆ ಹೊರಟಿರುವ ಗುಂಪಿನಲ್ಲಿ ಒಬ್ಬನಾಗಿದ್ದ ಶರಾಫ ಬಿನ್ ಮಾಲಿಕ ಎಂಬವನನ್ನು ತನ್ನ ಹತ್ತಿರ ಬರಬೇಕೆಂದು ಸನ್ನೆ ಮಾಡಿದನು ಮತ್ತು ಅವನ ಮಲ ಸಹೋದರ ಮಾಲಿಕ ಬಿನ್ ದೀನಾರ ಮತ್ತು ಉಳಿದವರನ್ನು ತನ್ನ ಹತ್ತಿರ ಕರೆದು ಹೇಳಿದನು : "ನಾನು ಈ ಜಡ್ಡಿನಿಂದಾಗಿ ಮಡಿದರೂ ನೀವು ಹಿಂದೂಸ್ಥಾನಕ್ಕೆ ಹೋಗುವ ವಿಚಾರವನ್ನು ಬಿಡಬೇಡಿರಿ." "ನಿಮ್ಮ ದೇಶದ ಬಗೆಗೆ ನಮಗೇನೂ ತಿಳಿಯದು ಅದು ಎಲ್ಲಿದೆ, ಎಷ್ಟು ವಿಸ್ತಾರವಾಗಿದೆ ಏನೂ ಗೊತ್ತಿಲ್ಲ" ಇದು ರಾಜನಿಗೆ ಕೊಟ್ಟ ಅವರ ಉತ್ತರವಾಗಿತ್ತು. ಈ ಮಾತನ್ನು ಕೇಳಿದ ರಾಜನು ಕ್ಷಣ ಹೊತ್ತು ವಿಚಾರಿಸಿ ಮಲೆಯಾಳಿ ಭಾಷೆಯಲ್ಲಿ ಅವರಿಗೊಂದು ಪತ್ರ ಬರೆದು ಕೊಟ್ಟನು. ಆ ಪತ್ರದಲ್ಲಿ ಅವನು ತನ್ನ ರಾಜ್ಯ, ಅದರ ಪ್ರಾಂತಗಳು, ತನ್ನ ಕುಟುಂಬದ ಎಲ್ಲ ಸದಸ್ಯರು ಮತ್ತು ಮಲಬಾರದ ಉಳಿದ ರಾಜರನ್ನು ಕುರಿತ (ಅವರ ಹೆಸರು, ಇತ್ಯಾದಿ) ವಿವರಗಳು ಈ ಎಲ್ಲ ಸವಿವರ ಮಾಹಿತಿ ಬರೆದನು. ಆ ಬಳಿಕ ರಾಜನು ಅವರಿಗೆ ಕೊಡುಂಗಲ್ಲೂರ, ವರ್ಮಾದಂ, ಪಂಟಲಯಾರೆ ಅಥವಾ ಕೊಲ್ಲಂ ಈ ರೇವು ಪಟ್ಟಣಗಳ ಸಮುದ್ರ ತಟಾಕದಿಂದ ಬೇಕಾದಲ್ಲಿ ಹೋಗಬಹುದೆಂದು ಮಾರ್ಗದರ್ಶನ ಮಾಡಿದನು. ಇದಾದ ಬಳಿಕ ಮಲಬಾರದಲ್ಲಿ ಯಾರಿಗೂ ತನಗೊದಗಿದ ಗಂಭೀರ ಅಸ್ವಾಸ್ಥ್ಯದ ಬಗ್ಗೆ ಅಥವಾ ಒಂದು ವೇಳೆ ತಾನು ಮೃತನಾದರೆ ತನ್ನ ಮರಣದ ಬಗ್ಗೆ ಏನೂ ಹೇಳಕೂಡದೆಂದು ಅಪ್ಪಣೆ ಮಾಡಿದನು.

ಆ ಬಳಿಕ ಕೆಲ ದಿನಗಳಲ್ಲಿ ರಾಜನು ತೀರಿಕೊಂಡನು. ಸರ್ವಶಕ್ತನಾದ ಅಲ್ಲಾಹನು ಅವನ ಮೇಲೆ ತನ್ನ ವಿಪುಲವಾದ ಆಶೀರ್ವಾದಗಳನ್ನು ಧಾರೆಯರೆಯಲಿ !

ಕೆಲವು ವರ್ಷಗಳ ತರುವಾಯ, ಶರಫ ಬಿನ್ ಮಾಲಿಕ, ಮಾಲಿಕ ಬಿನ್ ದೀನಾರ ಮತ್ತು ಮಾಲಿಕ ಬಿನ್ ಹಬೀಬ, ಅವರ ಹೆಂಡತಿ ಖಾಮರಿಯ್ಯಾಹ, ಅವರ ಮಕ್ಕಳು ಹಾಗೂ ಸ್ನೇಹಿತರು ಇವರನ್ನೆಲ್ಲ ಒಳಗೊಂಡ ಗುಂಪೊಂದು ಮಲಬಾರ ಕಡೆಗೆ ಕಡಲ ಪಯಣ ಬೆಳೆಸಿದರು. ಹಲವಾರು ದಿನಗಳ ನಂತರ ಕಡಲ ಪ್ರಯಾಣದಿಂದ ಅವರೆಲ್ಲ ಕೊಡುಂಗಲ್ಲೂರ ಬಂದರ ತೀರಕ್ಕೆ ಬಂದಿಳಿದರು. ಆ ಊರಲ್ಲಿ ಆಗ ಆಳುತ್ತಿದ್ದ ಆಡಳಿತಗಾರನಿಗೆ ತಮಗೆ ರಾಜನು ಕೊಟ್ಟಿದ್ದ ಪತ್ರವನ್ನು ಕೊಟ್ಟರು. ರಾಜನ ಸಾವಿನ ಬಗ್ಗೆ ಅವರು ಅಲ್ಲಿ ಯಾರಿಗೂ ಏನನ್ನೂ ಉಸಿರಲಿಲ್ಲ. ಆ ಪತ್ರದಲ್ಲಿದ್ದ ನಿರ್ದೇಶನಗಳನ್ನು ಮನ್ನಿಸಿ ಅಲ್ಲಿ ಆಳುತ್ತಿದ್ದ ರಾಜನು ಅವರಿಗೆ ಉಪಯೋಗಿಸಲೆಂದು ಭೂಮಿ ಮತ್ತು ಸ್ಥಿರಾಸ್ತಿಗಳನ್ನು ಕೊಟ್ಟನು. ತದನುಸಾರ, ಅವರು ಅಲ್ಲಿ ನೆಲೆಯೂರಿದರು. ಮತ್ತು ಮಸೀದಿಯೊಂದನ್ನು ಕಟ್ಟಿಸಿದರು.

ಮಾಲಿಕ ಬಿನ್ ದೀನಾರ ಕೊಡುಂಗಲ್ಲೂರಲ್ಲಿ ನೆಲೆಸಿಬಿಡಲು ನಿರ್ಧರಿಸಿ ಮಲಬಾರದಲ್ಲಿರುವ ಇನ್ನುಳಿದ ಭಾಗಗಳಲ್ಲಿ ಮಸೀದಿಗಳನ್ನು ಕಟ್ಟಿ ಇಸ್ಲಾಂ ಧರ್ಮವನ್ನು ಬೋಧೀಸುವ ಕೆಲಸವನ್ನು ತನ್ನ ಸೋದರನ ಮಗ ಮಾಲಿಕ ಬಿನ್ ಹಬೀಬನಿಗೆ ಒಪ್ಪಿಸಿದನು. ಮಾಲಿಕ ಬಿನ್ ಹಬೀಬನು ತನ್ನ ಹೆಂಡತಿ ಮತ್ತು ಕೆಲವು ಮಕ್ಕಳೊಡನೆ ಕೂಡಿಕೊಂಡು ಸರಕು ಸಾಮಾನು ತೆಗೆದುಕೊಂಡು ಕೊಲ್ಲಂಕ್ಕೆ ಸಾಗಿದನು. ಅವರನ್ನೆಲ್ಲ ಅಲ್ಲಿ ಬಿಟ್ಟು, ಅವನು ಮುಂದೆ ಎಝಿಮಾಲಾಕ್ಕೆ ಹೋದನು; ಅಲ್ಲೊಂದು ಮಸೀದಿ ಕಟ್ಟಿಸಿದನು. ಮುಂದೆ ಅವನು ಬಾರಕೂರು, ಮಂಗಳೂರು ಮತ್ತು ಕಾಸರಗೋಡ ಈ ಊರುಗಳಿಗೆ ಹೋಗಿ ಅಲ್ಲೆಲ್ಲ ಮಸೀದಿಗಳನ್ನು ಕಟ್ಟಿಸಿದನು. ಈ ಎಲ್ಲ ಕಾರ್ಯವನ್ನು ಮುಗಿಸಿ ಎಝಿಮಾಲಕ್ಕೆ ಬಂದು ಅಲ್ಲಿ ಮೂರು ತಿಂಗಳು ವಾಸ್ತವ್ಯ ಮಾಡಿದನು. ಆ ಮೇಲೆ ಅವನು ಶ್ರೀಕಂದಪುರಂ, ದರ್ಮದಂ, ಪಂತಲಯಾನಿ ಮತ್ತು ಚಾಲಿಯಂ ಊರುಗಳಿಗೆ ಹೋಗಿ ಅಲ್ಲಿ ಮಸೀದಿಗಳನ್ನು ನಿರ್ಮಿಸಿದನು. ಚಾಲಿಯಂದಲ್ಲಿ ಆತನು ಐದು ತಿಂಗಳು ಇದ್ದನು. ಆ ಬಳಿಕ ಕೊಡುಂಗಲ್ಲೂರಕ್ಕೆ ಮರಳಿ ಹೋಗಿ ತನ್ನ ಕಕ್ಕ ಮಾಲಿಕ ಬಿನ್ ದೀನಾರ ಜೊತೆಯಲ್ಲಿ ಇದ್ದನು. ತನ್ಮಧ್ಯೆ ಎರಡನೆಯ ಬಾರಿಗೆ ಪ್ರಯಾಣ ಕೈಕೊಂಡು ತಾನು, ಮಲಬಾರದಲ್ಲಿ ಕಟ್ಟಿಸಿದ ಮಸೀದಿಗಳನ್ನೆಲ್ಲ ನೋಡಿ ಅಲ್ಲಿ ಪ್ರಾರ್ಥನೆ ಸಲ್ಲಿಸಿದನು. ನಾಸ್ತಿಕ್ಯದ ಕತ್ತಲೆಯಲ್ಲಿ ಅಷ್ಟೊಂದು ವಿಸ್ತಾರವಾಗಿ ಇಸ್ಲಾಂ ತನ್ನ ದಿವ್ಯ ಬೆಳಕನ್ನು ಬೀರಿದ್ದನ್ನು ನೋಡಿ ಸಂತೋಷಭರಿತನಾಗಿ ಅಲ್ಲಾಹನನ್ನು ಸ್ತುತಿಸುತ್ತ ಹೃತ್ಪೂರ್ವಕ ಕೃತಜ್ಞತೆಯನ್ನು ಅಭಿವ್ಯಕ್ತಗೊಳಿಸುತ್ತ ಮರಳಿದನು.

ಮಾಲಿಕ ಬಿನ್ ದೀನಾರ ಮತ್ತು ಮಾಲಿಕ ಬಿನ್ ಹಬೀಬ ತಮ್ಮ ಗೆಳೆಯರು ಮತ್ತು ಸೇವಕರೊಂದಿಗೆ ಕೊಲ್ಲಂಕ್ಕೆ ಹೋದರು. ಅಲ್ಲಿಂದ ಮಾಲಿಕ ಬಿನ್ ದೀನಾರ ಮತ್ತು ಕೆಲವರು ಶಹರ ಅಲ್-ಮುಕುಲ್ಲಾಕ್ಕೆ ಪಯಣಿಸಿದರು; ಉಳಿದವರು ಕೊಲ್ಲಂದಲ್ಲಿ ನೆಲೆಸಿದರು. ಶಹರ ಅಲ್-ಮುರುಲ್ಲಾದಲ್ಲಿ ಮಾಲಿಕ ಬಿನ್ ದೀನಾರನು ಮೃತ ರಾಜನ ಸಮಾಧಿಗೆ ಭೆಟ್ಟಿಯಿತ್ತು ಮುಂದೆ ಖುರಾಸಾನಕ್ಕೆ ಪಯಣಿಸಿದನು. ಕೆಲ ಕಾಲದ ನಂತರ ವಿಧಿವಶವಾದನು. ತನ್ನ ಕೆಲವು ಮಕ್ಕಳಿಗೆ ಕೊಲ್ಲಂದಲ್ಲಿ ನೆಲೆಸಲು ವ್ಯವಸ್ಥೆ ಮಾಡಿ ಮಾಲಿಕ ಬಿನ್ ಹಬೀಬ ತನ್ನ ಹೆಂಡತಿಯೊಡನೆ ಕೊಡುಂಗಲ್ಲೂರಿಗೆ ಮರಳಿದನು. ಕೊಡುಂಗಲ್ಲೂರಿನಲ್ಲಿ ಇರುವಾಗ ಅವನು ಮತ್ತು ಅವನ ಹೆಂಡತಿ ಇಹಲೋಕ ತ್ಯಜಿಸಿದರು.

ಇದು ಮಲಬಾರದಲ್ಲಿಯ ಇಸ್ಲಾಂದ ಆಗಮನ ಮತ್ತು ಪ್ರಸಾರದ ಇತಿಹಾಸವಾಗಿದೆ. ಯಾವ ವರ್ಷ ಇದು ಸಂಭವಿಸಿತೆಂದು ಖಚಿತವಾಗಿ ಹೇಳಲು ಸ್ಪಷ್ಟವಾದ ರುಜುವಾತು ಯಾವುದೂ ಇಲ್ಲ. ಬಹು ಸಂಖ್ಯಾತ ಅಭಿಪ್ರಾಯದ ಪ್ರಕಾರ ಇದೆಲ್ಲ ಘಟಿಸಿದ್ದು ಹಿ.ಶ.೨೦೦ರಲ್ಲಿ ಆದರೆ, ಮಲಬಾರದ ಮುಸಲ್ಮಾನರಲ್ಲಿ ಸಾಮಾನ್ಯ ಅಭಿಪ್ರಾಯವೆಂದರೆ

ಮೇಲೆ ಹೇಳಿದ ರಾಜನು ಮಹಮ್ಮದ ಪೈಗಂಬರರ ಕಾಲದಲ್ಲಿಯೇ ಇಸ್ಲಾಂಕ್ಕೆ ಮತಾಂತರಗೊಂಡನು. ಅವರ ನಂಬಿಕೆಯೆಂದರೆ ಒಂದು ರಾತ್ರಿ ರಾಜನು ಚಂದ್ರ ಹೋಳಾಗುವುದನ್ನು ನೋಡಿದನು. ಅದಾದ ಮೇಲೆ ಅವನು ಪ್ರವಾದಿಯನ್ನು ಭೆಟ್ಟಿಯಾಗಲು ಹೊರಟನು. ಪ್ರವಾದಿಯನ್ನು ಭೇಟಿಯಾದ ಬಳಿಕ ಮುಸಲ್ಮಾನರ ಗುಂಪೊಂದರೊಡನೆ ಮಲಬಾರಕ್ಕೆ ತಿರುಗಿ ಬರುತ್ತಿರುವಾಗ ದಾರಿಯಲ್ಲಿ ಶಹಾರ ಅಲ್–ಮಕಲ್ಲಾದಲ್ಲಿ ತೀರಿಕೊಂಡನು. ಆದರೆ ಈ ಮಾತಿನಲ್ಲಿ ಸತ್ಯವಿಲ್ಲ.

ಅಡಿ ಟಿಪ್ಪಣಿ :–

ಸ್ಥಳೀಯ ಐತಿಹ್ಯದ ಪ್ರಕಾರ ರಾಜ ಶರಮನ್ ಪೆರುಮಳನು ನಿವೃತ್ತನಾಗುವಾಗ (ವೃದ್ಧಾಪ್ಯದಿಂದ) ತನ್ನ ಸಹೋದರನ ಮಗನಿಗೆ ಖಡ್ಗವನ್ನು ಕೊಟ್ಟು ಅವನಿಗೆ ಆದೇಶಿಸಿದನು "ಕೊಲ್ಲಂ, ರಾಜ್ಯ ವಿಸ್ತಾರ ಮಾಡು" ಈ ಸಹೋದರ ಪುತ್ರನು ಮುಂದೆ ಕಾಲಿಕತ್ತದ ಝಮೋರಿನ್ ಎಂದು ಪ್ರಸಿದ್ಧನಾದನು. ಸಣ್ಣ ಪ್ರದೇಶವನ್ನು ಪಡೆದಿದ್ದ ಝಮೋರಿನ್ನನು ತನ್ನ ಕಕ್ಕನು ಕೊಟ್ಟಿದ್ದ ಖಡ್ಗವನ್ನು ಆದರದಿಂದ ಕಾಯ್ದಿಟ್ಟನು. ೧೬೭೧ರಲ್ಲಿ ಡಚ್ಚರು ತಾತ್ಪೂರ್ತಿಕ ವಾಸಸ್ಥಾನವಾಗಿದ್ದ ತಿರುಪನೆಕ್ಕುಲಂದಲ್ಲಿಯ ಝಮೋರಿನ್‌ನ ಅರಮನೆಯನ್ನು ಸುಟ್ಟು ಹಾಕಿದಾಗ ಆ ಖಡ್ಗ ಸುಟ್ಟು ಬೂದಿಯಾಯಿತು. ಈಗ ಝಮೋರಿನ್ನನ ವಶದಲ್ಲಿರುವ ಮಲಬಾರದಲ್ಲಿ ಅಕ್ಷರಕೆತ್ತಲ್ಪಟ್ಟ, ಖಡ್ಗವು ನಂತರ ನಿರ್ಮಾಣ ಮಾಡಲ್ಪಟ್ಟಿದೆ.

ರಾಜಾ ಪೆರುಮಾಳನ ಸಮಾಧಿ ಶಾಹರ ಅಲ್–ಮುಕುಲ್ಲಾದಲ್ಲಿ ಇಲ್ಲ, ಅದು ಯಮೆನ್‌ದಲ್ಲಿಯ ಝಾಫರ ಎಂಬಲ್ಲಿ ಇದೆ ಮತ್ತು ಸಾಮರೀ ಎಂದು ಕರೆಯಲ್ಪಡುವ ಈ ಸಮಾಧಿಯನ್ನು ಅಲ್ಲಿಯ ಸ್ಥಳೀಯರು ಪವಿತ್ರ ಸ್ಥಾನವೆಂದು ಬಗೆಯುತ್ತಾರೆ. ಎಂಬುದು ಬಹುಜನ ಸ್ವೀಕೃತ ನಂಬಿಕೆಯಾಗಿದೆ.

ಮಲಬಾರದ ಹಿಂದು ಮತ್ತು ಮುಸಲ್ಮಾನರಲ್ಲೆಲ್ಲ ರಾಜನು ಕಾಣೆಯಾದ ವಿಷಯ ಸರ್ವವಿದಿತವಿದೆ. ಆದರೆ ಹಿಂದುಗಳು ಹೇಳುವುದೇನೆಂದರೆ ರಾಜಾ ಪೆರಮಾಳನು ಆಗಸಕ್ಕೇರಿ ಹೋದನು ಮತ್ತು ಒಂದು ದಿನ ಧರೆಗಿಳಿದು ಬರುವನು. ಈ ನಂಬಿಕೆಯನ್ನಾಧರಿಸಿಯೇ ಒಂದು ಜೋಡು ಕಟ್ಟಿಗೆಯ ಪಾದತ್ರಾಣ (ಕಡಾವಿಗೆ) ನೀರಿನ ಕೊಡ, ಹಚ್ಚಿಟ್ಟ ದೀಪಗಳು ಮತ್ತು ಶೃಂಗಾರ ಸಲಕರಣೆಗಳನ್ನು ಕೊಡುಂಗಲ್ಲೂರಿನ ಒಂದು ಸ್ಥಳದಲ್ಲಿ ಒಂದು ವಿಶೇಷ ರಾತ್ರಿಯಲ್ಲಿ ಇಡಲಾಗುತ್ತದೆ.

ಮಲಬಾರದಲ್ಲಿ ಎಲ್ಲರಿಗೂ ಗೊತ್ತಿದ್ದ ವಿಷಯವೆಂದರೆ ಪೆರುಮಾಳ ರಾಜನು ತನ್ನ ರಾಜ್ಯವನ್ನು ವಿಭಜಿಸಿದನು ಮತ್ತು ತನ್ನ ಪ್ರದೇಶಗಳ ಅಧಿಕಾರವನ್ನು ಹಂಚಿಕೊಟ್ಟನು; ನಂತರದಲ್ಲಿ ಕಾಲಿಕತ್ತದ ಮೊದಲನೆಯ ದೊರೆಯೆಂದು ಪಟ್ಟವೇರಿದ ಝಮೋರಿನ್ನನು

ವಿಭಜನೆಯ ಕಾಲಕ್ಕೆ ಉಪಸ್ಥಿತವಿರದ್ದರಿಂದ ತನ್ನ ಪಾಲನ್ನು ಪಡೆಯಲಿಲ್ಲ. ಅವನು ಬಂದ ಬಳಿಕ ರಾಜನು ತನ್ನ ಖಡ್ಗವನ್ನು ಕೊಟ್ಟು ಹೇಳಿದನು; "ಇದರಿಂದ ಹೋರಾಡಿ ಅಧಿಕಾರವನ್ನು ಕಸಿದುಕೊಳ್ಳು" ಹೀಗೆ ಝಮೋರಿನ್ನನು ಹೋರಾಡಿ ಕಾಲಿಕತ್ತವನ್ನು ಕೈವಶ ಮಾಡಿಕೊಂಡನು.

ಕೆಲ ಕಾಲಾನಂತರ ಮುಸಲ್ಮಾನರು ಅಲ್ಲಿ ನೆಲೆಸತೊಡಗಿದರು. ಬೇರೆ ಬೇರೆ ಪ್ರದೇಶಗಳಿಂದ ಅಲ್ಲಿಗೆ ವ್ಯಾಪಾರಸ್ಥರು ಮತ್ತು ಕುಶಲಕರ್ಮಿಗಳು ಭಾರಿ ಸಂಖ್ಯೆಯಲ್ಲಿ ಬಂದು ಸೇರತೊಡಗಿದರು. ಹೀಗಾಗಿ ಕಾಲಿಕತ್ತವು ದೊಡ್ಡ ಪಟ್ಟಣವಾಗಿ ಪರಿವರ್ತಿತವಾಯಿತು. ಅಭಿವೃದ್ಧಿ ಹೊಂದುತ್ತಿರುವ ವ್ಯಾಪಾರ ಮತ್ತು ಉದ್ಯೋಗದ ಅವಕಾಶಗಳಿಂದಾಗಿ ಎಲ್ಲ ಬಗೆಯ ಜನರು, ಮುಸಲ್ಮಾನರು ಮತ್ತು ಉಳಿದ ಧರ್ಮಾನುಯಾಯಿಗಳು, ಅಲ್ಲಿ ಸೇರಿದರು. ಪರಿಣಾಮವಾಗಿ ಮಲಬಾರದಲ್ಲಿಯ ಎಲ್ಲ ರಾಜರುಗಳಲ್ಲಿಯೇ ಝಮೋರಿನ್ ಬಹಳ ಪ್ರಭಾವಿ ಮತ್ತು ಬಲಾಢ್ಯ ಆಡಳಿತಗಾರನಾದನು.

ಮಲಬಾರದ ಎಲ್ಲ ರಾಜರೂ ಹಿಂದುಗಳೇ. ಅವರಲ್ಲಿ ಕೆಲವರು ಬಲಶಾಲಿಗಳಾಗಿದ್ದಾರೆ. ಕೆಲವರು ಅಷ್ಟೊಂದು ಬಲಿಷ್ಠರಲ್ಲ. ಆದರೆ ವಾಸ್ತವದಲ್ಲಿ ಬಲಿಷ್ಠರು ದುರ್ಬಲರ ಪ್ರದೇಶಗಳ ಮೇಲೆ ದಾಳಿ ಮಾಡುವುದಿಲ್ಲ. ಇದಕ್ಕೆ ಕಾರಣ ಅವರ ರಾಜನು (ಪೆರಮಾಳನು) ಕೊನೆಯಲ್ಲಿ ಹೇಳಿದ ಸೌಹಾರ್ದದ ಉಪದೇಶದ ಪರಿಣಾಮವಿರಬಹುದು ಹಾಗೆಯೇ ಭಗವಂತನಿಗೆ ಅವನು ಸಲ್ಲಿಸಿದ ಪ್ರಾರ್ಥನೆಯೂ ಕೂಡಿದೆ. ಇದಲ್ಲದೆ ಪ್ರವಾದಿ ಮಹಮ್ಮದ ಪೈಗಂಬರರ ಆಶೀರ್ವಾದವೂ ಮತ್ತು ಅವರು ಸ್ಥಾಪಿಸಿದ ಇಸ್ಲಾಂ ಧರ್ಮವೂ ಕಾರಣವಾಗಿದೆ.

ಮಲಬಾರದಲ್ಲಿ ಒಂದು ಪ್ರಸಂಗವನ್ನು, ಮೂರು ಅರ್ಧ ಅಥವಾ ಅದಕ್ಕಿಂತ ಕಡಿಮೆ ಚದುರ ಮೈಲುಗಳ ಪ್ರದೇಶ ಹೊಂದಿರದ ದಳವಾಯಿಗಳೂ (ಹೆಗ್ಗಡೆಗಳು) ಹಾಗೆಯೇ ಬಹಳ ವಿಸ್ತಾರವಾದ ಭೂಪ್ರದೇಶಗಳ ಮೇಲೆ ಅಧಿಕಾರ ಪಡೆದಿರುವ ಆಳುವವರೂ ಇದ್ದಾರೆ. ಈ ದಂಡನಾಯಕರಲ್ಲಿ (ಹೆಗ್ಗಡೆಗಳಲ್ಲಿ) ಒಂದು ನೂರು ಇಲ್ಲವೆ ಅದಕ್ಕಿಂತ ಕಡಿಮೆ ಸೈನಿಕರಿಂದ ಹಿಡಿದು ಎರಡು ನೂರರಿಂದ ಮೂರು ನೂರು, ಸಾವಿರ, ಐದು ಸಾವಿರ, ಹತ್ತು ಸಾವಿರ, ಮೂವತ್ತು ಸಾವಿರ, ನೂರು ಸಾವಿರ, ಅದಕ್ಕೂ ಹೆಚ್ಚು ಸೈನಿಕರ ಮೇಲೆ ಅಧಿಕಾರ ಹೊಂದಿದವರಿದ್ದಾರೆ. ಕೆಲವು ಪ್ರದೇಶಗಳ ಒಕ್ಕೂಟ ಮಾಡಿಕೊಂಡು ಇಬ್ಬರು ಅಥವಾ ಮೂವರು ಕೂಡಿಕೊಂಡು ಆಡಳಿತ ನಡೆಸುತ್ತಾರೆ. ಅವರಲ್ಲಿ ಕೆಲವರು ಹೆಚ್ಚಿಗೆ ಅಧಿಕಾರ ಪಡೆದಿದ್ದು ಹೆಚ್ಚು ದೊಡ್ಡ ಸೈನ್ಯ ಹೊಂದಿರುತ್ತಾರೆ. ಒಮ್ಮೊಮ್ಮೆ ಅವರಲ್ಲಿ ಸಣ್ಣ ಪುಟ್ಟ ಜಗಳಗಳು,

ಬಡಿದಾಟಗಳು ಸಂಭವಿಸುತ್ತವೆ. ಆದರೆ ಅದೆಲ್ಲ ಅವರ ಸಮ್ಮಿಶ್ರ ಆಡಳಿತಕ್ಕೆ ಧಕ್ಕೆ ತರುವುದಿಲ್ಲ.

ಮಲಬಾರದ ಎಲ್ಲ ರಾಜರಲ್ಲಿ ಕೊಲ್ಲಂ ಮತ್ತು ಕನ್ಯಾಕುಮಾರಿ ಮಧ್ಯದ ಪ್ರದೇಶಗಳನ್ನು ಆಳುವ ರಾಜಾ ತಿರುವಾಡಿಯು ಅತ್ಯಂತ ದೊಡ್ಡ ಸೈನ್ಯಪಡೆ ಹೊಂದಿದ್ದಾನೆ. ಅವನಾದ ಬಳಿಕ ಎಝಿಮಲಾ, ಶ್ರೀಕಂದಪುರಂ, ಕನ್ನೂರ, ಈಡಕ್ಕಾಡ, ದರ್ಮಾದಂ ಮತ್ತು ಉಳಿದ ಪಟ್ಟಣಗಳನ್ನು ಆಳುತ್ತಿರುವ ಕೊಲಾಟ್ಟಿರಿ ಎಂಬ ರಾಜನಿದ್ದಾನೆ. ಆದರೆ ಝುಮೋರಿನ್ ಈ ಎಲ್ಲ ರಾಜರಿಗಿಂತ ಅಧಿಕ ಅಧಿಕಾರ ಮತ್ತು ಖ್ಯಾತಿಯನ್ನು ಪಡೆದಿರುವ ಭಾಗ್ಯವಂತನಾಗಿದ್ದಾನೆ. ಉಳಿದೆಲ್ಲ ರಾಜರಲ್ಲಿ ಇವನು ಬಹಳ ಪ್ರಭಾಶಾಲಿಯಾಗಿದ್ದಾನೆ. ಝುಮೊರಿನ್ನನ ಹಿರಿಮೆಗೆ ಕಾರಣವೆಂದರೆ ಇಸ್ಲಾಂದ ಹಿರಿಮೆಯೇ. ಮುಸಲ್ಮಾನರನ್ನು, ಅದರಲ್ಲೂ ವಿದೇಶಿ ಮುಸಲ್ಮಾನರನ್ನು ಇವರು ಪ್ರೀತಿಯಿಂದ ಗೌರವಪೂರ್ವಕವಾಗಿ ನೋಡುತ್ತಾನೆ. ಆದರೆ, ಹಿಂದುಗಳು ಈತನ ಮಹತಿಗೆ ಈ ಮೊದಲು ಉಲ್ಲೇಖಿಸಿದ ರಾಜನು ಅವನಿಗೆ ನೀಡಿರುವ ಖಡ್ಗವೇ ಕಾರಣವೆನ್ನುತ್ತಾರೆ. ಝುಮೊರಿನ್ನನ ಅರಮನೆಯಲ್ಲಿ ಕಾಯ್ದಿಟ್ಟಿರುವ ಖಡ್ಗವೇ ಪೆರಮಾಳ ರಾಜನಿತ್ತ ಖಡ್ಗವೆಂದು ಅವರು ಹೇಳುತ್ತಾರೆ. ಆ ಖಡ್ಗವನ್ನು ಕುರಿತು ಅವರಿಗೆ ಭಕ್ತಿ ಮತ್ತು ಗೌರವವುಂಟು. ಝುಮೊರಿನ್ನನು ಯುದ್ಧಕ್ಕೆ ಇಲ್ಲವೆ ದೊಡ್ಡ ಸಭೆಗೆ ಹೊರಟರೆ ಒಬ್ಬ ಸೇವಕನು ಆ ಖಡ್ಗವನ್ನು ಹೊತ್ತು ಮುಂದೆ ನಡೆಯುತ್ತಾನೆ.

ಒಂದಿಲ್ಲ ಒಂದು ಕಾರಣಕ್ಕೆ ಝುಮೊರಿನ್ನನು ದುರ್ಬಲ ರಾಜನೊಬ್ಬನೊಡನೆ ಯುದ್ಧ ಮಾಡಿದರೆ ಮತ್ತು ಸೋಲಿಸಿದ ಆ ಸೋತ ರಾಜನು ಝುಮೊರಿನ್ನನಿಗೆ ವಾರ್ಷಿಕ ಕಪ್ಪು ಸಲ್ಲಿಸುವ, ಒಮ್ಮೊಮ್ಮೆ, ತನ್ನ ರಾಜ್ಯವನ್ನೇ ಕೊಡುವ ಸಂಪ್ರದಾಯ ಉಂಟು. ಒಂದು ವೇಳೆ ಹಾಗೆ ಜಯಸಲ್ಪಟ್ಟ ರಾಜನು ಕೊಡದಿದ್ದರೆ ಅದಕ್ಕಾಗಿ ಬಹಳ ಕಾಲ ಕಾಯ್ದರೂ ಕೊಡಲೇ ಬೇಕೆಂದು ಒತ್ತಾಯ ಮಾಡಲಾಗುವುದಿಲ್ಲ. ಯಾಕೆಂದರೆ ಮಲಬಾರದ ಜನರು ಸಂಪ್ರದಾಯ ಮತ್ತು ರೂಢಿಗಳನ್ನು ಗೌರವಿಸಿ ಪಾಲಿಸುತ್ತಾರೆ. ಉದ್ದೇಶಪೂರ್ವಕವಾಗಿ ಸಂಪ್ರದಾಯಗಳನ್ನು ಮುರಿಯುವದಿಲ್ಲ. ಒಮ್ಮೊಮ್ಮೆ ನಿರುದ್ದೇಶ್ಯವಾಗಿ, ಅಪರೂಪಕ್ಕೆ ಅವು ಭಂಗವಾಗುತ್ತವೆ. ಆದರೆ ಝುಮೊರಿನನ್ನನನ್ನು ಹೊರತು ಪಡಿಸಿ ಉಳಿದ ರಾಜರು ಈ ಸಂಪ್ರದಾಯವನ್ನು ಪಾಲಿಸುವುದಿಲ್ಲ. ಕೇವಲ ಅವರು ಮಾಡುವುದೆಂದರೆ ತಮ್ಮ ವಿರೋಧಿ ರಾಜ್ಯವನ್ನು ಯುದ್ಧದಲ್ಲಿ ಧ್ವಂಸಮಾಡಿ ಸಾಧ್ಯವಾದರೆ ಜನರನ್ನು ಕೊಲ್ಲುವುದು.

■

ಭಾಗ ಮೂರು

*

ಮಲಬಾರದ ಹಿಂದುಗಳಲ್ಲಿರುವ ಕೆಲವು ವಿಚಿತ್ರ ಪದ್ಧತಿಗಳು, ಆಚರಣೆಗಳು

ಜಗತ್ತಿನಲ್ಲಿ ಎಲ್ಲಿಯೂ ಕಾಣದ ಕೆಲವು ಬಹು ವಿಚಿತ್ರ ಮತ್ತು ವಿಶಿಷ್ಟ ಸ್ವರೂಪದ ಸಂಪ್ರದಾಯಿಕ ರೂಢಿಗಳು ಮಲಬಾರದ ಹಿಂದುಗಳಲ್ಲಿ ಅಸ್ತಿತ್ವದಲ್ಲಿರುತ್ತವೆ.

ಒಬ್ಬ ರಾಜನು ಯುದ್ಧದಲ್ಲಿ ಕೊಲ್ಲಲ್ಪಟ್ಟರೆ ಅವನ ಸೈನಿಕರೆಲ್ಲ ಕೂಡಿಕೊಂಡು ಅವನ ವೈರಿಯೊಡನೆ ಸಂಗ್ರಾಮಕ್ಕಿಳಿವರು. ವೈರಿ ರಾಜನ ಸೈನ್ಯದೊಡನೆ, ಆ ದೇಶದೊಡನೆ ಕಾದಾಡಿ ಅವರನ್ನೆಲ್ಲ ಕೊಲ್ಲಬೇಕು ಇಲ್ಲವೆ ಅವನ ದೇಶವನ್ನು ಹಾಳು ಮಾಡಬೇಕು. ಈ ಎರಡರಲ್ಲಿ ಒಂದು ಘಟಿಸುವವರೆಗೆ ಆ ಸೈನಿಕರು ಮರಳಿ ತಮ್ಮ ರಾಜ್ಯಕ್ಕೆ ಹೋಗುವುದಿಲ್ಲ. ಆದ್ದರಿಂದ ಎರಡೂ ಬಣದವರು ಸೈನಿಕರ ಧುರೀಣನನ್ನು ಕೊಲ್ಲುವ ವಿಚಾರಕ್ಕೆ ಅಂಜುತ್ತಾರೆ. ಈ ಕಾಲದಲ್ಲಿ ಆಚರಣೆಯಲ್ಲಿ ಇರದಿದ್ದರೂ ಇದು ಪ್ರಾಚೀನ ಕಾಲದಿಂದ ಬಂದ ರೂಢಿಯೇ.

ಮಲಬಾರವನ್ನು ಆಳುವವರಲ್ಲಿ ಮುಖ್ಯವಾಗಿ ಎರಡು ಗುಂಪುಗಳುಂಟು : ಝುಮೊರಿನ್ನನ ಬೆಂಬಲಿಗರು ಮತ್ತು ಕೋಚಿ ರಾಜನ ಬೆಂಗಲಿಗರು. ಕೆಲವೊಂದು ತಾತ್ಕಾಲಿಕ ಸಮಸ್ಯೆಗಳನ್ನು ಹೊರತು ಪಡಿಸಿ ಸಾಮಾನ್ಯವಾಗಿ ಅವರು ತಮ್ಮ ಪಕ್ಷಗಳನ್ನು ಬದಲಿಸುವುದಿಲ್ಲ. ಸಮಸ್ಯೆ ಪರಿಹಾರವಾದೊಡನೆ ಆ ಆಡಳಿತಗಾರನು ತನ್ನ ಮೊದಲಿನ ಪಕ್ಷಕ್ಕೆ ಮರಳುತ್ತಾನೆ.

ಮಲಬಾರದ ಜನರು ಯುದ್ಧಗಳಲ್ಲಿ ಎಂದೂ ದ್ರೋಹಿಗಳಲ್ಲ. ಯುದ್ಧವನ್ನು ತಪ್ಪಿಸದ ಸ್ಥಿತಿ ಇದ್ದಾಗ ಮುಂಚಿತವಾಗಿಯೇ ಅವರು ಯುದ್ಧದ ದಿನವನ್ನು ಗೊತ್ತುಪಡಿಸುತ್ತಾರೆ. ಪರಸ್ಪರ ಒಪ್ಪಂದದ ಕರಾರುಗಳನ್ನು ಅವರು ಮುರಿಯುವುದಿಲ್ಲ. ಈ ವಿಷಯದಲ್ಲಿ ಮೋಸ ಮಾಡುವುದನ್ನು ಘನತೆಗೆ ಕುಂದು ತರುವ ನೀಚ ಕಾರ್ಯವೆಂದು ಕೀಳಾಗಿ ನೋಡಲಾಗುತ್ತದೆ.

ಬ್ರಾಹ್ಮಣರು, ಬಡಿಗರು ಮತ್ತು ಇನ್ನುಳಿದ ಪಿತೃಪ್ರಧಾನವಾದ ಕುಟುಂಬಗಳ ಜನರು ತಮ್ಮ ತಂದೆ ತಾಯಿ ಇಲ್ಲವೆ ಹಿರಿಯಣ್ಣ ತೀರಿಕೊಂಡರೆ ಅವರ ಶೋಕಾಚರಣೆ ಮಾಡುವುದಕ್ಕಾಗಿ ವರ್ಷದುದ್ದಕ್ಕೂ ಇಂದ್ರಿಯ ನಿಗ್ರಹವನ್ನು ಪಾಲಿಸುತ್ತಾರೆ; ನಯ್ಯರರು ಮಾತೃಪ್ರಧಾನ ಪದ್ಧತಿಯನ್ನು ಪಾಲಿಸುವವರಾಗಿದ್ದರಿಂದ ಅವರು ತಮ್ಮ ತಾಯಿ, ಸೋದರ ಮಾವ ಮತ್ತು ಹಿರಿಯಣ್ಣ ಇವರ ಮರಣ ಸಂಭವಿಸಿದರೆ ಆ ವರ್ಷ ಇಂದ್ರಿಯ ನಿಗ್ರಹ ಆಚರಿಸುತ್ತಾರೆ. ಇಂದ್ರಿಯ ನಿಗ್ರಹದ ಅವಧಿಯುದ್ದಕ್ಕೂ ಅವರು ತಮ್ಮ ತಲೆಗೂದಲನ್ನು, ಉಗುರುಗಳನ್ನು ಕತ್ತರಿಸುವುದು. ಮೀನ ಇಲ್ಲವೆ ಮಾಂಸ ತಿನ್ನುವುದು, ವೀಳ್ಯೆದೆಲಿ ಜಗಿಯುವುದು ಅಥವಾ ಹೆಂಗಸರೊಡನೆ ಸಂಭೋಗ ಮಾಡುವುದು ಇವೆಲ್ಲ ನಿಷೆದ್ಧ ಎಂದು ಬಗೆಯುತ್ತಾರೆ. ಈ ಆಚರಣೆಯಿಂದ ಅವರು ದೂರ ಸರಿಯುವುದಿಲ್ಲ. ಯಾಕೆಂದರೆ ಹಾಗೆ ಮಾಡುವುದರಿಂದ (ಆ ಆಚರಣೆಯಿಂದ) ಮೃತರು ಪುಣ್ಯವಂತರಾಗುತ್ತಾರೆ ಎಂದು ಅವರ ನಂಬಿಕೆಯಾಗಿದೆ.

ನೈಯರರಂತಹ ಮಾತೃಪ್ರಧಾನ ಸಮುದಾಯಗಳಲ್ಲಿ ಮೃತನಾದ ವ್ಯಕ್ತಿಯ ತಾಯಿಯ ಕಡೆಗಿನ ಅವನ / ಅವಳ ಸಹೋದರರು, ಸಹೋದರಿಯರ ಮಕ್ಕಳು, ಅತ್ತೆಂದಿರು ಮತ್ತು ಇನ್ನುಳಿದ ತಾಯಿಗಳ ಕಡೆಗಿನ ಬಂಧುಗಳು ಅವನ ವಾರಸುದಾರರಾಗುತ್ತಾರೆ. ವಾರಸಾ ಹಕ್ಕು ಅದು ಆಸ್ತಿಗೆ ಅಥವಾ ರಾಜ್ಯಶಾಹಿಯ ರಾಜಕೀಯ ಅಧಿಕಾರಕ್ಕೆ ಹಕ್ಕು ಇರಬಹುದು ಒಂದು ವ್ಯಕ್ತಿಯ ಮಕ್ಕಳಿಗೆ ಹೋಗುವುದಿಲ್ಲ. ಆದರೆ ಅದು ಆ ವ್ಯಕ್ತಿಯ ಸಹೋದರಿಯ ಪುತ್ರಿಯರು ಇಲ್ಲವೆ ಪುತ್ರರಿಗೆ ಹೋಗುತ್ತದೆ. ಪುತ್ರರಿಗೆ ಈ ತೆರನಾಗಿ ಹಿಂದು ಕಾನೂನು ಹಕ್ಕು ನಿರಾಕರಣೆ ಮಾಡುವುದು ಕನ್ನೂರ ಮತ್ತು ಸುತ್ತು ಮುತ್ತಲಿನ ಊರುಗಳಲ್ಲಿರುವ ಮುಸಲ್ಮಾನ ಸಮುದಾಯಗಳಲ್ಲಿ ನುಸುಳಿಕೊಂಡು ಬಂದಿದೆ. ಅವರು ಖುರಾನ ಓದುತ್ತಾರೆ; ಅದನ್ನು ಮುಖೋದ್ಗತ ಮಾಡುತ್ತಾರೆ; ಅದನ್ನು ಸುಂದರವಾಗಿ ಪಠಿಸುತ್ತಾರೆ; ಅವರು ಧಾರ್ಮಿಕ ಜ್ಞಾನವನ್ನು ಪಡೆಯುತ್ತಾರೆ; ನಮಾಜ ಮುಂತಾದ ಪ್ರಾರ್ಥನೆಗಳನ್ನು ಸಲ್ಲಿಸುತ್ತಾರೆ; ಆದಾಗ್ಯೂ, ಈ ಆಚರಣೆ ಅವರಲ್ಲಿರುವುದು ಅತ್ಯಂತ ವಿಚಿತ್ರ ಮತ್ತು ಸೋಜಿಗದ ಸಂಗತಿ.

ಆದರೆ ಬ್ರಾಹ್ಮಣ, ಪತ್ತಾರ, ಬಡಿಗ, ಕಂಬಾರ, ಡಿಯ್ಯಾ ಮತ್ತು ಮೀನುಗಾರ ಸಮುದಾಯಗಳಲ್ಲಿ ಮೃತ ತಂದೆಯ ವಾರಸಾ ಹಕ್ಕು ಅವನ ಮಕ್ಕಳಿಗೆ ಸಲ್ಲುತ್ತದೆ. ಈ ಸಮುದಾಯಗಳಲ್ಲಿ ಕೆಲವೊಂದು ವೈವಾಹಿಕ ವಿಧಿ ವಿಧಾನಗಳುಂಟು. ಆದರೆ ನೈಯರರಲ್ಲಿ ಪುರುಷನೊಬ್ಬ ಒಬ್ಬ ಮಹಿಳೆಯ ಕೊರಳಿಗೆ ಒಂದು ದಾರವನ್ನು (ತಾಳಿ) ಕಟ್ಟಿದರೆ ಅದೇ ಮದುವೆ. ಅವಳಿಗೆ ತನ್ನ ಕೊರಳಿಗೆ ದಾರ ಕಟ್ಟಿದ ಪುರುಷ ಮತ್ತು ಉಳಿದವರು ವ್ಯವಹಾರಿಕವಾಗಿ ಎಲ್ಲ ಒಂದೇ.

ಬ್ರಾಹ್ಮಣರಲ್ಲಿ, ಒಂದು ಕುಟುಂಬದಲ್ಲಿ ಅನೇಕ ಸಹೋದರರಿದ್ದರೆ ಕೇವಲ ಜ್ಯೇಷ್ಠ ಸಹೋದರನೊಬ್ಬನೇ ಮದುವೆಯಾಗುತ್ತಾನೆ. ಮೊದಲನೆಯ ಸಹೋದರನಿಗೆ ಮಕ್ಕಳಾಗದಿದ್ದರೆ ಎರಡನೆಯವನು ಮದುವೆಯಾಗುತ್ತಾನೆ. ಆಸ್ತಿಗೆ ಹಕ್ಕುದಾರರು ಬಹಳ ಜನರಾದರೆ ಸಂಭವಿಸುವ ಜಗಳಗಳನ್ನು ಮತ್ತು ವ್ಯಾಜ್ಯಗಳನ್ನು ತಪ್ಪಿಸಲು ಈ ಪದ್ಧತಿಯನ್ನು ಪಾಲಿಸುತ್ತಾರೆ. ಸರ್ವೇಸಾಮಾನ್ಯವಾಗಿ ಕಿರಿಯ ಸಹೋದರರು ನೈಯರ ಸ್ತ್ರೀಯರೊಡನೆ ಅಕ್ರಮ ಲೈಂಗಿಕ ಸಂಬಂಧದಲ್ಲಿ ತೊಡುಗುತ್ತಾರೆ. ಇಂಥವರಿಗೆ ನೈಯರ ಸ್ತ್ರೀಯರಿಂದ ಹುಟ್ಟಿದ ಮಕ್ಕಳಿಗೆ ತಂದೆಯ ಸಂಪತ್ತಿನಲ್ಲಿ ಹಕ್ಕು ಇಲ್ಲ.

ನಯ್ಯರ ಸಮುದಾಯಿ ಅದರಂತೆಯೇ ಅವರಿಗೆ ಸಾಮಾಜಿಕ ಶ್ರೇಣಿಕ್ರಮದಲ್ಲಿ ಹತ್ತಿರವಿರುವ ಸಮುದಾಯಗಳಲ್ಲಿ ಸಾಮಾನ್ಯವಾಗಿ ಸ್ತ್ರೀಯರು ಇಬ್ಬರು ಅಥವಾ ನಾಲ್ಕು ಅಥವಾ ಹೆಚ್ಚು ಗಂಡಂದಿರನ್ನು ಹೊಂದಿರುತ್ತಾರೆ. ಮುಸಲ್ಮಾನ ಗಂಡನು ತನ್ನ ಹೆಂಡತಿಯರೊಡನೆ ರಾತ್ರಿಯನ್ನು ಹಂಚಿಕೊಳ್ಳುವಂತೆ ಈ ಸ್ತ್ರೀಯರು ತಮ್ಮ ಈ ಗಂಡಂದಿರೊಡನೆ ಪಾಳಿಯ ಪ್ರಕಾರ ರಾತ್ರಿಯನ್ನು ಕಳೆಯುತ್ತಾರೆ. ಈ ವಿಷಯದಲ್ಲಿ ವೈರತ್ವ ಅಥವಾ ದುಷ್ಟ ಮನಸ್ಸು ಹುಟ್ಟುವುದಿಲ್ಲ.

ಬಡಿಗರು ಕುರುಬರು ಮತ್ತು ಪತ್ತಾರರು ಇವರಲ್ಲಿ ಎಲ್ಲ ಸಹೋದರರೂ ಒಬ್ಬಳನ್ನೇ ಮದುವೆಯಾಗುವ ಪದ್ಧತಿಯುಂಟು. ಇಂಥ ಗಂಡಂದಿರು ಸಹೋದರರಾಗಿರದಿದ್ದರೂ ಕನಿಷ್ಠ ಪಕ್ಷಕ್ಕೆ ಒಂದೇ ಕುಟುಂಬದವರಾಗಿರಬೇಕು. ಈ ಪದ್ಧತಿಯು ಕಟ್ಟುನಿಟ್ಟಾಗಿ ಆಚರಣೆಯಲ್ಲಿರಲು ಕಾರಣ ಎಂದರೆ ಆಸ್ತಿಯ ಹಕ್ಕಿಗಾಗಿ ವ್ಯಾಜ್ಯಗಳನ್ನು ತಡೆಯುವುದು ಇಲ್ಲವೆ ಕನಿಷ್ಠ ಪ್ರಮಾಣಕ್ಕೆ ತರುವುದಾಗಿದೆ.

ಮಲಬಾರದ ಹಿಂದುಗಳು ತಮ್ಮ ಮೈ ತೆರೆದು ಅಡ್ಡಾಡುತ್ತಾರೆ. ಸಾಮಾನ್ಯವಾಗಿ ಅವರು ತಮ್ಮ ಟೊಂಕದ ಕೆಳಗಿಂದ ಮೊಳಕಾಲ ಮುಚ್ಚುವಷ್ಟು ಒಂದು ಅರಿವೆ ತುಂಡನ್ನು ಧರಿಸುತ್ತಾರೆ. ಈ ವಿಷಯದಲ್ಲಿ ಎಲ್ಲರೂ ಒಂದೇ: ಗಂಡಸರು ಮತ್ತು ಹೆಂಗಸರು, ಹಿರಿಯರು ಮತ್ತು ಯುವಕರು, ಶ್ರೀಮಂತರು ಮತ್ತು ಬಡವರು, ರಾಜರು ಮತ್ತು ಪ್ರಜೆಗಳು ಎಲ್ಲರೂ ಒಂದೇ! ವಾಡಿಕೆಯಾಗಿ ಹೆಂಗಸರು ಯಾರ ಮುಂದಾದರೂ ಕಾಣಿಸಿಕೊಳ್ಳುತ್ತಾರೆ. ಆದರೆ ಬ್ರಾಹ್ಮಣ ಸ್ತ್ರೀಯರು ಸಾಮಾನ್ಯವಾಗಿ ಮನೆಯ ಒಳಗೇ ಇರುತ್ತಾರೆ. ಉಳಿದ ಸ್ತ್ರೀಯರಂತೆ ಅವರು ಹೊರಗೆ ಹೋಗುವುದಿಲ್ಲ. ತಮ್ಮ ಸ್ತ್ರೀಯರ ಸೌಂದರ್ಯ ನೋಡಲ್ಪಡಲಿ ಮತ್ತು ಸವಿಯಲ್ಪಡಲಿ ಎಂದು ನಯ್ಯರರು ಅವರಿಗೆ ಭರ್ಜರಿ ಪೋಷಾಕು ಮತ್ತು ಒಡವೆಗಳನ್ನು ಹಾಕಿಕೊಂಡು ಹಬ್ಬ ಸಮಾರಂಭಗಳಿಗೆ ಹೋಗಲು ಬಿಡುತ್ತಾರೆ. ರಾಜಮನೆತನದಲ್ಲಿ, ಮಲಬಾರದಲ್ಲಿ ಒಂದೇ ನಿಮಿಷ ಜ್ಯೇಷ್ಠನಾಗಿದ್ದರೂ, ಅವನು ಕುರುಡಿರಬಹುದು, ಮೂರ್ಖ ಇಲ್ಲವೆ ಅಂಗ ಊನನಾಗಿರಬಹುದು ಅಥವಾ ಸೋದರತ್ತೆಯರ ಪುತ್ರರಲ್ಲಿ ಒಬ್ಬನಾಗಿರಬಹುದು.

ಅವನೇ ಸಿಂಹಾಸನವೇರುತ್ತಾನೆ. ಆದರೆ ಈವರೆಗೆ ಅಧಿಕಾರ ಕಬಳಿಸಲು ಯಾರೂ ಹಿರಿಯ ವ್ಯಕ್ತಿಯನ್ನು ಕೊಂದದ್ದನ್ನು ಕೇಳಿಲ್ಲ.

ಒಂದು ಕುಟುಂಬ ಅಥವಾ ರಾಜ ಮನೆತನಕ್ಕೆ ಯಾರೂ ಆಸ್ತಿ–ವಾರಸುದಾರರು ಇಲ್ಲದಿದ್ದಾಗ ಮತ್ತೊಂದು ಕುಲದಿಂದ ದತ್ತಕ ತೆಗೆದುಕೊಳ್ಳುವ ಪದ್ಧತಿ ಮಲಬಾರದಲ್ಲುಂಟು. ದತ್ತು ತೆಗೆದುಕೊಳ್ಳುವುದು ಕೇವಲ ಚಿಕ್ಕ ಮಕ್ಕಳನ್ನಷ್ಟೆ ಅಲ್ಲ ಪ್ರೌಢರನ್ನೂ ಕೆಲವು ಬಾರಿ ತೆಗೆದುಕೊಳ್ಳಲಾಗುತ್ತದೆ. ದತ್ತು ಪುತ್ರನನ್ನು ಔರಸ ಪುತ್ರನಂತೆಯೇ ನೋಡಿಕೊಳ್ಳಲಾಗುತ್ತದೆ ಮತ್ತು ವಾರಸಾ ಹಕ್ಕನ್ನು, ಅಧಿಕಾರ ಮತ್ತು ಸ್ಥಾನಮಾನವನ್ನು ತಾರತಮ್ಯವಿಲ್ಲದೇ ನೀಡಲಾಗುವುದು. ದತ್ತಕ ತೆಗೆದುಕೊಳ್ಳುವ ಪದ್ಧತಿ. ಮಲಬಾರದಲ್ಲಿ ಆಡಳಿತಗಾರರಲ್ಲಿ (ರಾಜರಲ್ಲಿ) ಸಾಮಾನ್ಯ ಪ್ರಜೆಗಳಲ್ಲಿ, ನಿಮ್ನ ವರ್ಗ ಮತ್ತು ಉನ್ನತ ವರ್ಗಗಳಲ್ಲೆಲ್ಲ ಇದೆ. ಈ ಪದ್ಧತಿಯ ಮೂಲಕ ಉತ್ತರಾಧಿಕಾರತ್ವದ ಸಂಪ್ರದಾಯ ಮೊಟಕಾಗುವುದಿಲ್ಲ.

ಮಲಬಾರದ ಹಿಂದುಗಳು ಜಾತಿ ಪದ್ಧತಿಯನ್ನು ನಿಷ್ಠೆಯಿಂದ ಪಾಲಿಸುತ್ತಾರೆ. ಇದರಿಂದಾಗಿ ಅವರು ಅನೇಕ ತೊಂದರೆಗಳನ್ನು ಅನುಭವಿಸುತ್ತಾರೆ. ಆದಾಗ್ಯೂ ಅವರು ಜಾತಿ ಪದ್ಧತಿಯ ನಿಯಮಗಳನ್ನು ಮುರಿಯುವುದಿಲ್ಲ ಅಥವಾ ಈ ಪದ್ಧತಿಯನ್ನೇ ತೊಡೆದು ಹಾಕುವುದಿಲ್ಲ. ಇಲ್ಲಿಯ ಹಿಂದುಗಳು ಬೇರೆ ಬೇರೆ ಜಾತಿಗಳಿಗೆ ಸಂಬಂಧಿಸಿದ್ದಾರೆ. ಅವರಲ್ಲಿ ಉಚ್ಚ ಕುಲದವರು, ನಿಮ್ನ ಕುಲದವರು ಮತ್ತು ಇವುಗಳ ಮಧ್ಯದಲ್ಲಿ ಬೇರೆ ಬೇರೆ ಅಂತಸ್ತಿನ ಇನ್ನುಳಿದ ಕುಲದವರು ಇದ್ದಾರೆ. ಕೆಳ ಕುಲದ ಜನರೊಡನೆ ದೈಹಿಕ ಸಂಪರ್ಕವಾದರೆ ಉಚ್ಚ ಕುಲದವರು ಸ್ನಾನ ಮಾಡುವುದು ಕಟ್ಟಳೆ ಅಥವಾ ಅವರ ಸಂಬಂಧಕ್ಕೆ ಬರುವುದಾದರೆ ಅವರಿಗೆ ದಾಟಬಾರದೆಂಬ ಎಲ್ಲೆಗಳು, ಇತಿಮಿತಿಗಳುಂಟು. ಕಡ್ಡಾಯವಾಗಿ ಸ್ನಾನ ಮಾಡಿ ಶುದ್ಧವಾಗುವ ಮೊದಲು ಉಚ್ಚ ಕುಲದ ಹಿಂದು ಮನುಷ್ಯನು ಊಟ ಮಾಡಬಾರದೆಂಬ ನಿಷಿದ್ಧ ಉಂಟು. ಹಾಗೆ ಮಾಡದೆ ಅವನು ಆಹಾರ ಸೇವಿಸಿದ್ದಾದರೆ ಅವನ ಅಂತಸ್ತಿನಿಂದ ಕೀಳಾಗಿ ಕೆಳಗಿಳಿದಂತಾಗಿ ಅವನನ್ನು ಸಮಾಜದಿಂದ ಬಹಿಷ್ಕಾರ ಮಾಡಲಾಗುತ್ತದೆ. ಹಾಗಾದ ಪಕ್ಷದಲ್ಲಿ, ಅವನು ತನ್ನ ಊರನ್ನು ಬಿಟ್ಟು ಹೋಗಿ ಬಹುದೂರದ ಅಜ್ಞಾತ ಸ್ಥಳದಲ್ಲಿದ್ದು ಯಾರಿಗೂ ಗೊತ್ತಾಗದಂತಿದ್ದು ತನ್ನ ಶೇಷಾಯುಷ್ಯವನ್ನು ಕಳೆಯಬೇಕು. ಇಲ್ಲದಿದ್ದರೆ ಅಲ್ಲಿಯ ಆಡಳಿತಗಾರನು ಅವನನ್ನು ಹಿಡಿದು ತರಿಸಿ ಕೆಳಗಿನ ಜಾತಿಯವರಿಗೆ ಮಾರಿ ಬಿಡುವನು; ಅವನನ್ನು ಕೊಳ್ಳುವ ವ್ಯಕ್ತಿ ಒಬ್ಬ ಹುಡಗನು ಇರಬಹುದು. ಇಲ್ಲವೆ ಸ್ತ್ರೀಯಾಗಿರಬಹುದು. ಅಥವಾ ಆತನು ನಮ್ಮೆಡೆಗೆ ಬಂದು ಇಸ್ಲಾಂ ಧರ್ಮವನ್ನು ಸ್ವೀಕರಿಸುತ್ತಾನೆ ಅಥವಾ ಯೋಗಿಯಾಗಿ (ಸನ್ಯಾಸಿ) ಇರಬಹುದು ಇಲ್ಲವೆ ಕ್ರಿಶ್ಚನ್ನನಾಗಬಹುದು. ಕಡಿಮೆ ಕುಲದವರು ತಯಾರಿಸಿದ ಆಹಾರವನ್ನು ಸವರ್ಣೀಯ ಗಂಡು ಅಥವಾ ಹೆಣ್ಣು ಊಟ ಮಾಡಿದರೆ ಇದೇ ತೆರನಾದ ವಿಧಿ ತಪ್ಪಿದ್ದಲ್ಲ.

ಪೂನೂಲನ್ನು (ಯಜ್ಞೋಪವೀತವನ್ನು) ಧರಿಸಿದವರು ಉಚ್ಚ ಕುಲದವರೆಂದು ಪರಿಗಣಿಸಲಾಗುತ್ತದೆ. ಅವರು ಸಾಮಾನ್ಯವಾಗಿ ಹೆಗಲಿನಿಂದ ಇಳಿಬಿಟ್ಟ ಒಂದು ದಾರವನ್ನು ಧರಿಸುತ್ತಾರೆ. ಇವರಲ್ಲಿಯೇ ಶ್ರೇಣಿಕೃತ ಪಂಗಡಗಳುಂಟು : ಕೆಳಗಿನ, ಮಧ್ಯದ ಮತ್ತು ಸರ್ವೋಚ್ಚ ಜನಿವಾರವನ್ನು ಹಾಕಿಕೊಂಡವರಲ್ಲಿಯೇ ಅತ್ಯಂತ ಗರಿಷ್ಠರೆಂದರೆ ನಂಬೂದ್ರಿಗಳು.

ಪೂನೂಲು(ಜನಿವಾರ) ಹಾಕಿಕೊಂಡವರ ತರುವಾಯ ಬರುವವರು ನಯ್ಯರರು. ದೈಹಿಕ ಶಕ್ತಿ ಮತ್ತು ಬಹು ಸಂಖ್ಯೆಯಲ್ಲಿರುವ ಈ ಜಾತಿ ಮಲಬಾರದ ಕ್ಷತ್ರಜಾತಿ. ಇವರಲ್ಲಿಯೂ ಕೆಳದರ್ಜೆಯ ಮಧ್ಯಮ ಮತ್ತು ಸರ್ವೋತ್ತಮ ಎಂಬ ಉಪಜಾತಿಗಳುಂಟು.

ಜಾತಿ ಶ್ರೇಣಿಯಲ್ಲಿ ಥಿಯ್ಯಾರು ನಯ್ಯರರ ಕೆಳಗೆ ಬರುತ್ತಾರೆ. ಇವರ ವಾಡಿಕೆಯ ವೃತ್ತಿಯೆಂದರೆ ಟೆಂಗಿನ ಗಿಡಗಳನ್ನೇರಿ ಅವುಗಳಿಂದ ರಸವನ್ನು(ನೀರಾ) ತೆಗೆಯುವುದು. ಈ ರಸವನ್ನು ಹುಳಿಗಟ್ಟಿಸಿ ಹೆಂಡವನ್ನು ತಯಾರಿಸಲು ಇಲ್ಲವೆ ಒಂದು ಪ್ರಕಾರದ ಸಕ್ಕರೆಯನ್ನು ಮಾಡಲು ಬರುತ್ತದೆ.

ಜಾತಿ ಶ್ರೇಣಿಯಲ್ಲಿ ಕುರುಬರು, ಬಡಿಗರು, ಪತ್ತಾರರು ಮತ್ತು ಮೀನುಗಾರರು ಥಿಯ್ಯಾರಗಿಂತ ಕೆಳಗಿನವರು. ಈ ಜಾತಿಗಳ ಕೆಳಗೆ ಇನ್ನೂ ಹಲವಾರು ಜಾತಿಗಳುಂಟು. ಕೃಷಿಗೆ ಸಂಬಂಧಿಸಿದ ಕೆಲಸಗಳಲ್ಲಿ ತೊಡುಗುವ ಹೊಲ ಊಳುವವರು ಇವರಾಗಿದ್ದಾರೆ. ಈ ಜಾತಿಗಳಲ್ಲೂ ಮತ್ತೆ ಉಪಜಾತಿಗಳುಂಟು. ವರುಷದ ಕೆಲವೊಂದು ವಿಶಿಷ್ಟ ರಾತ್ರಿಗಳಲ್ಲಿ ಉಚ್ಚಕುಲದ ಮಹಿಳೆಯ ಮೇಲೆ ಕೆಳಜಾತಿಯವನೊಬ್ಬನ ಕೈಯಿಂದ ಕಲ್ಲು ಅಥವಾ ಯಾವುದೋ ಒಂದು ವಸ್ತು ಬಂದು ಬಡಿದಾಗ ಅವಳು ಯಾವೊಬ್ಬ ಪುರುಷನಿಲ್ಲದೆ ಒಬ್ಬಳೇ ಹೊರಟಿದ್ದರೆ ಅವಳನ್ನು ಅವಳ ಜಾತಿಯಿಂದ ಹೊರಗೆ ಹಾಕಲಾಗುತ್ತದೆ. ಅಂಥ ಸನ್ನಿವೇಶದಲ್ಲಿ ಅವಳು ಇಸ್ಲಾಂ, ಕ್ರಿಶ್ಚನ್ ಧರ್ಮ ಸೇರಬೇಕು ಇಲ್ಲವೆ ಸನ್ಯಾಸಿಯಾಗಬೇಕು. ಬೇರೆ ದಾರಿಯೇ ಇಲ್ಲ. ಇಲ್ಲದಿದ್ದರೆ ಅಲ್ಲಿಯ ಪ್ರಾದೇಶಿಕ ದೊರೆ ಅವಳನ್ನು ಮಾರುತ್ತಾನೆ.

ಒಬ್ಬ ಉಚ್ಚ ಕುಲದ ವ್ಯಕ್ತಿಯು ಕೆಳಗಿನ ಕುಲದ ವ್ಯಕ್ತಿಯೊಡನೆ ಲೈಂಗಿಕ ಕ್ರಿಯೆಯಲ್ಲಿ ತೊಡಗಿದ್ದರೆ ಇದೇ ಸ್ಥಿತಿ ಅವನಿಗೂ / ಅವಳಿಗೂ ಒದಗುವುದು. ಉಚ್ಚ ಕುಲದ ಸ್ತ್ರೀ ಅಥವಾ ಪುರುಷನು ಈ ಪ್ರಕಾರದ ದೋಷಕ್ಕೊಳಗಾದರೆ ಸಮಾಜದಿಂದ ಅವರು ಬಹಿಷ್ಕೃತ ಆಗುವರು. ಮೇಲ್ಕಾಣಿಸಿದ ಹಣೆ ಬರಹವನ್ನು ಸ್ವೀಕರಿಸಬೇಕಾಗುವುದಲ್ಲದೆ ಅವರಿಗೆ ಮತ್ತೊಂದು ದಾರಿಯಿಲ್ಲ. ಆದರೆ ಪೂನೂಲು (ಜನಿವಾರ) ಧರಿಸಿರುವ ವಿಷಯ ಭಿನ್ನವಾಗಿದೆ. ನಯ್ಯರ ಸಮಾಜದ ಸ್ತ್ರೀಯರೊಡನೆ ಕಾಮ ಚಟುವಟಿಕೆಗಳಲ್ಲಿ

ತೊಡಗಬಹುದು. ಇದರಿಂದಾಗಿ ಅವರು ಸಮಾಜಭ್ರಷ್ಟರಾಗುವುದಿಲ್ಲ. ಯಾಕೆಂದರೆ ಇದು ಸ್ವೀಕೃತ ಲೋಕರೂಢಿಯಾಗಿದೆ. ಈ ಮೊದಲು ವಿವರಿಸಿದಂತೆ ನಂಬೂದ್ರಿ ಕುಟುಂಬದ ಜ್ಯೇಷ್ಠ ಪುತ್ರರು ಮಾತ್ರ ಮದುವೆ ಆಗುತ್ತಾರೆ ಮತ್ತು ಕಿರಿಯ ಪುತ್ರರು ಸಾಮಾನ್ಯವಾಗಿ ನಯ್ಯರ ಸ್ತ್ರೀಯರ ಸಹವಾಸದಲ್ಲಿರಬಹುದು.

ಅದೆಷ್ಟು ಪರಿಯ ಅಸಹ್ಯ ಹುಟ್ಟಿಸುವ ರೂಢಿಗಳು ! ಈ ಜನರು ಅಜ್ಞಾನ ಮತ್ತು ಮೂರ್ಖತನದಿಂದಾಗಿ ಈ ರೂಢಿಗಳನ್ನು, ಆಚರಣೆಗಳನ್ನು ಪಾಲಿಸುತ್ತಾರೆ ; ಈ ಸಂಪ್ರದಾಯಗಳನ್ನು ಎತ್ತಿ ಹಿಡಿವುದು. ತಮ್ಮ ನೈತಿಕ ಜವಾಬ್ದಾರಿಯಾಗಿದೆಯೆಂದು ಇವರ ನಂಬಿಕೆ. ಇಂಥ ಸಾಮಾಜಿಕ ಸ್ಥಿತಿಯಲ್ಲಿ ಅವರು ಬದುಕುತ್ತಿದ್ದಾಗ ಅಲ್ಲಾಹನ ಕೃಪೆಯಿಂದ ಇಸ್ಲಾಂ ಧರ್ಮವು ಅವರನ್ನು ತಲುಪಿತು. ಇದೂ ಕೂಡ ಇಸ್ಲಾಮಕ್ಕೆ ಅವರು ಸುಲಭವಾಗಿ ಆಕರ್ಷಿತರಾಗಲು ಮಹತ್ವದ ಕಾರಣ.

ನಿಜವಾಗಿ ಹೇಳಬೇಕಾದರೆ ಈ ವಿಷಯಗಳು ನಮ್ಮ ಚರ್ಚೆಯ ವಸ್ತುವೇ ಅಲ್ಲ. ದೊಡ್ಡ ಮೌಲ್ಯಗಳ ಮಾಹಿತಿಯನ್ನು ಓದುಗರು ಪಡೆಯಲಿಯೆಂದು ಈ ವಿಷಯಾಂತರ ಮಾಡಲಾಯ್ತು. ನಾವೀಗ ನಮ್ಮ ಮುಖ್ಯ ವಿಷಯದ ವಿವರಣೆಗೆ ಮರಳೋಣ.

ಈ ಮೊದಲು ಹೇಳಿದಂತೆ ಈ ಪ್ರದೇಶಗಳಲ್ಲಿ ಮಸೀದಿಗಳನ್ನು ಕಟ್ಟಿಸಿ ಮತ್ತು ಇಸ್ಲಾಂದ ಸಂದೇಶವನ್ನು ಪ್ರಸಾರ ಮಾಡುತ್ತ ಶರಫ ಬಿನ್ ಮಾಲಿಕ, ಮಾಲಿಕ ಬಿನ್ ದೀನಾರ, ಹಬೀಬ ಬಿನ್ ಮಾಲಿಕ ಮತ್ತು ಉಳಿದವರು ಮಾಡಿದ ಪ್ರಯತ್ನದ ಫಲವಾಗಿ ಈ ಮಲಬಾರ ಕರಾವಳಿಯಲ್ಲಿ ಜನರು ಇಸ್ಲಾಂವನ್ನು ಅಲ್ಲಲ್ಲಿ ಸ್ವೀಕರಿಸಲು ಆರಂಭಿಸಿದರು. ತತ್ಪರಿಣಾಮವಾಗಿ ಪ್ರಪಂಚದ ಅನೇಕ ಭಾಗಗಳಿಂದ ವ್ಯಾಪಾರಿಗಳು ದೊಡ್ಡ ಸಂಖ್ಯೆಯಲ್ಲಿ ಇಲ್ಲಿಯ ಸ್ಥಳಗಳಿಗೆ ಬರತೊಡಗಿದರು. ಹೀಗಾಗಿ ಕಾಲಿಕಟ್ಟ, ವೆಲಿಯಂಕೋಡೆ, ತಿರೂರಂಗಡಿ, ತನೂರ, ಪೊನ್ನಾನಿ, ಪರಪ್ಪನಂಗಡಿ, ಪರವಣ್ಣಾ, ಛಾಲಿಯಂ ಬಂದರದ ಸುತ್ತು ಮುತ್ತಲಿನ ಪ್ರದೇಶಗಳು, ಕಕ್ಕಡ, ತಿಕ್ಕೋಡಿ, ಪಂತಲಯಾನಿಯ ಸುತ್ತುಮುತ್ತಲಿನ ಪ್ರದೇಶಗಳು, ಕನ್ನೂರ, ಈಣಕ್ಕಾಡ, ತಿರುವಂಗಡ, ಮಾಹೆ, ಚೆಮ್ಮನಾಡ, ದರ್ಮಾದಂ ಇದರ ಸುತ್ತುಮುತ್ತಲಿನ ಪ್ರದೇಶಗಳು, ವಾಲಪಟ್ಟಣಂದ ದಕ್ಷಿಣದಲ್ಲಿ ಮತ್ತು ನಾಡಪುರಂ, ಕೊಡುಂಗಲ್ಲೂರಿನ ದಕ್ಷಿಣದಲ್ಲಿ ಕೋಚಿ, ವೈಪೀನ, ಪಲ್ಲಿಪ್ಪುರಂ ಹಾಗೆಯೇ ಕರಾವಳಿಯ ಇನ್ನುಳಿದ ಅನೇಕ ಪ್ರದೇಶಗಳು ದಟ್ಟವಾಗಿ ಜನಸಂಖ್ಯೆಯಿಂದ ತುಂಬಿದವು ಮತ್ತು ಅವೆಲ್ಲ ವ್ಯಾಪಾರ ವಾಣಿಜ್ಯಗಳ ಪಟ್ಟಣಗಳಾದವು. ಹೀಗಾಗಲು ಕಾರಣವೆಂದರೆ ಮುಸಲ್ಮಾನರೇ ಮುಸಲ್ಮಾನರು ಮತ್ತು ಅವರ ವ್ಯಾಪಾರ ವೃದ್ಧಿಹೊಂದಲು ಕಾರಣವೆಂದರೆ ಪರಮತ-ಸಹಿಷ್ಣುಗಳಾಗಿದ್ದ ಹಿಂದೂ ಅರಸರು ಮತ್ತು ಅವರ ಸೈನ್ಯ. ಕೇವಲ ಹೆಸರಿಗೆ ಮಾತ್ರ ಅವರು ಹಿಂದುಗಳಾಗಿರಲಿಲ್ಲ; ತಮ್ಮ ಪ್ರಾಚೀನ ಪರಂಪರೆಯ ಆಚರಣೆಗಳನ್ನು ಕಟ್ಟುನಿಟ್ಟಾಗಿ

ಪಾಲಿಸುವ ದೈವಭಕ್ತಿಯ ಜನರಾಗಿದ್ದರು. ತಮ್ಮ ಧಾರ್ಮಿಕ ಆಚರಣೆಗಳನ್ನು ಪಾಲಿಸುವಲ್ಲಿ ಅವರು ಯಾವ ತಪ್ಪನ್ನು ಮಾಡಿದವರಲ್ಲ. ಅಲ್ಲಿದ್ದ ಮುಸಲ್ಮಾನರು ಆ ಅರಸರ ಪ್ರಜೆಗಳಾಗಿದ್ದು, ಅಲ್ಲಿಯ ಜನಸಂಖ್ಯೆಯ ಹತ್ತರಲ್ಲಿ ಒಂದರಷ್ಟು ಇರಲ್ಲಿಲ್ಲ. ಹೀಗಿದ್ದರೂ, ಅವರು ಮುಸಲ್ಮಾನರನ್ನು, ವಿರಳ ಸಂದರ್ಭಗಳಲ್ಲಿ ಹೊರತುಪಡಿಸಿ, ವೈರತ್ವದಿಂದ ಸ್ನೇಹರಹಿತ ರೀತಿಯಲ್ಲಿ ನಡೆಸಿಕೊಳ್ಳಲಿಲ್ಲ.

ಮಲಬಾರದಲ್ಲಿ ಕಾಲಿಕಟ್ಟವು ಪ್ರಾಚೀನ ಕಾಲದಿಂದಲೂ ದೊಡ್ಡದಾದ ಸುಪ್ರಸಿದ್ಧ ರೇವು ಪಟ್ಟಣವಾಗಿತ್ತು. ಆದರೆ ಪೋರ್ಚುಗೀಜರ ಆಗಮನದಿಂದ ಮತ್ತು ವ್ಯಾಪಾರೀ ಪ್ರಯಾಣಗಳಿಗೆ ಅವರೊಡ್ಡುವ ಅಡ್ಡಿ ಆತಂಕಗಳಿಂದ ಅದು ಅವನತಿಗೀಡಾಗಿ ತನ್ನ ಮಹತ್ವವನ್ನು ಕಳೆದುಕೊಳ್ಳತೊಡಗಿತು.

ಮಲಬಾರದಾದ್ಯಂತ ಮುಸಲ್ಮಾನರನ್ನು ಆಳುವ ಬಲಾಢ್ಯ ಧುರೀಣನು ಯಾವನೂ ಇಲ್ಲ. ಅವರನ್ನು ಆಳುವವರೆಲ್ಲ ಹಿಂದು ಮತಸ್ಥರು. ಆ ಆಡಳಿತಗಾರರು ನ್ಯಾಯಾಧಿಕಾರ ಚಲಾಯಿಸುತ್ತ ಅವರ ವ್ಯಾಪಾರದ ಆಗುಹೋಗುಗಳನ್ನು ಸಂಘಟಿಸಲು, ಸಾಲದ ಹಣ ಮತ್ತು ಅದು ಸಂದಾಯವಾಗದಿದ್ದಾಗ ದಂಡ ವಿಧಿಸುವುದು ಮತ್ತು ಅದನ್ನೆಲ್ಲ ಜಾರಿಗೊಳಿಸುವುದು ಇದನ್ನೆಲ್ಲ ಮಾಡುತ್ತಾರೆ. ಇದೆಲ್ಲ ಇದ್ದರೂ, ಮುಸಲ್ಮಾನರು ಹಿಂದು ರಾಜರಿಂದ ಬಹಳ ಗೌರವ ಮತ್ತು ಆದರ ಪಡೆಯುತ್ತಿದ್ದಾರೆ. ಇದಕ್ಕೆ ಮುಖ್ಯ ಕಾರಣವೆಂದರೆ ಮುಸಲ್ಮಾನರಿಂದಾಗಿ ದೇಶದ ರಚನಾತ್ಮಕ ಅಭಿವೃದ್ಧಿ ದೊಡ್ಡ ಪ್ರಮಾಣದಲ್ಲಿ ನಡೆಯತೊಡಗಿದೆ. ಆದುದರಿಂದ ಆಡಳಿತಗಾರರು ಮುಸಲ್ಮಾನರಿಗೆ ಶುಕ್ರವಾರ ಪ್ರಾರ್ಥನಾ ಸಭೆ ನಡೆಸಲು ಮತ್ತು ಈದದಂತ ಹಬ್ಬಗಳನ್ನು ಆಚರಿಸಲು ಅನುಕೂಲಮಾಡಿಕೊಡುತ್ತಾರೆ. ಮೂ ಅಧಧಿನ್ನರ (ಪ್ರಾರ್ಥನೆಗೆ ಕರೆಯುವರ) ಸಂಭಾವನೆಯನ್ನು ಖಾದೀಶ (ಧಾರ್ಮಿಕ ನ್ಯಾಯಾಧೀಶರು) ಇವರ ವೇತನವನ್ನು ಸರಕಾರವೇ ಕೊಡುತ್ತದೆ. ಮುಸಲ್ಮಾನರಲ್ಲಿ ಧಾರ್ಮಿಕ ನಿಯಮಗಳನ್ನು ಮತ್ತು ನಿರ್ದೇಶನಗಳನ್ನು ಕಾರ್ಯಗತಗೊಳಿಸಲು ಸರಕಾರವು ವಿಶೇಷ ವ್ಯವಸ್ಥೆ ಮಾಡುತ್ತದೆ. ಮಲಬಾರದ ಹೆಚ್ಚಿನ ಪ್ರದೇಶದಾದ್ಯಂತ ಯಾರಾದರೂ ಜುಮ್ಮಾ (ಶುಕ್ರವಾರ ಧಾರ್ಮಿಕ ಸಭೆ)ಯನ್ನು ಕಡೆಗಣಿಸಿದರೆ ಅವನನ್ನು ಶಿಕ್ಷಿಸಲಾಗುತ್ತದೆ. ಇಲ್ಲವೆ ದಂಡ ವಿಧಿಸಲಾಗುತ್ತದೆ.

ಒಂದು ವೇಳೆ ಮುಸಲ್ಮಾನನೊಬ್ಬನು ದೇಹಾಂತ ಶಿಕ್ಷೆಗೊಳಪಡುವ ಅಪರಾಧವನ್ನೆಸಗಿದ್ದರೆ, ಮುಸಲ್ಮಾನ ಸಮುದಾಯದ ಹಿರಿಯರ ಅನುಮತಿ ಪಡೆದು ಆ ತೀರ್ಪನ್ನು ಕಾರ್ಯಗತಗೊಳಿಸಲಾಗುವದು ಮತ್ತು ಆ ಮನುಷ್ಯನ ಕಳೇಬರವನ್ನು ಹೂಳಲು ಮುಸಲ್ಮಾನರಿಗೇ ಕೊಡುತ್ತಾರೆ. ಆ ಬಳಿಕ ಆ ದೇಹಕ್ಕೆ ಮತವಿಧಿಗಳ ಪ್ರಕಾರ ಸ್ನಾನ ಮಾಡಿಸಲಾಗುತ್ತದೆ. ಮೃತನಿಗಾಗಿ ಪ್ರಾರ್ಥನೆಗಳನ್ನು ಸಲ್ಲಿಸಿ ಮುಸಲ್ಮಾನರ ಸ್ಮಶಾನ ಭೂಮಿಯಲ್ಲಿ ಹೂಳಲಾಗುತ್ತದೆ. ಆದರೆ ಮುಸಲ್ಮಾನ ಆಗಿರದ ಮನುಷ್ಯನು

ಅಂಥದೇ ಅಪರಾಧವೆಸಗಿದ್ದರೆ, ಅವನನ್ನು ಕೊಲ್ಲುತ್ತಾರೆ ಇಲ್ಲವೆ ಗಲ್ಲಿಗೇರಿಸುತ್ತಾರೆ. ಅಥವಾ ನರಿ ನಾಯಿಗಳಿಗೆ ತಿನ್ನಲು ಆ ಹೆಣವನ್ನು ಬಿಟ್ಟುಬಿಡುತ್ತಾರೆ.

ವ್ಯಾಪಾರಿಗಳು ಗಳಿಸುವ ಲಾಭದ ಹತ್ತರಲ್ಲಿ ಒಂದು ಭಾಗವನ್ನು ಸರಕಾರ ತೆಗೆದುಕೊಳ್ಳುತ್ತದೆ. ಅವರು ದಂಡ ತೆತ್ತಬೇಕಾದ ಅಪರಾಧಗಳನ್ನು ಮಾಡಿದರೆ ಆ ದಂಡವನ್ನು ಕೊಡಲೇ ಬೇಕು. ಕೃಷಿಕರು ಎಷ್ಟೇ ದೊಡ್ಡಪ್ರಮಾಣದಲ್ಲಿ ಭೂಮಿಯನ್ನು ಹೊಂದಿರಲಿ ಒಟ್ಟಾರೆ ಭೂ ತೆರಿಗೆ ಮತ್ತು ಯಾವ ಪ್ರಕಾರದ ಕೊಯ್ಲು ತೆರಿಗೆಯನ್ನು ಹಾಕುವುದಿಲ್ಲ.

ಉಳಿದ ಸಮಾಜಗಳ ಜನರು ಮೊದಲೇ ಅನುಮತಿ ಪಡೆದುಕೊಂಡು ಮುಸಲ್ಮಾನರ ಮನೆಗಳಲ್ಲಿ ಪ್ರವೇಶಿಸುತ್ತಾರೆ. ಆರೋಪಿಯೊಬ್ಬನು ಅವನು ಕೊಲೆಯ ಆರೋಪಿಯಾಗಿದ್ದರೂ, ಮುಸಲ್ಮಾನರ ಮನೆಗಳಲ್ಲಿ ಅಡಗಿ ಕುಳಿತಿದ್ದರೆ ಅವನನ್ನು ಹಿಡಿಯಲು ಆ ಮನೆಯವರ ಅನುಮತಿಯಿಲ್ಲದೇ ಯಾರೂ ಒಳಗೆ ಬರುವುದಿಲ್ಲ. ಆ ಅಪರಾಧಿಯನ್ನು ಉಪವಾಸವಿಟ್ಟು ಅಥವಾ ಬೇರಾವ ಉಪಾಯದಿಂದ ಹೊರಹಾಕಬೇಕೆಂದು ಆ ಮನೆಯವರಿಗೆ ಕೇಳಿಕೊಳ್ಳಲಾಗುತ್ತದೆ. ಇಸ್ಲಾಮ ಧರ್ಮವನ್ನು ಸ್ವೀಕರಿಸಿದ ಹಿಂದುಗಳಿಗೆ ಉಳಿದ ಹಿಂದುಗಳು ಸಾಮಾನ್ಯವಾಗಿ ಯಾವ ಅಡ್ಡಿ ಆತಂಕಗಳನ್ನು ಉಂಟು ಮಾಡುವುದಾಗಲಿ ಇಲ್ಲವೆ ಹಿಂಸೆಯುಂಟು ಮಾಡುವುದಾಗಲಿ ಮಾಡುವುದಿಲ್ಲ. ತದ್ವಿರುದ್ಧವಾಗಿ ಅವರನ್ನು ಅವರು ಕೆಳಗುಲದವರಾಗಿದ್ದರೂ ವಾಡಿಕೆಯಾಗಿ ಉಳಿದ ಮುಸಲ್ಮಾನರನ್ನು ನೋಡಿಕೊಳ್ಳುವಂತೆಯೇ ಮರ್ಯಾದೆಯಿಂದ ನೋಡಿಕೊಳ್ಳುತ್ತಾರೆ. ಆರಂಭದಲ್ಲಿ ಮುಸಲ್ಮಾನ ವ್ಯಾಪಾರಿಗಳು ಎಲ್ಲರೂ ಕೂಡಿ ಹಣ ಸಂಗ್ರಹಿಸಿ ಇಸ್ಲಾಮಕ್ಕೆ ಮತಾಂತರಗೊಂಡವರಿಗೆ ಸಹಾಯಮಾಡುತ್ತಿದ್ದರು.

■

ಭಾಗ ನಾಲ್ಕು

*

ಅಧ್ಯಾಯ – ೧

ಮಲಬಾರಕ್ಕೆ ಪೋರ್ಚುಗೀಜರ ಆಗಮನ ಮತ್ತು ಅವರ ನಾಚಿಕೆಗೇಡ ಕೃತ್ಯಗಳು

ಪೋರ್ಚುಗೀಜರು ಮಲಬಾರದಲ್ಲಿ ಪ್ರವೇಶಿಸಿದ್ದು; ಅವರ ಮತ್ತು ಝುಮೊರಿನ್ನನ ನಡುವಿನ ವಿರಸಗಳು; ಕೋಚಿ, ಕನ್ನೂರ ಮತ್ತು ಕೊಲ್ಲಂಗಳಲ್ಲಿ ಕೋಟೆಗಳನ್ನು ಕಟ್ಟಿಸಿದ್ದು, ಹಾಗೂ ಅವರು ಗೋವಾವನ್ನು ಗೆದ್ದು ಅಲ್ಲಿ ನೆಲೆಯೂರಿದ್ದು.

ಕ್ರಿ.ಶ.೧೪೯೮ರಲ್ಲಿ ಮೊದಲ ಬಾರಿಗೆ ಪೋರ್ಚುಗೀಜರು ಮಲಬಾರದಲ್ಲಿ ಕಾಣಿಸಿಕೊಂಡರು. ಮೂರು ಹಡಗಗಳಲ್ಲಿ ಅವರು ಪಂತುಲಯಾನಿಗೆ ಬಂದರು. ಆ ಒಳಗಾಗಿ ವ್ಯಾಪಾರ ವ್ಯವಹಾರಗಳ ಋತು ಬಹಳಷ್ಟು ಮುಗಿದು ಹೋಗಿತ್ತು. ಭೂ ಮಾರ್ಗವಾಗಿ ಅವರು ಪಂತಲಯಾನಿಯಿಂದ ಕಾಲಿಕಟ್ಟಕ್ಕೆ ಹೋದರು.ಆ ಪಟ್ಟಣದಲ್ಲಿ ಕೆಲ ತಿಂಗಳಿದ್ದು ಮಲಬಾರದ ಸ್ಥಿತಿಗತಿಯನ್ನು ತಿಳಿದುಕೊಂಡು ತಮ್ಮ ನಾಡಿಗೆ ಮರಳಿದರು. ಆ ಸಂದರ್ಭದಲ್ಲಿ ಅವರು ಯಾವ ವ್ಯಾಪಾರದಲ್ಲಿಯೂ ತೊಡಗಲಿಲ್ಲ. ಅವರದೇ ವಿವರಣೆಗಳ ಪ್ರಕಾರ ಆ ಪ್ರವಾಸದ ಮುಖ್ಯೋದ್ದೇಶ ಮಲಬಾರದಲ್ಲಿಯ ಮೆಣಸಿನ–ಭೂಮಿಯ ಕುರಿತು ಮಾಹಿತಿ ಪಡೆಯುವುದು. ಮತ್ತು ಆ ವಸ್ತುವಿನ ವ್ಯಾಪಾರವನ್ನು ಆರಂಭಿಸುವುದು ಆಗಿತ್ತು. ಯಾಕೆಂದರೆ ಮಲಬಾರದಿಂದ ರಫ್ತುಮಾಡುವ ಬೇರೆ ವ್ಯಾಪಾರಿಗಳಿಂದ ಅವರು ಮೆಣಸನ್ನು ಕೊಂಡುಕೊಳ್ಳುತ್ತಿದ್ದರು.

ಮತ್ತೆ ಅವರು ಎರಡು ವರ್ಷಗಳ ನಂತರ ಬಂದರು. ಈ ಸಾರೆ ಆರು ಹಡಗುಗಳನ್ನು ಕಾಲಿಕತ್ತದಲ್ಲಿಳಿದು ವ್ಯಾಪಾರದಲ್ಲಿ ತೊಡಗಿದರು.

ಅವರು ಝುಮೊರಿನ್ನನ ಅಧಿಕಾರಿಗಳನ್ನು ಭೆಟ್ಟಿಯಾಗಿ ಮುಸಲ್ಮಾನರು ವ್ಯಾಪಾರ ಮಾಡುವುದನ್ನು ಮತ್ತು ಅರಬಸ್ತಾನಕ್ಕೆ ಕಡಲ ಪ್ರಯಾಣ ಮಾಡುವುದನ್ನು ನಿರ್ಬಂಧಿಸಲು, ಹೀಗೆ ಮಾಡುವುದರಿಂದ ಝುಮೊರಿನ್ನನಿಗೆ ಆಗುವ ಹಾನಿಯು ಎರಡು ಪಟ್ಟು ಕೊಡುವುದಾಗಿ ಮನವಿ ಮಾಡಿದರು. ಆ ಬಳಿಕ ಅವರು ಮುಸಲ್ಮಾನರ ಎಲ್ಲ ಪ್ರಕಾರದ ಹಕ್ಕುಗಳ ಮೇಲೆ ಅತಿಕ್ರಮಣ ಮಾಡಿದರು. ಪೋರ್ಚುಗೀಜರನ್ನು ಹಿಡಿದು ಕೊಲ್ಲಿರೆಂದು ಝುಮೊರಿನ್ನನು ಆಜ್ಞೆ ಹೊರಡಿಸಿದನು. ಆ ಪ್ರಕಾರ ಅರವತ್ತು ಇಲ್ಲವೆ ಎಪ್ಪತ್ತು ಪೋರ್ಚುಗೀಜರನ್ನು ಕೊಲ್ಲಲಾಯಿತು. ಉಳಿದವರು ಓಡಿ ಹೋಗಿ ಹಡಗುಗಳಲ್ಲಿ ಆಶ್ರಯ ಹೊಂದಿ ಅಲ್ಲಿಂದಲೇ ಸಮುದ್ರ ತಟಾಕದ ಮೇಲೆ ಗುಂಡು ಹಾರಿಸತೊಡಗಿದರು.

ಆ ಬಳಿಕ ಪೋರ್ಚುಗೀಜರು ಕೋಚಿ ಬಂದರಕ್ಕೆ ಹೋಗಿ ಆ ಊರಿನ ನಿವಾಸಿಗಳೊಡನೆ ಜಗಳ ಪರಿಹರಿಸಿಕೊಂಡು, ಚಿಕ್ಕದಾದ ಕೋಟೆಯೊಂದನ್ನು ಕಟ್ಟಿಕೊಂಡು ಅಲ್ಲಿ ವಾಸಿಸತೊಡಗಿದರು. ಭಾರತದಲ್ಲಿ ಕಟ್ಟಿಸಿದ ಪೋರ್ಚುಗೀಜರ ಮೊಟ್ಟ ಮೊದಲಿನ ಕೋಟೆ ಇದಾಗಿತ್ತು. ಸಮುದ್ರದ ದಂಡೆಯಲ್ಲಿ ಇದ್ದ ಒಂದು ಮಸೀದಿಯನ್ನು ನೆಲಸಮ ಮಾಡಿ ಅಲ್ಲಿಯ ಜನರನ್ನು ಕೆಲಸಕ್ಕೆ ತೆಗೆದುಕೊಂಡು ಅಲ್ಲಿ ಒಂದು ಚರ್ಚನ್ನು ಕಟ್ಟಿಸಿದರು.

ಆ ಮೇಲೆ ಅವರು ಕನ್ನೂರಕ್ಕೆ ಬಂದು, ಅಲ್ಲಿಯ ಜನರೊಡನೆ ಸ್ನೇಹದಿಂದ ಇರುತ್ತ ಕೋಟೆಯೊಂದನ್ನು ಕಟ್ಟಿಕೊಂಡು ವ್ಯಾಪಾರದಲ್ಲಿ ತೊಡಗಿದರು. ನಂತರ ಮೆಣಸು ಮತ್ತು ಶುಂಟಿ ತುಂಬಿಕೊಂಡ ಹಡಗಗಳಲ್ಲಿ ಅವರು ತಮ್ಮ ದೇಶಕ್ಕೆ ಹೊರಟರು. ಅಷ್ಟು ದೂರದ ಪ್ರಯಾಣ ಮಾಡಿಕೊಂಡು ಬರುವ ಅವರ ಉದ್ದೇಶವಾದರೂ ಅದೇ ಆಗಿತ್ತು.

ಮತ್ತೆ ಪೋರ್ಚುಗೀಜರು ಒಂದು ವರ್ಷವಾದ ಮೇಲೆ ಬಂದರು. ಈ ಸಾರೆ ನಾಲ್ಕು ಹಡಗಗಳಲ್ಲಿ ಕೋಚಿ ಮತ್ತು ಕನ್ನೂರಗಳಲ್ಲಿ ತಂಗಿ, ತಾವು ಬಯಸಿದಷ್ಟು ಮೆಣಸು ಮತ್ತು ಶುಂಟಿಯನ್ನು ಕೂಡಿಹಾಕಿಕೊಂಡು ತಮ್ಮ ದೇಶಕ್ಕೆ ಮರಳಿದರು. ಎರಡು ವರ್ಷಗಳಾದ ಮೇಲೆ ಇಪ್ಪತ್ತು ಅಥವಾ ಇಪ್ಪತ್ತೊಂದು ಅಥವಾ ಇಪ್ಪತ್ತೆರಡು ಇಲ್ಲವೆ ಹದಿನೆಂಟು ಹಡಗಗಳೊಂದಿಗೆ ಬಂದು ಮೆಣಸು ಮತ್ತು ಶುಂಟಿಯಲ್ಲದೆ ವಿಧ ವಿಧವಾದ ವ್ಯಾಪಾರೀ ಸರಕವನ್ನು ಹಡಗಗಳಲ್ಲಿ ತುಂಬಿಕೊಂಡು ತಮ್ಮ ದೇಶಕ್ಕೆ ವಾಪಸಾದರು. ಹೀಗೆ ಅವರ ಪ್ರಭಾವ ಹೆಚ್ಚುತ್ತ ಹೋಯಿತು.

ಝುಮೊರಿನ್ನನು ಕೋಚಿಯ ಮೇಲೆ ದಾಳಿ ಮಾಡಿದ್ದು ಈ ವೇಳೆಯಲ್ಲೇ ಮತ್ತು ತನ್ನ ಸಹಜ ನಡೆಗನುಗುಣವಾಗಿ ಅವರ ಆಸ್ತಿಪಾಸ್ತಿಯನ್ನು ಉಧ್ವಸ್ಥಗೊಳಿಸಿ ಭಯಂಕರ

ಹಾನಿಯುಂಟು ಮಾಡಿದನು. ಈ ಮುಖಾಮುಖಿಯಲ್ಲಿ ಝುಮೊರಿನ್ನನು ಇಬ್ಬರು ಮೂವರು ದಳವಾಯಿಗಳನ್ನು ಕೊಂದು ಕಾಲಿಕತ್ತಕ್ಕೆ ಮರಳಿದನು.

ಝುಮೊರಿನ್ನನು ಆ ದಳವಾಯಿಗಳನ್ನು ಕೊಲ್ಲಲು ಕಾರಣವೆಂದರೆ ಅವರು ಪೋರ್ಚುಗೀಜರೊಡನೆ ಮಾಡಿಕೊಂಡ ಮೈತ್ರಿಯಿಂದಾಗಿ ಅವರ ಅಣ್ಣ ತಮ್ಮಂದಿರ ಮಕ್ಕಳು ತಲೆತಲಾಂತರದಿಂದ ಬಂದ ಅವರ ಬಂಧುಗಳಲ್ಲಿಯೇ ಅತ್ಯಂತ ಹಿರಿಯ ವ್ಯಕ್ತಿಯನ್ನು ಸಿಂಹಾಸನಕ್ಕೆ ಆಯ್ಕೆ ಮಾಡಬೇಕು. ಅನ್ನುವ ಸಂಪ್ರದಾಯವನ್ನು ಧಿಕ್ಕರಿಸಿ ಅವರು ಕೋಚಿಯ ಮತ್ತು ಸುತ್ತಮುತ್ತಲಿನ ಸ್ಥಳಗಳಲ್ಲಿ ಅಧಿಕಾರ ಗದ್ದುಗೆಯನ್ನು ಪೋರ್ಚುಗೀಜರ ಸಹಾಯದಿಂದ ಕಬಳಿಸಿದ್ದರು. ಹೀಗೆ ಅಧಿಕಾರ ಕಬಳಿಸಿದ ಅತಿಕ್ರಮಣಕಾರರು ಪೋರ್ಚುಗೀಜರನ್ನು ದಾಕ್ಷಿಣ್ಯಭಾವದಿಂದ ಮತ್ತು ಗೌರವದಿಂದ ನೋಡುತ್ತಿದ್ದರು. ಈ ಸ್ನೇಹಪರ ಧೋರಣೆಗೆ ಪ್ರತಿಯಾಗಿ ಇವರಿಗೆ ಅವಶ್ಯವಿದ್ದಾಗ ಯುದ್ಧ ಕಾಲದಲ್ಲಿ ಸಹಾಯ ಮಾಡಿದರು. ಹಣ ಸಹಾಯ ಮಾಡಿದರು; ಹಾಗೆಯೇ ಅವರಿಗಾಗಿ ತಮ್ಮ ವ್ಯಾಪಾರದಲ್ಲಿ ಬಂದ ಲಾಭದ ಒಂದು ಹತ್ತಾಂಶವನ್ನು ಕಾಯ್ದಿರಿಸಿದರು. ಹೀಗಾಗಿ ಪೋರ್ಚುಗೀಜರ ಮಹತ್ವ ಮತ್ತು ಪ್ರಭಾವ ಬೆಳೆಯತೊಡಗಿದವು.

ಮೇಲೆ ಹೇಳಿದ ಇಪ್ಪತ್ತು ಹಡಗುಗಳು ಬಂದು ಹೋದ ಒಂದು ವರ್ಷದ ನಂತರ ಹತ್ತು ಹಡಗಗಳ ತಂಡವೊಂದು ಹಿಂದುಸ್ಥಾನಕ್ಕೆ ತಲುಪಿತು. ಇವುಗಳಲ್ಲಿ ಏಳು ಹಡಗುಗಳು ಹೊಸ ಹಡಗುಗಳಿದ್ದು ಉಳಿದ ಮೂರು ಹಿಂದಿನ ವರ್ಷ ಬಂದು ಹೋದ ಇಪ್ಪತ್ತೊಂದರಲ್ಲಿದ್ದವು. ಮರಳಿ ಹೋಗುವಾಗ ಆ ಇಪ್ಪತ್ತೊಂದು ಹಡಗಗಳು ಅಡೆತಡೆಗೊಳಗಾಗಿದ್ದರಿಂದ ಈ ಹೊಸ ಏಳು ಹಡಗುಗಳೊಡನೆ ಮೊದಲು ಅನುಭವಪಟ್ಟಿದ್ದ ಮೂರು ಹಡಗುಗಳು ಬರುವಾಗ ಮತ್ತು ಹೋಗುವಾಗ ಅವುಗಳನ್ನು ಕೂಡಿಕೊಂಡವು. ಕೋಟಿಗೆ ಬಂದೊಡನೆ ವ್ಯಾಪಾರೀ ಸರಕು ಸಾಮಗ್ರಿ ತುಂಬಿಕೊಂಡು ಏಳು ಹಡಗುಗಳು ತಮ್ಮ ದೇಶದೆಡೆಗೆ ಪ್ರಯಾಣ ಬೆಳೆಸಿದವು. ಮೊದಲಿನ ಮೂರು ಹಡಗುಗಳು ಕೋಚಿಯಲ್ಲಿ ಉಳಿದುಕೊಂಡವು.

ಪೋರ್ಚುಗೀಜರ ಮೂರು ಹಡಗಗಳು ಕೋಚಿಯಲ್ಲಿದ್ದದ್ದು ಗೊತ್ತಾದೊಡನೆ ಝುಮೊರಿನ್‌ನು ಕೋಚಿಯ ಕಡೆಗೆ ಸೈನ್ಯ ಸಮೇತ ನಡೆದನು. ಅವನ ಸೈನ್ಯದಲ್ಲಿ ೧೦೦,೦೦೦ ನಯ್ಯರ ಯೋಧರಿದ್ದರು. ಮತ್ತು ಆ ಹಡಗುಗಳನ್ನು ಕೈವಶಮಾಡಿಕೊಳ್ಳಲು ಸಾಕಷ್ಟು ಸಂಖ್ಯೆಯಲ್ಲಿ ಮುಸಲ್ಮಾನ ಯೋಧರೂ ಜೊತೆಗೂಡಿದ್ದರು. ಆಗ ಝುಮೊರಿನ್ ಮತ್ತು ಅವನ ಸೈನ್ಯಕ್ಕೆ ಕೋಚಿಯನ್ನು ಪ್ರವೇಶಿಸಲು ಸಾಧ್ಯವಾಗಲಿಲ್ಲ. ಪೋರ್ಚುಗೀಜರು ಫಿರಂಗಿ ಮತ್ತು ಬಾಣಗಳನ್ನು ಸುರಿಯುತ್ತ ಯುದ್ಧ ಮಾಡಿದರು. ಆದಾಗ್ಯೂ ಪೊನ್ನಾನಿಯ ಮುಸಲ್ಮಾನ ಹೋರಾಟಗಾರರು ಮೂರು ನಾವೆಗಳಿಂದ ಸನ್ನದ್ಧರಾಗಿ

ಬಂದು ಪೋರ್ಚುಗೀಜರೊಡನೆ ಹೋರಾಡಿದರು. ಕೆಲವು ಮುಸಲ್ಮಾನರು ಹುತಾತ್ಮರಾದರು. ಮರುದಿನ ಪೊನ್ನಾನಿ ಮತ್ತು ವೆಲಿಯಂ ಕೊಡೆಲು ಮುಸಲ್ಮಾನರು ನಾಲ್ಕು ನಾವೆಗಳಲ್ಲಿಯೂ ಮತ್ತು ಪಂತಲಯಾನಿ ಹಾಗೂ ಕಕ್ಕಡದ ಮುಸಲ್ಮಾನರು ಮೂರ ನಾವೆಗಳಲ್ಲಿಂಯೂ ಕಡಲ ಪ್ರಂಯಾಣಗೈಂಯುತ್ತ ಭೀಕರವಾಗಿ ಪೋರ್ಚುಗೀಜರೊಡನೆ ಕಾದಾಡಿದರು. ಈ ಸಾರೆ ಮುಸಲ್ಮಾನ ಸೈನಿಕರಿಗೆ ಗಾಯ ನೋವುಗಳಾಗಲಿಲ್ಲ. ಸಂಗ್ರಾಮವು ಅನಿರ್ಣಾಯಕವಾಯ್ತು. ಕಾರಣವೆಂದರೆ ಮಳೆಗಾಲ ಶುರುವಾಯ್ತು. ಝುಮೊರಿನ್ ಮತ್ತು ಅವನ ಸೈನ್ಯ ಸುರಕ್ಷಿತವಾಗಿ ಕಾಲಿಕತ್ತಕ್ಕೆ ಮರಳಿತು. ಅಲ್ಲಾಹನನ್ನು

ವರ್ಷಂಪ್ರತಿ ಹೀಗೆ ಜನರನ್ನು ಮತ್ತು ವ್ಯಾಪಾರೀ ವಸ್ತುಗಳನ್ನು ಹಡಗುಗಳಲ್ಲಿ ತುಂಬಿಕೊಂಡು ಬರುವದು ಮತ್ತು ಮೆಣಸು, ಶುಂಠಿ ಮತ್ತು ಹಲವಾರು ಉತ್ಪನ್ನಗಳನ್ನು ತುಂಬಿಕೊಂಡು ವಾಪಸ ಹೋಗುವುದು ಪೋರ್ಚುಗೀಜರಿಗೆ ರೂಢಿಯಾಯ್ತು. ಕೋಚಿ ಮತ್ತು ಕನ್ನೂರುಗಳಲ್ಲಿ ಪೋರ್ಚುಗೀಜರು ವಾಸಿಸುತ್ತ ಭದ್ರವಾದ ನೆಲೆಯನ್ನು ಹೊಂದಿದ ಮೇಲೆ ಈ ಊರುಗಳ ನಿವಾಸಿಗಳು ತಮಗಾಗಿ ಮತ್ತು ತಮ್ಮ ಅವಲಂಬಿಗಳಿಗಾಗಿ ಪ್ರಯಾಣದಲ್ಲಿ ತೊಂದರೆ ಆಗದಿರಲೆಂದು ಇವರಿಂದ ಅನುಮತಿ ಚೀಟಿಗಳನ್ನು ಪಡೆದುಕೊಂಡು ಸಮುದ್ರ ಪ್ರಯಾಣದಲ್ಲಿ ತೊಡಗಿದರು. ಎಷ್ಟೇ ಚಿಕ್ಕದಿದ್ದರೂ ಪ್ರತಿಯೊಂದು ಹಡಗಿಗೆ ಅನುಮತಿ ಪತ್ರ ಕೊಡಲಾಗುತ್ತಿತ್ತು, ಯಾಕೆಂದರೆ ಪೋರ್ಚುಗೀಜರು ಅದಕ್ಕೆ ಶುಲ್ಕ ನಿಗದಿಪಡಿಸಿದ್ದರು: ಕಡಲ ಪ್ರಂಯಾಣ ಆರಂಭವಾಗುವಾಗ ಹಡಗದ ಮಾಲಕನು ಆ ಗೊತ್ತುಪಡಿಸಿದ ಶುಲ್ಕ ವಸೂಲ ಮಾಡಿಕೊಂಡು ಅನುಮತಿ ಪತ್ರ ಸ್ವೀಕರಿಸುತ್ತಿದ್ದನು. ಈ ರೀತಿಯಾಗಿ ಅನುಮತಿ ಪಡೆದುಕೊಳ್ಳುವ ಪದ್ಧತಿ ಈ ಜನರ ಅನುಕೂಲಕ್ಕಾಗಿಯೇ ಇದೆಯೆಂದು ಅವರಿಗೆ ಪೋರ್ಚುಗೀಜರು ಬಿಂಬಿಸಿದ್ದರಿಂದ ಅದಕ್ಕೆ ಅವರೆಲ್ಲ ಒಪ್ಪಿಕೊಂಡರು. ಯಾವುದಾದರೂ ಒಂದು ಹಡಗವು ಅನುಮತಿ ಪತ್ರ ಇಲ್ಲದೆ ಹೊರಟಿದ್ದು ಗೊತ್ತಾದರೆ ಪೋರ್ಚುಗೀಜರು ಆ ಹಡಗ, ಅದರಲ್ಲಿದ್ದ ಚಾಲಕ ಸಿಬ್ಬಂದಿ ಮತ್ತು ಅದರಲ್ಲಿದ್ದ ಮಾಲನ್ನೆಲ್ಲ ಮುತ್ತಿಗೆ ಹಾಕಿ ಕೈವಶಮಾಡಿಕೊಳ್ಳುತ್ತಿದ್ದರು. ಈ ತೆರನಾಗಿದ್ದ ಪೋರ್ಚುಗೀಜರ ಅತಿ ದರ್ಪದ ನಡೆವಳಿಕೆಯಿಂದಾಗಿ ಝುಮೊರಿನ್, ಅವನ ಪ್ರಜೆಗಳು ಮತ್ತು ಅವರ ಆಶ್ರಿತರೆಲ್ಲ ಯಾವಾಗಲೂ ಅವರೊಡನೆ ಹೋರಾಟದಲ್ಲಿದ್ದರು.

ಪೋರ್ಚುಗೀಜರೊಡನೆಯ ಈ ಯುದ್ಧದಲ್ಲಿ ಝುಮೊರಿನ್ನನು ಸಾಕಷ್ಟು ಸಂಪತ್ತನ್ನು ವ್ಯಯಮಾಡಿದನು. ಹೀಗಾಗಿ ಸ್ವಲ್ಪೇ ದಿನಗಳಲ್ಲಿ ಅವನ ಮತ್ತು ಅವನ ಪ್ರಜೆಗಳ ಶಕ್ತಿ ಅವನತಿ ಹೊಂದಿತು. ಆದ್ದರಿಂದ ಅವನು ಮುಸಲ್ಮಾನ ಅರಸರಿಗೆ ಸಹಾಯ ಯಾಚಿಸುವ ಪತ್ರಗಳನ್ನು ಕಳಿಸಿದನು. ಅವನಿಗೆ ಸಹಾಯ ಮಾಡಲು ಅವರು ಮುಂದೆ ಬರಲಿಲ್ಲ.

ಆದರೆ ಗೌರವಾನ್ವಿತ ಸುಲ್ತಾನ ಮುಝಾಫರನ ತಂದೆಯಾದ ಸುಲ್ತಾನ ಮಹಮ್ಮದ ಶಾಹ, (ಗುಜರಾತದ) ಜಾಜ್ರಾತದ ಸುಲ್ತಾನ ಮತ್ತು ಘನವಂತನಾದ ಸುಲ್ತಾನ ಅಲಿ ಆದಿಲ್‌ಶಾಹನ ಅಜ್ಜ ಆದಿಲ್‌ಶಾಹ ತಮ್ಮ ಯುದ್ಧ ಹಡಗುಗಳನ್ನು ಮತ್ತು ಅವುಗಳಿಗೆ ಸಹಾಯಕ ಡೋಣಿಗಳನ್ನು ಸಿದ್ಧ ಇಡಬೇಕೆಂದು ಆಜ್ಞೆ ಹೊರಡಿಸಿದರು. ಆದರೆ ಅವು ಸಮುದ್ರದಲ್ಲಿ ಉಪಯೋಗಿಸಲು ಯೋಗ್ಯವಿದ್ದಿಲ್ಲ. ಮಿಶ್ರ(ಈಜಿಪ್ಟ) ದೇಶದ ಸುಲ್ತಾನ ಖಾಂಸುಹ ಅಲ್-ಘವರಿ ತನ್ನ ಅಮೀರರಲ್ಲಿ ಒಬ್ಬನಾದ ಅಮೀರ ಹುಸೇನನನ್ನು ಹದಿಮೂರು ಹಡಗುಗಳು ಮತ್ತು ಕೆಲ ಸೈನ್ಯದೊಂದಿಗೆ ಕಳಿಸಿದನು. ಅಮೀರ ಹುಸೇನನು ಗುಜರಾತದ ದೀವ ಬಂದರಕ್ಕೆ ಬಂದನು. ಆ ಬಳಿಕ ಅವರು ಶಿಯೂಲಕ್ಕೆ ಹಡಗುಗಳಲ್ಲಿ ಬಂದರು; ಅವರೊಡನೆ ದೀವದ ನಾಯಿಬ ಮಾಲಿಕ ಇಯಾಸ್‌ನಿದ್ದನು ಮತ್ತು ಸಹಾಯಕ ದೋಣಿಗಳಿದ್ದವು. ಅವರಿಗೆ ಕೆಲವು ಪೋರ್ಚುಗೀಜ ಹಡಗುಗಳು ಕಾಣಿಸಿದವು. ಹೋರಾಟದಲ್ಲಿ ಅಮೀರ ಹುಸೇನನು ಒಂದು ದೊಡ್ಡದಾದ ಪೋರ್ಚುಗೀಜ ಹಡಗನ್ನು ಕೈವಶ ಮಾಡಿಕೊಂಡನು. ಅಮೀರ ಹುಸೇನನು ತನ್ನ ಸೈನ್ಯದೊಡನೆ ತಾನು ತಂದ ಹಡಗುಗಳಲ್ಲಿ ದೀವಕ್ಕೆ ಮರಳಿದವು. ಅಲ್ಲಿ ಮಳೆಗಾಲದಲ್ಲಿ ಕೆಲ ತಿಂಗಳು ತಂಗಿದನು. ನಂತರ ಝಮೊರಿನ್ನನ ನಿರ್ದೇಶನದ ಮೇರೆಗೆ ಅವನ ಊರಿಂದ ಮತ್ತು ಉಳಿದ ಕಡೆಗಳಿಂದ ನಲವತ್ತು ಹಡಗುಗಳು ಅಮೀರ ಹುಸೇನನ ಬಲ ಹೆಚ್ಚಿಸಲು ದೀವಕ್ಕೆ ಬಂದವು.

ಅಮೀರ ಹುಸೇನ ಮತ್ತು ಅವನ ಜನರು ದೀವದಲ್ಲಿ ಬಿಡಾರ ಹೂಡಿದ್ದನ್ನು ತಿಳಿದು ಪೋರ್ಚುಗೀಜರು ಯುದ್ಧಕ್ಕೆಂದು ಇಪ್ಪತ್ತು ಹಡಗುಗಳಲ್ಲಿ ಬಂದರು. ಒಮ್ಮೆಲೇ ದೀವದೆದುರು ಕಾಣಿಸಿಕೊಂಡರು. ಈ ಅನಿರೀಕ್ಷಿತ ಪೋರ್ಚುಗೀಜರ ಆಗಮನಕ್ಕೆ ಸ್ಪಂದಿಸುತ್ತ ಸಿದ್ಧತೆಯಿಲ್ಲದ ಅಮೀರ ಹುಸೇನನು ತನ್ನ, ಮಲಿಕ ಇಯಾಸನ ಮತ್ತು ಮಲಬಾರದಿಂದ ಬಂದ ಸಣ್ಣ ಹಡಗಗಳೊಂದಿಗೆ ತಮ್ಮೆಲ್ಲ ಹಡಗಗಳನ್ನು ಸಮುದ್ರಕ್ಕಿಳಿಸಿದನು. ಈ ಎಲ್ಲರ ಸೈನ್ಯಗಳು ಒಂದುಗೂಡಿ ಬಂದದ್ದನ್ನು ನೋಡಿದ ಪೋರ್ಚುಗೀಜರು ತಮ್ಮ ಲಕ್ಷ್ಯವನ್ನು ಅಮೀರ ಹುಸೇನನ ಹಡಗಗಳ ಮೇಲೆ ಕೇಂದ್ರೀಕರಿಸಿದರು. ಅವನ ಕೆಲವು ಹಡಗುಗಳನ್ನು ಕೈವಶ ಮಾಡಿಕೊಂಡರು. ಉಳಿದ ಹಡಗಗಳು ಬೇರೆ ಬೇರೆ ಕಡೆಗೆ ಹೋದವು. ಹೀಗೆ ಅಲ್ಲಾಹನ ನಿರ್ಣಯದಂತೆ ಮತ್ತು ಅವನ ಪ್ರಶ್ನಾತೀತ ಆಜ್ಞೆಯಂತೆ ಆ ನೀಚ ಪೋರ್ಚುಗೀಜರು ವಿಜೇತರಾಗಿ ಕೋಚಿಗೆ ಮರಳಿದರು. ಅಮೀರ ಹುಸೇನನು ತನ್ನ ಕೆಲವು ಸೈನಿಕರ ಜೊತೆಯಲ್ಲಿ ಮಲಿಕ ಇಯಾಸನ ಸೈನ್ಯದೊಡನೆ ಹಾಗೆಯೇ ಮಲಬಾರಿಗಳು ಮತ್ತು ಅವರ ಹಡಗುಗಳೊಡನೆ ಪಾರಾಗಿ ಹೋದನು. ಅವನು ಈಜಿಪ್ತಕ್ಕೆ ಮರಳಿದನು.

ಮಿಸ್ರದ (ಈಜಿಪ್ತದ) ಸುಲ್ತಾನ ಖಾಂಸೂ ಅಲ್-ಘವರೀ ಈ ಸೋಲಿನಿಂದ

ಕ್ರುದ್ಧನಾದನು. ಅವನು ಅಮೀರ ಹುಸೇನನ್ನು ಜೊತೆಗೂಡಿಸಿ ಅಮೀರ ಸಲ್ಮಾನ ಅಲ್-ರೂಮಿಯ ನೇತೃತ್ವದಲ್ಲಿ ಯುದ್ಧದ ಎಲ್ಲ ಪರಿಕರಗಳನ್ನು ಹೊತ್ತ ಇಪತ್ತೆರಡು ಹಡಗುಗಳನ್ನು ರವಾನಿಸಿದನು.

ಅಲ್-ಘವರೀಯ ಸೈನಿಕರು ತಮ್ಮ ಹಡಗಗಳೊಂದಿಗೆ ಸುರಕ್ಷಿತವಾದ ಜಡ್ಡಾಹ ಕೋಟೆಯನ್ನು ತಲುಪಿದರು. ಆ ಮೇಲೆ ಕ್ಯಾಮ್ರಾನ್ ಬಂದರದ ಕಡೆಗೆ ಸಾಗಿದರು. ಅಲ್ಲಿ ಅಮೀರ ಹುಸೇನನು ಯೆಮೆನ್ನರ್ ಜನರೊಡನೆ ಯುದ್ಧ ಹೂಡಿ ಅವರ ದೇಶವನ್ನು ಸೂರೆಗೈದನು. ಈ ಕಾರಣದಿಂದ ಸಲ್ಮಾನ ಅಲ್-ರೂಮೀ ಅವನನ್ನು ತ್ಯಜಿಸಿ ಏಡನ್ ಬಂದರಕ್ಕೆ ಹಡಗಿನಲ್ಲಿ ಹೋಗಿ ನಂತರ ಜೆದ್ದಾಹಕ್ಕೆ ಮರಳಿದನು. ಅಲ್ಲಿ ಅಮೀರ ಹುಸೇನ ಮತ್ತು ಸಲ್ಮಾನ ಅಲ್-ರೂಮೀ ನಡುವೆ ಹೋರಾಟ ಆರಂಭವಾಯಿತು. ಕಾರಣವೆಂದರೆ ಅಮೀರ ಹುಸೇನನು ಮುಸಲ್ಮಾನರೊಡನೆ ಬಡೆದಾಡಿ ಅವರನ್ನು ಕೊಳ್ಳೆ ಹೊಡೆದನು. ಆದ್ದರಿಂದ ಸಲ್ಮಾನನು ಜೆಡ್ಡಾಹ ಬಿಟ್ಟು ತನ್ನ ದೇಶಕ್ಕೆ ವಾಪಸ ಹೋಗಲೇಬೇಕಾಯ್ತು. ಕೆಲವೇ ದಿನಗಳಲ್ಲಿ ಹಿಜಾಜದ ಸುಲ್ತಾನ ಅಲ್-ಶರೀಫ ಬರಾಕಾತ ಅವನನ್ನು ಕೈವಶಮಾಡಿಕೊಂಡು, ಸಮುದ್ರದಲ್ಲಿ ಮುಳುಗಿಸಿ ಕೊಂದನು. ಈ ಘಟನೆಗಳ ನಂತರ ಜೆಡ್ಡಾಹಕ್ಕೆ ಬಂದ ಸುದ್ದಿಯೆಂದರೆ ಸುಲ್ತಾನ ಖಾಂಸೂ ಅಲ್-ಘವರೀ ಮತ್ತು ಸುಲ್ತಾನ ಸಲೀಮ ಶಾಹ ಅಲ್-ರೂಮೀ ಇವರಲ್ಲಿ ಯುದ್ಧವಾಗಿ ಖಾಂಸೂ ಅಲ್-ಘವರೀ ಸೋತನು ಮತ್ತು ಬೇಗನೆ ಕೊಲ್ಲಲ್ಪಟ್ಟನು ಹಾಗೂ ಸಲೀಮ ಶಾಹ ಅಲ್-ರೂಮೀ ಅವನ ರಾಜ್ಯವನ್ನು ಆಕ್ರಮಿಸಿದ್ದನು. ತನ್ನೆಲ್ಲ ಆಗುಹೋಗುಗಳ ಮೇಲೆ ಅಲ್ಲಾಹನೇ ಮಾಲಿಕನು.

ಕ್ರಿ.ಶ.೧೫೧೦ರಲ್ಲಿ ರಮಜಾನದ ೨೨ನೆಯ ದಿನ ಗುರುವಾರದಂದು ಪೋರ್ಚುಗೀಜರು ಕಾಲಿಕತ್ತನ್ನು ತಲುಪಿ ಅದರ ಮೇಲೆ ದಾಳಿ ಮಾಡಿದರು. ಸುಪ್ರಸಿದ್ಧ ನಾಖೂಡಾ ಮಿಥಖಾಲನು ಕಟ್ಟಿಸಿದ್ದ ಅಲ್ಲಿಯ ಜನಸಮ್ಮರ್ದ ಸೇರುವ ಮಸೀದಿಗೆ ಬೆಂಕಿ ಇಟ್ಟರು. ನಂತರ ಝುವೊರಿನ್ನನ ಅರಮನೆಯನ್ನು ಕೈವಶ ಮಾಡಿಕೊಂಡಿದ್ದೇವೆಯೆಂದು ಹಕ್ಕು ಸಾಧಿಸುತ್ತ ಅದರಲ್ಲಿ ನುಗ್ಗಿದರು. ಆ ವೇಳೆಯಲ್ಲಿ ಝುಮೊರಿನ್ನನು ಅಲ್ಲಿರಲಿಲ್ಲ. ಯುದ್ಧಕ್ಕೆ ಸಂಬಂಧಿಸಿದ ಕಾರ್ಯಕ್ಕಾಗಿ ಆತನು ಅಲ್ಲಿಂದ ಕೆಲ ಅಂತರದಲ್ಲಿದ್ದನು. ಅರಮನೆಯಲ್ಲಿದ್ದ ನಯ್ಯರ ಯೋಧರು ಪೋರ್ಚುಗೀಜ ಅತಿಕ್ರಮಣಕಾರರೊಡನೆ ಹೋರಾಡಿ ಅವರನ್ನು ಅರಮನೆಯ ಹೊರಗೆ ದಬ್ಬಿದರು. ಅವರು ಪೋರ್ಚುಗೀಜರ ಐದು ನೂರು ಯೋಧರನ್ನು ಕೊಂದರು. ಅನೇಕರು ಸಮುದ್ರದಲ್ಲಿ ಮುಳುಗಿ ಸತ್ತರು ಮತ್ತು ಉಳಿದವರು ಹತಾಶರಾಗಿ ತಮ್ಮ ಹಡುಗುಗಳಿದ್ದಲ್ಲಿಗೆ ಓಡಿ ಹೋದರು. ಘನವಂತನಾದ ಅಲ್ಲಾಹನು ಬಯಸಿದಂತೆಯೇ ಆಯಿತು.

ಈ ಘಟನೆಯ ಮೊದಲು ಅಥವಾ ನಂತರದ ಕೆಲ ಸಮಯದಲ್ಲಿ ಪೋರ್ಚುಗೀಜರು ಪೊನ್ನಾನಿಗೆ ಬಂದು ಸಮುದ್ರ ತೀರದಲ್ಲಿ ಖಾಲಿಯಾಗಿ ನಿಂತಿದ್ದ ಮೀನು ಹಿಡಿಯುವ ನಾವೆಗಳಿಗೆ ಬೆಂಕಿ ಹಚ್ಚಿದರು. ಅವರೊಡನೆ ಹೋರಾಡಿದ ಸುಮಾರು ಎಪ್ಪತ್ತು ಮುಸಲ್ಮಾನರು ಹುತಾತ್ಮರಾದರು.

ಇದರಂತೆಯೇ, ಪೋರ್ಚುಗೀಜರು ಏಡನ್ನಕ್ಕೆ ಬಂದು ಮುಸಲ್ಮಾನರೊಡನೆ ಭೀಕರ ಕದನಕ್ಕಿಳಿದರು. ಅಲ್ಲಾಹನು ಮುಸಲ್ಮಾನರಿಗೆ ಸಹಾಯ ಮಾಡಿದನು. ಪೋರ್ಚುಗೀಜರನ್ನು ಕೈಬಿಟ್ಟನು. ಆಗ ಪೋರ್ಚುಗೀಜರು ಸಂಪೂರ್ಣ ಸೋತು ಪ್ರಾಣಕ್ಕಾಗಿ ಓಡಿ ಹೋಗಬೇಕಾಯಿತು. ಇದು ಘಟಿಸಿದ್ದು ಏಡನ್ನವನ್ನ ಆಳುತ್ತಿದ್ದ ಅಮೀರ ಮರ್ಜಾನನ ಕಾಲದಲ್ಲಿ ಅಲ್ಲಾಹ ಅವನ ಮೇಲೆ ಸಂತುಷ್ಟನಾಗಲಿ.

ಕೋಚಿ ಮತ್ತು ಕನ್ನೂರಗಳಲ್ಲಿ ತಮ್ಮ ಸ್ಥಾನವನ್ನು ಭದ್ರಪಡಿಸಿಕೊಂಡ ನಂತರ ಕೊಲ್ಲಂದ ರಾಜನೊಡನೆ ಒಪ್ಪಂದ ಮಾಡಿಕೊಂಡರು ಮತ್ತು ತಮ್ಮದೊಂದು ಕೋಟೆಯನ್ನು ಕಟ್ಟಿಸಿದರು. ಆ ದಿನಗಳಲ್ಲಿ ಕೋಚಿ ಮತ್ತು ಕೊಲ್ಲಂ ಉಳಿದೆಲ್ಲ ಊರುಗಳಿಗಿಂತ ಮೆಣಸಿನ ವ್ಯಾಪಾರವನ್ನು ಅತಿ ಹೆಚ್ಚು ಆಕರ್ಷಿಸುವ ಕೇಂದ್ರಗಳಾಗಿದ್ದವು.

ಆ ಬಳಿಕ ಪೋರ್ಚುಗೀಜರು ಗೋವಾದ ಜನರೊಡನೆ ಹೋರಾಡಿ ಗೋವೆಯನ್ನು ಕೈವಶಮಾಡಿಕೊಂಡು ಅದನ್ನಾಕ್ರಮಿಸಿದರು. ಘನವಂತನಾದ ಅಲಿ ಆದಿಲ್‌ಶಾಹನ ಅಜ್ಜ ಆದಿಲ್‌ಶಾಹನ ಕೈಯಲ್ಲಿತ್ತು. ಪೋರ್ಚುಗೀಜರು ಗೋವಾವನ್ನು ಭಾರತದಲ್ಲಿ ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡರು ಮತ್ತು ತಮ್ಮ ಆಳ್ವಿಕೆಯನ್ನು ಅಲ್ಲಿ ಸ್ಥಾಪಿಸಿದರು. ಆದರೆ ಬಹು ಬೇಗನೆ ಆದಿಲ್‌ಶಾಹನು ಅವರೊಡನೆ ಹೋರಾಡಿ, ಗೋವೆಯನ್ನು ಮರಳಿ ಕೈವಶಮಾಡಿಕೊಂಡು ಅಲ್ಲಿಂದ ಅವರನ್ನು ಪಲಾಯನಗೊಳಿಸಿದರು. ಹೀಗಾಗಿ ಮತ್ತೆ ಅದು ಇಸ್ಲಾಂದ ಪ್ರದೇಶವಾಯಿತು. ಇದರಿಂದ ಕ್ರುದ್ಧರಾದ ಪೋರ್ಚುಗೀಜರು ಬಹು ದೊಡ್ಡ ಸಿದ್ಧತೆಯೊಡನೆ ಮತ್ತೆ ಬಂದರು. ಅಲ್ಲಿದ್ದ ಮುಸಲ್ಮಾನರೊಡನೆ ಸಂಗ್ರಾಮ ಮಾಡಿ ಗೋವೆಯನ್ನು ಮತ್ತೆ ಕೈವಶ ಮಾಡಿಕೊಂಡರು ಮತ್ತು ತಮ್ಮ ಸ್ವಾಮಿತ್ವದ ಒಂದು ಭಾಗವನ್ನಾಗಿ ಮಾಡಿಕೊಂಡರು. ಅಮೀರರು ಮತ್ತು ಗೋವೆಯ ಪ್ರಮುಖರು ಪೋರ್ಚುಗೀಜರೊಡನೆ ಗುಟ್ಟಾಗಿ ಹೊಂದಾಣಿಕೆ ಮಾಡಿಕೊಂಡಿದ್ದರೆಂದು ಹೇಳಲಾಗುತ್ತದೆ; ಆದ್ದರಿಂದ ಅವರಿಗೆ ಸುಲಭವಾಗಿ ಗೋವೆಯನ್ನು ಮರಳಿ ಕೈವಶ ಮಾಡಿಕೊಳ್ಳಲು ಸಾಧ್ಯವಾಯಿತು. ಆ ಬಳಿಕ ಅಲ್ಲಿ ಪೋರ್ಚುಗೀಜರು ಹಲವಾರು ಕೋಟೆಗಳನ್ನು ಹಾಗೂ ಭವ್ಯ ಕಟ್ಟಡಗಳನ್ನು, ಗೋಪುರಗಳನ್ನು ಕಟ್ಟಿಸಿದರು. ಅಲ್ಲಾಹನು ಏನೇ ಬಯಸಿದರು. ಅದು ಸಂಭವಿಸುವಂತೆ ಮಾಡುತ್ತಾನೆ. ಹೀಗೆ ಅವರ ಸಾಮರ್ಥ್ಯ ದಿನೇ ದಿನೇ ವರ್ಧಿಸತೊಡಗಿತು.

■

*

ಅಧ್ಯಾಯ - ೨

ಪೋರ್ಚುಗೀಜರ ಕೆಲವು ನಿರ್ಲಜ್ಜ ಕೃತ್ಯಗಳು

ಮೊದಲು ಮಲಬಾರದ ಆಡಳಿತಗಾರರು ದಯಾಪರವಾದ ಧೋರಣೆಯಿಂದಾಗಿ ಮತ್ತು ಪ್ರಾಚೀನ ಕಾಲದಿಂದ ಬಂದ ಅವರ ರೂಢಿಗಳಿಂದಾಗಿ ಮತ್ತು ಅವರ ಕರುಣೆಯಿಂದಾಗಿ ಅಲ್ಲಿ ಒಳ್ಳೆಯ ಸ್ಥಿತಿ ಇದ್ದದ್ದರಿಂದ ಅಲ್ಲಿಯ ಮುಸಲ್ಮಾನರು ಸಮೃದ್ಧಮಯವಾದ. ಸುಖದ ಜೀವನವನ್ನು ಬದುಕಿದರು. ಆದರೆ ಅಲ್ಲಿಯ ಮುಸಲ್ಮಾನರು ಅಲ್ಲಾಹನ ಆಶೀರ್ವಾದವನ್ನು ಕೀಳಾಗಿ ಕಂಡರು ಮತ್ತು ಸನ್ಮಾರ್ಗ ತೊರೆದು ನಿರ್ಲಕ್ಷ್ಯಯುಳ್ಳವರಾದರು. ಆದ್ದರಿಂದ ಅವನು ಪೋರ್ಚುಗೀಜ ಕ್ರಿಶ್ಚನ್ನರು ಅವರ ಮೇಲೆ ಎರಗುವಂತೆ ಮಾಡಿದನು. ಅವರ ಕೈಬಿಟ್ಟನು. ಪೋರ್ಚುಗೀಜರು ಮುಸಲ್ಮಾನರ ಮೇಲೆ ದಬ್ಬಾಳಿಕೆ ನಡೆಸಿದರು. ಅವರನ್ನು ಭ್ರಷ್ಟರನ್ನಾಗಿ ಅವರ ಮೇಲೆ ಎಲ್ಲ ಬಗೆಯ ಅಸಹ್ಯ ಮತ್ತು ದುಷ್ಟ ಕೃತ್ಯಗಳನ್ನೆಸಗಿದರು; ಅವು ವರ್ಣಿಸಿದಷ್ಟು ಕೆಟ್ಟದ್ದಾಗಿದ್ದವು.

ಪೋರ್ಚುಗೀಜರು ಮುಸಲ್ಮಾನರನ್ನು ಗೇಲಿಮಾಡಿ ನಗುತ್ತ ತಿರಸ್ಕಾರದಿಂದ ನೋಡುತ್ತಿದ್ದರು. ಕಾರಣವಿಲ್ಲದೇ ಅವರಿಗೆ ತೊಂದರೆ ಕೊಡುತ್ತಿದ್ದರು; ಅಪಮಾನ ಮಾಡುತ್ತಿದ್ದರು; ತಾವು ಹಳ್ಳಿ ಪ್ರದೇಶಗಳಲ್ಲಿ ಪ್ರಯಾಣಿಸುತ್ತಿದ್ದಾಗ ಮುಸಲ್ಮಾನರು ತಮ್ಮನ್ನು ಬೆನ್ನುಮೇಲೆ ಹೊತ್ತುಕೊಂಡು ಹೊಲಸಾದ, ಕೆಸರಿನ ರಸ್ತೆಗಳನ್ನು ದಾಟುವಂತೆ ಬಲವಂತ ಪಡಿಸುತ್ತಿದ್ದರು; ಅವರ ಮುಖದ ಮೇಲೆ ಉಗುಳುತ್ತಿದ್ದರು; ಮುಸಲ್ಮಾನರು ಯಾತ್ರೆಗಳಿಗೆ, ಅದರಲ್ಲೂ ಹಜ್ ಯಾತ್ರೆಗೆ ಹೊರಟರೆ, ಅಡ್ಡಿ ಪಡಿಸುತ್ತಿದ್ದರು; ಅವರ ಸಂಪತ್ತನ್ನು ಸೂರೆಗೈದರು; ಅವರ ವಾಹನಗಳನ್ನು ಕಸಿದುಕೊಂಡರು; ಅವರ ಮನೆಗಳಿಗೆ, ಮಸೀದಿಗಳಿಗೆ ಕೊಳ್ಳಿಯಿಟ್ಟರು; ಪವಿತ್ರ ಗ್ರಂಥ ಖುರಾನ ಮತ್ತು ಉಳಿದ ಪವಿತ್ರ

ಗ್ರಂಥಗಳನ್ನು ಕಾಲ್ಕೆಳಗೆ ತುಳಿದು ಸುಟ್ಟು ಹಾಕಿದರು; ಸಾರ್ವಜನಿಕವಾಗಿ ಹೊಲಸು ಭಾಷೆಯಲ್ಲಿ ಪ್ರವಾದಿಯನ್ನು ನಿಂದಿಸಿದರು; ಪೂಜಾ ಸ್ಥಾನಗಳನ್ನು ಮೈಲಿಗೆಗೊಳಿಸಿ ಹೊಲಸು ಮಾಡಿದರು; ಇಸ್ಲಾಂ ಧರ್ಮವನ್ನು ನಿಂದಿಸಿ ಅವಹೇಳನ ಮಾಡುವಂತೆ ಅವರನ್ನು ಒತ್ತಾಯಿಸಿದರು; ಶಿಲುಬೆಯೆದುರು ಬಗ್ಗಿ ನಮಸ್ಕರಿಸುವಂತೆ ಮಾಡಿ ಹಾಗೆ ಮಾಡಿದವರಿಗೆ ಹಣ ಕೊಡುತ್ತಿದ್ದರು; ಕ್ರಿಶ್ಚನ್ ಸ್ತ್ರೀಯರಿಗೆ ಭರ್ಜರಿ ಉಡಿಗೆ ತೊಡಿಗೆಯಿಟ್ಟು ಅವರು ಮುಸಲ್ಮಾನ ಹೆಣ್ಣುಮಕ್ಕಳನ್ನು ವ್ಯಾಮೋಹಗೊಳಿಸಲಿಕ್ಕಾಗಿ ಅವರೆದುರು ಪ್ರದರ್ಶನ ಮಾಡಿಸುತ್ತಿದ್ದರು; ಹಜ್ ಯಾತ್ರಿಕರನ್ನು ಕೊಲ್ಲುತ್ತಿದ್ದರು ಮತ್ತು ಎಲ್ಲ ರೀತಿಯ ಕ್ರೌರ್ಯಗಳನ್ನು ಅವರ ಮೇಲೆಸಗಿ ಅವರಿಗೆ ಹಿಂಸೆ ಕೊಡುತ್ತಿದ್ದರು; ಅವರನ್ನು ಬಂಧಿಸಿ ಭಾರವಾದ ಬೇಡಿಗಳನ್ನು ಹಾಕಿ ಬಂಧಿಸಿಡುತ್ತಿದ್ದರು. ಇಲ್ಲವೆ ಕೈಗಳಿಗೆ ಕೊಳ ತೊಡಿಸಿ ಅವರನ್ನು ದರದರನೆ ಬೀದಿಗಳಲ್ಲಿ ಎಳೆಯುತ್ತ ಪೇಟೆಗಳಲ್ಲಿ ಗುಲಾಮರೆಂದು ಮಾರಾಟ ಮಾಡುತ್ತಿದ್ದರು; ಯಾರಾದರೂ ಅವರನ್ನು ಅನುಕಂಪದಿಂದ ಬಿಡಿಸಲು ಯತ್ನಿಸಿದರೆ ಅಂಥವರನ್ನು ನಿರ್ದಯದಿಂದ ಥಳಿಸಿ ಹೆಚ್ಚಿನ ಬೆಲೆ ವಸೂಲಿ ಮಾಡುತ್ತಿದ್ದರು; ಮುಸಲ್ಮಾನರನ್ನು ಕೈದಿ ಮಾಡಿ ಹೊಲಸಾದ ನಾರುವ ತುಂಬಿ ತುಳುಕುತ್ತಿದ್ದ ಕತ್ತಲ ಕೋಣೆಗಳಲ್ಲಿ ಗಂಡಾಂತರಕಾರಿ ಪರಿಸ್ಥಿತಿಯಲ್ಲಿ ಕೂಡಿ ಹಾಕುತ್ತಿದ್ದರು; ಅವರನ್ನು ಚಪ್ಪಲಿಗಳಿಂದ ಹೊಡೆಯುತ್ತಿದ್ದರು, ಶೌಚದ ಬಳಿಕ ಅವರು ನೀರನ್ನು ಬಳಸಿ ಸ್ವಚ್ಛ ಮಾಡಿಕೊಂಡರೆ ಅವರಿಗೆ ಸುಡುತ್ತಿರುವ ಕಟ್ಟಿಗೆಯಿಂದ ಬರೆ ಕೊಡುತ್ತಿದ್ದರು; ಮುಸಲ್ಮಾನರನ್ನು ಹಿಡಿದು ಮಾರಾಟ ಮಾಡುತ್ತಿದ್ದರು. ಕೆಲವರನ್ನು ತಮ್ಮಲ್ಲಿಯೇ ಗುಲಾಮರನ್ನಾಗಿ ಇಟ್ಟುಕೊಳ್ಳುತ್ತಿದ್ದರು; ಏನೂ ಸಂಭಾವನೆ ಕೊಡದೆ ಅವರಿಂದ ಬಲವಂತವಾಗಿ ಎಲ್ಲ ಬಗೆಯ ಕಷ್ಟಕರವಾದ ದೈಹಿಕ ಕೆಲಸ ಮಾಡಿಸಿಕೊಳ್ಳುತ್ತಿದ್ದರು. ಸಾಮಾನ್ಯವಾಗಿ ಪೋರ್ಚುಗೀಜರು ಗೈಯುತ್ತಿದ್ದ ಕ್ರೌರ್ಯಗಳು ಹೀಗಿದ್ದವು.

ದೊಡ್ಡ ಪ್ರಮಾಣದಲ್ಲಿ ಸಿದ್ಧತೆಯನ್ನು ಮಾಡಿಕೊಂಡು ಪೋರ್ಚುಗೀಜರು ಗುಜರಾತ, ಕೊಂಕಣ ಮತ್ತು ಮಲಬಾರ ಮತ್ತು ಅರಬಸ್ತಾನದ ದಂಡೆಯ ಬಂದರಗಳಿಗೆ ಹೋಗುತ್ತಿದ್ದರು. ಮುಸಲ್ಮಾನರ ಹಡಗುಗಳಿಗಾಗಿ ಹೊಂಚು ಹಾಕಿಕೊಂಡು ಕುಳಿತು ಅವುಗಳನ್ನು ಹಿಡಿಯುತ್ತಿದ್ದರು. ಆ ಮೂಲಕ ಸಮೃದ್ಧವಾಗಿ ಸಂಪತ್ತನ್ನು ಸಂಗ್ರಹಿಸಿದರು ಮತ್ತು ದೊಡ್ಡ ಸಂಖ್ಯೆಯಲ್ಲಿ ಮುಸಲ್ಮಾನ ಕೈದಿಗಳನ್ನು ವಶದಲ್ಲಿಟ್ಟುಕೊಂಡರು. ಎಷ್ಟೊಂದು ಕುಲೀನ ಮುಸಲ್ಮಾನ ಸ್ತ್ರೀಯರನ್ನು ಶೆರೆಯಾಳಾಗಿ ಹಿಡಿದರು. ಅವರ ಮಾನಭಂಗ ಮಾಡಿ ಅಲ್ಲಾಹನ ಧರ್ಮದ ವೈರಿಗಳಾಗುವ ಮತ್ತು ಮುಸಲ್ಮಾನರಿಗೆ ಕಷ್ಟಗಳನ್ನು ಉಂಟುಮಾಡುವ ಏಜಂಟರಾಗುವ ಕ್ರಿಶ್ಚನ್ ಮಕ್ಕಳನ್ನು ಹುಟ್ಟಿಸಿದರು ! ಅನೇಕ ಇಸ್ಲಾಂ ವಿದ್ವಾಂಸರನ್ನು, ಪರಮ ಪವಿತ್ರ ಪ್ರವಾದಿಯ ಕುಟುಂಬದ ಸದಸ್ಯರನ್ನು ಮತ್ತು ಇನ್ನುಳಿದ ಬಹಳ ದೊಡ್ಡ ವ್ಯಕ್ತಿಗಳನ್ನು ಹಿಡಿದು, ಒತ್ತೆಯಾಳಾಗಿಸಿಕೊಂಡು

ಹಿಂಸೆಕೊಟ್ಟು ಅವರನ್ನು ಕೊನೆಗೆ ಬರ್ಬರ ಹತ್ಯೆಗೈದರು. ಅನೇಕ ಮುಸಲ್ಮಾನ ಗಂಡಸರನ್ನು, ಹೆಂಗಸರನ್ನು ಒತ್ತಾಯದಿಂದ ಕ್ರಿಶ್ಚನ್ ಧರ್ಮಕ್ಕೆ ಮತಾಂತರಿಸಲಾಯಿತು. ಅದೆಷ್ಟು ದೌರ್ಜನ್ಯಗಳು ಮತ್ತು ಹಿಂಸೆಗಳು ! ಅವುಗಳನ್ನು ವರ್ಣಿಸಲು ನಾಲಿಗೆ ದಣಿಯುತ್ತದೆ. ಶಬ್ದಗಳಲ್ಲಿಡಲು ದ್ವೇಷ ಹುಟ್ಟುತ್ತದೆ. ಸರ್ವಶಕ್ತನಾದ ಅಲ್ಲಾಹನು ಅವರು ಮಾಡಿದ ಅಪರಾಧಗಳಿಗಾಗಿ ಅವರನ್ನು ಶಿಕ್ಷಿಸಲಿ.

ಮುಸಲ್ಮಾನರು ಇಸ್ಲಾಂ ತ್ಯಜಿಸಬೇಕು ಮತ್ತು ಅವರನ್ನು ಕ್ರಿಶ್ಚನ್ನ ಧರ್ಮಕ್ಕೆ ಮತಾಂತರ ಮಾಡಬೇಕೆಂಬುದು ಯಾವ ಕಾಲಕ್ಕೂ ಪೋರ್ಚುಗೀಜರ ಪ್ರಬಲ ಆಕಾಂಕ್ಷೆಯಾಗಿತ್ತು. ಅಂತಹ ದುರ್ದೈವದಿಂದ ಅಲ್ಲಾಹನು ನಮ್ಮನ್ನು ರಕ್ಷಿಸಲಿ ! ಆದರೆ ಅವಶ್ಯಕತೆಯಿಂದಾಗಿ ಪೋರ್ಚುಗೀಜರು ಮುಸಲ್ಮಾನರೊಡನೆ ಶಾಂತಿಪೂರ್ಣವಾದ ಸಂಬಂಧದಿಂದ ಇರಬೇಕಾಗಿತ್ತು. ಯಾಕೆಂದರೆ ಮಲಬಾರದ ಎಲ್ಲ ರೇವುಗಳಲ್ಲಿ ಮುಸಲ್ಮಾನರೇ ಬಹು ಸಂಖ್ಯೆಯಲ್ಲಿದ್ದರು. ವರ್ಷದ ಕೆಲವು ಋತುಗಳಲ್ಲಿ ಹೊಸದಾಗಿ ಬರುತ್ತಿದ್ದ ಪೋರ್ಚುಗೀಜರು ಇಲ್ಲಿಯ ಮುಸಲ್ಮಾನರನ್ನು ನೋಡಿ ಮತ್ತು ಕೋಚಿಯಲ್ಲಿ ಅವರ ನಡೆವಳಿಕೆಯನ್ನು ಗಮನಿಸಿ ತಮ್ಮ ದೇಶದ ಜನರಿಗೆ ಹೇಳಿದರು: "ಇಲ್ಲಿಯ ವರೆಗೂ ಮುಸಲ್ಮಾನರು ತಮ್ಮ ಹೊರರೂಪದಲ್ಲಿ ಬದಲಿಯಾಗಿಲ್ಲ." ಮುಸಲ್ಮಾನರು ತಮ್ಮ ಧರ್ಮವನ್ನು ಬದಲಿಸುವ ದಿಶೆಯಲ್ಲಿ ಇಲ್ಲಿಗೆ ಬಂದ ಮೊದಲಿನ ಪೋರ್ಚುಗೀಜರು ಮಾಡಬೇಕಾದಷ್ಟು ಪ್ರಯತ್ನ ಮಾಡಿಲ್ಲವೆಂದು ಈ ಹೊಸದಾಗಿ ಬಂದವರು ದೂಷಿಸಿದರು. "ನಾಸ್ತಿಕರು ಎಷ್ಟೇ ಸಂತೋಷದಿಂದ ಅಲ್ಲಾಹನ ದೀಪವನ್ನು ತಮ್ಮ ಬಾಯಿಯಿಂದ ಆರಿಸಲು ಯತ್ನಿಸಿದರೂ ಅವನು ಅದು ಆರದೇ ಸಂಪೂರ್ಣ ಆಗುವಂತೆ ಮಾಡುತ್ತಾನೆ. ನಾಸ್ತಿಕರು ಎಷ್ಟೇ ಅದನ್ನು ದ್ವೇಷಿಸಲಿ." (ಖುರಾನ್ ೯:೩೨)

ಕೊನೆಯದಾಗಿ ಮುಸಲ್ಮಾನರನ್ನು ಸಾರಾಸಗಟ್ಟಾಗಿ ಅಲ್ಲಿಂದ ಹೊರಗೆ ಹಾಕಬೇಕೆಂದು ಅವರು ಕೋಚಿಯ ಅರಸನಿಗೆ ವಿನಂತಿ ಮಾಡಿಕೊಂಡರು. ಮುಸಲ್ಮಾನರನ್ನು ಹೊರಗೆ ಹಾಕಿದರೆ ಅವರಿಂದ ಬರುವ ಕಿಂಚಿತ್ ಕಂದಾಯ ಹಣಕ್ಕೆ ಚಿಂತಿಸಬೇಕಿಲ್ಲ. ಅದರ ಎಷ್ಟೋ ಪಟ್ಟು ತಾವು ಕೊಡುವುದಾಗಿ ಹೇಳಿ ಆ ರಾಜನ ಮೇಲೆ ಪ್ರಭಾವ ಬೀರಲು ಪ್ರಯತ್ನಿಸಿದರು. ಇದಕ್ಕೆ ಪ್ರತಿಕ್ರಿಯಿಸುತ್ತಾ ಕೋಚಿಯ ರಾಜನು ಹೇಳಿದ್ದೇನೆಂದರೆ ಮುಸಲ್ಮಾನರನ್ನು ಅಲ್ಲಿಂದ ಹೊರಹಾಕಲು ಸಾಧ್ಯವಿಲ್ಲ. ಯಾಕೆಂದರೆ ಎನಿತೋ ಕಾಲದಿಂದ ಅವರು ಅವನ ಪ್ರಜೆಗಳಾಗಿದ್ದು ತನ್ನ ದೇಶದ ಅಭಿವೃದ್ಧಿ ಮತ್ತು ಸಂಪತ್ತಿಗೆ ಅವರು ಕಾರಣವಾಗಿದ್ದಾರೆ. ಪೋರ್ಚುಗೀಜರು ಕೇವಲ ಮುಸಲ್ಮಾನರು ಮತ್ತು ಅವರ ಧರ್ಮವನ್ನು ದ್ವೇಷಿಸುತ್ತಿದ್ದರು. ಮಲಬಾರದಲ್ಲಿಯ ನಯ್ಯರರನ್ನು ಮತ್ತು ಉಳಿದ ನಾಸ್ತಿಕರನ್ನಲ್ಲ. (ಇಸ್ಲಾಂ ಧರ್ಮಾನುಯಾಯಿಗಳಲ್ಲದವರು.)

■

*

ಅಧ್ಯಾಯ – ೩

ಝುಮೊರಿನ್–ಪೋರ್ಚುಗೀಜ ಒಪ್ಪಂದ ಮತ್ತು ಕಾಲಿಕತ್ತದಲ್ಲಿ ಪೋರ್ಚುಗೀಜರು ಕೋಟೆ ಕಟ್ಟಿಸಿದ್ದು

ಯುದ್ಧವು ದೀರ್ಘವಾದಂತೆ ಮುಸಲ್ಮಾನರ ದೌರ್ಬಲ್ಯ ಹೆಚ್ಚತೊಡಗಿತು. ಈ ಯುದ್ಧದಲ್ಲಿ ದೊಡ್ಡ ಮೊತ್ತದ ಸಂಪತ್ತನ್ನು ಕಳೆದುಕೊಂಡ ಝುಮೊರಿನ್ನನು ಮೃತನಾದನು; ಅವನ ತಮ್ಮನು ಪಟ್ಟಕ್ಕೆ ಬಂದನು. ಪೋರ್ಚುಗೀಜರೊಡನೆ ಶಾಂತಿಯಿಂದಿರುವುದು ಅತಿ ಉತ್ತಮ ಮಾರ್ಗವೆಂದು ಈ ಹೊಸ ಅರಸನ ಅಭಿಪ್ರಾಯವಾಗಿತ್ತು. ಯಾಕೆಂದರೆ ಕನ್ನೂರ ಮತ್ತು ಕೋಚಿಗಳಲ್ಲಿಯ ಜನರಂತೆ ತನ್ನ ಮುಸಲ್ಮಾನ ಪ್ರಜೆಗಳೂ ವ್ಯಾಪಾರ ಅಭಿವೃದ್ಧಿ ಹೊಂದುವರು ಮತ್ತು ಹಾಗಾಗಿ ತಮ್ಮ ದೌರ್ಬಲ್ಯವನ್ನು ನೀಗಿಸಿಕೊಂಡು ಬಡತನದಿಂದ ಬಿಡುಗಡೆ ಪಡೆದವರು ಎಂದು ನಂಬಿದನು. ಆ ಪ್ರಕಾರ ಅವನು ಪೋರ್ಚುಗೀಜರೊಡನೆ ಒಪ್ಪಂದ ಮಾಡಿಕೊಂಡನು. ಈ ಒಪ್ಪಂದದನ್ವಯ ಅವರು ಕಾಲಿಕತ್ತದಲ್ಲಿ ಕೋಟೆಯನ್ನು ಕಟ್ಟಿಕೊಳ್ಳಬಹುದು. ಆದರೆ ಕರಾರವೆಂದರೆ ಝುಮೊರಿನ್ನನ ಮುಸಲ್ಮಾನ ಪ್ರಜೆಗಳು ಪ್ರತಿ ವರ್ಷ ಅರೇಬಿಯನ್ ಬಂದರಗಳಾದ ಜೆಡ್ಡಾ ಮತ್ತು ಅಡನ್‌ಗಳಿಗೆ ನಾಲ್ಕು ಹಡಗುಗಳಲ್ಲಿ ಕಡಲ ಪ್ರಯಾಣ ಮಾಡಲು ಅನುಮತಿಯಿರಬೇಕು.

ದುಷ್ಟ ಪೋರ್ಚುಗೀಜರು ಭದ್ರವಾದ ಕೋಟೆಯನ್ನು ಕಟ್ಟಲು ಶುರುಮಾಡಿದರು. ಝುಮೊರಿನ್ನನ ಪ್ರಜೆಗಳು ಮೆಣಸು ಮತ್ತು ಶುಂಠಿ ತುಂಬಿದ ಹಡಗಗಳಲ್ಲಿ ಅರೇಬಿಯಾದ ಬಂದರಗಳ ಕಡೆಗೆ ನಡೆದರು. ಉಳಿದವರಂತೆ ಇವರೂ ಕೂಡ ಮೊದಲಿನಂತೆ ವ್ಯಾಪಾರೀ ಹಡುಗಳಲ್ಲಿ ಪೋರ್ಚುಗೀಜರ ಅನುಮತಿ ಪತ್ರಗಳೊಂದಿಗೆ ಗುಜರಾತ ಮತ್ತು ಇನ್ನುಳಿದ ಸ್ಥಳಗಳಿಗೆ ಪ್ರಯಾಣ ಮಾಡಿದರು. ಹೀಗೆ ನಡೆದದ್ದು ಕ್ರಿ.ಶ.೧೫೧೪–೧೫ರಲ್ಲಿ.

ಆ ನಾಲ್ಕು ಹಡಗುಗಳು ಅರೇಬಿಯಾದ ಬಂದರಗಳಿಂದ ತಿರುಗಿ ಕಾಲಿಕತ್ತಕ್ಕೆ ಬರುವುದರಲ್ಲಿ ಪೋರ್ಚುಗೀಜರು ಅಲ್ಲಿ ತಮ್ಮ ಕೋಟೆಯ ನಿರ್ಮಾಣವನ್ನು ಮುಗಿಸಿದ್ದರು. ಮುಸಲ್ಮಾನರು ತಮ್ಮ ಹಡಗುಗಳಲ್ಲಿ ಮೆಣಸು ಮತ್ತು ಶುಂಠಿಯನ್ನು ಹೇರಿಕೊಂಡು ಅರೇಬಿಯಾದ ಬಂದರಗಳಿಗೆ ಇನ್ನು ಮುಂದೆ ಹೋಗಬಾರದೆಂದು ನಿಷೇಧಿಸಿದರು. ಹೀಗೆ ಪೋರ್ಚುಗೀಜರಿಗೆ ಮೆಣಸು ಮತ್ತು ಶುಂಠಿ ಇವುಗಳ ವ್ಯಾಪಾರದಲ್ಲಿ ಏಕ-ಸ್ವಾಮ್ಯತ್ವ ಪಡೆಯುವುದು ಗುರಿಯಾಗಿತ್ತು. ಯಾವದೇ ಹಡಗದಲ್ಲಿ ಈ ಮಸಾಲೆ ಪದಾರ್ಥಗಳು ಅಲ್ಪ ಪ್ರಮಾಣದಲ್ಲಿದ್ದದ್ದನ್ನೂ ಕಂಡರೂ ಆ ಹಡಗನ್ನು ತತ್‌ಕ್ಷಣ ಹಿಡಿದು, ಅದರಲ್ಲಿಯ ಸರಕನ್ನು ಮತ್ತು ಚಾಲಕ-ಸಿಬ್ಬಂದಿಯನ್ನು ಕೈವಶ ಮಾಡಿಕೊಳ್ಳುತ್ತಿದ್ದರು. ಈ ರೀತಿಯಾಗಿ ಪೋರ್ಚುಗೀಜರು ಮುಸಲ್ಮಾನರಿಗೆ ಮತ್ತು ಉಳಿದ ಪ್ರಜೆಗಳಿಗೆ ಕಂಟಕಪ್ರಾಯರಾದರು. ಝುಮೊರಿನ್ನನು ಶಾಂತಿಗೆ ಮಹತ್ವಗೊಟ್ಟದ್ದರಿಂದ ಅವರ ಕೆಟ್ಟ ಕೆಲಸಗಳನ್ನು ತಾಳ್ಮೆಯಿಂದ ಸಹಿಸಿದನು. ಯಾಕೆಂದರೆ ಅವರ ದುಷ್ಟತನದ ಬಗ್ಗೆ ಅವನಿಗೆ ಸದಾ ಆತಂಕವಿತ್ತು. ಹೀಗಿದ್ದರೂ ಅವನು ಗುಪ್ತವಾಗಿ ಮುಸಲ್ಮಾನ ಸುಲ್ತಾನರಿಗೆ ಪತ್ರಗಳನ್ನು ಕಳಿಸಿ ಪೋರ್ಚುಗೀಜರೊಡನೆ ಹೊರಾಡುವುದಕ್ಕೆ ಸಿದ್ಧತೆ ಮಾಡಲು ಒತ್ತಾಯಿಸಿದನು. ಆದರೆ ಅದೆಲ್ಲ ವ್ಯರ್ಥವಾಯಿತು. ಅಲ್ಲಾನ ಇಚ್ಛೆಯಂತೆಯೇ ಆಯಿತು.

ಅಲ್ಲಾ ಪೋರ್ಚುಗೀಜರನ್ನು ಶಪಿಸಲಿ. ಅವರು ಚಾಣಾಕ್ಷರೂ, ಮೋಸಗಾರರೂ ಆಗಿದ್ದರು. ಅವರಿಗೆ ತಮ್ಮ ವ್ಯಾಪಾರಕ್ಕೆ ಬೇಕಾದ ಅತ್ಯುತ್ತಮ ದಾರಿ ಯಾವುದೆಂಬುದು ಗೊತ್ತು. ಅವಶ್ಯವಿದ್ದಾಗ ತಮ್ಮ ವೈರಿಗಳೊಡನೆ ಹಾರ್ದಿಕವಾಗಿ, ಸವಿನಯದಿಂದ ಇರುವರು, ಆದರೆ ತಮ್ಮ ಗುರಿ ಸಾಧಿಸಿದೊಡನೆ ಅವರನ್ನು ಅಸಹ್ಯ ಹುಟ್ಟಿಸುವ ರೀತಿಯಲ್ಲಿ ನಡೆಸಿಕೊಳ್ಳುತ್ತಿದ್ದನು. ತಮ್ಮ ತಮ್ಮಲ್ಲಿ ಅವರು ಭಾವನೆ ಮತ್ತು ನಡೆವಳಿಕೆಯಲ್ಲಿ ಅತ್ಯಂತ ಒಕ್ಕುಟ್ಟನಿಂದ ಇದ್ದಾರೆ. ಅವರು ತಮ್ಮನ್ನು ಆಳುವವರಿಂದ ದೂರವಿದ್ದರೂ ತಮ್ಮ ಹಿರಿಯರಿಗೆ ಅವಿಧೇಯರಾಗಿಲ್ಲ. ಅವರಲ್ಲಿ ಭಿನ್ನಾಭಿಪ್ರಾಯ ಅಪರೂಪ. ಅಧಿಕಾರ ಕಬಳಿಸುವುದಕ್ಕಾಗಿ ಅವರಲ್ಲಿ ಕೊಲೆಯಾದದ್ದು ಈ ವರೆಗೂ ಕೇಳಿಬಂದಿಲ್ಲ. ಈ ಜನರು ಸಂಖ್ಯೆಯಲ್ಲಿ ಕಡಿಮೆ ಇದ್ದರೂ ಈ ಕಾರಣಗಳಿಗಾಗಿಯೇ ಮಲಬಾರದ ಆಳಿಕೆಗಾರರು ಮತ್ತು ಉಳಿದವರು ಇವರಿಗೆ ತಲೆಬಾಗಿದರು. ತದ್ವಿರುದ್ಧವಾಗಿ ಮುಸಲ್ಮಾನ ಯೋಧರು ಮತ್ತು ಅವರ ಅಮೀರರು ತಮ್ಮ ತಮ್ಮಲ್ಲಿಯೇ ಬಡಿದಾಡಿದರು. ಕೊಂದಾದರೂ ಅಧಿಕಾರ ಕಿತ್ತುಕೊಳ್ಳಲು ತಮ್ಮ ತಮ್ಮಲ್ಲಿಯೇ ಹೋರಾಡುತ್ತಿದ್ದರು.

ಪೋರ್ಚುಗೀಜರು ಕಾಲಿಕತ್ತದಲ್ಲಿ ಗಟ್ಟಿಯಾಗಿ ಸ್ಥಾಪಿತವಾಗಿ ತಮ್ಮ ಸ್ಥಾನವನ್ನು ಭದ್ರಪಡಿಸಿಕೊಂಡ ಮೇಲೆ ತಮ್ಮ ಪೋರ್ಚುಗಲ್ಲದ ರಾಜನು ಕೆಲವು ಅಮೂಲ್ಯವಾದ ವಸ್ತುಗಳನ್ನು ತಮಗೆ ಕಳಿಸಿರುವುದಾಗಿಯೂ ಅವುಗಳನ್ನು ಝುಮೊರಿನ್ನನಿಗೆ ಕಾಣಿಕೆಯಾಗಿ

ಕೊಡುವುದಾಗಿಯೂ ನೆಪಮಾಡಿ ಅವನನ್ನು ತಮ್ಮ ಕೋಟೆಯಲ್ಲಿಯ ವಾಸಸ್ಥಾನಕ್ಕೆ ಬರಬೇಕೆಂದು ಆಮಂತ್ರಿಸಿದರು. ಆದರೆ ಅವರ ಒಳ ಉದ್ದೇಶ ಅವನನ್ನು ಸೆರೆ ಹಿಡಿಯುವುದಾಗಿತ್ತು. ಝುಮೊರಿನ್ನನು ಅಲ್ಲಿಗೆ ಹೋದ ಮೇಲೆ ಅಲ್ಲಿರುವ ಪೋರ್ಚುಗೀಜನೊಬ್ಬನ ಅಂಗಚಲನೆಯಿಂದ ಸೂಚನೆಯನ್ನು ಪಡೆದನು. ತಾನು ಶೌಚಾಲಯಕ್ಕೆ ಹೋಗಬೇಕೆಂದು ನಟನೆ ಮಾಡಿ ಅವನು ಅಲ್ಲಿಂದ ತತ್‌ಕ್ಷಣ ಕಾಲು ಕಿತ್ತಿದನು. ಅಲ್ಲಾನ ದಯೆಯಿಂದ ಮೋಸಗಾರ ಪೋರ್ಚುಗೀಜರು ಹಾಕಿದ ಬಲೆಯಲ್ಲಿ ಬೀಳದೆ ಝುಮೊರಿನ್ ಪಾರಾದನು. ಅವನಿಗೆ ಸನ್ನೆಯಿಂದ ಸೂಚನೆ ಕೊಟ್ಟ ಮತ್ತು ಅದರಲ್ಲಿ ಸಾಮೀಲಾಗಿರುವರನ್ನು ಕಾಲಿಕತ್ತದಿಂದ ಕನ್ನೂರಕ್ಕೆ ವರ್ಗಮಾಡಿ ಶಿಕ್ಷಿಸಲಾಯಿತು.

ಮೊಹರಂ ತಿಂಗಳಲ್ಲಿ (೧೫೧೭) ಪೋರ್ಚುಗೀಜರು ಜೆಡ್ಡಾದ ಭದ್ರ ಕೋಟೆಯುಳ್ಳ ಬಂದರದ ಮೇಲೆ ಎರಗುವ ಯೋಜನೆಯಿಂದ ಇಪ್ಪತ್ತೆಂಟು ಹಡಗುಗಳೊಂದಿಗೆ ಯುದ್ಧದ ಬೃಹತ್ ಸಿದ್ಧತೆಯೊಂದಿಗೆ ಗೋವಾದಿಂದ ಹೊರಟರು. ಅವರು ಆ ಬಂದರಕ್ಕೆ ಬಂದಾಗ ಅಲ್ಲಿದ್ದ ಮುಸಲ್ಮಾನರು ಭಯಂಕರ ಗಲಿಬಿಲಿಗೊಂಡು ಭಯಭೀತರಾದರು. ಪೋರ್ಚುಗೀಜರ ವಿರುದ್ಧ ಹೋರಾಡಲು ಮುಸಲ್ಮಾನರಿಗೆ ಸಹಾಯ ಮಾಡಲೋಸುಗ ಹಿಂದೊಮ್ಮೆ ಖಾಂಸೂ ಅಲ್-ಘವರೀ ಸಲ್ಮಾನ ಅಲ್-ರೂಮೀಯನ್ನು ಕಳಿಸಿದ್ದನಷ್ಟೆ. ಅದೇ ರೂಮೀ ಎರಡು ನೂರು ಸೈನಿಕರೊಂದಿಗೆ ಯುದ್ಧ ಹಡಗುಗಳಲ್ಲಿ ಸನ್ನದ್ಧನಾಗಿದ್ದನು. ಸಮುದ್ರ ತೀರದಿಂದ ಅವರು ಪೋರ್ಚುಗೀಜರ ಮೇಲೆ ಗುಂಡು ಹಾರಿಸಲು ಶುರು ಮಾಡಿದಾಗ ಅವರ ಕೆಲವು ಹಡಗುಗಳಿಗೆ ಸಾಕಷ್ಟು ಹಾನಿಯಾಯ್ತು. ಪೋರ್ಚುಗೀಜರು ಹಡಗುಗಳ ಹಾಯಿಗಳನ್ನು ಮೇಲಕ್ಕೇರಿಸಿದರು. ಫಿರಂಗಿ ಹಾಕುವ ವ್ಯಾಪ್ತಿಯಿಂದ ಹೊರಗೆ ಬಂದು ಭೀತಿಯಿಂದ ಪಲಾಯನ ಮಾಡಿದರು. ಆದರೆ ಸಲ್ಮಾನ ರೂಮೀ ಕಳಿಸಿದ ಮೂವತ್ತು ಸೈನಿಕರು ಎರಡು ನಾವೆಗಳಲ್ಲಿ ಅವರನ್ನು ಬೆನ್ನಟ್ಟಿದರು. ಅವರು ಕ್ಯಾಮರಾನ್ನದಲ್ಲಿ ಪೋರ್ಚುಗೀಜ ಹಡಗವೊಂದನ್ನು ಕೈವಶ ಮಾಡಿಕೊಂಡು ಹನ್ನೆರಡು ಕ್ರಿಶ್ಚನ್ನರನ್ನು ಹಡಗದಲ್ಲಿ ಹಾಕಿಕೊಂಡು ಜಿಡ್ಡಾಕ್ಕೆ ಹೋದರು. ಕ್ಯಾಮಾರಾನ್ನದಲ್ಲಿ ಮನಸ್ಸೂನ(ಮಳೆಗಾಲ) ಮುಗಿಯುವ ವರೆಗೆ ಪೋರ್ಚುಗೀಜರು ಇದ್ದರು. ಆ ಮೇಲೆ ಆಶಾಭಂಗಗೊಂಡು ಗೋವಾಕ್ಕೆ ಮರಳಿದರು. ಅಲ್ಲಾನ ಇಚ್ಛೆ ಹಾಗಿತ್ತು.

■

*

ಅಧ್ಯಾಯ-೪

ಝಮೊರಿನ್ ಮತ್ತು ಪೋರ್ಚುಗೀಜರ ಮಧ್ಯ ವಿರಸ ಮತ್ತು ಕಾಲಿಕತ್ತ ಕೋಟೆಯ ಕೈವಶ

ಪೋರ್ಚುಗೀಜರ ದೌರ್ಜನ್ಯಗಳು ಮತ್ತು ಅತ್ಯಾಚಾರಗಳು ದಿನೇ ದಿನೇ ಹೆಚ್ಚಾಗುತ್ತಲಿದ್ದವು. ಈ ಎಲ್ಲ ದೌರ್ಜನ್ಯಗಳನ್ನು ನೋಡಿಯೂ ನೋಡದಂತೆ ಝಮೊರಿನ್ನನು ಸುಮ್ಮನಿದ್ದನು. ಪಂತಲಿಯಾನಿ ಮುಸಲ್ಮಾನರಿಗೂ ಪೋರ್ಚುಗೀಜರಿಗೂ ಒಂದು ದಿನ ಕಾಲಿಕತ್ತದಲ್ಲಿ ಕದನ ಆರಂಭ ಆಗುವವರೆಗೂ ಈ ಅನಾಚಾರಗಳು ಮುಂದುವರೆದವು. ಈ ಘರ್ಷಣೆ ಆರಂಭವಾದದ್ದು ೧೫೨೪ರ ಮೊಹರಂದಂದು ಇದರ ಹಿಂದಿನ ವರ್ಷದ ಘಟನೆಯೊಂದರಲ್ಲಿ ಪಂತಲಯಾನಿ, ಶೆಮ್ಮನಾಡ, ತಿರುರಂಗಡಿ, ಪರಪ್ಪನಂಗಡಿ ಮತ್ತು ಇನ್ನುಳಿದ ಕೆಲವು ಊರುಗಳಲ್ಲಿಯ ಜನರು ಸಣ್ಣ ನಾವೆಗಳಲ್ಲಿ ಬಂದು ಪೋರ್ಚುಗೀಜರ ಹತ್ತು ವ್ಯಾಪಾರೀ ನಾವೆಗಳನ್ನು ಕೈವಶಮಾಡಿಕೊಂಡಿದ್ದರು.

ತನ್ಮಧ್ಯ ಕೊಂಡುಗಲ್ಲೂರದಲ್ಲಿ ಮುಸಲ್ಮಾನರು ಮತ್ತು ಯೆಹೂದಿಗಳ ಮಧ್ಯ ಸಮುದಾಯ ಘರ್ಷಣೆ ಸಂಭವಿಸಿತು. ಯೆಹೂದಿಗಳು ಮುಸಲ್ಮಾನನೊಬ್ಬನನ್ನು ಕೊಂದಿದ್ದರಿಂದ ಅಲ್ಲಿ ದಂಗೆ ಶುರುವಾಯ್ತು. ಮುಸಲ್ಮಾನರು ಮಲಬಾರದ ಬೇರೆ ಬೇರೆ ಊರುಗಳಲ್ಲಿದ್ದ ತಮ್ಮ ಬಾಂಧವರಿಗೆ ಯೆಹೂದಿಗಳ ಮೇಲೆ ಸೇಡು ತೀರಿಸಿಕೊಳ್ಳಲು ಸಹಾಯ ಮಾಡಬೇಕೆಂದು ಕೋರುವ ಸಂದೇಶಗಳನ್ನು ಕಳಿಸಿದರು. ಪಂತಲಯಾನಿಯ ತಮ್ಮ ಬಾಂಧವರೊಂದಿಗೆ ಕಾಲಿಕತ್ತದ ನಿವಾಸಿಗಳು, ಕಕ್ಕಡದ ಜನರು ಶಾಲಿಯಮ್ಮದ ತಮ್ಮ ಬಂಧುಗಳೊಂದಿಗೆ ತಿಕ್ಕೋಡಿಯವರು, ಪರಪ್ಪನಂಗಡಿ, ತಿರುನಂಗಡಿ, ತನೂರ, ಪರವಣ್ಣ, ಪೊನ್ನಾನಿ ಮತ್ತು ವೆಲಯಂಕೋಡೆ ಈ ಊರುಗಳ ಜನರು ಶಾಲಿಯಮ್ಮದ ಶುಕ್ರವಾರ ಪ್ರಾರ್ಥನಾ ಮಸೀದಿಯಲ್ಲಿ ಜಮಾಯಿಸಿದರು. ಅಲ್ಲಿ ಕೊಡುಂಗಲ್ಲೂರದ

ಯೆಹೂದಿಗಳ ಮೇಲೆ ದಾಳಿ ಮಾಡಬೇಕೆಂದು ನಿರ್ಣಯ ಕೈಕೊಂಡರು. ಹಾಗೆಯೇ ಅವರು ಪೋರ್ಚುಗೀಜರ ವಿರುದ್ಧ ಯುದ್ಧ ಮಾಡಬೇಕು ಮತ್ತು ಝುಮೊರಿನ್ನನ ಅನುಮತಿಯಿಲ್ಲದೆ ಅವರೊಡನೆ ಜಗಳ ಪರಿಹಾರ ಮಾಡಿಕೊಳ್ಳಬಾರದೆಂದು ನಿರ್ಣಯ ತೆಗೆದುಕೊಂಡರು. ಇದೂ ಕೂಡ ೧೫೨೪ರಲ್ಲಿಯೇ ಆದದ್ದು.

ಆ ನಿರ್ಣಯದ ಪ್ರಕಾರ ಸುಮಾರು ಒಂದು ನೂರು ಚಿಕ್ಕ ನಾವೆಗಳ ತುಂಡೊಂದು ಕೊಡುಂಗಲ್ಲೂರಕ್ಕೆ ಹೋಗಿ ಅಲ್ಲಿ ಹಲವು ಯೆಹೂದಿಗಳನ್ನು ಕೊಂದರು. ಉಳಿದ ಯೆಹೂದಿಗಳು ಕೊಡುಂಗಲ್ಲೂರದ ಪೂರ್ವ ಭಾಗಗಳಿಗೆ ಓಡಿ ಹೋದರು. ಮುಸಲ್ಮಾನರು ಯೆಹೂದಿಗಳ ಮನೆಗಳಿಗೆ ಮತ್ತು ಸೇವಾಲಯಗಳಿಗೆ ಬೆಂಕಿ ಹಚ್ಚಿದರು. ಯಾವಾಗ ಅವರು ಕ್ರಿಶ್ಚನ್ನರ ಮನೆಗಳಿಗೆ ಮತ್ತು ಚರ್ಚುಗಳಿಗೆ ಬೆಂಕಿ ಹಚ್ಚಲು ಸಾಹಸ ಮಾಡಿದಾಗ ನಯ್ಯರ ಸಮಾಜ ಅದನ್ನು ವಿರೋಧಿಸಿತು. ಆಗ ಮುಸಲ್ಮಾನರು ಮತ್ತು ನಯ್ಯರ ನಡುವೆ ಘರ್ಷಣೆಯಾಯಿತು. ನಯ್ಯರ ಸಮುದಾಯದ ಕೆಲವು ಗಂಡಸರು ಕೊಲ್ಲಲ್ಪಟ್ಟರು. ಈ ಕಾರಣದಿಂದಾಗಿ ಅಲ್ಲಿ ಮುಸಲ್ಮಾನರಿಗೆ ಇರುವುದು ಸಾಧ್ಯವಾಗದ್ದಕ್ಕೆ ಅವರು ಬೇರೆ ಊರುಗಳಿಗೆ ವಲಸೆ ಹೋಗಲೇ ಬೇಕಾಯ್ತು.

ಇದೇ ವರ್ಷ ದರ್ಮಾದಂ, ಈಡಕ್ಕಾಡ, ಕನ್ನೂರ, ತಿರುವಾಂಗಡಿ, ಎಝಿಮಲಾ ಮತ್ತು ಶಮ್ಮನಾಡ ಈ ಊರುಗಳ ಜನರೆಲ್ಲ ಪೋರ್ಚುಗೀಜರ ವಿರುದ್ಧ ಯುದ್ಧಮಾಡಲು ಒಟ್ಟಾರೆ ಸೇರಿದರು. ಉಳಿದ ಸ್ಥಳಗಳಲ್ಲಿಯ ಮುಸಲ್ಮಾನರು ಹಾಗೆಯೇ ಮಾಡಿದರು.

ಅದರಂತೆಯೇ ಅದೇ ವರ್ಷ ಫಕಿಹ ಅಹಮ್ಮದ ಮರಕ್ಕರ ಅವನ ಸಹೋದರ ಕುನ್ಹಿ ಅಲಿ ಮರಕ್ಕರ, ಅವರ ಕಕ್ಕ ಮಹಮ್ಮದ ಅಲಿ ಮರಕ್ಕರ ಅವರಂತಹ ಕೋಚಿಯ ಹೆಗ್ಗಡೆಗಳು ಮತ್ತು ಅವರ ಅನುಯಾಯಿಗಳು ಪೋರ್ಚುಗೀಜರೊಡನೆ ಯುದ್ಧ ಮಾಡುವ ಉತ್ಕಟ ಬಯಕೆಯುಳ್ಳವರಾಗಿ ಕೋಚಿಯಿಂದ ಕಾಲಿಕತ್ತಕ್ಕೆ ಹಡಗುಗಳಲ್ಲಿ ನಡೆದರು. ಗರಿಷ್ಠ ಸಂಖ್ಯೆಯಲ್ಲಿ ಮುಸಲ್ಮಾನರು ಮತ್ತು ಝುಮೊರಿನ್ನ ತಮ್ಮ ಮೇಲೆ ದಾಳಿ ಮಾಡಲು ಗಟ್ಟಿಯಾಗಿ ಒಂದಾಗಿದ್ದಾರೆಂದು ಗೊತ್ತಾದೊಡನೆ ಪೋರ್ಚುಗೀಜರು ಕೋಚಿಯಿಂದ ಹೊರಟು ೩ ಜಮಾದಿ ಅಲ್-ಅವ್ವಲ(೧೫೨೪ ಕ್ರಿ.ಶ.) ರ ಶನಿವಾರ ಮುಂಜಾನೆ ಪೊನ್ನಾನಿಗೆ ಬಂದರು. ಅವರು ಅಲ್ಲಿ ಅಸಂಖ್ಯಾತ ಮನೆಗಳನ್ನು ವ್ಯಾಪಾರೀ ಕೇಂದ್ರಗಳನ್ನು, ಉಗ್ರಾಣಗಳನ್ನು ಮತ್ತು ತಟಾಕದಲ್ಲಿದ್ದ ಕೆಲವು ಮಸೀದಿಗಳನ್ನು ಸುಟ್ಟುಹಾಕಿದರು. ಅವರು ಅಸಂಖ್ಯಾತ ಟೆಂಗಿನ ಗಿಡಗಳನ್ನು ಕತ್ತರಿಸಿ ಹಾಕಿ ಹಾಳುಗೆಡಹಿದರು. ಅನೇಕ ಮುಸಲ್ಮಾನರು ಹುತಾತ್ಮರಾದರು. ತಾವು ಬಂದ ಮರುದಿನ ರಾತ್ರಿ ಪೋರ್ಚುಗೀಜರು ಹಡಗು ಏರಿ ಹೋಗಿ ಪಂತಾಲಯಾನಿಯನ್ನು ತಲುಪಿದರು. ಅಲ್ಲಿ ಅಲ್ಲಿಯ ಜನರಿಗೆ ಮತ್ತು ಉಳಿದವರಿಗೆ

ಸಂಬಂಧಿಸಿದ್ದ ನಲವತ್ತು ಹಡಗುಗಳನ್ನು ಕೈವಶ ಮಾಡಿಕೊಂಡರು. ಮತ್ತೆ ಇಲ್ಲಿ ಅನೇಕ ಮುಸಲ್ಮಾನರು ಹುತಾತ್ಮರಾದರು.

ಕೆಲವು ಪಂತಲಯಾನಿ ಮುಸಲ್ಮಾನರು ಮತ್ತು ಪೋರ್ಚುಗೀಜರ ನಡುವೆ ವಿರಸ ಉಂಟಾಗಲು ಝುಮೊರಿನ್ನನು ಪೋರ್ಚುಗೀಜರ ವಿರುದ್ಧ ಹೋರಾಟ ಮಾಡಲು ಸಂಕಲ್ಪ ಮಾಡಿದನು. ಆದರೆ ಆಗ ಅವನು ತನ್ನ ಬೇರೆ ಕೆಲವು ಶತ್ರುಗಳೊಡನೆ ಘರ್ಷಣೆಯಲ್ಲಿ ತೊಡಗಿದ್ದರಿಂದ ಕಾಲಿಕತ್ತದಿಂದ ದೂರವಿರುವ ಒಂದು ಸ್ಥಳದಲ್ಲಿದ್ದನು. ಆದ್ದರಿಂದ ತನ್ನ ಮುಖ್ಯಮಂತ್ರಿ ಅಲ್-ಯೂಥನನ್ನು ಪೋರ್ಚುಗೀಜರೊಡನೆ ಹೋರಾಡಲು ಆಜ್ಞಾಪಿಸಿ ಅಲ್ಲಿಗೆ ಕಳಿಸಿದನು. ಅಲ್-ಯಾಥನು ದೊಡ್ಡ ಮೊತ್ತದ ಹಣ ಖರ್ಚುಮಾಡಿ ಬೃಹತ್ ಪ್ರಮಾಣದ ಸಿದ್ಧತೆಗಳನ್ನು ಮಾಡಿದನು. ಮುಸಲ್ಮಾನ ಯೋಧರು ಮತ್ತು ಝುಮೊರಿನ್ನನ ನಯ್ಯರ ಸೈನಿಕರು ಕೂಡಿಕೊಂಡು ಪೋರ್ಚುಗೀಜ ಕೋಟೆಗೆ ಮುತ್ತಿಗೆ ಹಾಕಿದರು. ದೇಶದ ಬೇರೆ ಬೇರೆ ಭಾಗಗಳಿಂದ ಮುಸಲ್ಮಾನರು ಕಾಲಿಕತ್ತೆಯಲ್ಲಿ ಕೂಡಿಕೊಂಡು ಅಲ್ಲಾನ ಮಾರ್ಗದಲ್ಲಿ ಪವಿತ್ರ ಯುದ್ಧ ಹೂಡುವ ಉತ್ಸಾಹ ಹೊಂದಿದ್ದರು. ಆಗ ಸ್ವತಃ ಝುಮೊರಿನ್ನನೇ ಆಗಮಿಸಿದನು. ಅಷ್ಟು ಹೊತ್ತಿಗೆ ಪೋರ್ಚುಗೀಜರ ಆಹಾರ ಪದಾರ್ಥಗಳು, ಸಾಮಾನು ಸರಕುಗಳು ತೀರಿ ಹೋಗಿದ್ದವು. ಹೊರಗಿನಿಂದ ಬರುವ ಆಶೆಯೂ ಇಲ್ಲದಾಗಿತ್ತು. ಹತಾಶರಾಗಿ ಪೋರ್ಚುಗೀಜರು ಹೊರಗೆ ಕಾಣದ ಹಾಗೆ ಕೋಟೆಯ ಹಿಂಭಾಗದಲ್ಲಿ ಬಿಲತೋಡಿ ಆ ಮುಖಾಂತರ ತಮ್ಮೆಲ್ಲ ಅಮೂಲ್ಯ ವಸ್ತುಗಳನ್ನು ತಮ್ಮ ಹಡುಗುಗಳಿಗೆ ಸಾಗಿಸಿ ಅಲ್ಲಿಂದ ಪಲಾಯನಗೈದರು. ಇದು ಆದದ್ದು ೧೫೨೫ರಲ್ಲಿ. ಈ ಸೈನಿಕ ಕಾರ್ಯಾಚರಣೆ ವಿಜಯದಲ್ಲಿ ಮುಕ್ತಾಯಗೊಳ್ಳುವ ವೇಳೆಗೆ ಮುಸಲ್ಮಾನ ಮತ್ತು ನಯ್ಯರ ಯೋಧರು ಹಾಗೆಯೇ ಝುಮೊರಿನ್ನನ ಯುದ್ಧಾಧಿಕಾರಿಗಳು ಎರಡು ಸಾವಿರ ಸಂಖ್ಯೆಗೂ ಮೀರಿ ಮೃತರಾಗಿದ್ದರು. ತಮ್ಮ ಕೋಟೆಯ ನಾಶದಿಂದಾಗಿ ಪೋರ್ಚುಗೀಜರು ಝುಮೊರಿನ್ ಮತ್ತು ಮುಸಲ್ಮಾನರನ್ನು ಇನ್ನಷ್ಟು ಹೆಚ್ಚು ದ್ವೇಷಿಸತೊಡಗಿದರು. ಈ ಸ್ಥಿತಿ ಬಹಳ ಕಾಲದವರೆಗೂ ಮುಂದುವರಿಯಿತು.

ಪೋರ್ಚುಗೀಜರ ಮೇಲೆ ಯುದ್ಧ ಹೂಡಲು ದೃಢಸಂಕಲ್ಪ ಮಾಡಿದ್ದರಿಂದ ಮುಸಲ್ಮಾನರು ಪೋರ್ಚುಗೀಜರ ಪರವಾನಗಿ ಇಲ್ಲದೆ ಕಡಲು ಪ್ರಯಾಣಗಳನ್ನು ಮಾಡತೊಡಗಿದರು. ಅವರು ಮೆಣಸು, ಶುಂಠಿ ಮೊದಲಾದ ಪದಾರ್ಥಗಳನ್ನು ತೆಗೆದುಕೊಂಡು ಗುಜರಾತ ಮತ್ತು ಇನ್ನುಳಿದ ಸ್ಥಳಗಳಿಗೆ ಹೋಗತೊಡಗಿದರು. ಈ ಹಡಗುಗಳಲ್ಲಿ ಕೆಲವು ಪೋರ್ಚುಗೀಜರಿಂದ ತಪ್ಪಿಸಿಕೊಂಡು ಹೋದರು. ಅವುಗಳಲ್ಲಿ ಬಹಳಷ್ಟು ಹಡಗುಗಳನ್ನು ಪೋರ್ಚುಗೀಜರು ಹಿಡಿಯುತ್ತಿದ್ದರು. ಇಲ್ಲವೆ ಹೀಗಾಗಿ ಅವು ನೆಲದ ಮೇಲೆಯೇ ನಿಂತು ಬಿಡುತ್ತಿದ್ದವು. ಇದರ ಪರಿಣಾಮವಾಗಿ ದರ್ಮದಮ್ಮದ

ಜನರು ಮತ್ತು ಅವರ ಮಿತ್ರರು ವ್ಯಾಪಾರದ ಋತು ಮುಗಿಯುವ ವೇಳೆಗೆ ಪೋರ್ಚುಗೀಜರೊಡನೆ ಜಗಳ ಬಗೆಹರಿಸಿಕೊಳ್ಳಲು ಮುಂದಾದರು; ಮೊದಲಿನಂತೆಯೇ ಪೋರ್ಚುಗೀಜರ ಪರವಾನಗಿ ಪಡೆದು ವ್ಯಾಪಾರ ಯಾತ್ರೆ ಶುರು ಮಾಡಿದರು. ಆದರೆ ಝಮೊರಿನ್ ಹಾಗೂ ಅವನ ಪ್ರಜೆಗಳು ಪೋರ್ಚುಗೀಜರರೊಡನೆಯ ತಮ್ಮ ಮುಖಾಮುಖಿಯನ್ನು ಎಷ್ಟೋ ವರ್ಷಗಳವರೆಗೆ ಮುಂದುವರೆಸಿದರು. ಈ ಕಾರಣ, ಅವರ ಬಲ ಹಾಗೂ ಸಂಪತ್ತು ಕ್ಷೀಣಿಸಿದವು.

ಕ್ರಿ.ಶ.೧೫೨೮ರ ಮಳೆಗಾಲದ ಆರಂಭದಲ್ಲಿ ಪೋರ್ಚುಗೀಜರ ಹಡಗವೊಂದು ತನೂರದಲ್ಲಿ ಚಂಡಮಾರುತದಿಂದ ಹಾಳಾಯಿತು. ಹಡಗದಲ್ಲಿದ್ದವರಿಗೆ ತನೂರದ ರಾಜನು ಆಶ್ರಯ ಕೊಟ್ಟನು. ಆ ಹಡಗನ್ನು, ಅದರಲ್ಲಿದ್ದ ಸಾಮಾನು ಸರಕು ಮತ್ತು ಜನರನ್ನು ತನಗೆ ಒಪ್ಪಿಸಬೇಕೆಂದು ಝಮೊರಿನ್ನನು ತನೂರದ ರಾಜನಿಗೆ ಪತ್ರ ಬರೆದನು. ಅವನು ಝಮೊರಿನ್ನನ ಬೇಡಿಕೆಯನ್ನು ತಿರಸ್ಕರಿಸಿದನು. ಈ ಘಟನೆಯಿಂದ ತನೂರದ ಅರಸನು ಪೋರ್ಚುಗೀಜರೊಡನೆ ಒಪ್ಪಂದ ಮಾಡಿಕೊಂಡನು. ಒಪ್ಪಂದದ ಮೇರೆಗೆ ಪೋರ್ಚುಗೀಜರ ಅನುಮತಿಯನ್ನು (ಪರವಾನಗಿ) ಪಡೆದು ತನೂರದ ಜನರು ಕಡಲ ವ್ಯಾಪಾರೀ ಪ್ರಯಾಣ ಮಾಡಬಹುದು ಮತ್ತು ಪೊನ್ನಾನಿ ನದಿಯ ಉತ್ತರ ಭಾಗದಲ್ಲಿ ಪೋರ್ಚುಗೀಜರು ಕೋಟೆಯೊಂದನ್ನು ಕಟ್ಟಿಕೊಳ್ಳಬಹುದು; ಹೊಳೆಯು ಆ ರಾಜ್ಯದ ಪ್ರದೇಶದಲ್ಲಿಯೇ ಇತ್ತು. ಆ ಕೋಟೆಯನ್ನು ಇಲ್ಲಿ ಕಟ್ಟಿಸುವ ಮುಖ್ಯ ಉದ್ದೇಶವೆಂದರೆ ಝಮೊರಿನ್ನನ ಸ್ಥಾನವನ್ನು ದುರ್ಬಲಗೊಳಿಸುವುದು. ಪ್ರವಾಸಿಕರಿಗೆ ತೊಂದರೆ ಕೊಡುವುದು. ಮತ್ತು ಪೊನ್ನಾನಿ ಬಂದರ ಪಟ್ಟಣದ ಶಕ್ತಿ ಕುಂದಿಸುವುದಾಗಿತ್ತು.

ಕೋಟೆಯನ್ನು ಕಟ್ಟಲು ಅನೇಕ ಹಡಗಗಳಲ್ಲಿ ಮತ್ತು ನಾವೆಗಳಲ್ಲಿ ಇಟ್ಟಂಗಿ ಮತ್ತು ಸುಟ್ಟ ಸುಣ್ಣನ್ನು ಹಾಕಿಕೊಂಡು ಕೋಚಿಯಿಂದ ಹೊರಟು ಪೊನ್ನಾನಿ ಬಂದರವನ್ನು ಲಂಗರ ಹಾಕಿದ ಹಡಗುಗಳಿಂದ ಸುತ್ತುವರೆದರು. ಬಹುಶಃ ಅಲ್ಲಾನು ಝಮೊರಿನ್ನನಿಗೆ ಮತ್ತು ಮುಸಲ್ಮಾನರಿಗೆ ಸಹಾಯ ಮಾಡಿದ್ದರಿಂದ ಆ ಎಲ್ಲ ಹಡಗುಗಳು ಮತ್ತು ನೌಕೆಗಳು ಭೀಕರ ಗಾಳಿಗೆ ಹಾಳಾಗಿ ಹೋದವು. ಕೆಲವೊಂದು ವೆಲಿಯಂಕೋಟೆಯ ದಕ್ಷಿಣ ಭಾಗದಲ್ಲಿ ಎಸೆಯಲ್ಪಟ್ಟವು. ಒಂದೇ ಒಂದು ನಾವೆ ಆ ಪ್ರಭಂಜನದ ಹೊಡೆತದಿಂದ ಪಾರಾಯಿತು. ಪೋರ್ಚುಗೀಜರನ್ನೊಳಗೊಂಡು ಹಲವಾರು ಜನರು ಕಾರ್ಮಿಕರು ಮತ್ತು ಗುಲಾಮರು ಸಮುದ್ರದಲ್ಲಿ ಮುಳುಗಿ ಸತ್ತರು. ಯಾರು ಉಳಿದು ದಂಡೆ ಸೇರಿ ಪಾರಾದರೋ ಅವರೆಲ್ಲ ಬಂಧಿತರಾಗಿ ಕೊಲ್ಲಲ್ಪಟ್ಟರು. ಪೋರ್ಚುಗೀಜರ ಕೈಸೆರೆಯಾಗಿ ಕೈದಿಗಳಾಗಿದ್ದ ಅನೇಕರನ್ನು ಮುಸಲ್ಮಾನರು ಬಿಡುಗಡೆ ಮಾಡಿದರು. ದೊಡ್ಡ ತೋಪುಗಳು ಝಮೊರಿನ್ನನ

ಕೈವಶವಾದವು. ಹೀಗೆ ಪೋರ್ಚುಗೀಜರು ಮತ್ತು ಅವರ ಸ್ಥಳೀಯ ಮಿತ್ರರು ಸಂಚುಮಾಡಿ ಹೆಣೆದಿದ್ದ ಯೋಜನೆ ವಿಫಲವಾಯಿತು.

ಕ್ರಿ.ಶ.೧೫೩೦-೩೧ರಲ್ಲಿ ಝುಮೊರಿನ್ನನ ಪ್ರಜೆಗಳು ಮತ್ತು ಹೊರಗಿನ ಕೆಲವರು ಕೂಡಿಕೊಂಡು ಸುಮಾರು ಹಡಗುಗಳಲ್ಲಿ ಗುಜರಾತದ ಬೇರೆ ಬೇರೆ ಬಂದರಗಳಿಗೆ ವ್ಯಾಪಾರೀ ಪ್ರಯಾಣ ಬೆಳೆಸಿದರು. ಆ ತಂಡವು ಅಲಿ ಇಬ್ರಾಹಿಮ ಮರಕ್ಕರ ಮತ್ತು ಅವರ ಮಿತ್ರರು ಹಾಗೂ ಇನ್ನೂ ಕೆಲವು ಮಹತ್ವದ ಜನರನ್ನು ಒಳಗೊಂಡಿತ್ತು. ಅವರಲ್ಲಿ ಹೆಚ್ಚಿನವರು ಜುಜಾರ ಮತ್ತು ಸುರತದಲ್ಲಿಯೂ ಮತ್ತು ಕೆಲವರು ಬರೂಜದಲ್ಲಿ ಇಳಿದರು. ಇದು ತಿಳಿದೊಡನೆ ಪೋರ್ಚುಗೀಜರು ಅವರೊಡನೆ ಯುದ್ಧಮಾಡಲು ಹಡಗುಗಳಲ್ಲಿ ಹಾಗೂ ನೌಕೆಗಳಲ್ಲಿ ಸಾಗಿದರು. ಅವರೂ ಜುಜಾರ ಮತ್ತು ಸುರತ ಬಂದರಗಳಲ್ಲಿ ಬಂದಿಳಿದರು. ಅಲ್ಲಿ ತಂಗಿದ್ದ ಸಾಮಾನು ಸರಕು ತುಂಬಿದ್ದ ಹಡಗುಗಳನ್ನು ಕೈವಶ ಮಾಡಿಕೊಂಡರು. ಬರೂಜದಲ್ಲಿ ಇಳಿದುಕೊಂಡಿದ್ದವರು ಪಾರಾಗಿ ಹೋದರು.

ಈ ಘಟನೆಗಿಂತ ಮೊದಲು ಗುಜರಾತದ ಸುಲ್ತಾನ ಬಹಾದುರ ಶಾಹ ಮತ್ತು ಮಲಬಾರದ ಜನರ ಹಡಗುಗಳು ದುರ್ದೈವದಿಂದ ಬೇರೆ ಬೇರೆ ಪ್ರಸಂಗಗಳಲ್ಲಿ ಪೋರ್ಚುಗೀಜರ ಕೈಗೆ ಸಿಕ್ಕಿದ್ದವು.

■

*

ಅಧ್ಯಾಯ-೫

ಝಮೊರಿನ್ ಮತ್ತು ಪೋರ್ಚುಗೀಜರ ಎರಡನೆಯ ಒಪ್ಪಂದ ಹಾಗೂ ಶಾಲಿಯಮ್‌ದಲ್ಲಿ ಪೋರ್ಚುಗೀಜರ ಕೋಟೆಯ ನಿರ್ಮಾಣ

ತನ್ನ ಮೋಸಗಾರಿಕೆ ಮತ್ತು ಘಾತಕ ಪ್ರವೃತ್ತಿಯನ್ನು ಮುಚ್ಚಿಟ್ಟು ಪೋರ್ಚುಗೀಜರ ಅಧಿಕಾರಗಳಲ್ಲಿ ಒಬ್ಬನು ಝಮೊರಿನ್ನನಿಗೆ ಭೆಟ್ಟಿಯಾಗಲು ಕೋಚಿಯಿಂದ ಭೂಮಾರ್ಗವಾಗಿ ಹೊರಟನು. ಅವನು ಬಹಳ ಬುದ್ಧಿವಂತನೂ, ಕಪಟಿಯೂ ಆಗಿದ್ದನು. ಝಮೊರಿನ್ನನೊಡನೆ ಪೋರ್ಚುಗೀಜರು ಮೊದಲು ಮಾಡಿಕೊಂಡ ಒಪ್ಪಂದದ ಹೊಂದಾಣಿಕೆಯ ಅವಧಿಯಲ್ಲಿ ಅವನಿಗೆ ಕೆಲವು ಮುಸಲ್ಮಾನ ಪ್ರಮುಖರೊಡನೆ ವಿಶ್ವಾಸವುಳ್ಳ ಸಂಬಂಧ ಹೊಂದಿದ್ದನು.

ಪೊನ್ನಾನಿಗೆ ಬಂದು ಈ ಪೋರ್ಚುಗೀಜ ಮನುಷ್ಯನು ನೇರವಾಗಿ ಪೊನ್ನಾನಿಯ ರಾಜನಲ್ಲಿಗೆ ಹೋದನು. ಆ ರಾಜ ಮತ್ತು ಝಮೊರಿನ್ನ ಇವರಿಬ್ಬರಲ್ಲಿ ಶಾಂತಿಯನ್ನು ಪ್ರಸ್ತಾಪಿಸುವವರೆಗೆ ಅವನು ಆ ರಾಜನೊಡನೆಯೇ ಇದ್ದನು.

ಕಾಲಿಕತ್ತದಲ್ಲಿಯ ಪೋರ್ಚುಗೀಜರ ಕೋಟೆಯನ್ನು ಕೈವಶಮಾಡಿದ್ದ ಝಮೊರಿನ್ನನು ದುರ್ಬಲ ಮನಸ್ಸಿನ ಸಾಮ್ರಾಟನಾಗಿದ್ದನು. ವಿಪರೀತ ಮದ್ಯಪಾನ ವ್ಯಸನಿಯಾಗಿದ್ದನು. ಆದರೆ ಅವನ ನಂತರ ಪಟ್ಟಕ್ಕೆ ಬರಬೇಕಾಗಿದ್ದ ಅವನ ತಮ್ಮನಾದ ನಂಬಿಯಾಧಾರನು ಬಲಿಷ್ಠನೂ, ಲೋಕವ್ಯವಹಾರ ಚತುರನೂ, ಶೂರನು ಆಗಿದ್ದನು. ಈಗ ಪಟ್ಟದಲ್ಲಿದ್ದವನು ಜನರಲ್ಲಿದ್ದ ಪ್ರಾಚೀನ ರೂಢಿಗಳನ್ನು ಆಚರಣೆಗಳನ್ನು ವಿರೋಧಿಸುವ ಧೋರಣೆಯುಳ್ಳವನು ಆಗಿದ್ದನು.

ಝುಮೊರಿನ್ನನು ತನೂರ ರಾಜನೊಡನೆ ಮಾಡಿಕೊಂಡ ಶಾಂತಿ ಒಡಂಬಡಿಕೆಯು ತನೂರ ರಾಜನಿಗೂ, ಸ್ವತಃ ಝುಮೊರಿನ್ನನಿಗೂ ಮತ್ತು ಅವನ ಅಧಿಕಾರಿಗಳಿಗೂ ಸಂಕಟ ತಂದೊಡ್ಡಿತು. ಕಾರಣವೆಂದರೆ ಝುಮೊರಿನ್ನನು ಮತ್ತು ಅವನ ಸೈನ್ಯ ಹಾಯ್ದು ಹೋಗುವ ಸಮುದ್ರ ಮಾರ್ಗದಲ್ಲಿ ಇರುವ ಶಾಲಿಯವ್‌ದಲ್ಲಿ ಪೋರ್ಚುಗೀಜರು ಕೋಟೆಯನ್ನು ಕಟ್ಟಿಕೊಳ್ಳಲು ಅದು ಒಪ್ಪಿಗೆ ಕೊಟ್ಟಿದೆ. ಅದಲ್ಲದೆ ಅದು ಅನೇಕ ದೇಶಗಳಿಂದ ಬರುವ ಪ್ರಯಾಣಿಕರಿಗೆ ಹಾಗೂ ಹೋಗುವ ದಾರಿಯಾಗಿದೆ. ಕಾಲಿಕತ್ತದಿಂದ ಕೇವಲ ಸುಮಾರು ಎಂಟು ಮೈಲುಗಳ ದೂರದಲ್ಲಿರುವ ಶಾಲಿಯಮ್ ಮೇಲೆಯೇ ಕಾಲಿಕತ್ತದಿಂದ ಅರಬಿಯಾದ ಅನೇಕ ಸ್ಥಳಗಳಿಗೆ ಹೋಗುವ ವ್ಯಾಪಾರೀ ಹಡುಗುಗಳಿಗೆ ತೊಂದರೆಯಾಯಿತು. ಈ ಎಲ್ಲ ವಿಷಯಗಳನ್ನು ಶಾಲಿಯಮ್ಮ ರಾಜನೊಡನೆ ಚರ್ಚಿಸಿದ ನಂತರ ಕೊನೆಗೆ ಝುಮೊರಿನ್ನನು ಪೋರ್ಚುಗೀಜರಿಗೆ ಅಲ್ಲೊಂದು ಕೋಟೆಯನ್ನು ಕಟ್ಟಿಸಲು ಅನುಮತಿ ಕೊಟ್ಟನು. ಕೋಟೆಯನ್ನು ಕಟ್ಟಲು ಬೇಕಾಗುವ ಸಾಮಗ್ರಿಗಳಿಂದ ತುಂಬಿದ ದೊಡ್ಡದೊಂದು ಹಡಗದಲ್ಲಿ ಪೋರ್ಚುಗೀಜರು ಬಹು ಬೇಗನೆ ಶಾಲಿಯಮ್ಮಕ್ಕೆ ಬಂದರು. ೧೫೩೧(ಎ.ಡಿ) ನೇ ಇಸ್ವಿಯ ರಬೀ ಅಲ್-ಆಖಿರ ತಿಂಗಳ ಕೊನೆಗೆ ಅವರು ಶಾಲಿಯಂ ನದಿಯನ್ನು ಪ್ರವೇಶಿಸಿದರು ಮತ್ತು ಒಂದು ಭದ್ರವಾದ ಕೋಟೆಯನ್ನು ಕಟ್ಟಿಸಿದರು. ಅದೇ ವೇಳೆಯಲ್ಲಿ ಅವರು ಮಲಬಾರಕ್ಕೆ ಇಸ್ಲಾಂ ಪ್ರವೇಶಿಸಿದ ಆರಂಭ ಕಾಲದಲ್ಲಿ ಕಟ್ಟಲಾದ ಪ್ರಾಚೀನ ಮಸೀದಿ ಅಲ್-ಜಾಮೀ(ಭಕ್ತರು ಒತ್ತಟ್ಟಿಗೆ ಕೂಡುವುದಕ್ಕಿರುವ ಮಸೀದಿ) ಈ ಪ್ರಾರ್ಥನೆಯ ಕಟ್ಟಡವನ್ನು ಈ ಮೊದಲು ಇದನ್ನು ಕುರಿತು ಪ್ರಸ್ತಾಪಿಸಲಾಗಿದೆ ಮತ್ತು ಅದರೊಡನೆ ಇನ್ನೂ ಎರಡು ಮಸೀದಿಗಳನ್ನು ನೆಲಸಮಗೊಳಿಸಿದರು. ಆ ಕೆಡವಿದ ಮಸೀದಿಗಳ ದೊಡ್ಡ ದೊಡ್ಡ ಕಲ್ಲುಗಳನ್ನು ಮತ್ತು ಇನ್ನುಳಿದ ವಸ್ತುಗಳನ್ನು ಕೋಟೆಯನ್ನು ಕಟ್ಟಲು ಮತ್ತು ಅದರೊಳಗೆ ಚರ್ಚೊಂದನ್ನು ಕಟ್ಟಲು ಉಪಯೋಗಿಸಿದರು.

ಆ ಕೋಟೆಯನ್ನು ಕಟ್ಟುತ್ತಿರುವಾಗ, ಮೊಟ್ಟ ಮೊದಲು ಒಬ್ಬ ಪೋರ್ಚುಗೀಜನು ಬಂದು ಪ್ರಾಚೀನ ಮಸೀದಿಯ ಗೋಡೆಯಲ್ಲಿ ಬಿಲವೊಂದು ತೋಡಿ ಆ ಭಾಗವನ್ನು (ದೊಡ್ಡ ಕಲ್ಲು ಇತ್ಯಾದಿ) ತೆಗೆದುಕೊಂಡು ಹೋದನು. ಮುಸಲ್ಮಾನರು ಅಲ್ಲಿಯ ಪೋರ್ಚುಗೀಜ ನಾಯಕನಿಗೆ ಈ ವಿಷಯ ಕುರಿತು ತಕರಾರು ಸಲ್ಲಿಸಿದರು. ತತ್‌ಕ್ಷಣವೇ ಆ ಅಧಿಕಾರಿಯು ಕೆಲಸಗಾರರ ಗುಂಪಿನೊಡನೆ ಅಲ್ಲಿಗೆ ಬಂದು ಬಿಲಬಿದ್ದ ಭಾಗವನ್ನು ಕಲ್ಲು, ಸಿಮೆಂಟಿನಿಂದ ಮುಚ್ಚಿಸಿದನು. ಹಾಗೆ ಮಾಡಿದ್ದರಿಂದ ಅಲ್ಲಿಯ ಮುಸಲ್ಮಾನರು ಕೃತಜ್ಞತೆಯಿಂದ ಗೆಲುವಾಗಿ ತಮ್ಮ ಮನೆಗೆ ನಡೆದರು.

ಆ ಘಟನೆಯಾದ ಮರುದಿನ ಪೋರ್ಚುಗೀಜರು ದೊಡ್ಡ ಗುಂಪಿನಲ್ಲಿ ಬಂದು ಆ ಮಸೀದಿಯನ್ನು ಸಂಪೂರ್ಣವಾಗಿ ನೆಲಸಮಗೊಳಿಸಿದರು. ಅಲ್ಲಿ ಒಂದು ಚೂರು

ಇಟ್ಟಿಗೆಯನ್ನು ಬಿಡಲಿಲ್ಲ. ಮತ್ತೆ ಅಲ್ಲಿಯ ಮುಸಲ್ಮಾನರು ಪೋರ್ಚುಗೀಜರ ಧುರೀಣನಿಗೆ ಭೆಟ್ಟಿಯಾಗಿ ತಕರಾರು ಸಲ್ಲಿಸಿದರು. ಆದರೆ ಅವನು ಆ ಮಸೀದಿ ಹಾಗೂ ಅದರ ಸ್ಥಳವನ್ನು ಅವರ ರಾಜನು ತಮಗೆ ಮಾರಿದ್ದಾನೆಯೆಂದು ಹೇಳಿದನು. ದುಃಖತಪ್ತರಾದ ಮುಸಲ್ಮಾನರು ಅಲ್ಲಿಂದ ತೆರಳಿದರು. ಆ ಬಳಿಕ ಅಲ್ಲಿಂದ ದೂರವಿದ್ದ ಸಣ್ಣದಾದ ಮಸೀದಿಯಲ್ಲಿ ಪ್ರಾರ್ಥನೆಗಾಗಿ ಜಮಾಯಿಸ ತೊಡಗಿದರು. ಪೋರ್ಚುಗೀಜರು ಅಷ್ಟಕ್ಕೂ ಅವರನ್ನು ಬಿಡಲಿಲ್ಲ. ಆ ನೀಚ ದೈತ್ಯರು ಅಲ್ಲಿದ್ದ ಮುಸಲ್ಮಾನ ಗೋರಿಗಳನ್ನು, ಸಮಾಧಿಗಳನ್ನು ಒಡೆದು ಇಟ್ಟಿಗೆಗಳನ್ನು ಮತ್ತು ಕಲ್ಲುಗಳನ್ನು ತಮ್ಮ ಕೋಟೆಯನ್ನು ಕಟ್ಟುವಲ್ಲಿ ಉಪಯೋಗಿಸಿದರು.

ಆ ಕೋಟೆಯ ನಿರ್ಮಾಣಕ್ಕೆ ಒಪ್ಪಿಗೆ ಕೊಟ್ಟಿದ್ದ ಝುಮೊರಿನ್ನನು ಅದರ ನಿರ್ಮಾಣ ಆಗುವುದರೊಳಗಾಗಿಯೇ ಮೃತನಾದನು. ಅವನ ತಮ್ಮ ನಂಬಿಯಾಧಾರನು ಹೊಸ ಝುಮೊರಿನ್ನನಾಗಿ ಅಧಿಕಾರ ಸ್ವೀಕರಿಸಿದನು. ಈ ಹೊಸ ಝುಮೊರಿನ್ನನು ಒಡಂಬಡಿಕೆಯನ್ನು ರದ್ದುಗೊಳಿಸಿ ಶಾಲಿಯಮ್‌ದ ರಾಜನ ಮೇಲೆ ಯುದ್ಧ ಘೋಷಿಸಿದನು. ಶಾಲಿಯಮ್ಮನ ರಾಜ್ಯವನ್ನು ಹಾಳುಗೆಡಹಿದನು. ಆಗ ಆ ರಾಜನು ಝುಮೊರಿನ್ನನಿಗೆ ಶರಣಾದನು. ಅನೂಚಾನವಾಗಿ ಬಂದಿದ್ದ ರೂಢಿ ಮತ್ತು ಸಂಪ್ರದಾಯಗಳಿಗೆ ಅನುಗುಣವಾಗಿ ಹೊಸ ಒಪ್ಪಂದ ಏರ್ಪಟ್ಟಿತು.

ಅದೇ ವರ್ಷ, ಮೋಚಾದಿಂದ(ಮುಖವಾ) ತೋಪು ಹಾಗೂ ದೊಡ್ಡ ಸಂಪತ್ತು ಸಹಿತ ಗುಜರಾತದಲ್ಲಿರುವ ದೀವ ಬಂದರಕ್ಕೆ ಅಮೀರ ಮುಸ್ತಫಾ ಅಲ್–ರೂಮೀ ಬಂದಿಳಿದನು. ಆ ಕಾಲದಲ್ಲಿ ಸುಲ್ತಾನ ಬಹಾದೂರ ಶಾಹನ ಪರವಾಗಿ ಮಲಿಕ ಇಯಾಸನ ಪುತ್ರ ಮಾಲಿಖ ತುಘನ ಈತನು ದೀವದ ಗೌರ್ನರ ಆಗಿದ್ದನು. ಮುಸ್ತಫಾ ಅಲ್–ರೂಮೀಯ ಆಗಮನ ತಿಳಿದೊಡನೆ ದೀವ ಬಂದರವನ್ನು ತಮ್ಮ ಅಧೀನದಲಿಟ್ಟುಕೊಳ್ಳಲು ಅಲ್ಲಿಗೆ ಪೋರ್ಚುಗೀಜರು ಧಾವಿಸಿದರು. ಫಿರಂಗಿಗಳೊಡನೆ ಅಮೀರ ಮುಸ್ತಾಫಾ ಅವರನ್ನೆದುರಿಸಿದನು. ಅಲ್ಲಾಹನ ದಯೆಯಿಂದ ಪೋರ್ಚುಗೀಜ ಅಲ್ಲಿಂದ ಕಿತ್ತೆಯೆಸೆಲ್ಪಟ್ಟು ಓಡಿ ಹೋದರು. ಹೀಗೆ ಪೋರ್ಚುಗೀಜರು ನಿರ್ಲಜ್ಜರಾಗಿ ಸೋಲಲ್ಪಟ್ಟು ಅವಮಾನಿತರಾದರು.

■

*

ಅಧ್ಯಾಯ–೬

ಮೂರನೆಯ ಝುಮೊರಿನ್–ಪೋರ್ಚುಗೀಜರ ಒಪ್ಪಂದ

ಹಿಜರಿ ಶಕೆ ೯೪೦ (ಕ್ರಿ.ಶ.೧೫೩೩) ರಲ್ಲಿ ಝುಮೊರಿನ್ನನು ಪೋರ್ಚುಗೀಜರೊಡನೆ ಕೆಳಗಿನ ಕರಾರುಗಳೊಂದಿಗೆ ಒಪ್ಪಂದ ಮಾಡಿಕೊಂಡನು : ಝುಮೊರಿನ್ನನ ಪ್ರಜೆಗಳು ವರ್ಷದಲ್ಲಿ ಕನಿಷ್ಠ ನಾಲ್ಕು ಹಡುಗುಗಳನ್ನು ಸರಕು ತುಂಬಿ ಕಾಲಿಕತ್ತದಿಂದ ಅರೇಬಿಯಾದ ಬಂದರಗಳಿಗೆ ಕಳಿಸುವದು. ಆ ಪ್ರಕಾರ ಅದೇ ವರ್ಷ ಸರಕುಗಳಿಂದ ಪೂರ್ತಿ ತುಂಬಿದ ನಾಲ್ಕು ಹಡಗುಗಳ ತಂಡವು ಅರೇಬಿಯಾದ ಕಡೆಗೆ ಹೊರಟಿತು. ಹಾಗೆಯೇ ಝುಮೊರಿನ್ನನ ಪ್ರಜೆಗಳು ಪೋರ್ಚುಗೀಜರಿಂದ ಪರವಾನಗಿ ಪಡೆದುಕೊಂಡು ವ್ಯಾಪಾರೀ ಹಡುಗಗಳೊಂದಿಗೆ ಕಡೆಗೆ ಹೊರಟರು.

ಆ ಬಳಿಕ ಝುಮೊರಿನ್ನನು ತನೂರ ರಾಜನ ಮೇಲೆ ಯುದ್ಧ ಸಾರಿದನು. ಆ ಹೋರಾಟದಲ್ಲಿ ತನೂರ ರಾಜನು ಸೋತು ಶರಣಾದನು. ಆಗ ಏರ್ಪಟ್ಟ ಶಾಂತಿ ಒಪ್ಪಂದದ ಪ್ರಕಾರ ಅವನು ಝುಮೊರಿನ್ನನಿಗೆ ಪೊನ್ನಾನಿಗೆ ಹೊಂದಿಕೊಂಡಿರುವ ಹಲವಾರು ಪ್ರದೇಶಗಳನ್ನು ಮತ್ತು ಶಾಲಿಯಮ್‌ದ ಸಮೀಪವಿರುವ ಸಣ್ಣದೊಂದು ದ್ವೀಪವನ್ನು ಬಿಟ್ಟುಕೊಡಬೇಕಾಯಿತು. ಶಾಲಿಯಮ್ಮದಲ್ಲಿ ಕೋಟೆ ಕಟ್ಟಲು ಕೋಚಿಯಿಂದ ಬಂದಿದ್ದ ಪೋರ್ಚುಗೀಜ ಸಭ್ಯಗೃಹಸ್ಥನು ಈ ಒಪ್ಪಂದದಲ್ಲಿ ಮಧ್ಯಸ್ಥಿಕೆವಹಿಸಿದನು.

ಝುಮೊರಿನ್ ಮತ್ತು ಪೋರ್ಚುಗೀಜರ ಮಧ್ಯ ಒಡಂಬಡಿಕೆಯಾದೊಡನೆಯೆ ಖ್ವಾಜಾ ಹುಸೇನ ಝುಂಜಾಕದಾರ ಅಲ್–ರೂಮೀ ಮತ್ತು ಫಕೀರ ಅಹಮ್ಮದ ಮರಕ್ಕರನ ಸೋದರ ಕುನ್ಹಿ ಮರಕ್ಕರ ಹಡಗದಲ್ಲಿ ಕಾಲಿಕತ್ತ ಬಂದರಕ್ಕೆ ೧೬ ರಬೀ ಅಲ್–ಅವ್ವಲ, ಹಿಜರಿ ಶಕೆ ೯೪೧ರಂದು (ಕ್ರಿ.ಶ.೧೫೩೪) ಬಂದಿಳಿದರು. ಸುಲ್ತಾನ

ಬಹಾದ್ದೂರ ಶಾಹ ಅವರೊಡನೆ ಝುಮೊರಿನ್ನನಿಗೆ ಕೊಡಲು ಅನೇಕ ಕಾಣಿಕೆಗಳನ್ನು ಉಡುಗೊರೆಗಳನ್ನು ಕಳಿಸಿದ್ದನು. ಸಮುದ್ರ ಯುದ್ಧದಲ್ಲಿ ಪೋರ್ಚುಗೀಜರೊಡನೆ ಹೋರಾಡಲು ಮಲಬಾರದ ಮುಸಲ್ಮಾನರನ್ನು ಗುಜರಾತಕ್ಕೆ ಕಳಿಸಬೇಕೆಂದು ಸುಲ್ತಾನನು ಝುಮೊರಿನ್ನನಿಗೆ ಪ್ರಾರ್ಥನೆ ಸಲ್ಲಿಸಿದನು. ಆದರೆ ಈ ಪ್ರಾರ್ಥನೆ ನಿರರ್ಥಕವಾಯಿತು.

■

*
ಅಧ್ಯಾಯ-೭

ಸುಲ್ತಾನ ಬಹಾದೂರಶಾಹ ಮತ್ತು ಪೋರ್ಚುಗೀಜರ ನಡುವೆ ಶಾಂತಿಒಪ್ಪಂದ ಏರ್ಪಟ್ಟಿತು; ಕೆಲವು ಬಂದರಗಳನ್ನು ಪೋರ್ಚುಗೀಜರಿಗೆ ಬಿಟ್ಟುಕೊಡಲಾಯಿತು.

ಸುಲ್ತಾನ ಬಾಬರನ ಮಗ ಹುಮಾಯೂನನು ಹಿಜರಿ ಶಕೆ ೯೪೧ (ಕ್ರಿ.ಶ.೧೫೩೫) ವರ್ಷದ ಕೊನೆಯ ಸುಮಾರಿಗೆ ದಿಲ್ಲಿಯಲ್ಲಿ ಅಧಿಕಾರ ವಹಿಸಿಕೊಂಡೊಡನೆಯೇ ತನ್ನ ಗಮನವನ್ನು ಗುಜರಾತದ ಕಡೆಗೆ ಹೊರಳಿಸಿದನು. ಅವನು ಗುಜರಾತದ ಕೆಲವು ಪಟ್ಟಣಗಳ ಮೇಲೆ ದಾಳಿ ಮಾಡಿ ಅವುಗಳನ್ನು ಧ್ವಂಸಗೊಳಿಸಿದನು. ಗುಜರಾತದ ದೊರೆ ಸುಲ್ತಾನ ಬಹಾದೂರ ಶಾಹನನ್ನು ಅಯೋಮಯವಾಗಿ ಸೋಲಿಸಲಾಯಿತು. ಹುಮಾಯೂನನಿಗೆ ಅಂಜಿ ಭಯಗ್ರಸ್ತನಾದ ಬಹಾದೂರ ಶಾಹನು ಸಹಾಯ ಯಾಚಿಸಿ ತನ್ನ ಸಂದೇಶವಾಹಕರನ್ನು ಪೋರ್ಚುಗೀಜರಲ್ಲಿಗೆ ಕಳಿಸಿದನು. ತತ್ಕ್ಷಣವೇ ಪೋರ್ಚುಗೀಜರು ಸುಲ್ತಾನನ ವಿನಂತಿಗೆ ಸ್ಪಂದಿಸಿದರು; ಇಬ್ಬರ ನಡುವೆ ಒಪ್ಪಂದ ಏರ್ಪಟ್ಟಿತು; ಅದರ ಪ್ರಕಾರ ಸುಲ್ತಾನನು ಪೋರ್ಚುಗೀಜರಿಗೆ ವಸಯಿ, ಮಾಹಿಮ, ಮುಂತಾದ ಬಂದರಗಳನ್ನು ಬಿಟ್ಟುಕೊಟ್ಟನು. ಪೋರ್ಚುಗೀಜರು ಈ ಬಂದರಗಳನ್ನು ಪಡೆದುಕೊಂಡು ಸುತ್ತುಮುತ್ತಲಿನ ಪ್ರದೇಶಗಳನ್ನು ಜೋಡಿಸಿಕೊಂಡು ತಮ್ಮ ಸ್ವಾಮಿತ್ವವನ್ನು ವಿಸ್ತರಿಸಿಕೊಂಡರು.

ಈ ಒಪ್ಪಂದದಿಂದಾಗಿ ಪೋರ್ಚುಗೀಜರು ಬಹಳ ಅನುಕೂಲತೆಗಳನ್ನು ಪಡೆದರು ಮತ್ತು ಅವರ ಅಧಿಕಾರ ಹಾಗೂ ಪ್ರಭಾವ ವರ್ಧಿಸಿದವು. ಸುಲ್ತಾನನೂ ಕೂಡ ದೀವ ಬಂದರದ ಮೇಲಿನ ಸ್ವಾಮಿತ್ವವನ್ನು ಬಿಟ್ಟುಕೊಟ್ಟು ಅದರ ಆಡಳಿತವನ್ನು ಪೋರ್ಚುಗೀಜರಿಗೆ ಕೊಟ್ಟನು. ತತ್ಪರಿಣಾಮವಾಗಿ ಅಲ್ಲಿ ಸಂಗ್ರಹವಾಗುತ್ತಿದ್ದ

ವರಮಾನದಲ್ಲಿ ಅರ್ಧದಷ್ಟು ಪೋರ್ಚುಗೀಜರು ಪಡೆವಂತಾಯಿತು. ಹೀಗೆ ಪೋರ್ಚುಗೀಜರು ದೀವವನ್ನು ಆಳಿದರು ಮತ್ತು ಅದನ್ನು ಭದ್ರಪಡಿಸಿದರು.

ಹಿಂದೆ ಪೋರ್ಚುಗೀಜರು ದೀವ ದ್ವೀಪವನ್ನು ಪಡೆದುಕೊಳ್ಳಲು ಹಾತೊರೆಯುತ್ತಿದ್ದರು; ಮಲಿಕ ಇಯಾಸನ ಆಳ್ವಿಕೆಯಲ್ಲಿ ಮತ್ತು ನಂತರ ಅವನ ಪುತ್ರರ ಆಳ್ವಿಕೆಯ ಕಾಲದಲ್ಲಿ ಅದನ್ನು ಕೈವಶಮಾಡಿಕೊಳ್ಳಲು ಹಲವಾರು ಸಾರಿ ಪ್ರಯತ್ನಿಸಿದ್ದರು. ಅವರಿಗೆ ಅದನ್ನು ಮಣಿಸಿ ಗೆಲ್ಲುವುದಾಗಿರಲಿಲ್ಲ. ಹಾಗಾಗಿ ಪ್ರತಿ ಬಾರಿ ಅವರು ಅಲ್ಲಾಹನ ಇಚ್ಛೆಯಂತೆ ನಿರಾಶರಾಗಿ ಹಿಂತಿರುಗುತ್ತಿದ್ದರು. ಈ ಬಾರಿ ಅವರ ಆಕಾಂಕ್ಷೆ ಮತ್ತು ಅಲ್ಲಾಹನ ಅಪ್ಪಣೆ ಎರಡೂ ಕೂಡಿದವು. ಆದ್ದರಿಂದ ಅವರಿಗೆ ಅದು ಸುಲಭದ ಕೆಲಸವಾಯಿತು. ಅಲ್ಲಾಹನು ಯಾವಾಗಲೂ ಅವನ ಸ್ಥಾನ ಎತ್ತರದಲ್ಲಿರಲಿ ಸುಲ್ತಾನ ಬಹಾದೂರನು ಶಾಹ ಅವರ ಕೈಯಿಂದಲೇ ಮೃತನಾಗಬೇಕೆಂದು ವಿಧಿಸಿದನು. ಅವರು ಅವನನ್ನು ಕೊಂದು ಸಮುದ್ರದಲ್ಲಿ ಎಸೆದರು. ನಿಜಕ್ಕೂ ನಾವೆಲ್ಲ ಅಲ್ಲಾಹನಿಂದಲೇ ಬಂದಿದ್ದೇವೆ, ಅಲ್ಲಿಗೇ ಮರಳುತ್ತೇವೆ! ಇದೆಲ್ಲ ಸಂಭವಿಸಿದದು ೯೪೩ ಎ.ಎಚ್. (೧೫೩೭ ಎ.ಡಿ.)ರ ರಮಜಾನದ ೩ನೆಯ ದಿನ. ಸುಲ್ತಾನನು ಹುತಾತ್ಮ ಆದ ಮೇಲೆ ಸಮಸ್ತ ದೀವ ನಡುಗಡ್ಡೆ ಪೋರ್ಚುಗೀಜರ ಆಧಿಪತ್ಯಕ್ಕೆ ಬಂದು ಅವರು ಅಲ್ಲಿ ನೆಲೆಸಿದರು. ಸರ್ವಜ್ಞನೂ, ಸರ್ವಶಕ್ತನೂ ಆಗಿರುವ ಅಲ್ಲಾಹನ ತೀರ್ಪು ಅದಾಗಿತ್ತು. ಯಾರೂ ಅಲ್ಲಾಹನ ನಿರ್ಣಯವನ್ನು ಪ್ರತಿಭಟಿಸಲಾರರು ಯಾರೂ ಅವನ ಇಚ್ಛೆಯನ್ನು ವಿರೋಧಿಸಲಾರರು.

ಹಿಜರಿ ಶಕೆ ೯೪೪ (ಕ್ರಿ.ಶ.೧೫೩೭)ರಲ್ಲಿ ಪೋರ್ಚುಗೀಜರು ಪರವಣ್ಣದ ಮೇಲೆ ದಾಳಿ ಮಾಡಿ ಉಮರ ಅಲಿ ಇಬ್ರಾಹಿಮ್ ಮರಕ್ಕರನ ಮಗ ಕುಟ್ಟಿ ಇಬ್ರಾಹಿಮ್ ಮರಕ್ಕರನನ್ನು ಮತ್ತು ಅವನೊಡನೆ ಅವನ ಸ್ನೇಹಿತರನ್ನು ಕೊಂದರು. ಹಾಗೆಯೇ ಅವರು ಆ ಪಟ್ಟಣವನ್ನು ಸುಟ್ಟು ವಾಪಸಾದರು. ತನೂರ ರಾಜನೊಡನೆ ಮಾಡಿಕೊಂಡಿದ್ದ ಒಪ್ಪಂದ ಇನ್ನೂ ಜಾರಿಯಲ್ಲಿರುವಾಗಲೇ ಮತ್ತು ತನೂರ ಹಾಗೂ ಪರವಣ್ಣ ಪಟ್ಟಣಗಳ ಜನರು ಪೋರ್ಚುಗೀಜರ ಪರವಾನಗಿ ಪಡೆದುಕೊಂಡು ವ್ಯಾಪಾರೀ ಪ್ರಯಾಣಗಳನ್ನು ಮಾಡುತ್ತಿದ್ದಾಗಲೇ ಇದೆಲ್ಲ ಘಟಿಸಿತು. ಹೀಗಾಗಲು ಕಾರಣವೆಂದರೆ ಕುಟ್ಟಿ ಇಬ್ರಾಹಿಮನು ಮೆಣಸು ಮತ್ತು ಶುಂಠಿ ಹೇರಿದ್ದ ಹಡಗೊಂದನ್ನು ಪೋರ್ಚುಗೀಜರ ಪರವಾನಗಿ ಇಲ್ಲದೆ ಜಿಡ್ಡಾ ಬಂದರಕ್ಕೆ ಕಳಿಸಿದ್ದನು. ಒಂದು ಮಾತೆಂದರೆ, ಉಳಿದವರು ಮೆಣಸು ಮತ್ತು ಶುಂಠಿ ಈ ಪದಾರ್ಥಗಳನ್ನು ಹಡಗುಗಳ ಮೂಲಕ ಬೇರೆ ಸ್ಥಳಗಳಿಗೆ ಅದರಲ್ಲೂ ಜಿಡ್ಡಾಕ್ಕೆ ಕಳಿಸುತ್ತಿದ್ದರೆ ಪೋರ್ಚುಗೀಜರು ಆ ಸಂಗತಿಯನ್ನು ಅತ್ಯಂತ ದ್ವೇಷದಿಂದ ನೋಡುತ್ತಿದ್ದರು.

ಆ ಮೇಲೆ ಝುಮೊರಿನ್ನನು ಪೋರ್ಚುಗೀಜರೊಡನೆ, ನಂತರ ಕೋಚಿಯ ರಾಜನೊಡನೆ ಹೋರಾಡಲು ಕೊಡುಂಗಲ್ಲೂರಕ್ಕೆ ಸಾಗಿದನು. ಆ ಯುದ್ಧವು ಬಹಳ ದಿನಗಳವರೆಗೆ ನಡೆಯಿತು. ಅಲ್ಲಾಹನು ಅವನ ಮನಸ್ಸಿನಲ್ಲಿ ಪೋರ್ಚುಗೀಜರ ಬಗೆಗೆ ಭೀತಿಯನ್ನು ಹುಟ್ಟಿಸಿದನು; ತತ್ಪರಿಣಾಮವಾಗಿ ಅವನು ಏನನ್ನು ಸಾಧಿಸದೆ ಮರಳಿದನು. ಕೊಡುಂಗಲ್ಲೂರಲ್ಲಿ ಪೋರ್ಚುಗೀಜರು ಕೋಟೆಯೊಂದನ್ನು ಕಟ್ಟಿಸಿದರು. ಝುಮೊರಿನ್ನನಿಗೆ ಆ ಕೋಟೆಯು ಅವರೊಡನೆ ಸೆಣಿಸಾಡುವಲ್ಲಿ ಬಲಿಷ್ಠವಾದ ತಡೆಯೊಡ್ಡಿತು.

ಈ ಘಟನೆಯಾದ ಬಳಿಕ ಅಲಿ ಇಬ್ರಾಹಿಮ ಮರಕ್ಕರ, ಫಕೀರ ಅಹ್ಮದ ಮರಕ್ಕರ ಮತ್ತು ಸೋದರ ಕುನ್ಹಿ ಮರಕ್ಕರ (ಅಲ್ಲಾಹನ ಆಶೀರ್ವಾದಗಳು ಅವರ ಮೇಲಿರಲಿ) ನಲವತ್ತು ನೌಕೆಗಳ ತಂಡನ್ನು ತೆಗೆದುಕೊಂಡು ಕಯಾಲ ಪಟ್ಟಣಮ್‌ಕ್ಕೆ ನಡೆದರು. ಅವರು ಪಟ್ಟಲಂ ಮುಟ್ಟಿದರು; ಹಡಗುಗಳನ್ನೇರಿ ಅಲ್ಲಿಯೇ ಏನೂ ಮಾಡದೇ ನಿರರ್ಥಕವಾಗಿ ಎಷ್ಟೋ ದಿನಗಳವರೆಗೆ ತಂಗಿದರು. ಅಲ್ಲಿಗೆ ಪೋರ್ಚುಗೀಜರು ಕೆಲವೇ ಹಡಗಗಳಲ್ಲಿ ಬಂದು ಹೋರಾಡಿದರು; ಅಲ್ಲಾಹನು ನಿರ್ಣಯಿಸಿದಂತೆ, ಅವರ ಎಲ್ಲ ಹಡಗಗಳನ್ನು ಕೈವಶ ಮಾಡಿಕೊಂಡರು. ಹೋರಾಟದಲ್ಲಿ ಮರಕ್ಕರನ ತಂಡದಲ್ಲಿ ಅನೇಕರು ಹುತಾತ್ಮರಾದರು. ಇದು ಸಂಭವಿಸಿದ್ದು ಹಿಜರಿ ಶಕೆ–೯೪೪ರ ಶಾಹಬನ್ ತಿಂಗಳಲ್ಲಿ (ಕ್ರಿ.ಶ.೧೫೩೮) ಅವರಲ್ಲಿ ಬದುಕಿ ಉಳಿದವರು ಮಲಬಾರಕ್ಕೆ ಮರಳಿದರು. ದಾರಿಯಲ್ಲಿ ನಲ್ಲಂಬಿಲ್ಲಿಯ ಹತ್ತಿರ, ಅಲ್ಲಿ ಇಬ್ರಾಹಿಮ್ ಮರಕ್ಕರ ತೀರಿಕೊಂಡನು. ಅಲ್ಲಾಹನು ತನ್ನ ಉದಾರ ದಯೆಯನ್ನು ಆಶೀರ್ವಾದಗಳನ್ನು ಅವನ ಮೇಲೆ ಸುರಿಸಲಿ !

ಅದೇ ವರ್ಷ ಪೋರ್ಚುಗೀಜರು ಕಕ್ಕಡದ ಜನರಿಗೆ ಸಂಬಂಧಿಸಿದ ಹಡಗುಗಳನ್ನು ಕನ್ನೂರ ಹತ್ತಿರ ಕೈವಶ ಮಾಡಿಕೊಂಡರು. ಅಲ್ಲಾಹನು ಆ ರಾಕ್ಷಸೀಯ ಅತಿಕ್ರಮಣಕಾರರನ್ನು ನಾಶಮಾಡಲಿ !

■

*

ಅಧ್ಯಾಯ-೮

ದೀವ ಮತ್ತು ನೆರೆಹೊರೆಯ ಸ್ಥಳಗಳಿಗೆ ಸುಲಿಯಮಾನ ಬಾಶಾನ ಭೇಟಿ

ಇದೇ ವರ್ಷ ಅಂದರೆ ೧೫೩೮ರಲ್ಲಿ ತುರ್ಕಸ್ತಾನದ ಸುಲ್ತಾನ ಸುಲಯಮಾನ ಶಾಹನ ವಝೀರನಾಗಿದ್ದ ಸುಲಯಮಾನ ಬಾಶಾನು (ಈತನ ವಿಷಯ ಕುರಿತು ಈ ಮೊದಲೇ ಪ್ರಸ್ತಾಪಿಸಲಾಗಿದೆ) ನೂರು ಯುದ್ಧ ಹಡಗಗಳು, ಹಲವಾರು ಸರಕು ಸಾಮಗ್ರಿ ಹೇರಿಕೊಂಡ ನೌಕೆಗಳು, ಇನ್ನಿತರ ಯುದ್ಧ ಪರಿಕರಗಳೊಂದಿಗೆ ಸನ್ನದ್ಧನಾಗಿ ಏಡನ್ ಬಂದರಕ್ಕೆ ಬಂದಿಳಿದನು. ಆ ಊರಿನ ಸುಲ್ತಾನ ಶೇಖ ಅಮೀರ ಬಿನ್ ದಾವೂದ ಮತ್ತು ಆತನ ಕೆಲವು ಪ್ರಮುಖ ವ್ಯಕ್ತಿಗಳನ್ನು ಕೊಂದು ಆ ಬಂದರವನ್ನು ಕೈವಶಮಾಡಿಕೊಂಡನು. ಆ ಮೇಲೆ ಆತನು ಗುಜರಾತದ ಮೇಲೆ ಏರಿ ಹೋಗಿ ದೀವದ ಮೇಲೆ ದಾಳಿ ಮಾಡಿದನು. ತನ್ನೊಡನೆ ತಂದಿದ್ದ ಬೃಹತ್ ಗ್ರಾತ್ರದ ತೋಪುಗಳಿಂದ ಕೋಟೆಯ ಗೋಡೆಯ ಬಹು ಭಾಗವನ್ನು ಧ್ವಂಸಗೊಳಿಸಿದನು. ಈ ಸಂಗ್ರಾಮ ನಡೆದಾಗ ಸುಲಯಮಾನ ಬಾಶಾನ ಮನಸ್ಸಿನಲ್ಲಿ ಅಲ್ಲಾಹನು ಪೋರ್ಚುಗೀಜರ ವಿಷಯಕ್ಕೆ ಭೀತಿಯನ್ನು ಬಿತ್ತಿದನು. ಅವನು ಈಜಿಪ್ತಕ್ಕೆ ಮರಳಿ ಹೋದನು; ಅಲ್ಲಿಂದ ಅವನು ರೋಮಕ್ಕೆ ಹೋದನು. ಪೋರ್ಚುಗೀಜರು ದೀವಕ್ಕೆ ಬಂದು ಕೋಟೆಗಳನ್ನು ದುರಸ್ತಿ ಮಾಡಿ, ಪುನಃ ಕಟ್ಟಿ ಮತ್ತಷ್ಟು ಭದ್ರಗೊಳಿಸಿದರು.

ಅಲಿ ಇಬ್ರಾಹಿಮ ಮರಕ್ಕರನ ಮೃತ್ಯವಾದ ಮರುವರ್ಷ, ಫಕಿರ್ ಅಹಮದ ಮರಕ್ಕರ ಮತ್ತು ಅವನ ಸಹೋದರ ಕುಞ್ಞಿ ಮರಕ್ಕರ ಹನ್ನೊಂದು ಹಡಗುಗಳ ತಂಡದೊಡನೆ ಸಿಲೋನ ಕಡೆಗೆ ಹೊರಟರು. ಇದು ತಿಳಿದೊಡನೆ, ಪೋರ್ಚುಗೀಜರು ಅವರನ್ನು ಬೆನ್ನಟ್ಟಿ, ಹೋರಾಡಿ ಅವರ ಹಡಗುಗಳನ್ನು ಕೈವಶ ಮಾಡಿಕೊಂಡರು.

ಅವರಲ್ಲನೇಕರು ಹುತಾತ್ಮರಾದರು ಹಾಗೂ ಬದುಕುಳಿದವರು ಸಿಲೋನದ ರಾಜನನ್ನು ಭೇಟಿಯಾಗಲು ಹೋದರು. ಫಕೀರ್ ಅಹಮ್ಮದ ಮರಕ್ಕರ ಮತ್ತು ಕುನ್ಹಿ ಮರಕ್ಕರ ಅವರಲ್ಲಿದ್ದರು. ಆದರೆ, ಸಿಲೋನದ ಅರಸನು ಅವರನ್ನು ಮೋಸಮಾಡಿ ಕೊಂದನು. ನಿಜವಾಗಿಯೂ ನಾವು ಅಲ್ಲಾಹನಿಂದ ಬಂದಿದ್ದೇವೆ, ಅಲ್ಲಾಹನೆಡೆಗೇ ಮರಳುತ್ತೇವೆ.

■

*

ಅಧ್ಯಾಯ-೯

ಝಮೊರಿನ್-ಪೋರ್ಚುಗೀಜರ ನಾಲ್ಕನೆಯ ಒಪ್ಪಂದ

ಹಿ.ಶ.೯೪೬ರ ಶಾಹಬಾನದಲ್ಲಿ (೧೫೪೦ ಎ.ಡಿ.) ಪೋರ್ಚುಗೀಜರು ಶಾಂತಿಯನ್ನು ಬಯಸುತ್ತ ಝಮೊರಿನ್ನನ ಹತ್ತಿರ ಬಂದರು. ಆಗ ಝಮೊರಿನ್ ಪೊನ್ನಾನಿನಲ್ಲಿದ್ದನು. ತನೂರ ಮತ್ತು ಕೊಡುಂಗಲ್ಲೂರದ ರಾಜನ ಸಮ್ಮುಖದಲ್ಲಿ ಶಾಂತಿಯೊಪ್ಪಂದ ಏರ್ಪಟ್ಟಿತು. ಒಡಂಬಡಿಕೆಗನುಸಾರವಾಗಿ ಝಮೊರಿನ್ನ ಪ್ರಜೆಗಳು ಪೋರ್ಚುಗೀಜರಿಂದ ಪರವಾನಗಿ ಪತ್ರ ತೆಗೆದುಕೊಂಡು ವ್ಯಾಪಾರೀ ಕಡಲ ಪ್ರಯಾಣ ಶುರು ಮಾಡಿದರು.

ನಂತರ ಹಿ.ಶ.೯೫೨ (೧೫೪೫ ಎ.ಡಿ.)ರ ಮೊಹರಮ್ಮದಲ್ಲಿ ಕನ್ನೂರದ ಅಬು ಬಕರ್ ಅಲಿ ಎಂಬ ಪ್ರಮುಖ ಧುರೀಣನನ್ನು ಪೋರ್ಚುಗೀಜರು ಕೊಲೆಗೈದರು. ಕುನ್ಹಿ ಸೂಪ್ಪಿ ಎಂಬ ಹೆಸರಿನ ಅವನ ಭಾವನ ಕೊಲೆಯೂ ಆಯಿತು. ಅಬೂಬಕರ ಅಲಿಯು ಅರಕ್ಕಲ್ಲದ ಅಲಿ ಅಧಿರಾಜಾ ಮತ್ತು ಅವನ ತಂದೆ ಕುನ್ಹಿ ಸೂಪ್ಪಿ ಇವರ ಸೋದರಮಾವನಾಗಿದ್ದನು. ಅವರ ಮೇಲೆ ಅಲ್ಲಾಹನ ಆಶೀರ್ವಾದ ಸುರಿಯಲಿ. ಈ ಘಟನೆಯಿಂದಾಗಿ ಪೋರ್ಚುಗೀಜರು ಮತ್ತು ಕನ್ನೂರದ ಜನರ ಮಧ್ಯ ಬಹು ಕಾಲದವರೆಗೆ ವೈರತ್ವವಿದ್ದಿತು. ಕಾಲಾನುಗತಿಯಲ್ಲಿ ಶಾಂತಿ ಸ್ಥಾಪಿತವಾಯಿತು.

■

*

ಅಧ್ಯಾಯ-೧೦

ಝುಮೊರಿನ್-ಪೋರ್ಚುಗೀಜರ ಮಧ್ಯ ವೈರತ್ವ

ಕೋಚಿಯನ್ನು ಆಳುತ್ತಿದ್ದ ಅರಸನೊಬ್ಬನ ರಾಜ್ಯ ಪ್ರದೇಶಕ್ಕೆ ದಕ್ಷಿಣದಲ್ಲಿ ಹೊಂದಿಕೊಂಡಿರುವ ರಾಜ್ಯ ಝುಮೊರಿನ್ನದಾಗಿತ್ತು. ಆ ಮಲಬಾರ ರಾಜನ ಪ್ರಮುಖ ಮಿತ್ರನಾಗಿದ್ದ ಝುಮೊರಿನ್ನನು ಹಿ.ಶ.೯೫೭ರ (ಕ್ರಿ.ಶ.೧೫೫೦) ಮೊಹರಮ್ಮದ ಮೊದಲು ದಿನ ಅವನೊಡನೆ ಒಪ್ಪಂದ ಮಾಡಿಕೊಂಡನು. ದೊಡ್ಡ ಪ್ರಮಾಣದಲ್ಲಿ ಈ ರಾಜನ ಪಟ್ಟಣಗಳಿಂದ ಮೆಣಸು ರಫ್ತಾಗುತ್ತಿದ್ದದ್ದರಿಂದ ಪೋರ್ಚುಗೀಜರು ಇವನಿಗೆ 'ಮೆಣಸಿನ ರಾಜ' ಎಂದು ಕರೆಯುತ್ತಿದ್ದರು. ಈ ರಾಜನು ಝುಮೊರಿನ್ನನ ಮಿತ್ರರಲ್ಲಿ ಒಬ್ಬನಾದನು ಮತ್ತು ತನ್ನ ರಾಜ್ಯವನ್ನು ಅವನಿಗೆ ಕೊಟ್ಟನು.

ಇದಕ್ಕೆ ಪ್ರತಿಯಾಗಿ, ಝುಮೊರಿನ್ನನು ಅವನ ತಮ್ಮನನ್ನು ನಾಲ್ಕನೆಯ ತಲೆಮಾರಿನಲ್ಲಿ ಝುಮೊರಿನ್ನನ್ನನಾಗಿ ಮಾಡುವುದಾಗಿ ಒಪ್ಪಿಕೊಂಡನು. ಅದೇ ಪ್ರಕಾರ ಆ ಅರಸನ ಸಹೋದರನನ್ನು ರಾಜ ಗದ್ದುಗೆಗೆ ಏರುವವರಲ್ಲಿ ನಾಲ್ಕನೆಯವನನ್ನಾಗಿ ಮಾಡಿ ಮಲಬಾರದಲ್ಲಿ ತಲತಲಾಂತರದಿಂದ ಬಂದಿದ್ದ ಪದ್ಧತಿಯನ್ನು ಪಾಲಿಸಿದನು.

'ಮೆಣಸಿನ ರಾಜನು' ತನ್ನೂರಿಗೆ ಬಂದೊಡನೆ ಕೋಚಿಯ ರಾಜನು ಮತ್ತು ಪೋರ್ಚುಗೀಜರು ಅಲ್ಲಿಗೆ ಬಂದು ಯುದ್ಧ ಹೂಡಿದರು. ಆ ಸಂಗ್ರಾಮದಲ್ಲಿ ಪೆಪರ ಕಿಂಗನನ್ನು 'ಮೆಣಸಿನ ರಾಜ'ನನ್ನು ಸುಟ್ಟು ಸಾಯಿಸಲಾಯಿತು. ಈ ಘಟನೆ ಹಿ.ಶ.೯೫೭ (೧೫೫೦)ರ ಜಮಾದಿ ಅಲ್-ಅವ್ವಲದ ದಿನ ಸಂಭವಿಸಿತು.

'ಮೆಣಸಿನ ರಾಜನ' ಮರಣದ ವಾರ್ತೆ ಬಂದೊಡನೆಯೇ ಝುಮೊರಿನ್ನನು ಕಾಲಿಕತ್ತದಿಂದ ಹೊರಟು ಪೋರ್ಚುಗೀಜರು ಮತ್ತು ಅವರ ಮಿತ್ರ ರಾಜರೊಡನೆ ಯುದ್ಧ ಮಾಡಲು ಸಾಗಿದನು. ಅಲ್ಲಿ ಹೋಗಿ ಪೋರ್ಚುಗೀಜರು ಹಾಗೂ ಕೋಚಿ

ರಾಜನೊಡನೆ ಹೋರಾಟ ಆರಂಭಿಸಿದನು. ಇದಕ್ಕಾಗಿ ಬಹಳ ದೊಡ್ಡ ಪ್ರಮಾಣದಲ್ಲಿ ತನ್ನ ಸಂಪತ್ತನ್ನು ಸವೆಸಿದನು. ಆದರೆ, ತನಗಾಗಿ ಅಥವಾ ತನ್ನ ಮಿತ್ರನಿಗಾಗಿ ಏನನ್ನೂ ಪಡೆದುಕೊಳ್ಳದೆ ಮರಳಿ ಕಾಲಿಕತ್ತಕ್ಕೆ ಬಂದನು.

ಅದೇ ವರ್ಷ ಜಮಾದಿ ಅಲ್-ಆಖಿರದ ೮ನೆಯ ದಿನ ಮೆಣಸಿನ ರಾಜ ದೊಡ್ಡ ಸೈನ್ಯವು ಹೊಳೆ ದಾಟಿ ಹೋಗಿ ಕೋಚಿಯನ್ನು ಪ್ರವೇಶಿಸಿದರು. ದಾರಿಯಲ್ಲಿ ಅವರು ಕಂಡ ಮನೆಗಳನ್ನು ಸುಟ್ಟುಹಾಕಿದರು. ಕೋಚಿಗೆ ಅವರಿಂದಾದ ನಷ್ಟ ದೊಡ್ಡ ಪ್ರಮಾಣದ್ದು. ಕೋಚಿ ರಾಜ ಮತ್ತು ಪೋರ್ಚುಗೀಜರೊಡನೆ ಸಂಭವಿಸಿ ಯುದ್ಧದಲ್ಲಿ ಅವರ ರಾಜನು ಮಡಿದದ್ದರಿಂದ ಅವನ ಸೈನಿಕರು ಆ ರೀತಿ ಹಾನಿಗೈದರು. ಅಲ್ಲಾಹನು ಅವರಿಗೆ ಕಠಿಣ ಶಿಕ್ಷೆ ಕೊಡಲಿ. ಝಮೊರಿನ್ನ ಮತ್ತು ಪೋರ್ಚುಗೀಜರ ಮಧ್ಯದ ಘರ್ಷಣೆಗೆ ಇದೇ ಕಾರಣವಾಯಿತು. ಬಹಳ ದೊಡ್ಡ ಯುದ್ಧ ಸಿದ್ಧತೆಯಿಂದ ಪೋರ್ಚುಗೀಜರು ಗೋವೆಯಿಂದ ಹೊರಟು ತಿಕ್ಕೋಡಿಗೆ ಬಂದರು. ಅವರು ಅಲ್ಲಿ ಮನೆಗಳನ್ನು, ವ್ಯಾಪಾರೀ ಕೇಂದ್ರಗಳನ್ನು ದೊಡ್ಡ ಜುಮ್ಮಾ ಮಸೀದಿಯನ್ನು ಸುಟ್ಟುಹಾಕಿದರು. ಇದು ಹಿ.ಶ.೯೫೭ (೧೫೫೦) ೧ಳ ಶಾವ್ವಾಲದ ಶನಿವಾರದಂದು ಘಟಿಸಿತು. ಈ ಘಟನೆಯ ಮರುದಿನ ಪಂತಲಯಾನಿಗೆ ಬಂದರು. ಅಲ್ಲಿಯ ಮನೆಗಳನ್ನು ಅಂಗಡಿಗಳನ್ನು ಸುಟ್ಟರು. ಅದಲ್ಲದೆ ಇಸ್ಲಾಂ ಧರ್ಮದ ಪ್ರಸಾರದ ಆರಂಭದಲ್ಲಿ ಕಟ್ಟಿದ್ದ ಬಹು ದೊಡ್ಡ ಜುಮಾ ಮಸೀದಿಯನ್ನು ಸುಟ್ಟು ಧ್ವಂಸ ಮಾಡಿದರು. ಅದಾದ ಮೇಲೆ ಬಂದ ಗುರುವಾರದಂದು ಅವರು ಬೆಳಗಿನಲ್ಲಿಯೇ ಪೊನ್ನಾನಿಗೆ ಬಂದು ಅನೇಕ ಮನೆಗಳನ್ನು, ದಾಸ್ತಾನು ಮಳಿಗೆಗಳನ್ನು ಮತ್ತು ದೊಡ್ಡ ಜುಮ್ಮಾ ಮಸೀದಿಯನ್ನೊಳಗೊಂಡು ನಾಲ್ಕು ಮಸೀದಿಗಳನ್ನು ಸುಟ್ಟು ಹಾಕಿದರು. ಈ ಎಲ್ಲ ಮೂರು ಊರುಗಳಲ್ಲಿ ಬಹು ದೊಡ್ಡ ಸಂಖ್ಯೆಯಲ್ಲಿ ಮುಸಲ್ಮಾನರು ಹುತಾತ್ಮರಾದರು.

ಹಿ.ಶ. ೯೬೦ (ಕ್ರಿ.ಶ.೧೫೫೩) ಜಮಾದಿ ಅಲ್-ಆಖಿರದ ಕೊನೆಯ ಸುಮಾರಿಗೆ, ಕೀಲಕ್ಕರಾದ ಹತ್ತಿರ ಪೋರ್ಚುಗೀಜರೊಡನೆ ಹೋರಾಡುವಾಗ ಮುಸಲ್ಮಾನರ ಯುದ್ಧವೀರರಲ್ಲಿ ಒಬ್ಬನಾಗಿದ್ದ ಅಲಿ ಅಲ್-ರೂಮೀ ಹುತಾತ್ಮನಾದನೆಂದೂ ಮತ್ತು ಅವನ ಎಲ್ಲ ಹಡಗುಗಳನ್ನು ಹಿಡಿಯಲಾಗಿದೆ ಎಂಬ ಸುದ್ದಿಯು ಮಲಬಾರದಲ್ಲಿ ಹಬ್ಬಿತು. ಆದ ಮತ್ತು ಥಮುದರನ್ನು ನಿರ್ನಾಮ ಮಾಡಿದಂತೆ ಪೋರ್ಚುಗೀಜರನ್ನು ಅಲ್ಲಾಹ ನಿರ್ಮೂಲ ಮಾಡಲಿ ನಿಜಕ್ಕೂ ನಾವಿರುವುದು ಅಲ್ಲಾಹನಿಗಾಗಿ ಮತ್ತು ಅಲ್ಲಾಹನಲ್ಲಿಗೆ ಮರಳುತ್ತೇವೆ. ಶರ್ವಶಕ್ತನೂ ಸರ್ವಜ್ಞನೂ ಆಗಿರುವ ಅಲ್ಲಾಹನ ನಿರ್ಣಯ ಇದಾಗಿದೆ. ಈ ಘಟನೆಗೆ ಸ್ವಲ್ಪ ಸಮಯ ಮೊದಲು ಕಯಲ ಪಟ್ಟಣಂ ಹತ್ತಿರ ಇರುವ ಪೊನ್ನಕ್ಕಯಾಲದಲ್ಲಿ ಪೋರ್ಚುಗೀಜರು ವಾಸವಾಗತೊಡಗಿದ್ದರು;

ಅಲೀ ಅಲ್-ರೂಮಿ ಪೋರ್ಚುಗೀಜರ ಕೆಲವು ಹಡಗುಗಳನ್ನು ಕೈವಶ ಮಾಡಿಕೊಂಡಿದ್ದನು. ಅಲ್ಲಿ ಮುತ್ತಿಗೆ ಹಾಕಿ ರೂಮೀ ಪೋರ್ಚುಗೀಜರನ್ನು ಸೋಲಿಸಿ ಆ ಸ್ಥಳವನ್ನು ಧೂಳಿಪಟಮಾಡಿದನು.

ಹಿ.ಶ.೯೬೦ರ ರಾಜಬದಲ್ಲಿ (ಕ್ರಿ.ಶ.೧೫೫೩) ಯುಸೂಫ್ ಎಂಬ ಹೆಸರಿನ ತುರ್ಕನು ವ್ಯಾಪಾರೀ ಕಾಲ ಅದಾಗಿರದಿದ್ದರೂ ಮಾಲ್ದೀವದಿಂದ ಪೊನ್ನಾನಿಗೆ ಬಂದನು. ಆ ದ್ವೀಪದಲ್ಲಿ ವಾಸವಾಗಿದ್ದ ಪೋರ್ಚುಗೀಜರಿಂದ ದೊಡ್ಡ ಪ್ರಮಾಣದ ಅನೇಕ ತೋಪುಗಳನ್ನು ಕೈವಶ ಮಾಡಿಕೊಂಡು ಬಂದಿದ್ದನು.

■

*

ಅಧ್ಯಾಯ- ೧೧

ಐದನೆಯ ಝಮೊರಿನ್ನ-ಪೋರ್ಚುಗೀಜರ ಮಧ್ಯದ ಒಪ್ಪಂದ

ಈ ರೀತಿಯಾಗಿ ಪೋರ್ಚುಗೀಜರು ತಮ್ಮ ಚಟುವಟಿಕೆಗಳನ್ನು ಮುಂದುವರಿಸಲು ಮುಸಲ್ಮಾನರ ದೌರ್ಬಲ್ಯ ಮತ್ತು ಬಡತನ ಹೆಚ್ಚಾಯಿತು. ಆದ್ದರಿಂದ ಝಮೊರಿನ್ನನು ಪೋರ್ಚುಗೀಜರೊಡನೆ ಒಪ್ಪಂದ ಮಾಡಿಕೊಂಡನು. ಆಗ ಝಮೊರಿನ್ನನ ಪ್ರಜೆಗಳು ಉಳಿದವರಂತೆ ಪೋರ್ಚುಗೀಜರಿಂದ ಪರವಾನಗಿ ಪಡೆದುಕೊಂಡು ವ್ಯಾಪಾರೀ ಹಡಗುಗಳನ್ನು ಒಯ್ಯತೊಡಗಿದರು. ಈ ಒಪ್ಪಂದವು ೯೬೩ (ಹಿ.ಶ.) ೧೫೫೫ (ಕ್ರಿ.ಶ) ಯ ಮುಹರಮ್ಮದ ಆರಂಭದಲ್ಲಿ ಏರ್ಪಟ್ಟಿತು.

ಈ ಒಪ್ಪಂದವಾದ ಎರಡು ಮೂರು ವರ್ಷಗಳಲ್ಲಿ ಕನ್ನೂರ, ದರ್ಮದಂ ಮತ್ತು ಇನ್ನುಳಿದ ನೆರೆಹೊರೆಯಲ್ಲಿದ್ದ ಮುಸಲ್ಮಾನರಿಗೂ ಮತ್ತು ಪೋರ್ಚುಗೀಜರಿಗೂ ಕಲಹಗಳು ಗಂಭೀರ ಸ್ವರೂಪದಲ್ಲಿಯೇ ಸಾಗಿದವು. ಇವು ಸಾಧಾರಣ ಎರಡು ವರ್ಷಗಳವರೆಗೂ ಮುಂದೆವರೆದವು. ಆ ಬಳಿಕ ಶಾಂತಿ ಸ್ಥಾಪಿತವಾಯಿತು. ಈ ಪ್ರದೇಶಗಳ ಜನರು ಮೊದಲಿನಂತೆ ಪೋರ್ಚುಗೀಜರ ಪರವಾನಗಿ ಪಡೆದು ತಮ್ಮ ವ್ಯಾಪಾರೀ ಕಡಲ ಪ್ರವಾಸಗಳನ್ನು ಪುನರಾರಂಭಿಸಿದರು.

ಪೋರ್ಚುಗೀಜರೊಡನೆ ನಡೆದ ಹೋರಾಟದಲ್ಲಿ ಬಹು ದೊಡ್ಡ ಧುರೀಣನೂ, ಶಕ್ತಿವಂತನೂ, ಉತ್ಸಾಹಿಯೂ ಆಗಿದ್ದ ಅಲಿ ಅಧ್ರಾಜನು ದೊಡ್ಡ ಪ್ರಮಾಣದಲ್ಲಿ ಹಣ ಖರ್ಚುಮಾಡಿದನು. ಆದರೆ ಕೊಲಾತ್ತಿರಿ ಅರಸನು ಮತ್ತು ಬೇರೆ ಬೇರೆ ಪಟ್ಟಣಗಳಲ್ಲಿದ್ದ ಅವನ ಪ್ರಜೆಗಳು ಅಧ್ರಾಜನಿಗೆ ಸಹಾಯ ಮಾಡಲಿಲ್ಲ. ನೀಚ ಪೋರ್ಚುಗೀಜರು ಸಿಟ್ಟಿನಿಂದ ಅವನ ಮಲಬಾರ ದ್ವೀಪಗಳನ್ನು ಹಾಳುಗೆಡಹಿ ಲೂಟಿ ಮಾಡಲು ಶುರು ಮಾಡಿದ್ದು ಈ ಅವಧಿಯಲ್ಲಿಯೇ ಅವರು ಸಣ್ಣಗಾತ್ರದ ಬಹು ದ್ರುತಗತಿಯ ಹಡಗುಗಳಲ್ಲಿ

ಚಲಿಸುತ್ತ ಹೋಗಿ ಅಮಿನಿ ದ್ವೀಪದ ಮೇಲೆ ದಾಳಿಯಿಟ್ಟು ದೊಡ್ಡ ಸಂಖ್ಯೆಯಲ್ಲಿ ಅಲ್ಲಿಯ ನಿವಾಸಿಗಳನ್ನು ಕೊಂದು, ನಾಲ್ಕುನೂರಕ್ಕಿಂತ ಹೆಚ್ಚು ಸ್ತ್ರೀ ಪುರುಷರನ್ನು ಸೂರೆಗೈದು ಅನೇಕ ಮನೆಗಳನ್ನು ಮತ್ತು ಮಸೀದಿಗಳನ್ನು ಸುಟ್ಟು ಹಾಕಿದರು. ಅಮಿನಿಯ ಮೇಲೆ ಮುತ್ತಿಗೆ ಹಾಕುವದಕಿಂತ ಮೊದಲು ಅವರು ಶಯತಲ್ಕಂ(ಶೆಟ್ಲಾತ)ಗೆ ಹೋಗಿ ಅಲ್ಲಿ ಕೆಲವರನ್ನು ಕೈವಶಮಾಡಿಕೊಂಡರು. ಕೆಲವರನ್ನು ಕೊಂದರು.

ಈ ಎಲ್ಲ ನಡುಗಡ್ಡೆಗಳಲ್ಲಿದ್ದ ನಿವಾಸಿಗಳಿಗೆ ಆಯುಧಗಳು ಗೊತ್ತಿರಲಿಲ್ಲ. ಅವರಲ್ಲಿ ಯಾರಿಗೂ ಯುದ್ಧ ಮಾಡಲು ಬರುತ್ತಿರಲಿಲ್ಲ. ಹೀಗಿದ್ದರೂ ಇವರಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ ಜನರು ಶತ್ರುವಿನೊಡನೆ ಹೋರಾಡಿದರು, ಹುತಾತ್ಮರಾದರು. ಆ ಜನರಲ್ಲಿ ಖಾಜೀ(ಧರ್ಮ ನೇತಾರ ಮತ್ತು ನ್ಯಾಯಾದೀಶ) ಮತ್ತು ಧರ್ಮಶ್ರದ್ಧೆಯ ಪವಿತ್ರ ಮಹಿಳೆ ಇವರು ಗಮನಾರ್ಹರಾಗಿದ್ದರು. ಖಾಜೀ ಸದ್ಗುಣೆಯಾದ ಶ್ರದ್ಧಾಭಕ್ತಿಯ ವ್ಯಕ್ತಿಯಾಗಿದ್ದನು. ಈ ನಡುಗಡ್ಡೆಯ ನಿವಾಸಿಗಳು ಶಸ್ತ್ರಾಸ್ತ್ರ ಹೊಂದಿರದಿದ್ದರೂ ತಮ್ಮ ಧರ್ಮದಲ್ಲಿಯ ಶ್ರದ್ಧೆಯನ್ನು ಸಾಕ್ಷ್ಯವಿತ್ತು ತೋರಿಸಲು ಮತ್ತು ಅದಕ್ಕಾಗಿ ಪ್ರಾಣ ತ್ಯಜಿಸಲು ಸಿದ್ಧರಿದ್ದರು. ಅವರು ಪೋರ್ಚುಗೀಜರ ಮೇಲೆ ಕಲ್ಲು, ಮಣ್ಣು ಎರಚಿದರು. ತಾವು ಹತರಾಗುವ ವರೆಗೆ ಅವರ ಮೇಲೆ ಕಟ್ಟಿಗೆಗಳಿಂದ ಹೊಡೆತ ಹಾಕಿ ಅವರನ್ನು ಗಾಯಗೊಳಿಸಿದರು. ಅಲ್ಲಾಹನು ಅವರ ಮೇಲೆ ತನ್ನ ಅನಂತ ಕರುಣೆಯನ್ನು ಹೊದಿಸಲಿ.

ಮಲಬಾರ ತಟಾಕದ ದ್ವೀಪಗಳು ದೊಡ್ಡ ಸಂಖ್ಯೆಯಲ್ಲಿವೆ. ಆದರೆ ದೊಡ್ಡ ನಗರಗಳಂತೆ ಇರುವ ದೊಡ್ಡ ದ್ವೀಪಗಳು ಐದು: ಅಮಿನಿ, ಕದೀಬ, ಅಂದುರ, ಕಾಲ್ಫಿನಿ ಮತ್ತು ವಲ್ಕಿ. ಸಣ್ಣ ದ್ವೀಪಗಳಲ್ಲಿ ಜನವಸತಿಯಿಂದ ನಿಬಿಡವಾಗಿರುವಂತಹ ಗಳೆಂದರೆ ಅಕ್ತಿ, ಕಂಜಮಂಜಲಾ, ಕಲ್ತಾನ ಮತ್ತು ಶಾಯತ್ತಲಕಂ.

ಅಲ್ಲಾಹನು ತನ್ನ ಭಕ್ತರನ್ನು ಪರೀಕ್ಷಿಸಲಿಚ್ಛಿಸಿದನು. ಪೋರ್ಚುಗೀಜರಿಗೆ ಕೆಲ ಕಾಲ ಬಿಡುವು ಕೊಟ್ಟನು. ಮಲಬಾರ, ಗುಜರಾತ, ಕೊಂಕಣ ಮತ್ತು ಇತರ ಪ್ರದೇಶಗಳಲ್ಲಿರುವ ದೊಡ್ಡ ಬಂದರಗಳಲ್ಲಿ ಅವರು ತಮ್ಮ ಶಕ್ತಿಯನ್ನು ಹೆಚ್ಚಿಸಿಕೊಳ್ಳಲು ಅಲ್ಲಾಹನು ಸಾಮರ್ಥ್ಯ ನೀಡಿದನು. ಹೆಚ್ಚಾಗಿ ಈ ಪಟ್ಟಣಗಳಲ್ಲೆಲ್ಲ ವ್ಯಾಪಾರೀ ಕಾರ್ಖಾನೆಗಳನ್ನು ಸ್ಥಾಪಿಸಿ ಈ ಪ್ರದೇಶಗಳಲ್ಲಿ ತಮ್ಮ ಸ್ವಾಮಿತ್ವ ಸ್ಥಾಪಿಸಿದರು. ಹರ್ಮಜ್ (ಓರ್ಮಜ್, ಪರ್ಶಿಯನ್ ಕೊಲ್ಲಿ), ಮಸ್ಕತ್, ರೆವಿಮಹಲ್ (ಮಲ್ದೀವ್ಸ್), ಶಮತಾರಾ (ಸುಮಾತ್ರಾ), ಮಲಕ್ಕಾ, ಮೈಲಾಪುರ, ನಖ್ತನ ಮತ್ತು ಉಳಿದ ಶೋಲಮಂಡಲ (ಕೋರಮಂಡಲ)ದ ಬಂದರಗಳು ಮತ್ತು ಸಿಲನ್(ceylon)ದ ಅನೇಕ ರೇವುಗಳಲ್ಲಿ ಪೋರ್ಚುಗೀಜರು ಕೋಟೆಗಳನ್ನು ಕಟ್ಟಿಸಿದರು. ಅವರು ಚೀನಾದಷ್ಟು ದೂರ ತಲುಪಿದ್ದರು. ಅವರ ವ್ಯಾಪಾರವು ಈ ರೇವುಗಳಲ್ಲಿ ಮತ್ತು ಬೇರೆ ಕಡೆಯಲ್ಲಿ

ವೃದ್ಧಿಸತೊಡಗಿತು. ಇದಕ್ಕೆ ತದ್ವಿರುದ್ಧವಾಗಿ, ಈ ಎಲ್ಲ ಸ್ಥಳಗಳಲ್ಲಿ ಮುಸಲ್ಮಾನ ವ್ಯಾಪಾರಿಗಳು ಹಣ್ಣು ಹಣ್ಣಾಗಿ ಪೋರ್ಚುಗೀಜರಿಗೆ ಅವರ ಸೇವಕರಂತೆ ವಿನಮ್ರರಾದರು. ತಮಗೆ ಆಸಕ್ತಿ ಇಲ್ಲದ ವಸ್ತುಗಳನ್ನು ಹೊರತುಪಡಿಸಿ ಉಳಿದೆಲ್ಲ ವಸ್ತುಗಳನ್ನು ಮುಸಲ್ಮಾನರು ಖರೀದಿ ವಿಕ್ರಿ ಮಾಡದಂತೆ ಪೋರ್ಚುಗೀಜರು ನಿರ್ಬಂಧ ಹೇರಿದರು. ಅವರಿಗೆ ಬೇಕಾಗಿದ್ದ ಪದಾರ್ಥಗಳನ್ನು ಮಾರಾಟ ಮಾಡಿ ಪೋರ್ಚುಗೀಜರು ದೊಡ್ಡ ಲಾಭ ಮಾಡಿಕೊಂಡರು. ಇಂಥ ಪದಾರ್ಥಗಳ ಮಾರಾಟದಲ್ಲಿ ಅನನ್ಯಾಧಿಕಾರವನ್ನು ಪಡೆದುಕೊಂಡದ್ದರಿಂದ ಉಳಿದವರಿಗೆ ಅವರ ಹಕ್ಕುಗಳ ಮೇಲೆ ಯಾರ ಅಧಿಕಾರವೂ ಇರಲಿಲ್ಲ. ಮೆಣಸು ಮತ್ತು ಶುಂಠಿಗಳ ಮೇಲೆ ಏಕಸ್ವಾಮ್ಯತ್ವ ಸಾಧಿಸುತ್ತ ಕ್ರಮೇಣ ದೊಡ್ಡ ಲಾಭ ತಂದು ಕೊಡುವ ಮಸಾಲೆ ಸಾಮಾನುಗಳಾದ ದಾಲಚಿನ್ನಿ, ಲವಂಗ ಮೊದಲಾದ ಪದಾರ್ಥಗಳನ್ನು ಜೋಡಿಸಿದರು. ಮುಸಲ್ಮಾನರು ಈ ವಸ್ತುಗಳ ವ್ಯಾಪಾರದಲ್ಲಿ ತೊಡಗಲು ನಿಷೇಧವಿತ್ತು. ಅಲ್ಲದೆ ಅವರು ವ್ಯಾಪಾರೋದ್ದೇಶದಿಂದ ಅರೇಬಿಯನ್ ಕರಾವಳಿ, ಮಲಕ್ಕಾ, ಆಶಿ (ಬಹುಶಃ ಉತ್ತರ ಸಾಮಾತ್ರದ ಆಸಿಹ), ದನಸ್ರಿ ಮತ್ತು ಉಳಿದ ಪಟ್ಟಣಗಳಿಗೆ ಸಮುದ್ರ ಯಾತ್ರೆಗಳನ್ನು ಮಾಡುವಂತಿದ್ದಿಲ್ಲ. ಮಲಬಾರದ ಮುಸಲ್ಮಾನರಿಗೆ ಏನೂ ಉಳಿಯಲಿಲ್ಲ. ಅವರಿಗೆ ಕೇವಲ ಕಿಂಚಿತ್(ಸಣ್ಣ) ವ್ಯಾಪಾರ ವಸ್ತುಗಳಾದ ಅಡಿಕೆ, ತೆಂಗು, ಅರಿವೆ ಇತ್ಯಾದಿಗಳಷ್ಟೇ ಉಳಿದವು. ಅವರ ಸಮುದ್ರ ಪ್ರವಾಸವಾದರೂ ಗುಜರಾತ, ಕೊಂಕಣ, ಶೋಲಮಂಡಲ ಮತ್ತು ಕ್ವೇಲದ ಸುತ್ತಮುತ್ತ ಸೀಮಿತವಾಯಿತು.

ಪೋರ್ಚುಗೀಜರು ಹೊನ್ನಾವರಮ್, ಬಸರೂರ ಮತ್ತು ಮಂಗಳೂರಗಳಲ್ಲಿ ಕೋಟೆಗಳನ್ನು ಕಟ್ಟಿಸಿದರು. ಅವರ ಉದ್ದೇಶವೆಂದರೆ ಈ ಸ್ಥಳಗಳಿಂದ ಮುಸಲ್ಮಾನರು ಗೋವಾ, ಮಲಬಾರ ಹಾಗೆಯೇ ಅರೇಬಿಯಾದ ಬಂದರಗಳಿಗೆ ಅಕ್ಕಿಯನ್ನು ಸಾಗಿಸುವುದನ್ನು ತಡೆಯುವುದಾಗಿತ್ತು. ದೇವರು ಪೋರ್ಚುಗೀಜರನ್ನು ನಾಶಮಾಡಲಿ. ಅವರು ಪ್ರಪಂಚದ ಬೇರೆ ಬೇರೆ ಭಾಗಗಳಿಂದ ಸರಕು ಸಾಮಗ್ರಿಗಳನ್ನು ಆಮದು ಮಾಡುವವರಾದರಲ್ಲದೆ ಆ ಜಿಲ್ಲೆಯ ಬೇರೆ ಬೇರೆ ಸ್ಥಳಗಳಲ್ಲಿ ಅವನ್ನೆಲ್ಲ ಸಂಗ್ರಹಿಸಿ ಭದ್ರಪಡಿಸಿದರು. ಈ ಬಂದರಗಳ ಆಡಳಿತಗಾರರು ಪೋರ್ಚುಗೀಜರಿಗೆ ಎಷ್ಟೊಂದು ವಿಧೇಯರಾಗಿದ್ದರೆಂದರೆ ಅವರು ಅಲ್ಲೆಲ್ಲ ಗರಿಷ್ಠ ಅಧಿಕಾರ ಪಡೆದಿದ್ದರು. ಬಹು ಬೇಗನೆ ಮುಸಲ್ಮಾನರು ಜಗತ್ತಿನ ಯಾವ ಭಾಗಕ್ಕೂ ಹೋಗಬೇಕಾದರೆ ಪೋರ್ಚುಗೀಜರ ರಕ್ಷಣೆ ಹಾಗೂ ಅವರ ಅನುಮತಿ ಪತ್ರ ಇಲ್ಲದೆ ಹೋದರೆ ಸಾಧ್ಯವಿರಲಿಲ್ಲ. ಹೀಗೆ ಪೋರ್ಚುಗೀಜರಿಗೆ ಸಾಕಷ್ಟು ವ್ಯಾಪಾರ ಲಭಿಸಿ ಅವರು ಅನೇಕ ಹಡಗುಗಳ ಮಾಲಕರಾದರು. ಇದಕ್ಕೆ ತದ್ವಿರುದ್ಧವಾಗಿ ಮುಸಲ್ಮಾನರಿಗೆ ಸಮುದ್ರ ಮಾರ್ಗ ಇಲ್ಲದಂತಾಗಿ ಅವರು ಪೋರ್ಚುಗೀಜರ ಹಡಗುಗಳ ಮೂಲಕವೇ ತಮ್ಮ ವ್ಯಾಪಾರ ನಡೆಸಬೇಕಾಯಿತು.

ಪೋರ್ಚುಗೀಜರ ಕೋಟೆಗಳನ್ನು ಕೈವಶ ಮಾಡಿಕೊಳ್ಳುವ ಸಾಹಸ ಯಾರೂ ಮಾಡಲಿಲ್ಲ. ಕೇವಲ ಸುಲ್ತಾನ ಅಲಿ ಅಲ್-ಆಶಿ ಆ ಧೈರ್ಯ ಮಾಡಿದನು. ಅಲ್ಲಾಹನು ಅವನ ಗೋರಿಯನ್ನು ಬೆಳಕಿನಿಂದ ತುಂಬಲಿ. ಸುಲ್ತಾನನು ಸುಮಾತ್ರಾವನ್ನು ಕೈವಶಮಾಡಿಕೊಂಡು ಅದನ್ನು ಇಸ್ಲಾಂ ರಾಜ್ಯವನ್ನಾಗಿಸಿದನು. ಅಲ್ಲಾಹನು ಅವನು ಮುಸಲ್ಮಾನರಿಗೆ ಗೈದ ಸೇವೆಗಾಗಿ ಫಲವನ್ನು ನೀಡಲಿ; ಕಾಲಿಕತ್ತದ ಅರಸು ಝಮೊರಿನ್ನನು ಕಾಲಿಕತ್ತ ಹಾಗೂ ಶಾಲಿಯಮ್ಮ ಪಟ್ಟಣಗಳಲ್ಲಿದ್ದ ಪೋರ್ಚುಗೀಜರ ಕೋಟೆಗಳನ್ನು ಕೈವಶ ಮಾಡಿಕೊಂಡನು; ಸಿಲೋನದ ರಾಜನು ಸಿಲೋನದಲ್ಲಿ ಪೋರ್ಚುಗೀಜರು ಕಟ್ಟಿದ್ದ ಎಲ್ಲ ಕೋಟೆಗಳನ್ನು ಕೈವಶ ಮಾಡಿಕೊಂಡನು. ಆದರೆ ಇಲ್ಲಿಯ ಕೋಟೆಗಳು ಬೇರೆ ಕಡೆಗಳಲ್ಲಿದ್ದ ಅವರ ಕೋಟೆಗಳಷ್ಟು ಅಭೇಧ್ಯವಾಗಿರಲಿಲ್ಲ.

ಆರಂಭದಲ್ಲಿ ಪೋರ್ಚುಗೀಜರು ತಾವು ಮುಸಲ್ಮಾನರಿಗೆ ಕೊಟ್ಟಿದ್ದ ವ್ಯಾಪಾರೀ ಪರವಾನಗಿಗಳನ್ನು ಮತ್ತು ರಕ್ಷಣೆಯ ಭರವಸೆಯನ್ನು ಮನ್ನಿಸಿದರು. ಕೆಲವೊಂದು ವಿಶೇಷ ಕಾರಣಗಳನ್ನು ಹೊರತುಪಡಿಸಿ ತಮ್ಮ ಪರವಾನಗಿ ಹೊಂದಿದ ಯಾವ ವ್ಯಾಪಾರಿಗಳನ್ನೂ ಅವರು ತಡೆಯುವುದಾಗಲಿ ಅಥವಾ ಹಿಂದೆ ಕೊಡುವುದಾಗಲಿ ಮಾಡುತ್ತಿದ್ದಿಲ್ಲ. ಹಿ.ಶ.೯೬೦(೧೫೫೪ ಎ.ಡಿ.)ರ ಹೊತ್ತಿಗೆ ಯಾರು ಕೇಳಿದರೊ ಅವರಿಗೆಲ್ಲ ಪ್ರಯಾಣ ಮಾಡುವಾಗ ಪರವಾನಗಿ ಕೊಡುತ್ತಿದ್ದರು. ಆದರೆ ಅವರನ್ನು ಸಮುದ್ರ ಮಧ್ಯದಲ್ಲಿ ತಡೆದು, ಅವರನ್ನು ಮತ್ತು ಅವರ ಹಡಗುಗಳನ್ನೆ ಕೈವಶ ಮಾಡಿಕೊಂಡು ಅವರ ಸಾಮಗ್ರಿಗಳನ್ನೆಲ್ಲ ದೋಚಿಕೊಂಡು, ಅವರು ಮುಸಲ್ಮಾನರಿರಲಿ ಇಲ್ಲವೆ ಮುಸಲ್ಮಾನೇತರರಾಗಿರಲಿ ಆ ಎಲ್ಲ ವ್ಯಾಪಾರೀ ಪ್ರಯಾಣಿಕರನ್ನು ನಿರ್ದಯದಿಂದ ಕೊಲ್ಲುತ್ತಿದ್ದರು. ಅವರು ಪ್ರಯಾಣಿಕರನ್ನು ಕೆಟ್ಟ ರೀತಿಯಲ್ಲಿ ಕೊಲ್ಲುತ್ತಿದ್ದರು: ಅವರ ದೇಹಗಳನ್ನು ತುಂಡರಿಸುತ್ತಿದ್ದರು. ಅವರ ಅಂಗಾಂಗಗಳನ್ನು ಕಟ್ಟಿಹಾಕಿ ಹಡಗಿನಿಂದ ಸಮುದ್ರದಲ್ಲಿ ಕಿತ್ತೆಸೆಯುತ್ತಿದ್ದರು ಅಥವಾ ಜಾಳಿಗೆಗಳಲ್ಲಿ ಒಟ್ಟು ಕಟ್ಟಿ ಸಮುದ್ರದ ನೀರಿನಲ್ಲಿ ಎಸೆದು ಬಿಡುತ್ತಿದ್ದರು.

ಹಿ.ಶ.೯೭೦ರಲ್ಲಿ (೧೫೬೨ ಎ.ಡಿ.) ಅಥವಾ ಅದಕ್ಕಿಂತ ಕೊಂಚ ಮುಂದೆ, ಪೋರ್ಚುಗೀಜರು ಗೋವಾದಲ್ಲಿ ಇಥಿಯೋಪಿಯನ್ ಮುಸಲ್ಮಾನರ ಗುಂಪೊಂದನ್ನು ಹಿಡಿದರು. ಕ್ರಿಶ್ಚಯನ್ ಧರ್ಮಕ್ಕೆ ಮತಾಂತರಗೊಳ್ಳಲು ಅವರನ್ನು ಒತ್ತಾಯಕ್ಕೆ ಒಳಪಡಿಸಿದರು. ಬಾಹ್ಯವಾಗಿ ಅವರು ಮತಾಂತರಗೊಳ್ಳುವವರೆಗೆ ಹಿಂಸಿಸಿದರು. ಅವರಿಂದ ಬಿಡುಗಡೆಗೊಂಡು ಪಾರಾಗಿ ಗೋವಾ ಬಿಟ್ಟು ಹೋದ ಬಳಿಕ ಅವರೆಲ್ಲರೂ ಅಲ್ಲಾಹನನ್ನು ಸ್ತುತಿಸುತ್ತ ಇಸ್ಲಾಮಕ್ಕೆ ತಿರುಗಿದರು. ಕ್ರಿಶ್ಚಯನಿಟಿಯನ್ನು ಅಪ್ಪಿಕೊಳ್ಳಲು ಒಪ್ಪಂದ ಅಬಿಸಿನಿಯಾದ ಮಹಿಳೆಯೊಬ್ಬಳನ್ನು ಕೊಂದುಹಾಕಿದರು. ಅಲ್ಲಾಹನು ಅವಳ ಮೇಲೆ ತನ್ನ ದಯೆಯನ್ನು ಹರಕೆಗಳನ್ನು ಸುರಿಯಲಿ.

■

*

ಅಧ್ಯಾಯ - ೧೨

ಝುಮೊರಿನ್ನ ಹಾಗೂ ಪೋರ್ಚುಗೀಜರ ವಿರಸ ಮತ್ತು ಪೋರ್ಚುಗೀಜರ ಅವನತಿಯ ಆರಂಭ

ಮುಸಲ್ಮಾನ ಸಾಮರ್ಥ್ಯ ತಗ್ಗಿತು ಮತ್ತು ಒಟ್ಟಾರೆ ಅವರ ಸಮುದ್ರ ವ್ಯಾಪಾರ ತಟಸ್ಥಗೊಂಡಿತು. ಯಾಕೆಂದರೆ ಪೋರ್ಚುಗೀಜರ ದಮನಕಾರಿ ಕೃತ್ಯಗಳು ಮುಂದುವರಿದವು. ಆಗ ವಲಾಪಟ್ಟಣಂ, ತಿಕ್ಕೋಡಿ, ಪಂತಲಯಾನಿ ಮತ್ತು ಇನ್ನೂ ಕೆಲವು ಸ್ಥಳಗಳಲ್ಲಿಯ ಮುಸಲ್ಮಾನರು ಸಂಘಟಿತರಾದರು; ಪೋರ್ಚುಗೀಜರ ಪರವಾನಗಿಯಿಲ್ಲದೆ, ಶಸ್ತ್ರಾಸ್ತ್ರ ಮತ್ತು ಯುದ್ಧ ಸ್ಫೋಟಕಗಳಿಂದ ಸನ್ನದ್ಧರಾಗಿ ಪದಾರ್ಥಗಳಿಂದ ತುಂಬಿದ ಹಡಗುಗಳಲ್ಲಿ ಸಮುದ್ರಯಾನ ಶುರುಮಾಡಿದರು. ಬಹು ಬೇಗನೆ ಪೋರ್ಚುಗೀಜರು ಎದುರಾದರು. ಸಂಗ್ರಾಮದಲ್ಲಿ ಅವರ ಹಲವಾರು ಹಡಗುಗಳನ್ನು ಮತ್ತು ನೌಕೆಗಳನ್ನು ಕೈವಶ ಮಾಡಿಕೊಂಡರು; ಈ ಘಟನೆಯು ಕಾಲಿಕತ್ತ, ಪೊನ್ನಾನಿ, ಪುಟ್ಟನಂಗಡಿ ಮತ್ತು ಕಕ್ಕಡದಲ್ಲಿಯ ಝುಮೊರಿನ್ನನ ಪ್ರಜೆಗಳಲ್ಲಿ ಸಂಚಲನ ಮೂಡಿಸಿತು ಮತ್ತು ಅವರೂ ಕೂಡ ಪೋರ್ಚುಗೀಜರ ಅನೇಕ ಹಡಗುಗಳನ್ನು ನೌಕೆಗಳನ್ನು ಹಿಡಿದರಲ್ಲದೆ ಅನೇಕ ಪೋರ್ಚುಗೀಜರನ್ನು ಸೆರೆಗೈದರು. ಈ ಸಾಹಸಗಳಿಂದಾಗಿ ಪೋರ್ಚುಗೀಜರ ಸಾಕಷ್ಟು ಸಂಪತ್ತು ಮುಸಲ್ಮಾನರ ಕೈ ಸೇರಿತು. ಹಾಗೆಯೇ ಅವರು ಗುಜರಾತದ, ಕೊಂಕಣ ಮತ್ತು ಉಳಿದ ಸ್ಥಳಗಳಲ್ಲಿ ಅನೇಕ ಮುಸಲ್ಮಾನೇತರರ ಹಡಗುಗಳನ್ನು ಕೈವಶಮಾಡಿಕೊಂಡರು. ಈ ಎಲ್ಲ ಚಟುವಟಿಕೆಗಳ ಪರಿಣಾಮವಾಗಿ ಪೋರ್ಚುಗೀಜರು ಆ ನಂತರ ಬಹಳ ಮುಂಜಾಗ್ರತೆ ಮತ್ತು ಸಕಲ ಪರಿಕರಗಳಿಂದ ಅಣಿಯಾದ ಯುದ್ಧ ಹಡಗುಗಳ ರಕ್ಷಣೆಯಿಲ್ಲದೆ ಕಡಲ ಪ್ರಯಾಣಗಳನ್ನು ಕೈಕೊಳ್ಳುವ ಧೈರ್ಯವನ್ನು ಮಾಡಲಿಲ್ಲ.

ಈ ಸನ್ನಿವೇಶದಿಂದಾಗಿ ಕಾಲಕ್ರಮದಲ್ಲಿ ಪೋರ್ಚುಗೀಜರ ಆರ್ಥಿಕ ಸ್ಥಿತಿಗೆ ಪೆಟ್ಟು ಬಿತ್ತು. ಇದರ ಪರಿಣಾಮವು ಮುಸಲ್ಮಾನರ ಮೇಲೆ ಒಳ್ಳೆಯದಾಗಲಿಲ್ಲ. ಯಾಕೆಂದರೆ ಅವರಿಗೆ ಕಳೆದುಕೊಂಡ ಸಂಪತ್ತನ್ನು ತಿರುಗಿ ಪಡೆಯುವುದಾಗಲಿಲ್ಲ. ಈ ಪ್ರಕಾರದ ಸನ್ನಿವೇಶದಲ್ಲಿ ಮುಸಲ್ಮಾನರು ಒಬ್ಬರನ್ನೊಬ್ಬರು ದೋಚತೊಡಗಿದರು. ಅವರ ಆ ರೀತಿಯ ವರ್ತನೆಗೆ ಕಾರಣವೆಂದರೆ ಸಣ್ಣ ವೇಗದ ಹಡುಗುಗಳ ಮಾಲಕರು ಸಿರಿವಂತರಿರಲ್ಲ ಮತ್ತು ಅವರ ಹಡಗುಗಳಿಗೆ ಹಲವು ವ್ಯಕ್ತಿಗಳ ಸಂಯುಕ್ತ ಒಡೆತನವಿತ್ತು. ಅವರಿಗೆ ತಮ್ಮ ವ್ಯಾಪಾರಿ ಹಡಗುಗಳನ್ನು ನೀರಿಗಿಳಿಸುವಾಗ ಎಷ್ಟು ಖರ್ಚು ಮಾಡಿರುತ್ತಿದ್ದರೋ ಅದನ್ನು ವಾಪಸ್ಸು ಬಂದು ತಟಾಕಕ್ಕೆ ಬರುವಷ್ಟರಲ್ಲಿ ಭರಿಸಬೇಕಾದರೆ ಇಂಥ ವಾಮಮಾರ್ಗಕ್ಕಿಳಿವ ಅನಿವಾರ್ಯತೆಯಿತ್ತು. ಪೋರ್ಚುಗೀಜರಿಂದ ಕೈವಶ ಮಾಡಿಕೊಂಡಿದ್ದು ಸಾಕಾಗುವಷ್ಟು ಇಲ್ಲೆಂದು ಕಂಡು ಬಂದದ್ದರಿಂದ ಯಾರಿಂದಲಾದರೂ ಕಸಿಯಲೂ ಅವರು ಮುಸಲ್ಮಾನರಿರಲಿ ಇಲ್ಲವೆ ಇತರ ಧರ್ಮೀಯರೆ ಇರಲಿ– ಅವರಿಗೆ ಸಂಕೋಚವೆನಿಸುತ್ತಿದ್ದಿಲ್ಲ. ಕಡಲ ಪ್ರಮಾಣ ಶುರು ಮಾಡುವ ಮುಂಚೆ ಮುಸಲ್ಮಾನರ ಸಂಪತ್ತಿಗೆ ಕೈ ಚಾಚುತ್ತಿದ್ದಿಲ್ಲೆಂದು ಶಪಥ ಮಾಡಿದ್ದರು. ತಮ್ಮ ಕೈ ಸೇರಿದ್ದು ಮುಸಲ್ಮಾನರ ಸಂಪತ್ತು ಎಂದು ಗೊತ್ತಾದರೂ ಅದನ್ನು ಅವರಿಗೆ ತಿರುಗಿಸುತ್ತಿದ್ದಿಲ್ಲ. ಅವರ ಕೃತ್ಯಗಳ ಕುರಿತು ತೀರ್ಪು ನೀಡುವ ಯಾವ ಧುರೀಣನೂ ಅವರಿಗಿರಲಿಲ್ಲ. ಆ ದೇಶದಲ್ಲಿ ಅವರನ್ನಾಳುತ್ತಿದ್ದವರೆಲ್ಲ ಅವರು ದೋಚಿದ ಸಂಪತ್ತಿನಲ್ಲಿ ತಮಗೆ ಸಿಗುವ ಪಾಲಿನಲ್ಲಿಯೇ ಆಸಕ್ತಿ ಹೊಂದಿದ್ದರು. ಕೇವಲ ಉಪದೇಶ ಮತ್ತು ತಿಳಿವಳಿಕೆಯ ಮಾತು ತಿಳಿವಳಿಕೆ ಉಳ್ಳವರ ಮೇಲೆ, ಧರ್ಮಶ್ರದ್ಧೆಯುಳ್ಳವರ ಮೇಲೆ ಮಾತ್ರ ಪರಿಣಾಮ ಬೀರುತ್ತದೆ.

ಹಿ.ಶ.೯೭೪ (೧೫೬೬ ಎ.ಡಿ)ಯ ರಮಜಾನದ ಮಧ್ಯ ಭಾಗದ ಸುಮಾರಿಗೆ ಪೊನ್ನಾನಿ, ಪಂತಲಯಾನಿ ಮತ್ತು ಉಳಿದ ಸ್ಥಳಗಳಿಂದ ಜನರ ಒಂದು ಗುಂಪು ಸುಮಾರು ಹನ್ನೆರಡು ಹಡಗುಗಳನ್ನೇರಿ ಹೊರಟರು. ಬೆಂಗಾಲದಿಂದ ಪೊನ್ನಾನಿಗೆ ಅಕ್ಕಿ ಮತ್ತು ಸಕ್ಕರಿಯನ್ನು ಒಯ್ಯುತ್ತಿದ್ದ ಪೋರ್ಚುಗೀಜರ ದೊಡ್ಡ ಸರಕು ಸಾಮಗ್ರಿ ನೌಕೆಯನ್ನು ಕೈವಶ ಮಾಡಿಕೊಂಡರು.

ಹಿ.ಶ.೯೭೬ (ಕ್ರಿ.ಶ.೧೫೫೮)ರ, ೮ ಜಮಾದೀ ಅಲ್–ಆಖೀರ, ಶನಿವಾರದಂದು ಪೊನ್ನಾನಿ, ಪಂತಲಯಾನಿ ಮತ್ತು ಕೆಲವು ಬೇರೆ ಊರುಗಳಿಂದ ಜನರ ಗುಂಪೊಂದು ಹದಿನೇಳು ಹಡಗುಗಳಲ್ಲಿ ಪೊನ್ನಾನಿಯಿಂದ ಹೊರಟರು. ಕುಟ್ಟಿ ಪೊಕ್ಕರನು ಈ ಗುಂಪಿನಲ್ಲಿದ್ದನು. ಶಾಲಿಯಮ್ಮದ ಹತ್ತಿರ ಅವರು ಪೋರ್ಚುಗೀಜರ ಬಹುದೊಡ್ಡ ಸರಕು ಹೇರಿದ್ದ ಹಡಗಕ್ಕೆ ಮುಖಾಮುಖಿಯಾದರು. ಆ ನೌಕೆ ಕೋಟೆಯಿಂದ ಬರುತ್ತಿತ್ತು. ಅದರಲ್ಲಿ ಸುಮಾರು ಸಾವಿರ ಜನರು, ಸೈನಿಕರು, ಹೊಸದಾಗಿ ಕ್ರಿಶ್ಚನ್

ಧರ್ಮಕ್ಕೆ ಬಂದವರು. ಗುಲಾಮರು ಇರುವುದಲ್ಲದೆ ಸಾಕಷ್ಟು ಸಂಪತ್ತು ಮತ್ತು ಹೋರಾಟದ ಸಾಧನಗಳಿದ್ದವು. ಎರಡೂ ಬಣಗಳ ಮಧ್ಯ ಭೀಕರ ಕದನವಾಯ್ತು. ಹೊರಾಟ ನಡೆದಾಗ ಆ ಸರಕಿನ ಹಡಗಿಗೆ ಬೆಂಕಿ ಹತ್ತಿತು. ಅದು ಭಸ್ಮವಾಗಿ ಹೋಯಿತು. ಅದರೊಳಗಿಂತ ಕೆಲವು ತೋಪುಗಳನ್ನು ಮುಸಲ್ಮಾನರು ಲಭ್ಯಮಾಡಿಕೊಂಡರು. ಇದಲ್ಲದೆ ಅವರು ಸಾಧಾರಣ ಒಂದು ನೂರು, ಪೋರ್ಚುಗೀಜ ಸೈನಿಕರನ್ನು ಅವರಲ್ಲಿಯ ಪ್ರತಿಷ್ಠಿತ ಅಧಿಕಾರಿಗಳನ್ನು ಹಲವಾರು ಗುಲಾಮರನ್ನು ಮತ್ತು ಸೇವಕರನ್ನು ಕೈವಶ ಮಾಡಿಕೊಂಡರು. ಉಳಿದವರಲ್ಲಿ ಕೆಲವರು ಬೆಂಕಿಯಲ್ಲಿ ಸತ್ತರು, ಕೆಲವರು ನೀರಲ್ಲಿ ಮುಳುಗಿ ಹೋದರು. ಅಲ್ಲಾಹನಿಗೆ ಜಯವಾಗಲಿ.

ಈ ಘಟನೆಯ ನಂತರ ಕೆಲದಿನಗಳಾದ ಮೇಲೆ ಅದೇ ಮುಸಲ್ಮಾನ ತಂಡವು ಕಯಲ ಪಟ್ಟಣಂಕ್ಕೆ ಸಾಗಿದರು. ಹೋಗುವಾಗ ದಾರಿಯಲ್ಲಿ ಪೋರ್ಚುಗೀಜರಿಗೆ ಸಂಬಂಧಿಸಿದ ಇಪ್ಪತ್ತೆರಡು ಹಡಗುಗಳನ್ನು ಕೈವಶ ಮಾಡಿಕೊಂಡರು. ಕೋಯಾಲ ಪಟ್ಟಣ, ಕೋರೋಮಂಡಲ ಮತ್ತು ಬೇರೆ ಊರುಗಳಿಂದ ಅಕ್ಕಿ ಹೊತ್ತುಕೊಂಡು ಬರುತ್ತಿದ್ದ ಆ ಹಡಗಗಳಲ್ಲಿ ಹೊಸದಾಗಿ ಕ್ರಿಶ್ಚನ್ ಧರ್ಮಕ್ಕೆ ಮತಾಂತರಗೊಂಡವರು ಮತ್ತು ಮೂರು ಮರಿಯಾನಿಗಳು ಇದ್ದವು. ಕ್ರಿಶ್ಚನ್ನ ಧರ್ಮಕ್ಕೆ ಹೊಸದಾಗಿ ಬಂದವರನ್ನು ಮತ್ತು ಆ ಆನೆ ಮರಿಗಳನ್ನು ಹಿಡಿದು ಪೊನ್ನಾನಿ ನದಿ ದಂಡೆಗೆ ತಂದರು.

ಹಿ.ಶ.೯೭೮ (ಕ್ರಿ.ಶ.೧೫೭೦)ರ ಜಮಾದಿ ಅಲ್-ಆಖಿರದ ಕೊನೆಯ ಸುಮಾರಿಗೆ ಕುಟ್ಟಿ ಪೊಕ್ಕರನು ಆರು ಹಡಗುಗಳೊಡನೆ ಮಂಗಳೂರ ನದಿಯಲ್ಲಿ ಪ್ರವೇಶಿಸಿದನು. ಅವನು ತಟಾಕಕ್ಕೆ ಹೋಗಿ ಅಲ್ಲಿದ್ದ ಪೋರ್ಚುಗೀಜರ ಕೋಟೆಗಳಿಗೆ ಬೆಂಕಿ ಇಟ್ಟನು. ಆ ಮೇಲೆ ಪೋರ್ಚುಗೀಜರ ಸಣ್ಣ ಹಡಗೊಂದನ್ನು ಕೈವಶ ಮಾಡಿಕೊಂಡು ಅದರಲ್ಲಿ ಸುರಕ್ಷಿತವಾಗಿ ತನ್ನೆಲ್ಲ ಹಡಗುಗಳೊಂದಿಗೆ ಮರಳಿದನು. ದಾರಿಯಲ್ಲಿ ಹದಿನಾಲ್ಕು ಪೋರ್ಚುಗೀಜ ಹಡಗುಗಳೊಡನೆ ಕನ್ನೂರ ಸಮೀಪ ಮುಖಾಮುಖಿಯಾದನು. ಅವರೊಡನೆ ಹೋರಾಡುತ್ತ ಹುತಾತ್ಮನಾದನು. ಅವನ ಕಳೇಬರ ಸಿಗಲಿಲ್ಲ. ಅವನೆಲ್ಲ ಹಡಗುಗಳಲ್ಲಿ ಕೇವಲ ಎರಡು ಪಾರಾಗಿ ಬಂದವು. ಕುಟ್ಟಿ ಪೊಕ್ಕರನನ್ನು ಅಲ್ಲಾಹನು ಹರಸಲಿ. ಅವನು ಪೋರ್ಚುಗೀಜರೊಡನೆ ಶೌರ್ಯದಿಂದ ಹೋರಾಡಿದ್ದನು.

ಕನ್ನೂರಿನ ಪ್ರಮುಖ ನೇತಾರನಾಗಿದ್ದ ಅರಕ್ಕಲ ಅಲಿ ಅಧ್ರಾಜಾನನ್ನು ಭಗವಂತನು ಹರಸಲಿ, ದುಷ್ಟ ಪೋರ್ಚುಗೀಜರಿಂದಾಗಿ ಮುಸಲ್ಮಾನರಿಗೊದಗಿದ್ದ ಬಡತನ, ಕಷ್ಟ ಮತ್ತು ವ್ಯಾಪಾರ ವಹಿವಾಟದಲ್ಲಿಯ ಪತನ ಇವುಗಳನ್ನು ಕಂಡಿದ್ದ ಅಧ್ರಾಜನು ಘನವಂತ ಉದಾರ ಮನಸ್ಸಿನ ವಿಜಯಪುರದ ಅಲಿ ಆದಿಲ ಶಾಹನಿಗೆ ಪತ್ರ ಬರೆದು ದೌರ್ಜನ್ಯಕ್ಕೆ ಒಳಗಾಗಿದ್ದ ಮುಸಲ್ಮಾನರು ದುರ್ಬಲರಾಗಿದ್ದು ದೈವ ಕಾರ್ಯಕ್ಕಾಗಿ ಕೈಕೊಳ್ಳುವ ಧರ್ಮಯುದ್ಧವನ್ನು ಪೋರ್ಚುಗೀಜರ ವಿರುದ್ಧ ಸಾರಲು ಸಹಾಯ

ಯಾಚಿಸಿ ವಿನಂತಿಸಿದನು. ಪತ್ರದೊಂದಿಗೆ ಅವನು ಹಲವಾರು ಕಾಣಿಕೆಗಳನ್ನು ಕಳಿಸಿದನು.

ಭಾರತ ದೇಶದಲ್ಲಿರುವ ಪೋರ್ಚುಗೀಜರ ಕೇಂದ್ರ ಕಚೇರಿಯಾಗಿದ್ದ ಗೋವಾ ಕೋಟೆಯ ಮೇಲೆ ದಾಳಿ ಮಾಡಲು ಸಿದ್ಧತೆಯನ್ನು ಮಾಡಬೇಕೆಂದು ಅಲ್ಲಾಹನು ವಿಜಯಪುರ ಸುಲ್ತಾನನ ಮನಸ್ಸನ್ನು ಪ್ರೇರೇಪಿಸಿದನು. ಒಂದು ಕಾಲಕ್ಕೆ ಅಲಿ ಆದಿಲ್ ಶಾಹನ ಅಜ್ಜನಾಗಿದ್ದ ಆದಿಲ್ ಶಾಹನಿಗೆ ಗೋವಾ ಸಂಬಂಧಿಸಿತ್ತು. ವಿಜಯನಗರವನ್ನು ವಿಧ್ವಂಸಗೊಳಿಸಿ ಅದರ ರಾಜನನ್ನು ಕೊಂದ ಮೇಲೆ ಆದಿಲ್‌ಶಾಹ ಮತ್ತು ಅಹಮದ ನಗರದ ಅರಸು ನಿಜಾಮ ಶಾಹ ಗೋವಾ ಬಂದರ ಮತ್ತು ಚೌಲವನ್ನು ಗೆಲ್ಲಬೇಕೆಂದು ಒಮ್ಮತಕ್ಕೆ ಬಂದರು. ಇವರಿಬ್ಬರ ಮೇಲೆ ಅಲ್ಲಾಹನು ಸಂತುಷ್ಟನಾಗಿರಲಿ.

ಅಧ್ರಾಜನ ಪತ್ರ ಬಂದೊಡನೆಯೆ ತನ್ನ ಮಂತ್ರಿಗಳೊಡನೆ ಸ್ವತಃ ಸುಲ್ತಾನ ಅಲಿ ಆದಿಲ್‌ಶಾಹನು ಗೋವಾಕ್ಕೆ ಬಂದಿಳಿದು ಪೋರ್ಚುಗೀಜರೊಡನೆ ಯುದ್ಧ ಶುರು ಮಾಡಿದನು. ಪೋರ್ಚುಗೀಜರೊಡನೆ ಮುಟ್ಟುತ್ತಿದ್ದ ಆಹಾರ ಮತ್ತು ಸರಕು ಸಾಮಗ್ರಿಗಳನ್ನು ಅವನು ತಡೆಹಿಡಿದನು. ನಂತರ ಝಮೊರಿನ್ನನಿಗೆ ಪತ್ರ ಬರೆದು ತಾನು ಪೋರ್ಚುಗೀಜರೊಡನೆ ಸೆಣೆಸಲು ಆರಂಭಿಸಿರುವುದಾಗಿ ತಿಳಿಸಿದನು. ಝಮೊರಿನ್ನನು ಮತ್ತು ಅವನ ಜನರು ಈ ಯುದ್ಧದಲ್ಲಿ ಸಹಾಯಕ್ಕೆ ಬರಬೇಕು ಮತ್ತು ಪೋರ್ಚುಗೀಜರಿಗೆ ಸರಕು ಸಾಮಗ್ರಿ ತಲುಪುವುದನ್ನು ತಡೆದು ನಿಲ್ಲಿಸಬೇಕು ಎಂದು ಬರೆದನು. ಈ ಒಳಗಾಗಿಯೇ ಝಮೊರಿನ್ ಮತ್ತು ಅವನ ಪ್ರಜೆಗಳು ಎಷ್ಟೋ ವರ್ಷಗಳಿಂದ ಪೋರ್ಚುಗೀಜರೊಡನೆ ಬಹಿರಂಗವಾಗಿಯೇ ಹೊಡೆದಾಟಕ್ಕಿಳಿದಿದ್ದರು. ಪೋರ್ಚುಗೀಜರೊಡನೆ ಝಮೊರಿನ್ನನು ಶಾಲಿಯಮ್ಮದಲ್ಲಿ ಯುದ್ಧದಲ್ಲಿ ತೊಡಗಿದ್ದಾಗ ವಿಜಯಪುರ ಸುಲ್ತಾನರು ಕಳಿಸಿದ್ದ ಪತ್ರವು ದೂತನ ಮೂಲಕ ತಲುಪಿತು.

ಅಷ್ಟರಲ್ಲಿಯೇ ನಿಜಾಮ ಶಾಹ ಮತ್ತು ಆತನ ಮಂತ್ರಿಗಳು ತಮ್ಮ ಸೈನ್ಯದೊಂದಿಗೆ ಚೌಲಕ್ಕೆ ತಲುಪಿ ಅಲ್ಲಿ ಪೋರ್ಚುಗೀಜರೊಡನೆ ಹೋರಾಟಕ್ಕೆ ಇಳಿದರು. ಬೃಹತ್ ತೋಪುಗಳನ್ನು ಉಪಯೋಗಿಸಿ ಅವರು ಪೋರ್ಚುಗೀಜರ ಕೋಟೆಗಳನ್ನು ನಾಶ ಮಾಡಿದರು. ಅವರು ಯುದ್ಧವನ್ನು ಗೆಲ್ಲುವುದರಲ್ಲಿದ್ದರು. ಅಲ್ಲದೇ ಚೌಲ ಬಂದರವನ್ನು ಕೈವಶ ಮಾಡಿಕೊಳ್ಳುವುದರಲ್ಲಿದ್ದರು. ಆ ವೇಳೆಯಲ್ಲಿ ಆದಿಲ ಶಾಹನ ವಿಷಯಕ್ಕೆ ನಿಜಾಮ ಶಾಹನಿಗೆ ಸಂದೇಹ ಹುಟ್ಟಿತು. ಅದಲ್ಲದೆ ಅವನಿಗೆ ಪೋರ್ಚುಗೀಜರ ಸಾಮರ್ಥ್ಯ ಮತ್ತು ಸೈನ್ಯ ಕಂಡು ನಡುಕ ಹುಟ್ಟಿತು. ಒಮ್ಮೆಲೇ ಅವನು ಯುದ್ಧ ನಿಲ್ಲಿಸಿ ಪೋರ್ಚುಗೀಜರೊಡನೆ ಒಪ್ಪಂದ ಮಾಡಿಕೊಂಡನು.

ಸುಲ್ತಾನ ಆದಿಲಶಾಹನ ವಿಷಯಕ್ಕೆ ಹೇಳಬೇಕಾದರೆ, ಅವನು ಕೈಕೊಂಡ ಕಾರ್ಯದ ಅಪಯಶಸ್ಸಿನ ದೋಷದಿಂದ ಮುಕ್ತನೆಂದು ಅನ್ನಬಹುದು. ಯಾಕೆಂದರೆ ಅವನು ಬಿಡಾರ ಬಿಟ್ಟಿದ್ದ ಸ್ಥಳದಿಂದ ಗೋವಾ ಬಹು ದೂರವಿದ್ದದ್ದಲ್ಲದೆ ಅವನು ಮತ್ತು ಆ ಪಟ್ಟಣದ ನಡುವೆ ನದಿ ಅಡ್ಡ ಇತ್ತು. ಇದಲ್ಲದೆ ಕೋಟೆಯಿಂದ ಪರಿವೃತವಾಗಿ ರಕ್ಷಿಸಲ್ಪಟ್ಟ ಗೋವಾ ನಗರವು ಬಲಾಢ್ಯವೂ ದುರ್ಗಮವೂ ಆಗಿತ್ತು. ಸರ್ವಶಕ್ತ ಅಲ್ಲಾಹನ ಸಹಾಯವಿಲ್ಲದೆ ಅದನ್ನು ಕೈವಶ ಮಾಡಿಕೊಳ್ಳಬಹುದು ಯಾರಿಂದಲೂ ಸಾಧ್ಯವಿದ್ದಿಲ್ಲ. ಇದಲ್ಲದೆ ಈ ಒಳಗಾಗಿ ಅವನ ಕೆಲವು ಮಂತ್ರಿಗಳು ಪೋರ್ಚುಗೀಜರೊಡನೆ ಗುಟ್ಟಾಗಿ ವಿಶ್ವಾಸದ ಸಂಬಂಧವಿಟ್ಟುಕೊಂಡಿದ್ದರು ಹಾಗೂ ಅದಿಲ ಶಾಹನನ್ನು ಬಂಧಿಸಿ ತಮ್ಮೊಡನೆ ಹೊಂದಿಕೊಂಡಿದ್ದ ಅವನ (ಸುಲ್ತಾನನ) ಸಂಬಂಧಿಕನೊಬ್ಬನಿಗೆ ರಾಜ್ಯನ್ನು ಒಪ್ಪಿಪಿಸಬೇಕೆಂದು ಯೋಜನೆ ಹೂಡಿದ್ದರು. ಈ ಎಲ್ಲ ಸಂಕಟಗಳಿಗೊಳಗಾಗಿ ಅಸಹಾಯಕ ಸ್ಥಿತಿಯಲ್ಲಿದ್ದ ಆದಿಲ್‌ಶಾಹನು ಸೈನಿಕ ಕೇಂದ್ರ ಕಚೇರಿಯಿಂದ ನುಸುಳಿಕೊಂಡು ಪಾರಾಗಿ ಹೋದನು. ತನ್ನರಮನೆಗೆ ಬಂದ ಮೇಲೆ ಪೋರ್ಚುಗೀಜರ ಪರವಾಗಿ ಗುಪ್ತಚಾರ ಕೆಲಸ ಮಾಡುತ್ತಿದ್ದ ತನ್ನ ಮಂತ್ರಿಗಳನ್ನು ಹುಡುಕಿ ತೆಗೆದು ಅವರನ್ನು ಅಧಿಕಾರದಿಂದ ಕಿತ್ತೊಗೆದನು. ಕೆಲವರನ್ನು ಕಾರಾಗೃಹಕ್ಕಟ್ಟಿದನು. ಆ ಬಳಿಕ ಕೆಲವು ಕಾರಣಗಳಿಗಾಗಿ ಆದಿಲ್‌ಶಾಹನು ಪೋರ್ಚುಗೀಜರೊಡನೆ ಶಾಂತಿ ಒಪ್ಪಂದ ಮಾಡಿಕೊಂಡನು. ತನ್ಮಧ್ಯೆ, ಪೋರ್ಚುಗೀಜರು ಗೋವಾದಲ್ಲಿ ಮತ್ತಷ್ಟು ಅಭೇಧ್ಯ ಕಟ್ಟಡಗಳನ್ನು ಕಟ್ಟಿಸಿ, ಅವುಗಳನ್ನು ಹೊರಗಿನವರಿಗೆ ಒಳಬಾರದ ರೀತಿಯಲ್ಲಿ ಬಲಿಷ್ಠವಾಗಿ ಸುಭದ್ರಗೊಳಿಸಿದರು. ಶರ್ವಶಕ್ತನೂ, ಸರ್ವಜ್ಞನು ಆಗಿರುವ ಅಲ್ಲಾಹನ ನಿರ್ಣಯ ಅದಾಗಿತ್ತು.

ನಿಜಾಮನು ಮತ್ತು ಅವನ ಮಂತ್ರಿಗಳು ಅದರಂತೆಯೇ ಆದಿಲ್‌ಶಾಹನ ಮಂತ್ರಿಗಳು ಅದಿಲ್‌ಶಾಹನಿಗೆ ಮೋಸ ಮಾಡಿದರು. ಲಂಚ ತೆಗೆದುಕೊಂಡು ಪೋರ್ಚುಗೀಜರಿಗೆ ಗುಪ್ತವಾಗಿ ಆಹಾರ ಪದಾರ್ಥ ಮತ್ತೆ ಉಳಿದ ಸಾಮಗ್ರಿಗಳನ್ನು ಪೂರೈಸುತ್ತಿದ್ದರು. ಇಸ್ಲಾಮದ ವೈರಿಗಳಿಗೆ ಸಹಾಯ ಮಾಡಿದ ಇವರು ಅಲ್ಲಾಹನಿಂದ ತಕ್ಕದಾದ ಪ್ರತಿಫಲ ಪಡೆಯಲಿ.

■

*

ಅಧ್ಯಾಯ – ೧೩

ಶಾಲಿಯಂ ಕೋಟೆಯ ಗೆಲುವಿನೊಂದಿಗೆ ಯುದ್ಧ ಮುಕ್ತಾಯಗೊಂಡಿತು

ಪೋರ್ಚುಗೀಜರ ಪಾಪಕೃತ್ಯಗಳಿಂದ ರೋಸಿಹೋಗಿದ್ದ ಝುಮೊರಿನ್ನನು ಶಾಲಿಯಂ ಕೋಟೆಯ ಮೇಲೆ ದಾಳಿ ಮಾಡಲು ಕಂಕಣಬದ್ಧನಾದನು. ಅವನ ಸಂಕಲ್ಪಕ್ಕೆ ಮತ್ತಷ್ಟು ದೃಢತೆ ನೀಡುವ ಅಂಶವೆಂದರೆ ಮುಸಲ್ಮಾನರು ಗೋವಾದ ಕಡೆಗೆ ದಂಡೆತ್ತಿ ಹೋಗುತ್ತಿದ್ದರಿಂದ ಪೋರ್ಚುಗೀಜರು ತಮ್ಮ ಸೈನ್ಯವನ್ನು ಗೋವಾದಿಂದ ಸಹಾಯಾರ್ಥವಾಗಿ ಶ್ಯಾಲಿಯಮಕ್ಕೆ ಕಳಿಸಲು ಸಾಧ್ಯವಿಲ್ಲದ್ದರಿಂದ ಅದೊಂದು ಝುಮೊರಿನ್ನನಿಗೆ ಸದವಕಾಶ ಎಂದು ಮುಸಲ್ಮಾನರು ತಿಳಿಸುತ್ತ ವಿನಂತಿಸಿದ್ದರು.

ಝುಮೊರಿನ್ನನು ತನ್ನ ಕೆಲವು ಮಂತ್ರಿಗಳನ್ನು ಶಾಲಿಯಮಕ್ಕೆ ಕಳಿಸಿದನು; ಅವರೊಡನೆ ಪೊನ್ನಾನಿಯ ಜನರಿದ್ದರಲ್ಲದೆ ಶಾಲಿಯಮ್ಮದ ಜನರೂ ಅವರನ್ನು ಕೂಡಿಕೊಂಡರು. ದಾರಿಯಲ್ಲಿ ಈ ಜನರೊಡನೆ ಪರವಣ್ಣ, ತನೂರ ಮತ್ತು ಪರಪ್ಪನಂಗಡಿಯ ಜನರೂ ಕೂಡಿಕೊಂಡರು. ೯೭೯ ಹಿ.ಶ (೧೫೭೧ಕ್ರಿ.ಶ) ಈ ವರ್ಷದ ೨೫ ಸಫರ, ಬುಧವಾರದ ದಿನ ಅವರೆಲ್ಲ ಶೆಲಿಯಂ ತಲುಪಿ ಅಲ್ಲಿ ಬಿಡಾರ ಬಿಟ್ಟರು. ಬೆಳಿಗ್ಗೆ ಅವರು ಮತ್ತು ಪೋರ್ಚುಗೀಜರ ಮಧ್ಯ ಸಂಗ್ರಾಮ ಶುರುವಾಯಿತು. ಕೋಟೆಯ ಹೊರಗೆ ಕಟ್ಟಿದ್ದ ಪೋರ್ಚುಗೀಜರ ಮನೆಗಳನ್ನು ಮತ್ತು ಚರ್ಚುಗಳನ್ನು ಸುಟ್ಟು ಹಾಕಿ ಕೋಟೆಯ ಸುತ್ತಲಿನಲ್ಲಿದ್ದ ಮಣ್ಣಿನ ಗೋಡೆಯನ್ನು ಕೆಡವಿದರು. ಮುಸಲ್ಮಾನರಲ್ಲಿ ಕೆ ಲ ಮೂವರು ಹೋರಾಟದಲ್ಲಿ ಹುತಾತ್ಮರಾದರು. ಆದರೆ ಪೋರ್ಚುಗೀಜರ ಕಡೆಗೆ ಲವರು. ಮಡಿದರು. ಅವರು ಕಲ್ಲಿನ ಕೋಟೆಯಲ್ಲಿಯ ಮುಖ್ಯ ಭಾಗದಲ್ಲಿ ಅಡಗಲು ಹೆಣಗಿದರು. ಮುಸಲ್ಮಾನರು ಮತ್ತು ನಯ್ಯರ ಸೈನಿಕರು

ಕೋಟೆಯನ್ನು ಮುತ್ತಿದರು. ಅಷ್ಟರೊಳಗಾಗಿ ದೇಶದ ಬೇರೆ ಬೇರೆ ಕಡೆಯಿಂದ ಬಂದ ಮುಸಲ್ಮಾನರು ಅವರನ್ನು ಕೂಡಿಕೊಂಡರು; ಈ ಧರ್ಮಯುದ್ಧದಲ್ಲಿ ಭಾಗಿಯಾದರು. ಕೋಟೆಯ ಸುತ್ತೆಲ್ಲ ಕಂದಕಗಳನ್ನು ಆಳವಾಗಿ ತೋಡಿ ಹೊರಗೆ ಅಲ್ಲೆಲ್ಲ ಕಾಯುತ್ತ ನಿಂತರು. ಇದರಿಂದಾಗಿ, ಆಹಾರ ಮತ್ತು ಅವಶ್ಯಕ ಸಾಮಗ್ರಿಗಳನ್ನು ಗುಟ್ಟಾಗಿ ಕೋಟೆಯೊಳಗೆ ಸಾಗಿಸುವ ಸಾಧ್ಯತೆ ಇಲ್ಲದಾಯಿತು.

ಈ ಯುದ್ಧಕ್ಕಾಗಿ ಝಮೊರಿನ್ನನು ಬಹಳ ಹಣ ಖರ್ಚು ಮಾಡಿದನು. ಈ ಯುದ್ಧ ಶುರುವಾದ ಎರಡು ತಿಂಗಳಲ್ಲಿ ಝಮೊರಿನ್ ಸ್ವತಃ ಶಾಲಿಯಂ ಪಟ್ಟಣಕ್ಕೆ ಬಂದನು. ಸಂಪೂರ್ಣವಾಗಿ ಮುತ್ತಿಗೆಗೊಳಗಾಗಿದ್ದರೂ ಪೋರ್ಚುಗೀಜರು ಇನ್ನು ಕೋಟೆಯ ಒಳಗಿದ್ದರು. ಆಹಾರ ಸಾಮಗ್ರಿಗಳು ತೀರಿ ಹೋದೊಡನೆ ಅವರು ಯಾರೂ ಮುಟ್ಟದ ನಾಯಿ ಮಾಂಸವನ್ನು ತಿನ್ನ ತೊಡಗಿದರು. ತಮಗೆ ತಿನ್ನಲು ಏನೂ ಉಳಿಯದಿದ್ದಾಗ ಬಲವಂತದಿಂದ ಹೊಸದಾಗಿ ಕ್ರಿಶ್ಚನ್ ಧರ್ಮಕ್ಕೆ ಮತಾಂತರಗೊಂಡ ಗಂಡಸು ಹೆಂಗಸರನ್ನು ದಿನವೂ ಸಣ್ಣ ಸಂಖ್ಯೆಯಲ್ಲಿ ಹೊರಗೆ ಕಳಿಸ ತೊಡಗಿದರು. ಅಂಥವರನ್ನು ಮುಸಲ್ಮಾನರು ಬಿಟ್ಟುಬಿಟ್ಟರು. ಸರಕು ಸಾಮಗ್ರಿಗಳು ಕೋಚಿ ಮತ್ತು ಕನ್ನೂರಗಳಿಂದ ಪೋರ್ಚುಗೀಜರಿಗಾಗಿ ಬಂದರೂ, ಏನೆಲ್ಲ ಪ್ರಯತ್ನ ಪಟ್ಟರೂ, ಕೋಟೆಯ ಸುತ್ತೆಲ್ಲ ಹೊರಗೆ ಕುಣಿಗಳನ್ನು ಕಾಯುತ್ತಿದ್ದ ಮುಸಲ್ಮಾನರೊಡನೆ ಇದಕ್ಕಾಗಿ ಕಾದಾಟವೂ ನಡೆಯುತ್ತಿತ್ತು. ಅದರಿಂದ ಏನೂ ಪ್ರಯೋಜನವಾಗಲಿಲ್ಲ. ಮುತ್ತಿಗೆಯು ಬಹು ಕಾಲ ಮುಂದುವರೆದಿದ್ದರಿಂದ ಕ್ರಮೇಣ ಶಾಂತಿಯನ್ನಪೇಕ್ಷಿಸುತ್ತ ಪೋರ್ಚುಗೀಸರು ಝಮೊರಿನ್ನನ ಹತ್ತಿರ ದೂತನೊಬ್ಬನನ್ನು ಕಳಿಸಿದರು. ಅವರು ಅವನಿಗೆ ನಿವೇದಿಸಿದ್ದೆನೆಂದರೆ ತಮ್ಮಲ್ಲಿರುವ ದೊಡ್ಡ ತೋಪುಗಳನ್ನು ಕೊಟ್ಟು ಈ ಯುದ್ಧಕ್ಕಾಗಿ ಆತನು ವ್ಯಯಿಸಿದ್ದ ಸಂಪತ್ತಿಗಿಂತ ಹೆಚ್ಚಾಗಿ ಕೊಡುವುದಾಗಿಯೂ ಹೇಳಿದರು. ಈ ಮಾತು ಝಮೊರಿನ್ನನಿಗೆ ಸ್ವೀಕೃತವಾಗಲಿಲ್ಲ. ಆದರೆ ಅವನ ಮಂತ್ರಿಗಳಿಗೆ ಈ ಕರಾರುಗಳು ಒಪ್ಪಿಗೆಯಾದವು.

ಆಹಾರದ ಕೊರತೆಯಿಂದಾಗಿ ಪೋರ್ಚುಗೀಜರು ಸಂಕಟಕ್ಕೊಳಗಾದರು. ಈ ತಮ್ಮ ಅಸಹಾಯಕತೆಯಿಂದ ಝಮೊರಿನ್ನನಿಗೆ ಮತ್ತೆ ಭೆಟ್ಟಿಯಾದರು. ಈ ಸಾರೆ ಅವರು ಝಮೊರಿನ್ನನಿಗೆ ಹೇಳಿದ್ದೇನೆಂದರೆ ಅವನಿಗೆ ಏನೆಲ್ಲ ಬೇಕೊ ಅದನ್ನೆಲ್ಲವನ್ನು ಕೋಟೆ ಮತ್ತು ಅದರಲ್ಲಿ ಇರುವುದೆಲ್ಲವನ್ನು ತೆಗೆದುಕೊಂಡು ತಮ್ಮನ್ನು ಜೀವಂತವಾಗಿ ಬಿಡಬೇಕು ಮತ್ತು ಕೆಲ ಹಿಡಿ ಅವಶ್ಯ ವಸ್ತುಗಳನ್ನು ತಮ್ಮೊಡನೆ ಒಂ[illegible] ಅನುಮತಿ ಕೊಡಬೇಕು. ಈ ವಿನಂತಿಯನ್ನು ಝಮೊರಿನ್ನನು ಒಪ್ಪಿದನು. ಆ [illegible]ರ ಹಿ.ಶ.೯೭೯ (ಕ್ರಿ.ಶ. ೧೫೭೧) ಜಮಾದಿ ಅಲ್-ಆಖರಿ, ಸೋಮವಾರ ಮಧ್ಯರಾತ್ರಿ ಅವರಿಗೆ ಕೋಟೆ ಬಿಟ್ಟು ಸುರಕ್ಷಿತವಾಗಿ ಹೊರಟು ಹೋಗಲು ಅನುಮತಿಸಲಾಯಿತು. ಅವರ

ದುಷ್ಕೃತ್ಯಗಳಿಗೆ ಪ್ರೋತ್ಸಾಹ ಕೊಡುವ, ಸಹಾಯ ಮಾಡುವ ತನೂರ ಅರಸನೊಡನೆ ಅವರನ್ನು ಹೀನಾಯ ಸ್ಥಿತಿಯಲ್ಲಿ ಕಳಿಸಿಕೊಡಲಾಯಿತು. ಒಳಗೊಳಗೆ ತನೂರ ರಾಜನು ಪೋರ್ಚುಗೀಜರ ಪರವಾಗಿದ್ದು ಹೊರಗೆ ಝುಮೊರಿನ್ನನ ಮಿತ್ರನಂತೆ ನಟಿಸುತ್ತಿದ್ದನು. ಆದ್ದರಿಂದ ಅವರನ್ನು ನೋಡಿಕೊಳ್ಳುವ ಜವಾಬ್ದಾರಿಯನ್ನು ಹೊತ್ತುಕೊಂಡು, ಅವರ ಅವಶ್ಯಕತೆಗಳನ್ನು ಪೂರೈಸುತ್ತ ತನೂರಿಗೆ ಕರೆದುಕೊಂಡು ಹೋಗಿ ಕೋಚಿಯಿಂದ ಅವರ ಹಡಗುಗಳು ಬಂದು ಕರೆದುಕೊಂಡು ಹೋಗುವವರೆಗೆ ಅವರನ್ನು ತನ್ನಲ್ಲಿಯೇ ಇರಿಸಿಕೊಂಡನು. ಈ ಸಹಾಯದಿಂದಾಗಿ ತನೂರ ರಾಜನಿಗೆ ಪೋರ್ಚುಗೀಜರಲ್ಲಿ ದೊಡ್ಡ ಸ್ಥಾನವಲ್ಲದೆ ಅವರ ಮೇಲೆ ಅವನ ಪ್ರಭಾವ ಇತ್ತು. ಹೀಗೆ ಪೋರ್ಚುಗೀಜರು ಪೂರ್ತಿಯಾಗಿ ಪರಾಭವಗೊಂಡು ಆಳವಾದ ಅಪಮಾನ ಹೊತ್ತು ಶಾಲಿಯಮ್ ಕೋಟೆಯಿಂದ ಬಿಡುಗಡೆಗೊಂಡು ಕೋಚಿಗೆ ಬಂದರು.

ಪೋರ್ಚುಗೀಜರು ಶಾಲಿಯಂ ಕೋಟೆಯನ್ನು ಬಿಟ್ಟು ಹೋದೊಡನೆ ಅದರಲ್ಲಿದ್ದ ತೋಪುಗಳನ್ನು ಮತ್ತು ಬೆಲೆಯುಳ್ಳ ವಸ್ತುಗಳನ್ನು ತೆಗೆದುಕೊಂಡು ಆ ಕೋಟೆಯ ಗುರುತು ಸಹಿತ ಸಿಗದಂತೆ ಅದನ್ನು ನಾಶ ಮಾಡಿದನು. ಆ ಸ್ಥಳದಲ್ಲಿ ಮೊದಲಿದ್ದ ಮಸೀದಿಯನ್ನು ಪುನಃ ಕಟ್ಟಲು ಈಗ ಬಿದ್ದಿದ್ದ ಕೋಟೆಯ ಕಲ್ಲು, ದೊಡ್ಡ ದೊಡ್ಡ ಕೊರಡುಗಳನ್ನು ಮುಸಲ್ಮಾನರಿಗೆ ಕೊಟ್ಟನು. ಉಳಿದದ್ದನ್ನು ಕಾಲಿಕತ್ತಕ್ಕೆ ರವಾನಿಸಿದನು. ಯುದ್ಧಕ್ಕಿಂತ ಮೊದಲ ಮಾಡಿಕೊಂಡ ಒಪ್ಪಂದದ ಪ್ರಕಾರ ಆ ಕೋಟೆಯ ಜಾಗೆಯನ್ನು ಮತ್ತು ಅದರ ಸುತ್ತಮುತ್ತಲಿನ ಕ್ಷೇತ್ರವನ್ನು ಝುಮೊರಿನ್ನನು ಶಾಲಿಯಮ್ಮದ ರಾಜನಿಗೆ ಒಪ್ಪಿಸಿದನು. ಪೋರ್ಚುಗೀಜರು ಗೋವೆಯಿಂದ ಈ ಕೋಟೆಯನ್ನು ರಕ್ಷಿಸಲು ಕಳಿಸಿದ್ದ ಹಡಗುಗುಳು ಮತ್ತು ಸರಕು ತುಂಬಿದ ನೌಕೆಗಳು ಝುಮೊರಿನ್ನನು ಕೋಟೆಯನ್ನು ಕೈವಶ ಮಾಡಿಕೊಂಡ ನಂತರ ಬಂದವು. ನಿರಾಶೆಯಿಂದ ಮತ್ತು ನಷ್ಟಮಾನರಾಗಿ ಅವರು ಹೋಗಲೇ ಬೇಕಾದ ದುರ್ದೈವ ಅವರದಾಗಿತ್ತು. ಸತ್ಯದ ಮಾತೆಂದರೆ ಅಲ್ಲಾಹನ ಕರುಣೆ ಮುಸಲ್ಮಾನರ ಮೇಲಿತ್ತು.

■

*

ಅಧ್ಯಾಯ-೧೪

ಶಾಲಿಯಂ ಕೋಟೆಯನ್ನು ಕಳೆದುಕೊಂಡ ಮೇಲೆ ಪೋರ್ಚುಗೀಜರ ಸ್ಥಿತಿ

ಶ್ಯಾಲಿಯಂ ಕೋಟೆಯನ್ನು ಕಳೆದುಕೊಂಡದ್ದರಿಂದ ದುಷ್ಟ ಪೋರ್ಚುಗೀಜರು ಕ್ರೋಧದಿಂದ ಕುದಿಯುತ್ತಿದ್ದರು. ಝುಮೊರಿನ್ನ ಮತ್ತು ಮುಸಲ್ಮಾನರ ಮೇಲೆ ವಿಪರೀತ ಕನಲಿದ್ದ ಅವರು ಸೇಡು ತೀರಿಸಿಕೊಳ್ಳಲು ಅವಕಾಶಕ್ಕಾಗಿ ಕಾಯುತ್ತಿದ್ದರು. ಸತತವಾಗಿ ಝುಮೊರಿನ್ನನನ್ನು ಮತ್ತು ಮುಸಲ್ಮಾನರನ್ನು ಹಿಂಸಿಸುವುದು ಮತ್ತು ಅವರ ರಾಜ್ಯವನ್ನು ನಿರ್ನಾಮ ಮಾಡುವುದು ಅವರ ಯೋಜನೆಯಾಗಿತ್ತು; ಆ ಗುರಿಯನ್ನು ಸಾಧಿಸಬೇಕಾದರೆ ಪೊನ್ನಾನಿಯಲ್ಲಿ ಇಲ್ಲವೆ ಶಾಲಿಯಂದಲ್ಲಿ ಅವರೊಂದು ಕೋಟೆಯನ್ನು ನಿರ್ಮಿಸಬೇಕಾಗಿತ್ತು. ಹಿ.ಶ.೯೮೭(ಕ್ರಿ.ಶ.೧೫೮೦) ಅಂತ್ಯದವರೆಗೆ ಅವರಿಗೆ ಅದನ್ನು ಸಾಧಿಸುವುದು ಆಗದಂತೆ ಅಲ್ಲಾಹನು ಇಚ್ಛಿಸಿದನು.

ಹಿ.ಶ.೯೮೦ (ಕ್ರಿ.ಶ.೧೫೭೩) ರ ೨೨ ಶವ್ವಾಲದಂದು ಕೆಲವು ಪೋರ್ಚುಗೀಜರು ಯಾವ ಮುನ್ಸೂಚನೆಯಿಲ್ಲದೆ ಶಾಲಯಮ್ಮಕ್ಕೆ ಒಮ್ಮೆಲೇ ಬಂದಿಳಿದು ಅಲ್ಲಿಯ ಕೆಲವು ಮನೆಗಳಿಗೆ, ಅಂಗಡಿಗಳಿಗೆ ಕೊಳ್ಳಿ ಇಟ್ಟರು. ನಂತರ ಆ ಜಾಗ ಬಿಟ್ಟರು. ಅದರ ಮರುವರ್ಷ ಹಠಾತ್ತನೆ ಪರಪ್ಪನಂಗಡಿಯನ್ನು ಮುತ್ತಿದರು; ಸೆಣಸಾಟದಲ್ಲಿ ನಾಲ್ವರು ಮುಸಲ್ಮಾನರು ಹತರಾದರೆ ವೈರಿಯ ಕಡೆಗೆ ಅನೇಕರು ನುಡಿದರು. ಹೀಗಿದ್ದರೂ ಶಾಲಿಯಂ ಕೋಟೆಯನ್ನು ಝುಮೊರಿನ್ನನು ಗೆದ್ದ ಮೇಲೆ ಅವನೊಡನೆ ಶಾಂತಿ ಒಪ್ಪಂದ ಮಾಡಿಕೊಳ್ಳಲು ಪೋರ್ಚುಗೀಜರಿಗೆ ಒಲವಿರಲಿಲ್ಲ. ಅವರು ಅವನೊಡನೆ ಮತ್ತು ಮುಸಲ್ಮಾನರೊಡನೆ ದ್ವೇಷ ಬೆಳೆಸುತ್ತಲೇ ಸಾಗಿದರು; ಅವರನ್ನು ಸೋಲಿಸುವ ಅವಕಾಶಕ್ಕಾಗಿ ಕಾಯುತ್ತ ರಹಸ್ಯವಾಗಿ ಹೊಂಚು ಹಾಕುತ್ತಿದ್ದರು. ಹಿ.ಶ.೯೮೫

(ಕ್ರಿ.ಶ.೧೫೭೭)ರಲ್ಲಿ ತಲೈಮನ್ನಾರಕ್ಕೆ ಅಕ್ಕಿಯನ್ನು ಸಾಗಿಸಲು ಅಣಿಯಾಗಿದ್ದ ಮುಸಲ್ಮಾನರ ಸಣ್ಣ, ದೊಡ್ಡ ಐವತ್ತು ಹಡಗುಗಳನ್ನು ಪೋರ್ಚುಗೀಜರು ಕೈವಶ ಮಾಡಿಕೊಂಡರು. ಸೆಣಸಾಟದಲ್ಲಿ ಅನೇಕ ಮುಸಲ್ಮಾನರು ಕೊಲ್ಲಲ್ಪಟ್ಟರು ಮತ್ತು ಸುಮಾರು ಮೂರು ಸಾವಿರ ಜನರು ಸೆರೆಯಾಳಾದರು. ಅವರಲ್ಲಿ ಸ್ಪೇನದ ಹಲಾತಿಯಾದಿಂದ ಬಂದಿದ್ದ ಕೆಲವರೂ ಸೇರಿದ್ದರು; ಈ ಘಟನೆಯಿಂದ ಮುಸಲ್ಮಾನರಿಗೆ ಬಹು ದೊಡ್ಡ ಪೆಟ್ಟಾಯಿತು. ಈ ಸೋಲಿನಿಂದ ಮುಸಲ್ಮಾನ ಕಡಲ ಪಯಣಗಳಿಗೆ ಅವರ ವ್ಯಾಪಾರೀ ಯಾತ್ರೆಗಳನ್ನು ಒಳಗೊಂಡು ಗಂಭೀರ ಹೊಡೆತ ಬಿತ್ತು. ಸರ್ವಶಕ್ತನೂ, ಸರ್ವಜ್ಞನೂ ಆಗಿರುವ ಅಲ್ಲಾಹನ ತೀರ್ಪು ಅದಾಗಿತ್ತು! ಇದರ ಹಿಂದಿರುವ ವಿವೇಕವನ್ನು ಮತ್ತು ಒಳ್ಳೆಯದನ್ನು ಆ ದೇವನನ್ನು ಬಿಟ್ಟು ಇನ್ನಾರೂ ಅರಿಯರು. ಜಿಹಾದದಲ್ಲಿ ಭಾಗವಹಿಸುವವರಿಗಾಗಿ ಕೀರ್ತಿವಂತವಾದ ಪ್ರತಿಫಲ ಕಾಯ್ದಿದೆ; ಎಲ್ಲ ತರದ ಸಂಕಷ್ಟಗಳನ್ನು ಸಹನೆಯಿಂದ ಸಹಿಸಿದವರಿಗೆ ಹುತಾತ್ಮರಿಗೆ ಸಲ್ಲಬೇಕಾದ ಫಲ ಇದ್ದೇ ಇದೆ. ಅಲ್ಲಾಹನಿಗೆ ಬೇಡಿಕೊಳ್ಳುವುದಿಷ್ಟೇ ಮುಸಲ್ಮಾನರಿಗೆ ಬಹು ಬೇಗನೆ ಅಲ್ಲಾಹನು ದಾರಿ ತೋರಲಿ ಮತ್ತು ಉದಾತ್ತವಾದ, ಉನ್ನತವಾದ ಸಫಲತೆಯನ್ನು ದಯಪಾಲಿಸಲಿ. ನಿಜಕ್ಕೂ ಅಲ್ಲಾಹನು ಹೇಳುವುದೇನೆಂದರೆ : "ಸಂಕಟದ ತರುವಾಯ ಅಲ್ಲಾಹನು ಪರಿಹಾರ ನೀಡುತ್ತಾನೆ (ಖುರಾನ ೬೫:೭), ಮತ್ತೆ ಅವನು ಹೇಳುತ್ತಾನೆ, "ಸತ್ಯವಾಗಿಯೂ ಪ್ರತಿಯೊಂದು ಕೆಲಸಕ್ಕೂ ಪರಿಹಾರವಿದೆ" (೯೪:೫-೬)

ಹಿ.ಶ.೯೮೫ರ ವ್ಯಾಪಾರೀ ಆರಂಭ ಕಾಲದಲ್ಲಿ ಗುಜರಾತದ ಕೆಲವು ಹಡಗುಗಳು ಜುಡಾಹಕ್ಕೆ ಹೋಗಿ ಮರಳಿ ಬರುತ್ತಿರುವಾಗ ದುಷ್ಟ ಪೋರ್ಚುಗೀಜರು ಅವುಗಳನ್ನು ಹಿಡಿದರು. ಇವುಗಳಲ್ಲಿ ಕೆಲವು ಸುಲ್ತಾನ ಜಲಾಲುದ್ದೀನ ಅಕ್ಬರ ಬಾದಶಾಹನವು ಆಗಿದ್ದವು. ಅವುಗಳಲ್ಲಿ ಬಹು ಬೆಲೆಯುಳ್ಳ ವಸ್ತುಗಳಿದ್ದವು. ಪೋರ್ಚುಗೀಜರ ದುಷ್ಟತನದಿಂದಾಗಿ ಅವರ ಮತ್ತು ಸುಲ್ತಾನನ ನಡುವೆ ವೈರತ್ವವುಂಟಾಯಿತು. ಆ ಹಡಗುಗಳು ಬೆಲೆಯುಳ್ಳ ವಸ್ತುಗಳನ್ನೊಳಗೊಂಡದ್ದರಿಂದ ಪೋರ್ಚುಗೀಜರು ಅವುಗಳನ್ನು ಸುಲ್ತಾನನಿಗೆ ತಿರುಗಿಸುವ ವಿಚಾರವನ್ನು ಮಾಡಲಿಲ್ಲ. ನಮ್ಮ ದೃಢವಾದ ಆಶೆಯೆಂದರೆ ಅಲ್ಲಾಹನು ಅಕ್ಬರ ಬಾದಶಾಹನಿಗೆ ಸರಿಯಾಗಿ ಮಾರ್ಗದರ್ಶನ ನೀಡಿ, ಪೋರ್ಚುಗೀಜರ ವಿರುದ್ಧ ಯುದ್ಧ ಹೂಡಲು ಸಹಾಯ ಮಾಡಿ, ಪೋರ್ಚುಗೀಜರನ್ನು ಗುಜರಾತದ ಬಂದರಗಳಾದ ದೀವ, ವಸಾಯಿ ಮುಂತಾದವುಗಳಿಂದ ಹೊರದಬ್ಬುವಂತೆ ಮಾಡುವನು.

ಅದಾದ ಮೇಲೆ ಮುಸಲ್ಮಾನರ ಕೆಲವು ಹಡಗುಗಳು ಆದಿಲಾಬಾದ ಬಂದರ ಇರುವ ನದಿಯಲ್ಲಿ ಬಂದವು. ಪೋರ್ಚುಗೀಜರು ಆ ಹಡಗುಗಳನ್ನು ಬೆನ್ನಟ್ಟಿದರು; ಅವರನ್ನು ಹಿಡಿಯಲು ಸಾಧ್ಯವಾಗದಾಗ ಈ ಪೋರ್ಚುಗೀಜರು ಆ ಬಂದರದಲ್ಲಿದ್ದ ಎಲ್ಲ ಹಡಗುಗುಳನ್ನು ಸುಟ್ಟು ಬಿಡುವುದಕ್ಕಾಗಿ ಬಂದರಕ್ಕೆ ಕೊಳ್ಳಿ ಇಟ್ಟರು. ಕನ್ನೂರ

ಮತ್ತು ದರ್ಮದಮ್ಮಗಳ ಜನರಿಗೆ ಸಂಬಂಧಪಟ್ಟ ಹಡುಗುಗಳಿಗೆ ವ್ಯಾಪಾರೀ ಪರವಾನಗಿ ಪೋರ್ಚುಗೀಜರಿಂದ ಸಿಕ್ಕಿದ್ದರೂ ಅಂಥ ಹಡಗುಗಳು ಸುಟ್ಟು ಹೋದವು.

ನಂತರ ಪೋರ್ಚುಗೀಜರು ಕರಪಟಣಂ ಬಂದರವನ್ನು ಕೈವಶ ಮಾಡಿಕೊಂಡರು. ಇದರಿಂದಾಗಿ ಒಂದು ನೂರದಾ ಐವತ್ತು ಪೋರ್ಚುಗೀಜ ಸೈನಿಕರನ್ನು, ಅವರ ಮುಖ್ಯ ಅಧಿಕಾರಿಗಳನ್ನು ಯುಕ್ತಿಯಿಂದ ದಾಬೂಲದ ಗೌವರ್ನರನು ಸೆರೆ ಹಿಡಿದನು. ಅವನು ಅವರಲ್ಲನೇಕರನ್ನು ಕೊಂದನು. ಕೆಲವರನ್ನು ಸುಲ್ತಾನ ಆದಿಲ್‌ಶಾಹಿಯ ಹತ್ತಿರ ಕಳಿಸಿದನು.

ಈ ಘಟನೆ ಸಂಭವಿಸಿದ ಬಳಿಕ, ಪೋರ್ಚುಗೀಜರ ಮೇಲೆ ಕಣ್ಣಿಡಲು ಮತ್ತು ಗೋವಾದಿಂದ ಮತ್ತು ಉಳಿದ ಪಟ್ಟಣಗಳಿಂದ ಅವರಿಗೆ ಸರಬರಾಜು ಆಗುತ್ತಿದ್ದ ಸರಕು ಸಾಮಗ್ರಿಗಳನ್ನು ಅವರಿಗೆ ಮುಟ್ಟದಂತೆ ತಡೆಯಲು ಸುಲ್ತಾನ ಆದಿಲ್‌ಶಾಹಿ ತನ್ನ ಮಂತ್ರಿಗಳನ್ನು ಗೋವಾಕ್ಕೆ ಕಳಿಸಿದನು. ಹಾಗೆಯೇ ಸುಲ್ತಾನನು ಅಧ್ರಾಜ, ಝುಮೊರಿನ್ನ ಮತ್ತು ಕೊಲಾತ್ತಿರಿ ಇವರಿಗೆ ಕಾಣಿಕೆಗಳೊಂದಿಗೆ ಪತ್ರಗಳನ್ನು ಕಳಿಸುತ್ತ ಗೋವಾದ ಮೇಲೆ ತಾನು ಕೈಕೊಂಡಿದ್ದ ದಾಳಿಗೆ ಮತ್ತು ಅದರ ದಿಗ್ಬಂಧನಕ್ಕೆ ಸಹಾಯ ಕೋರಿದನು. ಸುಲ್ತಾನನ ರಾಜದೂತನು ತನ್ನ ಪರಿವಾರದೊಂದಿಗೆ ಕೊಲ್ಲಂಕ್ಕೆ ಬರಲು, ಕೊಲಾತ್ತಿರಿಯ ನಂತರ ಸಿಂಹಾಸನಕ್ಕೆ ಬರುವ ಮೂರನೆ ವಾರಸ್ದಾರನಾಗಿದ್ದ ಅಲ್ಲಿಯ ಅಧೀನರಾಜನು ಪೋರ್ಚುಗೀಜರ ಚಿತಾವಣಿಯಿಂದ ಆ ರಾಜದೂತನನ್ನು ಕೈದಿ ಮಾಡಿ ಸೆರೆಮನೆಯಲ್ಲಿಟ್ಟನು. ಆ ರಾಜದೂತನು ಅದೇನೊ ಮಾಡಿ ಅಲ್ಲಿಂದ ತಪ್ಪಿಸಿಕೊಂಡನು. ಅದ್ರಾಜ ಮತ್ತು ಕೊಲಾತ್ತಿರಿ ಇವರಿಬ್ಬರೂ ಆ ಅಧಿರಾಜನಿಗೆ ರಾಜದೂತನ ಕಾಣಿಕೆಗಳನ್ನು ಒಪ್ಪಿಸಿಕೊಡಬೇಕೆಂದು ಹೇಳಿದರೂ ಅವರ ಮಾತೆಲ್ಲ ನಿರರ್ಥಕವಾಯಿತು. ಆ ಉದ್ಧಟ ವೈಸರಾಯನು ಪ್ರತಿಯಾಗಿ ಹೇಳಿದ್ದೇನೆಂದರೆ ಅವನನ್ನು ಪೋರ್ಚುಗೀಜರಿಗೆ ಒಪ್ಪಿಸಿಕೊಡುತ್ತಿದ್ದನಂತೆ. ಈ ಎಲ್ಲ ಘಟನೆಗಳು ಹಿ.ಶ.೯೨೬(ಕ್ರಿ.ಶ.೧೫೨೦)ರಲ್ಲಿ ಸಂಭವಿಸಿದವು.

ಅದೇ ವರ್ಷ ಕೆಲವು ಪೋರ್ಚುಗೀಜ ಅಧಿಕಾರಿಗಳು ಝುಮೊರಿನ್ನನ ಹತ್ತಿರ ಹೋಗಿ ಶಾಂತಿ ಮಾತುಕತೆಯನ್ನಾಡಿದರು. ಆಗ ಮಲಬಾರದ ಹಿಂದುಗಳಿಗೆ ಪವಿತ್ರವಾಗಿರುವ ಕೊಡುಂಗಲ್ಲೂರದ ದೇವಾಲಯದಲ್ಲಿ ಝುಮೊರಿನ್ನನು ಇದ್ದನು; ಆದ್ದರಿಂದ ಈ ದೇವಾಲಯದಲ್ಲಿ ಅವನನ್ನು ಪೋರ್ಚುಗೀಜರ ದೂತನು ಭೆಟ್ಟಿಯಾದರು. ಕಾಲಿಕತ್ತದಲ್ಲಿ ಕೋಟೆಯೊಂದನ್ನು ಕಟ್ಟಿರೆಂದು ಝುಮೊರಿನ್ನನು ಅವರಿಗೆ ವಿನಂತಿಸಿದನು. ಆಗ ಪೊನ್ನಾನಿಯಲ್ಲೂ ಕೋಟೆಯೊಂದನ್ನು ಕಟ್ಟಲು ಬಯಸಿದರು. ಆದರೆ ಝುಮೊರಿನ್ನನು ಅವರ ವಿನಂತಿಯನ್ನು ತಳ್ಳಿಹಾಕಿದನು. ಶಾಂತಿಯನ್ನು ಅರಸುತ್ತ ಬಂದಿದ್ದ ಪೋರ್ಚುಗೀಜರೊಡನೆ ತನ್ನ ಮೂವರ ಸಮರ್ಥ

ಮತ್ತು ವಿಶ್ವಾಸಿಕ ವ್ಯಕ್ತಿಗಳನ್ನು ಶಾಂತಿ ಸಂಧಾನದ ಮಾತುಕತೆಗಾಗಿ ಗೋವಾಕ್ಕೆ ಕಳಿಸಿದನು. ಗೋವಾದ ವೈಸರಾಯನು ಅವರನ್ನು ದೊಡ್ಡ ಮಾನ ಮರ್ಯಾದೆಯೊಂದಿಗೆ ಬರಮಾಡಿಕೊಂಡನು; ಆ ಬಳಿಕ ರಾಜದೂತನು ಝುಮೊರಿನ್ನನ ಬಳಿಗೆ ವಾಪಸ ಹೋದರು. ಪೊನ್ನಾನಿಯಲ್ಲಿ ಕೋಟೆಯನ್ನು ನಿರ್ಮಿಸುವುದಾಗಿ ಪೋರ್ಚುಗೀಜರು ಹಟ ಹಿಡಿದಿದ್ದರಿಂದ ಸಂಧಾನ ಮುರಿದು ಬಿತ್ತು. ಇದು ಹಿ.ಶ.೯೮೭(ಕ್ರಿ.ಶ.೧೫೭೯)ರಲ್ಲಿ ಘಟಿಸಿತು.

ಇದೇ ವರ್ಷ, ಪೋರ್ಚುಗೀಜರು ಆದಿಲ್‌ಶಾಹನಿಗೆ ಒಂದು ಪ್ರಮಾಣದ ಹಣವನ್ನು ಕೊಟ್ಟ ಬಳಿಕ ಪೋರ್ಚುಗೀಜರು ಮತ್ತು ಸುಲ್ತಾನನ ನಡುವೆ ಶಾಂತಿ ಏರ್ಪಟ್ಟಿತು.

ಮೇಲೆ ಹೇಳಿದ ದೇವಾಲಯದಿಂದ ಝುಮೊರಿನ್ನನನ್ನು ಹೊರಗೆ ಹಾಕಬೇಕೆಂದು ಅವನ ವಿರುದ್ಧ ಯುದ್ಧ ಹೂಡಲು ಕೋಚಿ ರಾಜನು ಸಿದ್ಧತೆ ಮಾಡಿದನು. ದೊಡ್ಡ ಸಂಖ್ಯೆಯಲ್ಲಿ ಜನರನ್ನು ಕೂಡಿಸುವುದಲ್ಲದೇ ಝುಮೊರಿನ್ನನೊಡನೆ ಕೈಕೊಳ್ಳಲಿರುವ ಈ ಯುದ್ಧಕ್ಕೆ ತನಗೆ ಸಹಾಯ ಮಾಡಬೇಕೆಂದು ಕೋರುವ ಪತ್ರಗಳನ್ನು ಅವನು ಗೋವಾದ ವೈಸರಾಯನಿಗೆ ಕಳಿಸಿದನು. ಇದಕ್ಕೆ ಸ್ಪಂದಿಸುತ್ತ ಪೋರ್ಚುಗೀಜ ವೈಸರಾಯನು ಹಲವಾರು ಯುದ್ಧ ಹಡಗುಗಳನ್ನು ಕೋಚಿ ರಾಜನಿಗೆ ಕಳಿಸಿದನು. ಇವರೆಲ್ಲರೂ ಒಟ್ಟುಗೂಡಿ ಝುಮೊರಿನ್ನನೊಡನೆ ಹೋರಾಡಿದರು. ಆದರೆ ತನ್ನದು ಸಣ್ಣ ಸೈನ್ಯವಿದ್ದರೂ ಅಲ್ಲಾಹನ ಕೃಪೆಯಿಂದ ಝುಮೊರಿನ್ನನು ಪೋರ್ಚುಗೀಜರನ್ನು ಮತ್ತು ಕೋಚಿ ಅರಸನನ್ನು ಸೋಲಿಸಿದನು. ಮಿತ್ರಪಕ್ಷಗಳಲ್ಲಿ ದೊಡ್ಡ ಸಂಖ್ಯೆಯಲ್ಲಿ ಸೈನಿಕರು ಪ್ರಾಣ ಕಳೆದುಕೊಂಡರು. ಉಳಿದವರು ಪಲಾಯನಗೈದರು. ಸಣ್ಣ ಸಂಖ್ಯೆಯ ಸೈನ್ಯವಿದ್ದರೂ ಝುಮೊರಿನ್ನನ ಕಡೆಗೆ ಹಾನಿ ಸಂಭವಿಸಲಿಲ್ಲ.

ಆ ಮೇಲೆ ಪೋರ್ಚುಗೀಜರೂ ಕೋಚಿಯಿಂದ ಆಳುತ್ತಿದ್ದ ಮುಸಲ್ಮಾನರ ವ್ಯಾಪಾರೀ ಹಡಗುಗಳನ್ನು ತಡೆಹಿಡಿಯುವುದನ್ನು ಮುಂದುವರಿಸಿದರು. ಅವುಗಳನ್ನು ಹಿಡಿಯುವುದೂ ನಡೆಯಿತು. ಅಲ್ಲಾಹನು ಅವರನ್ನು ಪರಿತ್ಯಜಿಸಿ ಕಠಿಣವಾಗಿ ಶಿಕ್ಷಿಸಲಿ.

ಹಿ.ಶ.೯೯೦ ಅಥವಾ ೯೯೧ (೧೫೮೨–೮೩ ಎ.ಡಿ.)ರ ಮಳೆಗಾಲದಲ್ಲಿ ಗುಪ್ತವಾಗಿ ಪೋರ್ಚುಗೀಜರು ಆ ಋತುಮಾನದುದ್ದಕ್ಕೂ ಕಾಲಿಕತ್ತ, ಪಟ್ಟನಂಗಡಿ, ಕಕ್ಕಡ, ಪಂತಲಾಯನಿ, ತಿಕ್ಕೋಡಿ ಮತ್ತು ಪೊನ್ನಾನಿ ಈ ಸ್ಥಳಗಳಿಂದ ಬರುತ್ತಿದ್ದ ಝುಮೊರಿನ್ನನ ಪ್ರಜೆಗಳ ಮೇಲೆ ನಿಗಾ ಇಟ್ಟಿದ್ದರು. ಈ ಎಲ್ಲ ಪ್ರದೇಶಗಳು ಝುಮೊರಿನ್ನನ ಆಳಿಕೆಗೆ ಒಳಪಟ್ಟಿದ್ದವು. ಪೋರ್ಚುಗೀಜರ ಈ ರೀತಿಯ ಗುಪ್ತಚರ್ಯ ಚಟುವಟಿಕೆಯಿಂದಾಗಿ ಈ ಎಲ್ಲ ಭಾಗಗಳಲ್ಲಿ ವ್ಯವಹರಿಸುವ ವ್ಯಾಪಾರ ಕುಂಠಿತವಾಯಿತಲ್ಲದೇ ಅವರಿಗೆ

ನೆರೆಹೊರೆಯ ಪಟ್ಟಣಗಳ ಮಧ್ಯದಲ್ಲಿ ಸಂಚರಿಸುವುದೂ ಅಸಾಧ್ಯವಾಯಿತು. ಹೀಗಾಗಿ ತಲ್ನಾರ (ತಲೈಮನ್ನಾರ, ರಾಮನಾಡ)ದಿಂದ ಬರುತ್ತಿದ್ದ ಅಕ್ಕಿಯ ಆಮದು ಅಸ್ತವ್ಯಸ್ತವಾಯಿತು. ತತ್ಪರಿಣಾಮವಾಗಿ ದೇಶದಾದ್ಯಂತ ಹಿಂದೆಂದೂ ಕಾಣದ ಬಡತನ, ಬರಗಾಲ ಮತ್ತು ಉಪವಾಸದ ಸ್ಥಿತಿ ಸಂಭವಿಸುವಂತಾಯಿತು. ಎಲ್ಲ ಬಂದರಗಳು ಪೋರ್ಚುಗೀಜರ ಹತೋಟಿಯಲ್ಲಿ ಇದ್ದದ್ದುದರಿಂದ ಎಲ್ಲ ರಫ್ತು ಮತ್ತು ಆಮದು ಸ್ಥಗಿತವಾಯಿತು. ಇದಲ್ಲದೆ ಕರಾವಳಿಗುಂಟ ಹಾಯಿದು ಹೋಗುತ್ತಿದ್ದ ಪ್ರತಿ ಹಡಗವನ್ನು ಅವರು ಹಿಡಿಯುತ್ತಿದ್ದರು. "ಓ ನಮ್ಮ ಪ್ರಭುವೆ! ದಮನಕಾರಿಗಳಿಂದ ತುಂಬಿರುವ ಈ ಪಟ್ಟಣದಿಂದ ನಮ್ಮನ್ನು ಉಳಿಸು; ನಿನ್ನಿಂದ ಬಂದ ನಮ್ಮನ್ನು ಎತ್ತಿ ಹಿಡಿದು ರಕ್ಷಿಸು !" ಹೀಗೆ ಅಲ್ಲಾಹನಿಗೆ ಮೊರೆ ಇಡುವುದನ್ನು ಬಿಟ್ಟು ಮುಸಲ್ಮಾನರು ಮತ್ತೇನನ್ನು ಮಾಡಬಲ್ಲರು !

ವಸ್ತುಸ್ಥಿತಿ ಹೀಗಿರುವಾಗ ಹಿ.ಶ.೯೯೨(ಕ್ರಿ.ಶ.೧೫೮೪)ರ ವ್ಯಾಪಾರೀ ಚಟುವಟಿಕೆಯ ಕಾಲದಲ್ಲಿ ಪೋರ್ಚುಗೀಜರು ಮತ್ತೊಮ್ಮೆ ಝಮೊರಿನ್ನನೊಡನೆ ಒಪ್ಪಂದ ಮಾಡಿಕೊಳ್ಳಲು ಪ್ರಯತ್ನಿಸಿದರು. ಕೊನೆಗೆ ಅವರು ಕೆಳಗಿನ ಕರಾರುಗಳನ್ನು ಒಪ್ಪಿಕೊಂಡರು: ಪೋರ್ಚುಗೀಜರು ಪೊನ್ನಾನಿಯಲ್ಲಿ ಕೋಟೆಯೊಂದನ್ನು ಕಟ್ಟಲು ಅನುಮತಿ ಇದೆ; ಮುಸಲ್ಮಾನರ ವಶದಲ್ಲಿರುವ ಪೋರ್ಚುಗೀಜರನ್ನು ಪೋರ್ಚುಗೀಜ ವೈಸರಾಯನಿಗೆ ಒಪ್ಪಿಸಬೇಕು ಮತ್ತು ಸೆರೆಯಾಗಿರುವ ಝಮೊರಿನ್ನನ ಪ್ರಜೆಗಳನ್ನು ಝಮೊರಿನ್ನನಿಗೆ ಒಪ್ಪಿಸಿಕೊಡಬೇಕು. ಆ ಪ್ರಕಾರ ತಮ್ಮ ವಶದಲ್ಲಿದ್ದ ಪೋರ್ಚುಗೀಜ ಕೈದಿಗಳನ್ನು ತತ್‌ಕ್ಷಣವೇ ಮುಸಲ್ಮಾನರು ಪೋರ್ಚುಗೀಜ ವೈಸರಾಯನಿಗೆ ಒಪ್ಪಿಸಿದರು. ಪೋರ್ಚುಗೀಜರ ವಶದಲ್ಲಿದ್ದ ಮುಸಲ್ಮಾನ ಕೈದಿಗಳು ಸಂಖ್ಯೆಯಲ್ಲಿ ಕೆಲವರೇ ಇದ್ದರು.

ಪೋರ್ಚುಗೀಜರು ಝಮೊರಿನ್ನನಿಗೆ ಅವನ ಜನರನ್ನು ಒಪ್ಪಿಸಿದರು. ಪೋರ್ಚುಗಲ್ಲದಿಂದ ಹೊಸ ವೈಸರಾಯ ಬಂದ ಮೇಲೆ ಬರುವ ವರ್ಷ ಕೋಟೆಯನ್ನು ಕಟ್ಟಿಸುವುದು ಆರಂಭವಾಗಬೇಕೆಂದು ನಿರ್ಣಯಿಸಲಾಯಿತು.

ಹೊಸ ವರ್ಷ ಪೋರ್ಚುಗಲ್ಲದಿಂದ ನಾಲ್ಕು ಹಡಗುಗಳು ವ್ಯಾಪಾರದ ಋತುವಿನ ಆರಂಭದಲ್ಲಿ ಬಂದವು. ಒಂದು ಹಡಗದಲ್ಲಿ ಪೋರ್ಚುಗಲ್ಲದಿಂದ ಬಂದ ಹೊಸ ವೈಸರಾಯ ಇದ್ದನು. ಎರಡು ಹಡಗುಗಳು ಗೋವಾ ಬಂದರಕ್ಕೂ ಇನ್ನುಳಿದ ಎರಡು ಹಡಗುಗಳು ಕೊಲ್ಲಾಮ್‌ಕ್ಕೂ ಬಂದಿಳಿದವು. ಅದಾದ ಬಳಿಕ ಈ ಮೊದಲಿನ ವೈಸರಾಯನು ಹೊಸ ವೈಸರಾಯನಿಗೆ ಅಧಿಕಾರ ಹಸ್ತಾಂತರಿಸಿದನು.

ಹೊಸ ವೈಸರಾಯನು ಕಾಲಿಕತ್ತದಲ್ಲಿ ಇಳಿಯದೆ ನೇರವಾಗಿ ಗೋವಾಕ್ಕೆ ಹೋದನು. ಆದ್ದರಿಂದ ಝಮೊರಿನ್ನನಿಗೆ ಹೊಸ ವೈಸರಾಯನನ್ನು ಭೆಟ್ಟಿಯಾಗುವುದು ಮತ್ತು ಅವನಿಗಾಗಿ ಸಿದ್ಧವಿಟ್ಟಿದ್ದ ಕಾಣಿಕೆಗಳನ್ನು ಕೊಡುವುದು ಆಗಲಿಲ್ಲ.

ವೈಸರಾಯನು ಗೋವಾಕ್ಕೆ ಆಗಮಿಸಿದ ಬಳಿಕ ಝುಮೊರಿನ್ನನು ತನ್ನ ಕೆಲವು ಗಣ್ಯ ವ್ಯಕ್ತಿಗಳನ್ನು ಅವನಲ್ಲಿಗೆ ಕಳಿಸಿದನು. ಅವರು ವೈಸರಾಯನನ್ನು ಭೆಟ್ಟಿಯಾಗಿ ಸಂಬಂಧಿಸಿದ ವಿಷಯಗಳನ್ನು ಚರ್ಚಿಸಿ ಹೊಸ ಒಪ್ಪಂದಕ್ಕೆ ರುಜು ಹಾಕಿದರು.

ಹೊಸ ಒಪ್ಪಂದದ ಆಧಾರದನ್ವಯ ಝುಮೊರಿನ್ನನ ಪ್ರಜೆಗಳು ಮೊದಲಿನಂತೆ ಗುಜರಾತ ಮುಂತಾದ ಸ್ಥಳಗಳಿಗೆ ತಮ್ಮ ಹಡಗು ಪ್ರಯಾಣಗಳನ್ನು ಆರಂಭಿಸಿದರು. ಅದೇ ವರ್ಷ, ವ್ಯಾಪಾರ ಕಾಲ ಮುಗಿಯುವ ಮುಂಚೆ ಸರಕು ಸಾಮಗ್ರಿಗಳನ್ನು ಹೇರಿಕೊಂಡ ಎರಡು ಹಡಗುಗಳು ಕಾಲಿಕತ್ತದಿಂದ ಅರೇಬಿಯಾದ ಕಡಲ ದಂಡೆಗೆ ಸಾಗಿದವು.

ಪರಮ ದಯವಂತನಾದ ಓ ಅಲ್ಲಾಹ! ಮುಸಲ್ಮಾನರಿಗೆ ಸುಸ್ಥಿತಿಯನ್ನು ತಂದು ಕೊಡು. ಎಲ್ಲವೂ ನಿನ್ನ ಕರುಣೆಯೇ ! ಎಲ್ಲ ಸ್ತುತಿಯೂ ನಿನಗಾಗಿಯೇ ಮುಡುಪಾಗಿದೆ!

■

*

ವಿಜಯಪುರಕ್ಕೆ ಅಸದ ಬೇಗನ ನಿಯೋಗ

ಪ್ರಾಸ್ತಾವಿಕ: ಅಸದಬೇಗನು ಖಾಜ್ವಿನ್ನದಲ್ಲಿ ಹುಟ್ಟಿ ಬೆಳೆದವನಾಗಿದ್ದನು. ಬಾಳಿನಾರಂಭದಲ್ಲಿಯೇ ಅವನು ಹಿರಾತಕ್ಕೆ ಬಂದನು. ಅಲ್ಲಿಯ ಸಾಹಿತ್ಯಲೋಕದಲ್ಲಿ ತನಗೊಂದು ಸ್ಥಾನ ಪಡೆದುಕೊಂಡು ಶ್ರೇಷ್ಠ ಕವಿಯೆಂದೂ ಮತ್ತು ಗದ್ಯ ಲೇಖಕನೆಂದೂ ಖ್ಯಾತಿ ಪಡೆದನು. ತದನಂತರ ೧೫೮೫ರ ಸುಮಾರಿಗೆ ಮುಘಲ ಆಸ್ಥಾನಕ್ಕೆ ಬಂದನು; ಅಕಬರ ಖ್ಯಾತಿವೆತ್ತ ಮಂತ್ರಿ ಅಬುಲ್ ಫಜಲ್‌ನ ಸೇವೆಯಲ್ಲಿ ಸೇರ್ಪಡೆಯಾದನು. ಅಸದ ಬೇಗನು ವಿದ್ವಾಂಸನೆಂದು ಹೆಸರು ಗಳಿಸಿದ್ದರಿಂದ ಸ್ವತಃ ಬಹು ದೊಡ್ಡ ವಿದ್ವಾನ್ ಆಗಿದ್ದ ಅಬುಲ್ ಫಜಲ್‌ನು ಅವನಿಗೆ (ಬೇಗನಿಗೆ) ರಾಜಾಶ್ರಯ ನೀಡಿರಲಿಕ್ಕೆ ಬೇಕು. ಅಬುಲ್ ಫಜಲ್ಲನ ಸೇವೆಯಲ್ಲಿದ್ದಾಗಲೇ ಬೇಗನು ಸಾಮ್ರಾಟ ಅಕ್ಬರನ ಲಕ್ಷ್ಯ ಸೆಳೆದುಕೊಂಡನಲ್ಲದೇ ೧೬೦೨ರಲ್ಲಿ ಅಬುಲ್ ಫಜಲ್ಲನ ಕೊಲೆಯಾದ ಮೇಲೆ 'ಕಾಣಿಕೆಗಳ ಕೋಶಾಧಿಕಾರಿ' ಎಂದು ಆಸ್ಥಾನದಲ್ಲಿ ನೇಮಕಗೊಂಡನು ಮತ್ತು ಒಂದಕ್ಕಿಂತ ಹೆಚ್ಚು ಬಾರಿ ದಕ್ಷಿಣ ಭಾರತದ ಸುಲ್ತಾನರಲ್ಲಿಗೆ ನಿಯೋಗದ ಮುಂದಾಳು ಆಗಿ ಕಳಿಸಲ್ಪಟ್ಟನು.

ಅಕ್ಬರನ ಮರಣಾನಂತರ ಕೆಲಕಾಲ ರಾಜಕೃಪೆ ಕಳೆದುಕೊಂಡನು. ಆದರೆ ನಂತರ ಮತ್ತೆ ಆಸ್ಥಾನದಲ್ಲಿ ಸ್ವೀಕಾರಗೊಂಡನಲ್ಲದೆ ಜಹಾಂಗೀರನ ಆಳ್ವಿಕೆಯ ಕೊನೆ ಸಮೀಪಿಸಿದಾಗ ಪೀಶ್ರಾವು ಖಾನ ಎಂಬ ಬಿರುದಿನೊಂದಿಗೆ ಸನ್ಮಾನಿಸಲ್ಪಟ್ಟನು. ಈತನು ಶಹಾಜಹಾನನ ಆಳಿಕೆಯ ಆರಂಭದಲ್ಲಿ ಮೃತನಾದನು. ಸುಪ್ರಸಿದ್ಧ ಗ್ರಂಥ 'ವಕಾಯೀತ್-ಅಸದ ಬೇಗ'ವನ್ನು ಈ ಅಸದಬೇಗ ರಚಿಸಿದ್ದಾನೆ. ಈ ಗ್ರಂಥ ಅಕ್ಬರನ ಆಳಿಕೆಯ ಕೊನೆವರ್ಷಗಳಲ್ಲಿ (೧೬೦೨-೧೬೦೫) ಘಟಿಸಿದ ಘಟನೆಗಳಿಗೆ ಸಂಬಂಧಿಸಿದ ವಿವರಗಳನ್ನು ನೀಡುತ್ತದೆ. ಹಾಗೆಯೆ ಜಾಹಂಗೀರನು ಪಟ್ಟಕ್ಕೆ ಬಂದದ್ದನ್ನು ಕುರಿತು ಪ್ರಸ್ತಾಪಿಸುತ್ತ ಕೊನೆಗೊಳ್ಳುತ್ತದೆ. 'ದ ಹಿಸ್ಟರಿ ಆಫ್ ಇಂಡಿಯಾ' ಈ ಗ್ರಂಥದ ಸಂಪುಟ

-ರಲ್ಲಿ "ವಕಾಯೀ" ಇದರ ಕೆಲವೊಂದು ಭಾಷಾಂತರಿತ ಭಾಗಗಳನ್ನು ಎಲಿಯಟ್ ಮತ್ತು ಡೌಜನ್, ಬೇಗ್‌ನು ಕೈಕೊಂಡ ನಿಯೋಗವನ್ನು ವಿವರಿಸುವ ಕೆಲವು ಉದ್ಧೃತ ಭಾಗಗಳನ್ನು ನಾನು ಇಲ್ಲಿ ಈ ಲೇಖನದಲ್ಲಿ ಕೊಟ್ಟಿದ್ದೇನೆ. ಇದನ್ನು ಎಲಿಯಟ್ ಮತ್ತು ಡೌಜನ್ ಬಳಸಿಲ್ಲ ಮತ್ತು ಬೇರೆ ಕಡೆಯಲ್ಲಿಯೂ ಪ್ರಕಟಗೊಂಡಿಲ್ಲ. ಆದಿಲ್‌ಶಾಹಿ ಇತಿಹಾಸದ ವಿದ್ಯಾರ್ಥಿಗಳಿಗೆ ಈ ಉದ್ಧರಣೆಗಳು ವಿಶೇಷ ಉಪಯುಕ್ತವಾಗಿವೆ.

■

ಮೂಲ : ಡಾ. ಸಿ.ಎಂ. ಜೋಶಿ ಅವರ ಇಂಗ್ಲಿಶ್ ಲೇಖನದಿಂದ 'Asad Beg's mission to Bijapur, Potdar communication volume 1950'

*

ಅಕ್ಬರ್ ಮತ್ತು ಇಬ್ರಾಹಿಮ ಆದಿಲಶಾಹಿ: ಮೀರ ಜಮಾಲ ಉದ್ದೀನನ ಮಹತ್ಕಾರ್ಯ

೧೫೯೦ರಷ್ಟೊತ್ತಿಗೆ ಸಮಸ್ತ ಉತ್ತರ ಭಾರತವು ಅಕ್ಬರನ ಅಧೀನಕ್ಕೊಳಗಾಗಿತ್ತು; ಅವನ ಮಹತ್ವಾಕಾಂಕ್ಷೆಗೆ ಉಳಿದೊಂದೇ ಕ್ಷೇತ್ರ ಹಾಗೂ ಅವನ ಶಸ್ತ್ರಗಳಿಗೆ ಸಲ್ಲಬೇಕಾದ ಒಂದೇ ಒಂದು ಬಹುಮಾನವೆಂದರೆ ದಕ್ಷಿಣ ಭಾರತವೊಂದೇ ಉಳಿದಿತ್ತು. "ಯಾವಾಗಲೂ ದಕ್ಷಿಣ ಭಾರತವನ್ನು ಕುರಿತೇ ಧ್ಯಾನಿಸುತ್ತಿದ್ದ" ಅಕ್ಬರನು ೧೬೦೧ರ ಜನೆವರಿಯಲ್ಲಿ ಅಸೀರವನ್ನು ಮುತ್ತಿದನು ಮತ್ತು ಬಹು ಬೇಗನೆ ಅಹಮದ ನಗರವನ್ನು ಆಕ್ರಮಿಸಿಕೊಂಡನು (ಎಪ್ರಿಲ್ ೧೬೦೧). ಬಿಜಾಪುರ ಮತ್ತು ಗೋವಳಕೊಂಡ ಇವುಗಳ ಸುಲ್ತಾನರು ಮುಘಲರ ಮುನ್ನಡೆಯಿಂದ ಗಾಬರಿಗೊಂಡು ವಿಜೇತ ಮುಘಲರ ಮುಂದಿನ ಬಲಿ ತಾವೇ ಎಂದು ಮನಗಂಡರು. ಆದ್ದರಿಂದ ಅಕ್ಬರನನ್ನು ಸಂಪ್ರೀತಗೊಳಿಸಲು ಸ್ವಾಭಾವಿಕವಾಗಿ ಅವರು ಕಾತುರಗೊಂಡರು. ದಕ್ಷಿಣಕ್ಕೆ ಅಕ್ಬರನು ಸಾಗಿ ಬರುತ್ತಿದ್ದಾಗಲೇ ತಮ್ಮ ರಾಜದೂತರನ್ನು ಕಳುಹಿಸಿ ಅವರು ವಿನೀತ ಪ್ರಾರ್ಥನೆ ಸಲ್ಲಿಸಿದ್ದರು. ಬಿಜಾಪುರದ ೨ನೆಯ ಇಬ್ರಾಹಿಮ್ ಆದಿಲ್‌ಶಾಹನು (೧೫೮೦–೧೬೨೭) ದಕ್ಷಿಣ ಭಾರತದಲ್ಲಿಯೇ ಬಹು ಬಲಾಢ್ಯ ರಾಜನಾಗಿದ್ದನು; ಇವನು ತನ್ನ ಮಗಳಾದ ಬೇಗಂ ಸುಲ್ತಾನಾಳನ್ನು ಮದುವೆ ಮಾಡಿಕೊಡುವುದಾಗಿ ಪ್ರಸ್ತಾಪಿಸಿದನು. ಈ ಇಂಗಿತದ ಸೂಚನೆಗಳಿಗೆ ಪ್ರತಿಕ್ರಿಯಿಸುತ್ತಾ ಅಕ್ಬರನು ಶರೀಫ ಸರ್ಮಾತಿ ಎಂಬ ದೂತನನ್ನು ಕಳಿಸಿದನು ಮತ್ತು ಅವನ ಮೂಲಕ ಅವರ ಭಯವನ್ನು ಪರಿಹರಿಸುತ್ತ ಅವರ ವಿರುದ್ಧ (ಆ ಸುಲ್ತಾನರ ವಿರುದ್ಧ) ಯಾವ ಆಕ್ರಮಣಕಾರಿ ಯೋಜನೆ ತನ್ನದಾಗಿಲ್ಲ ಎಂದು ಸ್ಪಷ್ಟಪಡಿಸಿದನು.

ಶರೀಫ ಸರ್ಮಾದಿಯ ಹಿಂದೆಯೇ ಮದುವೆಯನ್ನು ಕುರಿತು ಹಾಗೆಯೇ ದಾನಿಯಾಲನ ಡೆಕ್ಕನ್‌ದಲ್ಲಿಯ ಪಾಳಯಕ್ಕೆ ವಧುವನ್ನು ಕರೆದೊಯ್ಯಲು ಚರ್ಚಿಸಲು ಇನ್ನೊಬ್ಬ ರಾಜದೂತನು ಅಕ್ಬರನ ಆಸ್ಥಾನದಿಂದ ಆದಿಲ್‌ಶಾಹಿಯ ದರ್ಬಾರಕ್ಕೆ ಬಂದನು. ಆ ಇನ್ನೊಬ್ಬ ರಾಜದೂತನೆಂದರೆ ಮೀರ ಜಮಾಲ ಉದ್ದೀನ್ ಹುಸೇನ ಅಂಜು; ಅವನು ತನ್ನೊಡನೆ ಭಾವಿ ವಧುವಿಗೆ ಮತ್ತು ಅವಳ ತಂದೆಗೆ ಅನೇಕ ಕಾಣಿಕೆಗಳನ್ನು ತಂದಿದ್ದನು. ಮೀರ ಜಮಾಲ ಉದ್ದೀನನು ದಕ್ಷಿಣಭಾರತದ (ಡೆಕ್ಕನ್ನದ) ಮುಖಾಂತರವಾಗಿಯೇ ಮುಘಲ ದರ್ಬಾರಕ್ಕೆ ವಲಸೆ ಬಂದಿದ್ದನು. ಪರ್ಶಿಯಾದಿಂದ ಮೊದಲು ಡೆಕ್ಕನ್ನಕ್ಕೆ ಬಂದಿದ್ದ ಈತನು ದಕ್ಷಿಣದ ಸುಲ್ತಾನರ ಕೃಪೆಯಲ್ಲಿ ಸುಭದ್ರ ಸ್ಥಾನ ಹೊಂದಿದ್ದನು ಮತ್ತು ಅವರು ಅವನನ್ನು ಮರ್ಯಾದೆಯಿಂದ ನೋಡಿಕೊಂಡಿದ್ದರು. ಆದ್ದರಿಂದ ಈ ಮಹತ್ವದ ಕೆಲಸಕ್ಕೆ ಅಕ್ಬರನು ಅವನನ್ನು ಆಯ್ಕೆ ಮಾಡಿದ್ದು ಸ್ವಾಭಾವಿಕವಾಗಿತ್ತು.

ಮೀರ ಜಮಾಲ ಉದ್ದೀನನ ಬಿಜಾಪುರ ವಾಸವು ದೀರ್ಘವಾಗಿರಬೇಕಾದದ್ದು ದೈವನಿರ್ಧರಿತವಾಗಿತ್ತು. ವಧು ಮತ್ತು ಅವಳ ತಂದೆ ೨ನೆಯ ಆದಿಲ್‌ಶಾಹ ಮದುವೆಯನ್ನು ಕುರಿತು ಮನಸ್ಸು ಬದಲಿಸಿದಂತಿತ್ತು ಮತ್ತು ಹಾಗೆ ವಿಲಂಬಿಸುವುದರಿಂದ ಅನಿವಾರ್ಯವಾದದ್ದರಿಂದ ತಪ್ಪಿಸಿಕೊಳ್ಳಬಹುದೆಂಬ ಆಸೆ ಹೊಂದಿದ್ದರಿಂದ ಸಾಧ್ಯವಿದ್ದಷ್ಟು ಮುಂದೂಡುತ್ತ ಹೋಗಲು ಕಾತುರರಾಗಿದ್ದರು ಎಂದು ತೋರುತ್ತದೆ. ಬಹುಶಃ ದಾನಿಯಾಲನ ಕುಪ್ರಸಿದ್ಧ ಕುಡಿತ ವ್ಯಸನವು ಅವರ ಮನಸ್ಸನ್ನು ಬದಲಿಸಿದಂತಿತ್ತು. ಪರಿಣಾಮವೆಂದರೆ ಮೀರನು ವಿಜಾಪುರದಲ್ಲಿ ಹೆಚ್ಚುಕಾಲ ಇರುವಂತೆ ಅವನ ಮನ ಬದಲಿಸಲಾಯಿತು; ಇಬ್ರಾಹಿಮನ ರಾಜಾತಿಥ್ಯವು ಅವನಿಗೆ ಬಹಳ ಇಷ್ಟವಾಯಿತು ಮತ್ತು ಇದಕ್ಕಿಂತ ಹೆಚ್ಚಿನ ಮಹತ್ವದ ಕಾರಣವೆಂದರೆ "ಪ್ರತಿ ವರ್ಷ ಮೂರು ವರ್ಷಕ್ಕೊಮ್ಮೆ ಅವನು ಬಿಜಾಪುರ ಮತ್ತು ಗೊವಳಕೊಂಡಗಳಿಂದ ಮೂರರಿಂದ ನಾಲ್ಕು ಸಾವಿರ ಪಗೋಡಾಗಳನ್ನು ಪಡೆಯುತ್ತಿದ್ದನು" ಅಕ್ಬರನ ಡೆಕ್ಕನ್ ಸೇನಾನಿ ಸುಪ್ರಸಿದ್ಧ ಖಾನ ಖಾನಾನ ಈತನು ಮೀರನ ಈ ನಡತೆಗೆ ಪ್ರೋತ್ಸಾಹ ಕೊಡುತ್ತಿದ್ದದ್ದು ಕಾರಣವಾಗಿತ್ತು. ಖಾನಖಾನಾನನ ಮಗಳೊಬ್ಬಳನ್ನು ರಾಜಕುಮಾರ ದಾನಿಯಾಲನಿಗೆ ಮದುವೆ ಮಾಡಿಕೊಡಲಾಗಿತ್ತು. ರಾಜಕುಮಾರ ದಾನಿಯಾಲನಿಗೆ ರಾಜಮನೆತನದ ಕನ್ಯೆಯೊಡನೆ ಮದುವೆ ಆಗುವುದು ಖಾನನಿಗೆ ಇಷ್ಟವಿರಲಿಲ್ಲವೆಂದು ಸ್ಪಷ್ಟವಾಗುತ್ತದೆ; ಅವನ ಭಯವೆಂದರೆ ಹಾಗಾದಲ್ಲಿ ತನ್ನ ಮಗಳು ತನ್ನ ಸ್ಥಾನವನ್ನು ರಾಜವಧುವಿಗೆ ಬಿಟ್ಟುಕೊಡಬೇಕಾಗುತ್ತಿತ್ತು. ಮೀರನಿಗೆ ಮುಘಲ ಸೇನಾನಿ ನೆರವು ನೀಡಲು ಇನ್ನೊಂದು ಕಾರಣವೇನೆಂದರೆ (ಹೀಗೆ ಮಾಡುವುದರಿಂದ ಅಕ್ಬರನಿಗೆ ಮನಸ್ತಾಪವಾಗುತ್ತಿದ್ದರೂ) ಮೀರ ಜಮಾಲಉದ್ದೀನನ ಮಗ ಮೀರ ಅಮೀನ ಉದ್ದೀನನಿಗೆ ಅವನ ಒಬ್ಬ ಮಗಳನ್ನು ಮದುವೆ ಮಾಡಿಕೊಡಲಾಗಿತ್ತು.

ಡೆಕ್ಕನ್ನಕ್ಕೆ ಹೋಗಲು ಅಸದ ಬೇಗನಿಗೆ ಆಜ್ಞೆ:

"ಮೀರ ಜಮಾಲ ಉದ್ದೀನನು ತನ್ನ ಕಾರ್ಯವನ್ನು ಮುಂದೂಡುತ್ತಲೇ ಸಾಗಿದ್ದ ನಡತೆಯಿಂದ ಅಕ್ಬರನು ರೇಗಿದನು" ಇನ್ನೂ ತಡವಾಗುವುದಕ್ಕೆ ಸಬೂಬುಗಳನ್ನು ಮೀರನು ಹೇಳುತ್ತಿರುವ ಬಗ್ಗೆ ವರದಿ ಬಂದಾಗ ಬಹು ಕ್ರುದ್ಧಗೊಂಡ ಸಾಮ್ರಾಟನು ತತ್‌ಕ್ಷಣವೇ ಅಸದಬೇಗನಿಗೆ ಆಜ್ಞಾಪಿಸುತ್ತ ಹೇಳಿದನು. "ನಿನ್ನನ್ನು ಡೆಕ್ಕನ್ನಗೆ ನೇಮಿಸಿದ್ದೇನೆ. ಅಲ್ಲಿಯ ಸೇವೆಯು ನಿನಗೆ ಸಮೃದ್ಧ ಸಂಪತ್ತಿನ ಭರವಸೆಯಾಗಿದೆ" ಮೀರ ಜಮಾಲ ಉದ್ದೀನನನ್ನು "ಅವನಿಗೆ ತಿನ್ನಲು ಅಥವಾ ಕುಡಿಯಲು ಕೊಡದೆ" ಹಿಂದಕ್ಕೆ ಕರೆತರಬೇಕೆಂದು ಅಸದಬೇಗನಿಗೆ ತಿಳಿಸಲಾಯ್ತು. ರಾಜಾಜ್ಞೆಗೆ ವಿಧೇಯನಾಗಿ "ನಾನು ನನ್ನ ಗೌರವಾರ್ಪಣೆ ಸಲ್ಲಿಸಲು ತೊಡಗಿದಾಗ ಆಸಫಖಾನನು ಎದುರು ಬಂದು ನಿಂತನು. ಮೀರ ಜಮಾಲ ಉದ್ದೀನನನ್ನು ಹಿಂದಕ್ಕೆ ಕರೆತರಲು ನನ್ನನ್ನು ಡೆಕ್ಕನ್ನಕ್ಕೆ ಕಳಿಸುತ್ತಿರುವುದಾಗಿ ಸಾಮ್ರಾಟನು ಹೇಳಿದನು. ಆಗ ಅವನು ಮೀರ ಜಮಾಲ ಉದ್ದೀನನ ಪತ್ರವನ್ನು ತೋರಿಸಿದನು. ನನಗೆ ಬಹುದೊಡ್ಡ ಮರ್ಯಾದೆ ಸಿಕ್ಕಿತೆಂದು ಅಸಫಖಾನನು ಹೇಳಿದನು ಮತ್ತು ಪತ್ರ ಓದುತ್ತ ಅದೆಲ್ಲ ನಟನೆಯೆಂದು ಅಂದನು. 'ನಿಜವಾಗಿಯೂ' ಎಂದು ಸಾಮ್ರಾಟನು ದನಿಗೂಡಿದನು. ಸಾಮ್ರಾಟನು ಡೆಕ್ಕನ್ನದಲ್ಲಿ ಸೇವೆಯಲ್ಲಿದ್ದ ಅಧಿಕಾರಿಗಳ ಪಟ್ಟಿಯನ್ನು ಸಾದರಪಡಿಸಲು ಶೇಖ ಫರಿದನಿಗೆ ಆಜ್ಞಾಪಿಸಿದನು. ಅವನು ಯುಸೂಫ ಖಾನನೊಂದಿಗೆ ಕೂಡಿಕೊಂಡು ಫರ್ಮಾನ್ಸ್ ಪ್ರಕಟಿಸಿದನು; ರಾಜಕುಮಾರನಿಗೆ ಖಾನಾ ಖಾನಾನನಿಗೆ ಮತ್ತು ಉಳಿದ ಅಧಿಕಾರಿಗಳಿಗೆ ಕೊಡಲು ಕುದುರೆಗಳನ್ನು ಮತ್ತು ಮರ್ಯಾದಾ ಪೋಷಾಕುಗಳನ್ನು ಸಿದ್ಧ ಇಡಲಾಯಿತು. ಈ ಕಾರ್ಯವನ್ನು ಎಲ್ಲ ರೀತಿಯ ಸೌಜನ್ಯದಿಂದ ನೆರವೇರಿಸಬೇಕೆಂದು ಆಜ್ಞಾಪಿಸುವುದಲ್ಲದೆ ಪ್ರತಿಯೊಬ್ಬ ಅಧಿಕಾರಿಯ ಅಂತಸ್ತು ಮತ್ತು ಸ್ಥಾನಗಳ ಪ್ರಕಾರ ನೀಡಲು ಕಾಣಿಕೆಗಳನ್ನು ಕೊಡಲಾಯಿತು. ತನ್ನ ಮಂತ್ರಿ ಮಿರ್ಜಾ ಫಿಯಾಸ ಬೇಗನಿಗೆ ಆಜ್ಞಾಪಿಸುತ್ತ ನನಗೆ ಎಲ್ಲ ಸಿದ್ಧತೆಗೆ ಬೇಕಾಗಬಹುದಾದ ಖರ್ಚಿಗಾಗಿ ೨೦೦೦/- ರೂಪಾಯಿಗಳನ್ನು ನನ್ನ ಕೈಯಲ್ಲಿ ಕೊಡಲು ಹೇಳಿ. ಬಹು ಬೇಗನೆ ಹೊರಡಲು ಹೇಳಿದನು.

ಮಂಗಳವೇಢೆಯಲ್ಲಿ ಅಸದ ಬೇಗನ ನಿಲ್ಗಡೆ

"ಆದಿಲ್‌ಶಾಹನ ಭೂಮಿಯಲ್ಲಿ ಕಾಲಿಟ್ಟಾಗ ಅವನನ್ನು ಭೆಟ್ಟಿಯಾಗುವ ದಿಶೆಯಲ್ಲಿ ನನ್ನ ಲಕ್ಷ್ಯವನ್ನು ಹೊರಳಿಸತೊಡಗಿದೆನು. ಮಂಗಳವೇಢೆಗೆ ಹೋಗುವ ದಾರಿಯ ಎರಡು ಘಟ್ಟಗಳನ್ನು ದಾಟಿ ನಾನು ಬಂದಾಗ ಅಲ್ಲಿ ಮೀರ ಜಮಾಲ ಉದ್ದೀನ್ ಹುಸೇನ ಮತ್ತು ಆದಿಲ್‌ಖಾನನ ಸೇನಾನಿ ಮುಸ್ತಾಫಾಖಾನ ಇವರಿದ್ದ ಕ್ಷೇತ್ರ ಅದಾಗಿತ್ತು. ಮೀರನು ನನ್ನ ಪತ್ರಕ್ಕೆ ಉತ್ತರಿಸಿದ್ದ ಪತ್ರವನ್ನು ನನಗೆ ಕೊಡಲಾಯಿತು. ಆ ಪತ್ರವು

ಮಿತ್ರತ್ವ ಮತ್ತು ಸೌಜನ್ಯತೆ ಏನೆಂದರೆ ಮುಸ್ತಫಾಖಾನನ ಮಗನು ಸೈನಿಕರ ತುಕಡಿಯೊಂದಿಗೆ ಮರುದಿನ ಬಂದು ನನ್ನನ್ನು ಭೆಟ್ಟಿಯಾಗುವವನೆಂದೂ, ಅದರ ಮರುದಿನ ಹೈಬತ್‌ಖಾನನು ಬರುವನು ಮತ್ತು ಮೂರನೆಯ ದಿನ ಮುಸ್ತಫಾನು ತನ್ನ ಆನೆಗಳು ಮತ್ತು ಸರದಾರರನ್ನು ಕೂಡಿಕೊಂಡು ಬರುವನೆಂದೂ ತಿಳಿಸಲಾಗಿತ್ತು. ಆದರೆ, ಆದಿಲ್‌ಖಾನನ ಆಜ್ಞೆ ಬಂದು ತಲುಪಿದಾಗ ತಿಳಿದಿದ್ದೆಂದರೆ ಮೀರನು ಪತ್ರದಲ್ಲಿ ವರ್ಣಿಸಿದ ರೀತಿಯಲ್ಲಿ ನನ್ನನ್ನು ಖಾನನು ಬರಮಾಡಿಕೊಳ್ಳುವಂತೆ ಬಯಸಿರಲಿಲ್ಲ. ಯಾಕೆಂದರೆ ಆ ದಿನ ಮುಸ್ತಾಫನ ಮಗನು ಮತ್ತು ಹೈಬತ್‌ಖಾನರು ತಮ್ಮ ಸಮಸ್ತ ಸೈನ್ಯದೊಡನೆ ಬಂದು ಭೆಟ್ಟಿಯಾದರು ಮತ್ತು ಮಂಗಳವೇಢೆ ಒಂದು ಕೋಸದೊಳಗಿರುವಾಗ ಸ್ವತಃ ಸೈಯದನು ತನ್ನ ಮಕ್ಕಳು ಮತ್ತು ಪರಿಚಾರಕರೊಡನೆ ಭೆಟ್ಟಿಯಾಗಲು ಬಂದನು ಮತ್ತು ನಾನು ಅವನಿಗೆ ಪ್ರಭುವಿನ ಫರ್ಮಾನ್ನವನ್ನು ಮುಟ್ಟಿಸಿದೆನು. ಮರ್ಯಾದೆ ಮತ್ತು ಮಿತೃತ್ವದ ಯಾವ ಅಂಶವನ್ನೂ ಬಿಡದೆ ಅವನು ನನಗೆ ಅತ್ಯಂತ ಗರಿಷ್ಠ ಗಮನವನ್ನು ಮತ್ತು ಮೃದು ನಡತೆಯನ್ನು ತೋರಿದನು. ಆದಿಲ್‌ಖಾನನ ಶ್ರೇಷ್ಠ ಸರದಾರರಲ್ಲೊಬ್ಬನಾದ ಮುಸ್ತಾಫಾಖಾನ ಇವರೆಲ್ಲರೂ ನನಗೆ ಅತ್ಯಂತ ಹೆಚ್ಚಿನ ಮರ್ಯಾದೆಯನ್ನು ಸಲ್ಲಿಸಿದರು. ನಾನು ಮಂಗಳವೇಢೆಯನ್ನು ಮುಟ್ಟುವುದರೊಳಗಾಗಿ ಅಲ್ಲೊಂದು ಮನೆಯಲ್ಲಿ ನನಗಾಗಿ ವಸತಿಗೃಹವನ್ನು ಏರ್ಪಡಿಸಲಾಗಿತ್ತು ಮತ್ತು ಕೆಲಸಮಯದ ನಂತರ ಸೈಯದ ನನಗೆ ಭೆಟ್ಟಿಯಿತ್ತನು. ಎಲ್ಲ ಬಗೆಯ ಸಂತೋಷ ಮತ್ತು ಆನಂದವನ್ನು ವ್ಯಕ್ತಪಡಿಸುತ್ತ ಅವನು ನನ್ನನ್ನು ಬರಮಾಡಿಕೊಂಡನು. ಸರ್ವಶಕ್ತನು ಅವನನ್ನು ಕಾಪಾಡಲಿ, ಯಾಕೆಂದರೆ ಅವನು ನನ್ನನ್ನು ಬಹಳ ಚೆನ್ನಾಗಿ ನೋಡಿಕೊಂಡನು. ಆ ಅಪರಿಚಿತ ದೇಶದಲ್ಲಿ ನನಗೆ ಬಹಳ ನೆರವಾದನು.

"ಸೈಯದನ ಸಹವಾಸದಲ್ಲಿ ಮನಸಾರೆ ಸಂತೋಷದ ದಿನಗಳನ್ನು ಕಳೆದಾದ ಮೇಲೆ ಆದಿಲ್‌ಖಾನನ ಆಜ್ಞೆಯ ಮೇರೆಗೆ ಅವನ ಮಗಳು ನನ್ನನ್ನು ಮತ್ತೂ ಸೈಯದನನ್ನು ಸಂತೋಷಕೂಟಕ್ಕೆ ಆಹ್ವಾನಿಸಿದಳು"; ನಾವು ಸಂತೋಷದ ಹಬ್ಬದ ವಾತಾವರಣದಲ್ಲಿ ಒಂದು ದಿನ ಕಳೆದೆವು. ಸರ್ವ ಪ್ರಯತ್ನಪಟ್ಟು ಅತ್ಯಂತ ಸಮೀಚಿನ ಆಹಾರ ಮತ್ತು ಮದ್ಯವನ್ನು ನಮಗೆ ಒದಗಿಸಲಾಯಿತು. ನಾವು ನಿರ್ಗಮಿಸಲಿರುವಾಗ ಒಂದು ಸೊಗಸಾದ ಆನೆ, ಸುಂದರ ಬಾಹ್ಯಾಲಂಕಾರವುಳ್ಳ ಮತ್ತು ರಜತಾಭರಣ ಧರಿಸಿದ ಸೊಗಸಾದ ಐದು ಅರಬಸ್ತಾನದ ಕುದುರೆಗಳು, ವಿಧವಿಧದ ಐದು ವಸ್ತ್ರಗಳು, ಕರ್ನಾಟಕದಿಂದ ತರಿಸಿದ ಚಿತ್ರಾಕೃತಿಯುಳ್ಳ ಹೊಳಪಿನ ಬೆಲೆಯುಳ್ಳ ಹತ್ತಿಬಟ್ಟೆ, ವಿಧವಿಧವಾದ ರತ್ನಗಳಿಂದ ಖಚಿತವಾದ ಕರಕುಶಲದ ಸುವರ್ಣ ಹರಿವಾಣ ಮತ್ತು ಹಳದಿ ಕಿತ್ತಳೆ ಮಿಶ್ರಬಣ್ಣದ ಬಗೆಬಗೆಯ ಕಂಠಿಹಾರಗಳು, ಉಂಗುರಗಳು ಮತ್ತು ಬ್ರೋಚುಗಳು ಇವುಗಳನ್ನು, ಸುವರ್ಣ ತಟ್ಟೆಯಲ್ಲಿಟ್ಟ ಒಂಬತ್ತು ಕಟ್ಟು ವೀಳ್ಯದೆಲೆ

ಹಿಡಿವ ಪೆಟ್ಟಿಗೆಯೊಡನೆ ಅವಳು (ಖಾನನ ಮಗಳು) ನನಗೆ ಕಾಣಿಕೆಗಳನ್ನಾಗಿ ಕೊಟ್ಟಳು.

"ಕೆಲವು ದಿನಗಳವರೆಗೆ ಅವಳ ಆತಿಥ್ಯವನ್ನು ಸಂತೋಷದಿಂದ ಸ್ವೀಕರಿಸಿದೆನು. ಆ ಬಳಿಕ ಮುಸ್ತಫಾಖಾನ, ಹೈಬತ್ ಖಾನ ಮತ್ತು ರೂಮಿಖಾನನಂತಹ ಆದಿಲ್‌ಖಾನನ ಅಧಿಕಾರಿಗಳು ನನ್ನನ್ನು ಅತಿಥಿಯಾಗಿ ಬರಮಾಡಿಕೊಂಡು ತಮ್ಮ ಶಕ್ತ್ಯಾನುಸಾರ ಅರಬ ಕುದುರೆಗಳನ್ನು ಮತ್ತು ಡೆಕ್ಕನ್ನದ ಅಪರೂಪದ ವಸ್ತುಗಳನ್ನು ಕಾಣಿಕೆಗಳನ್ನಾಗಿ ಕೊಟ್ಟರು. ಭೆಟ್ಟಿಯಾದ ದಿನವೇ ಕಿಂಚಿತ್ ವಿಲಂಬವಿಲ್ಲದೇ ನಾನು ಹೊರಟು ಹೋಗಲು ದೃಢನಿಶ್ಚಯ ಹೊಂದಿದ್ದನ್ನು ಆದಿಲ್‌ಖಾನನು ಅರಿತಿದ್ದನು; ಹೀಗಾಗುವುದು ಅವನ ರೂಢಿಗತ ಸಂಪ್ರದಾಯಕ್ಕೆ ಸಂಗತವಾಗಿರಲಿಲ್ಲ ಮತ್ತು ಅದು ಅವಮಾನವೆಂದು ಬಗೆದನು; ಬ್ರಾಹ್ಮಣ ರಾಜತಾಂತ್ರಿಕರನ್ನು ಕರೆಸಿ ಅವರ ಸಹಾಯದಿಂದ ಈ ವಿಷಯ ಕುರಿತು ಮೀರನಿಗೆ ಹಲವಾರು ಪತ್ರಗಳನ್ನು ಬರೆಸಿದನು. ಈ ವಿಷಯ ಕುರಿತು ಅವನು ಪ್ರಸ್ತಾಪಿಸಿದಾಗಲೆಲ್ಲ ನಾನು ಉಳಿದೆಲ್ಲ ಉದ್ದೇಶಗಳಿಗಾಗಿ ಬಂದಿರದೆ ಕೇವಲ ಸೈಯದನನ್ನು ಕರೆದುಕೊಂಡು ಹೋಗಲು ಬಂದಿರುವುದಾಗಿ ಮತ್ತು ಪ್ರಭುವಿನಿಂದ ಆದಿಲ್‌ಖಾನನಿಗೆ ಫರ್ಮಾನ್ ತಂದಿರುವುದಾಗಿಯೂ ಅವರನ್ನು ಭೆಟ್ಟಿಯಾದೊಡನೆ ಬಲವಂತವಾಗಿ ಸೈಯದನನ್ನು ಕರೆದೊಯ್ಯಬೇಕೆಂದು ತಿಳಿಸಿದೆನು. ನನ್ನ ಅಂದೇ ಮರಳಿಹೋಗುವ ಉದ್ದೇಶವನ್ನು ಬಿಟ್ಟುಕೊಡಬೇಕು ಮತ್ತು ಖಾನನ ಅನುಮತಿ ಸಿಗುವವರೆಗೆ ನನ್ನ ನಿರ್ಗಮನವನ್ನು ಮುಂದೆ ಹಾಕಬೇಕು ಮತ್ತು ಅದಕ್ಕಾಗಿ ಖಾನನ ನಿಯೋಗಿಗಳು ೨೦೦೦೦/- ಹಂಸಗಳನ್ನು ಕೊಡಲು ಮುಂದಾಗುವ ಮಟ್ಟಿಗೆ ಈ ವಿಷಯ ಸಾಗಿತು. ಸರ್ವಥಾ ಅದಕ್ಕೆ ನಾನೊಪ್ಪಲಿಲ್ಲ. ಕೇವಲ ೨೦೦ ಸೈನಿಕ ತಂಡದ ಮುಖ್ಯಸ್ಥನಾಗಿದ್ದರೂ ನಾನು ೬೦೦೦೦/- ರೂಗಳಿಗೆ ಸಮನಾದ ೨೦೦೦೦೦/- ಪಗೋಡಾಗಳಲ್ಲಿ ಒಂದು ನಾಣ್ಯವನ್ನೂ ಮುಟ್ಟಲಿಲ್ಲ.

"ನಾನು ಹೀಗೆ ಮಾಡಿದ್ದನ್ನು ನೋಡಿ ಸೈಯದನು ಆಶ್ಚರ್ಯಪಟ್ಟು ನನಗೆ ಬಯ್ಯುತ್ತ ನಿಷ್ಠುರವಾಗಿ "ನೀನು ಹೀಗೇಕೆ ವರ್ತಿಸುತ್ತೀ? ನಿನಗಾಗಿ ಕೊಡಲು ಬಂದಾಗ ಅಷ್ಟು ದೊಡ್ಡ ಮೊತ್ತದ ಹಣವನ್ನು ತಿರಸ್ಕರಿಸಿದ್ದೇಕೆ?" ಅದಕ್ಕೆ ನಾನೆಂದೆ, " 'ನನ್ನ ಕೈ ಖಾಲಿಯಿದ್ದರೂ ನನ್ನ ಹೃದಯ ಶ್ರೀಮಂತವಿದೆ' ಎಂಬ ಶ್ಲೋಕದ ಯೋಗ್ಯ ವಿಚಾರವನ್ನು ನೀನು ಗಣನೆಗೆ ತೆಗೆದುಕೊಂಡಿಲ್ಲವೆ? ಅಂಥ ಆಮಿಷಗಳಿಗೆ ನನ್ನ ಕಣ್ಣು ಮುಚ್ಚಿಕೊಳ್ಳದಿದ್ದರೆ ಮತ್ತು ನನ್ನ ನಡತೆಯ ಬಗ್ಗೆ ಸಾಮ್ರಾಟನಿಗೆ ತಿಳಿದರೆ, ನನಗೆ ಮರ್ಯಾದೆಯೆಂಬುದೇ ಉಳಿಯದು. ನಾನು ಮರಳಿ ಹೋದಮೇಲೆ ನನಗೆ ಏನಾಗುವುದೋ ದೇವನಿಗೇ ಗೊತ್ತು. ಭವಿಷ್ಯವನ್ನು ಬಲ್ಲವನು ಸುಖಿಯಾಗಿರುವನು. ತಿರುಗಿ ಹೋಗುವುದಕ್ಕೆ ಸಿದ್ಧತೆ ಮಾಡು, ನಿನ್ನನ್ನು ಬಿಟ್ಟು ನಾನು ಇಲ್ಲಿಂದ ತೆರಳಲಾರೆ.

ದುರ್ದೈವಿ ಮೀರನು ಡೆಕ್ಕನ್ನದ ಆಸುಪಾಸು ಕ್ಷೇತ್ರವನ್ನು ಬಿಟ್ಟು ಹೋಗಲು ಮನಸ್ಸಿಲ್ಲದವನಾಗಿರಲಿಕ್ಕೆ ಕಾರಣವೇನೆಂದರೆ ಪ್ರತಿವರ್ಷ ಅವನಿಗೆ ಬಿಜಾಪುರ ಮತ್ತು ಗೋವಳಕೊಂಡದಿಂದ ೩೦೦೦೦೦ರಿಂದ ೪೦೦೦೦೦ರಷ್ಟು ಹಂಸಗಳ ಮೊತ್ತದ ಹಣ ಬರುತ್ತಿತ್ತು ಮತ್ತು ೫೦೦೦ ಸೈನಿಕ ತಂಡದ ನಾಯಕನಾಗಿದ್ದ ಈತನ ಮಕ್ಕಳು ಇವನ ಅಧೀನದಲ್ಲಿದ್ದ ಜಾಗೀರಿಗಳ ಕಂದಾಯವನ್ನು ಉಪಭೋಗಿಸುತ್ತಿದ್ದರು. ಹೀಗಿರುವಾಗ ಅವನಿಗೆ ಬೇಗನೆ ವಾಪಸ ಹೋಗುವ ಯಾವ ಆಶೆಯೂ ಇರಲಿಲ್ಲ. ಮಹಾದಂಡನಾಯಕನೂ (ಖಾನ ಖಾನಾನನೂ) ದೊಡ್ಡ ಮೊತ್ತದ ಆದಾಯವನ್ನು ಪಡೆಯುತ್ತಿದ್ದನು. ಅವರೆಲ್ಲರೂ ಕೂಡಿ ಒಮ್ಮತಕ್ಕೆ ಬಂದಿದ್ದ ನಿರ್ಣಯವೆಂದರೆ ೫೦೦೦ ಅಶ್ವದಳ ತಂಡದೊಂದಿಗೆ ಮಿರ್ಜಾ ಈ ರಾಜನು ಮಂಗಳವೇಢೆಯ ಕಡೆಗೆ ಸಾಗಿ ಬರುವವರಗೆ ಆದಿಲ್‌ಖಾನನ ಜನರು ಆತನ ಪುತ್ರಿಯ ಪ್ರಯಾಣವನ್ನು ಆರಂಭಿಸಬಾರದು ಎಂದು.

ಬಿಜಾಪುರಕ್ಕೆ ಅಸದಬೇಗನ ಆಗಮನ:

"ಆದಿಲ್‌ಖಾನನೂ ತಡವಾಗುವುದಕ್ಕೆ ಪ್ರಯತ್ನಿಸುತ್ತಿದ್ದನು; ಭವಿಷ್ಯದಲ್ಲಿ ಏನಾದರೂ ಒಂದು ಸಂಭವಿಸಬಹುದೆಂದು ಅವನ ಆಸೆಯಾಗಿತ್ತು. ಅದರಿಂದ ಅವನಿಗೆ ಬಹಳ ವೆಚ್ಚವಾಗುತ್ತಿದ್ದರೂ ಆಶೆಗಳನ್ನಿಟ್ಟಿದ್ದನು. ದೈವವು ಹೇಗಿರುವುದನ್ನು ಗಣನೆಗೆ ತರದೆ ಅವರೆಲ್ಲರೂ ಕೂಡಿ ತಮ್ಮ ವ್ಯವಹಾರವನ್ನು, ನಾನು ಅಲ್ಲಿಗೆ ಬರುವವರೆಗೆ ನಿರ್ವಹಿಸುತ್ತ ನಡೆದಿದ್ದರು. ನನ್ನ ನೇರ ಹಾಗೂ ಪ್ರಾಮಾಣಿಕ ಪ್ರಯತ್ನದಿಂದ ಅವರ ಕುತಂತ್ರವನ್ನು ಕೊನೆಗೊಳಿಸಿ, ಆ ದುರ್ದೈವಿ ಮೀರನನ್ನು ದುರಾಶೆ ಮತ್ತು ಗೊಂದಲದ ತಿರುಗಣೆಯ ಮಡುವಿನಿಂದ ಕಿತ್ತಿ ಹೊರದೆಗೆದೆನು (ಅದನ್ನು ಮುಂದೆ ವರ್ಣಿಸಲಾಗುವುದು) ಬಹಳ ಆಲೋಚನೆ ಮಾಡಿದ ನಂತರ, ನಾನು ಆಶೆಗೊಳಗಾಗುವುದಿಲ್ಲ ಎಂದರಿತ ಆದಿಲ್‌ಖಾನನ ನಿಯೋಗಿಗಳು ಅವನಿಗೆ ವರದಿ ಮಾಡಿದಾಗ ಮಂಗಳವೇಢೆಯಿಂದ ಬಿಜಾಪುರಕ್ಕೆ ನಾನು ಬರಬೇಕೆಂದು ಖಾನನು ಹೇಳಿ ಕಳುಹಿಸಿದನು. ಸಾಮ್ರಾಟನು ಆದಿಲ್‌ಖಾನನಿಗೆ ಕೊಡಲು ಕೇವಲ ಫರ್ಮಾನವೊಂದನ್ನು ನೀಡಿದ್ದನ್ನಲ್ಲದೆ ಮತ್ತೇನೂ ಇರಲಿಲ್ಲ. ಆದರೆ ಅಂಥ ದೊಡ್ಡ ವ್ಯಕ್ತಿಯನ್ನು ರಿಕ್ತಹಸ್ತದಿಂದ ಹೋಗಿ ಭೆಟ್ಟಿಯಾಗುವುದು ಸರಿಯಲ್ಲವೆನಿಸಿತು. ನನ್ನಲ್ಲಿದ್ದ ಕುದುರೆಗಳು, ಒಂಟೆಗಳು, ಬೆಲೆಯುಳ್ಳ ವಸ್ತ್ರಗಳು, ಕಾಶ್ಮೀರಿ ಶಾಲುಗಳು ಮತ್ತು ಲಿನೆನ್ ಮುಂತಾದವುಗಳನ್ನು ಮೀರನಿಗೆ ತೋರಿಸಿದೆನು. ಅದಕ್ಕೆ ಆತನು ಹಲವಾರು ವಸ್ತುಗಳನ್ನು ಸೇರಿಸಿ ಕಾಣಿಕೆಯಾಗಿ ಕೊಡಲು ನೀಡಿದನು. ಅವೆಲ್ಲವುಗಳ ಬೆಲೆ ೨೫೦೦೦/- ರೂ ಆಗುವುದೆಂದು ನಿರ್ಣಯಿಸಿದೆವು. ಅದಕ್ಕೆಲ್ಲ ಸೈಯದನು ಒಪ್ಪಿದ ಮೇಲೆ ನಾನು ಅವನಿಗೆ ವಿದಾಯ ಹೇಳಿದೆನು.

“ಬಿಜಾಪುರ ಮುಟ್ಟಲು ಒಂದು ಹಂತದೊಳಗೆ ಇದ್ದಾಗ ಶಾಬ-ಇ-ಬರಾತದ ಹಬ್ಬಗಳು ಮುಗಿದ ಮೇಲೆ ನನಗೆ ಭೆಟ್ಟಿ ಸಿಗುತ್ತದೆ ಎಂದು ತಿಳಿಸಲಾಯಿತು. ಶಾಹಬಾನ ತಿಂಗಳದ ಎರಡನೇ ದಿನದಂದು(೨೬ ಡಿಸೆಂಬರ, ೧೬೦೩) ನಾನು ಬಿಜಾಪುರ ಮುಟ್ಟಿದೆನು, ಅಲ್ಲಿ ಹದಿಮೂರು ದಿನಗಳವರೆಗೆ ಕಾಯ್ದೆನು. ನನಗೆ ಬೇಕಾದ ಎಲ್ಲವನ್ನು ಅಂದರೆ ಹಣ್ಣು, ಸಮೀಚಿನ ಆಹಾರ, ಮದ್ಯ, ಧಾನ್ಯ ಅಶ್ವಾಹಾರಗಳನ್ನು ದಿನವೂ ನನಗೆ ಕಳಿಸಲಾಗುತ್ತಿತ್ತು. ಅದೆಲ್ಲ ಆದಿಲ್‌ಖಾನನ ಖರ್ಚಿನಲ್ಲಿಯೇ. ಅವರು ಈ ಎಲ್ಲ ಪದಾರ್ಥಗಳನ್ನು ಮುಚ್ಚಿದ ಭಾಂಡೆಗಳಲ್ಲಿ ಮತ್ತು ಪಿಂಗಾಣಿ ಮತ್ತು ಕಾಜಿನ ಪಾತ್ರೆಗಳಲ್ಲಿ ತರುತ್ತಿದ್ದರು; ಇಂಥ ಪಾತ್ರೆಗಳು, ಆ ಕಾಲದಲ್ಲಿ ಬಹಳಷ್ಟು (ಪಿಂಗಾಣಿ ಮತ್ತು ಕಾಜಿನ) ಬಳಕೆಯಲ್ಲಿದ್ದು ಊಟದ ಸೇವೆಗೆ ಬಳಸುವುದಕ್ಕಾಗಿ ಸಂಗ್ರಹಿಸುತ್ತಿದ್ದದ್ದರಿಂದ ಅವು ಕಳೆದು ಹೋಗಬಾರದೆಂದು ಅವುಗಳನ್ನು ನಾನಿದ್ದಲ್ಲೇ ಬಿಟ್ಟು ಹೋಗುತ್ತಿದ್ದರು. ನನ್ನನ್ನು ಅಲ್ಲಿ ಇರಿಸಿದಷ್ಟು ದಿನವೂ ಪ್ರತಿದಿನ ನನಗೆ ಜೊತೆ ನೀಡಲೆಂದು ಖಾನನ ಸ್ವಂತ ಈರ್ವರು ಸೇವಕರನ್ನು ಕಳಿಸಿಕೊಡಲಾಗುತ್ತಿತ್ತು. ನನ್ನ ಪರವಾಗಿ ಅವರನ್ನು ಅತ್ಯಂತ ಸೌಜನ್ಯದಿಂದ ನಡೆಸಿಕೊಳ್ಳುತ್ತಿದ್ದರು ಮತ್ತು ಬೆಲೆಯುಳ್ಳ ಕುದುರೆಗಳನ್ನು ಕಾಣಿಕೆಗಳನ್ನು ಅವರಿಗೆ ಕೊಟ್ಟೆನು. ಅವರ ಜೊತೆಯಲ್ಲಿ ಸಂತೋಷದ ಸಮಯವನ್ನು ಕಳೆದೆನಲ್ಲದೆ ಶಾಬ-ಇ-ಬಾರಾತ ಹಬ್ಬವನ್ನು ಒಳ್ಳೆಯ ಸಹಕಾರದಿಂದ ಪಟಾಕಿ ಹಾರಿಸುತ್ತ ದೀಪಾಲಂಕಾರದಿಂದ ಆಚರಣೆ ಮಾಡುವುದನ್ನು ನೋಡಿ ಸಂತೋಷಪಟ್ಟೆನು. ನನ್ನ ಭೆಟ್ಟಿಗೆ ಗೊತ್ತುಪಡಿಸಿದ್ದ ಹದಿನಾಲ್ಕನೆಯ ದಿನದವರೆಗೆ ಹೀಗೆ ನಾನು ಕಾಲ ಕಳೆದೆನು. ಶಾಬ-ಇ-ಬಾರಾತ ಹಬ್ಬದಲ್ಲಿ ಬಳಸುತ್ತಿದ್ದ ಎಲ್ಲ ಬಗೆಯ ಮಿಠಾಯಿಗಳನ್ನು ಪಲ್ಲೆಗಳನ್ನು ಔತಣದ ದಿನ ನನಗಾಗಿ ಬಿಜಾಪುರದಿಂದ ಕಳಿಸಲ್ಪಟ್ಟವು.

ಎರಡನೆಯ ಇಬ್ರಾಹೀಮ ಆದಿಲ್‌ಶಾಹಿಯೊಡನೆ ಅಸದಬೇಗನ ಭೇಟಿ:

“ಶಾಹಬಾನದ ೧೭ನೇ ದಿನ (ಮಂಗಳವಾರ, ಜನೆವರಿ ೧೦, ೧೬೦೪) ಕುದುರೆಯೇರಿ ನನ್ನ ಸೇವಕರೊಡನೆ ಆದಿಲ್‌ಖಾನನನ್ನು ಭೆಟ್ಟಿಯಾಗಲು ಹೊರಟೆನು. ವಿದ್ಯುಕ್ತ ಶಿಷ್ಟಾಚಾರಗಳಿಗೆಂದು ಗೊತ್ತುಪಡಿಸಿದ್ದ, ಬಿಜಾಪುರದ ಪುಷ್ಕರಣೆಯೊಂದರ ಮೇಲಿದ್ದ ಕಟ್ಟಡಕ್ಕೆ ನನ್ನನ್ನು ಕರೆದೊಯ್ಯಲಾಯಿತು. ಬಹಳ ಸಮರ್ಪಕವಾಗಿ ಪೀಠೋಪಕರಣಗಳಿಂದ ಸಿದ್ಧಗೊಳಿಸಿದ್ದ ಮುದ ನೀಡುವ ಸ್ಥಳ ಅದಾಗಿತ್ತು. ಎರಡು ಮೂರು ಗೃಹಗಳಲ್ಲಿ ಕೋಣೆಗಳನ್ನು ಸುಸಜ್ಜಿತಗೊಳಿಸಲಾಗಿತ್ತು ಮತ್ತು ಪ್ರಾರ್ಥನೆಯ ನಂತರ ಆ ಆನೆಗಳೊಳಗೂಡಿದ ವೈಭವದಿಂದ ಆದಿಲ್‌ಖಾನನು ಆಗಮಿಸಿದನು. ಆದಿಲ್‌ಖಾನನು ತನ್ನ ಪರಿವಾರದೊಂದಿಗೆ ಪ್ರವೇಶಿಸಿದಾಗ ಫರ್ಮಾನ್ ತಂದವನು ಅದನ್ನು ಕೈಯಲ್ಲಿ ಹಿಡಿದುಕೊಂಡು ಕಟ್ಟಡದ ಒಳಗೆ ನಿಲ್ಲುವುದು ವಾಡಿಕೆಯಾಗಿತ್ತು.

ಅದನ್ನು ಖಾನನು ಸ್ವೀಕರಿಸಬೇಕಾಗಿತ್ತು. ಆದರೆ ಆದಿಲ್‌ಖಾನನು ತಾನೇ ಸ್ವತಃ ಫರ್ಮಾನವನ್ನು ಸ್ವೀಕರಿಸಿ ಸುಯೋಗ್ಯವಾದ ಮರ್ಯಾದೆಯನ್ನು ಸವಿನಯನಾಗಿ ಅದಕ್ಕೆ ಸಲ್ಲಿಸಿದ ಮೇಲೆ ಅವನೊಬ್ಬನೇ ಮೊದಲು ಕೋಣೆಯನ್ನು ಪ್ರವೇಶಿಸಬೇಕು ಮತ್ತು ಆ ಬಳಿಕ ಅವನ ಪರಿವಾರವು ಪ್ರವೇಶಿಸಬೇಕೆಂದು ನಾನು ಆದೇಶ ನೀಡಿದ್ದೆ. ಅವನೂ ಈ ವ್ಯವಸ್ಥೆಗೆ ಒಪ್ಪಿಕೊಂಡಿದ್ದನು. ಆದರೂ ಆದಿಲ್‌ಖಾನನು ತನ್ನ ಆನೆಯಿಂದ ಕೆಳಗಿಳಿದು ಕಟ್ಟಡವನ್ನು ಪ್ರವೇಶಿಸಿದಾಗ ಅಂತೂಪಂಡಿತ ಮತ್ತು ಕಾಷ್ಟದಾರಖಾನ ಧುಮುಕಿ ಒಳಗೆ ಬಂದು ಅವನ ಹಿಂದೆ ನಿಂತರು. ನನ್ನ ಸೇವಕರಲ್ಲೊಬ್ಬನಾದ ನಾಸೀರಖಾನನು ಮೂರುಬಾರಿ ವಂದಿಸಿ ತನ್ನನ್ನು ಪರಿಚಯಿಸುತ್ತ ನನ್ನಿಂದ ಪ್ರಭುವಿನ ಫರ್ಮಾನವನ್ನು ಸ್ವೀಕರಿಸುತ್ತ ಅದನ್ನು ಚುಂಬಿಸಿ ತನ್ನ ತಲೆಗೆ ಮತ್ತು ಕಣ್ಣುಗಳಿಗೆ ಅದನ್ನು ಒತ್ತಿಕೊಂಡನು. ನಾನು ಮುಂದೆ ಬಂದು ನಾಸೀರನ ಕೈಯಿಂದ ಫರ್ಮಾನವನ್ನು ತೆಗೆದುಕೊಂಡು ಅವನ ತಲೆ ಪೇಟದ ಮೇಲಿಟ್ಟು ಅದಕ್ಕೆ ಮರ್ಯಾದೆ ಸಲ್ಲಿಸಬೇಕೆಂದು ಹೇಳಿ, ಅವನತ್ತ ನೋಡಿದೆನು. ಆ ಬಳಿಕ ಅಂತೂಪಂಡಿತನಿಗೆ ಸರದಾರರನ್ನೆಲ್ಲ ಒಳಗೆ ಕರೆಯಲು ಹೇಳಿದೆನು. ಅವನು ಹೊರಗೆ ಹೋದನು. ನಾಸೀರನು ಸಾಮ್ರಾಟದ ಫರ್ಮಾನದೆದುರು ಸಾಷ್ಟಾಂಗವೆರಗುವಂತೆ ಮಾಡಿದೆನು. ಅವನು ಎದ್ದೊಡನೆ ಅವನ ಸರದಾರರಾಗಿದ್ದ ಅಂಬರಖಾನ, ಶಾಹ ನವಾಜಖಾನ ಮತ್ತು ಉಳಿದವರು ಒಳಗೆ ಬಂದರು ಮತ್ತು ಅವನು ಮೂರು ಬಾರಿ ಫರ್ಮಾನಕ್ಕೆ ವಂದಿಸಿದ ನಂತರ ನಾವೆಲ್ಲ ಒಳಗಿನ ಕೋಣೆಗೆ ಪ್ರವೇಶ ಮಾಡಿದೆವು. ನಾಸೀರಖಾನನು ತನ್ನ ತಲೆಯ ಮೇಲಿದ್ದ ಫರ್ಮಾನವನ್ನು ಕೈಯಲ್ಲಿ ತೆಗೆದುಕೊಂಡು ಅದನ್ನು ನವಾಜಖಾನನಿಗೆ ಒಪ್ಪಿಸುತ್ತ ಅದನ್ನು ಸೀಲ ಒಡೆದು ನೋಡಲು ಅನುಮತಿಗಾಗಿ ನನ್ನನ್ನು ನೋಡಿದನು. ಆಗ ನಾನು ಅಂತೂಪಂಡಿತನಿಗೆ ಕಾಣಿಕೆಗಳನ್ನು ನೀಡಲು ಹೇಳಿದೆನು. ಅವನು ಹೊರಗೆ ಹೋಗಿ ಮುತ್ತು ತುಂಬಿದ ತಟ್ಟೆಯನ್ನು ತಂದನು ಮತ್ತು ಮತ್ತೊಬ್ಬನು ಪಗೋಡಗಳಿಂದ ತುಂಬಿದ ತಟ್ಟೆಯನ್ನು ತರಲು ಅವುಗಳನ್ನು ಆ ಫರ್ಮಾನವನ್ನು ಒಡೆದು ಓದುವಾಗ ಎಲ್ಲೆಡೆಗೆ ಹರಡಿದರು. ಕೆಳಗೆ ಬಿದ್ದಿದ್ದ ಮುತ್ತುಗಳನ್ನು ಮತ್ತು ನಾಣ್ಯಗಳನ್ನು ಬಳೆದುಕೊಂಡು ಹೋಗಲು ಆಗ ಅಲ್ಲಿ ಯಾರೂ ಇರಲಿಲ್ಲ, ಅವು ಅಲ್ಲಿಯೇ ಉಳಿದವು. ಎಲ್ಲರೂ ಹೋದಮೇಲೆ ಕಸಗುಡಿಸುವವರು ಬಂದು ಸಂಗ್ರಹಿಸಲಾಗಿ ಅವು ೩೦೦ ಪಗೋಡಾಗಳು ಮತ್ತು ೫೦೦ ಮುತ್ತುಗಳು ಇದ್ದವು. ಅವುಗಳನ್ನೆಲ್ಲ ನಾನು ಆ ಕಸ ಗುಡಿಸುವವರಿಗೆ ಕೊಟ್ಟುಬಿಟ್ಟೆನು."

ಆ ಬಳಿಕ ಫರ್ಮಾನವನ್ನು ಶಾಹ ನವಾಜಖಾನನು ಓದಲು ಆರಂಭಿಸಿದನು. ಬರ್ಹಾಣಪುರದಲ್ಲಿ ಸಾಮ್ರಾಟ ಅಕ್ಬರನು ಇದ್ದಾಗ ಇಬ್ರಾಹಿಮ ಆದಿಲ್‌ಶಾಹ ಬರೆದಿದ್ದಕ್ಕೆ

ಕಳಿಸಿದ ಸೌಜನ್ಯದ ಒಕ್ಕಣಿಕೆ ಇದಾಗಿತ್ತೆಂದು ಸ್ಪಷ್ಟವಿತ್ತು. ಮೀರನು ಕಳಿಸಿದ ಸಂದೇಶಕ್ಕೆ ಹೊಂದುವ ಉತ್ತರ ಇದಾಗಿದ್ದಿಲ್ಲವೆಂದು ಇಬ್ರಾಹಿಂ ಆದಿಲಶಾಹನಿಗೆ ಅನಿಸಿದ್ದರಿಂದ ಈ ಫರ್ಮಾನವು ಒಂದು ಬಗೆಯ ತಪ್ಪು ತಿಳುವಳಿಕೆಯನ್ನು ಮೂಡಿಸಿತು. ಈ ಕಥೆಯ ಸ್ವಾರಸ್ಯಕರವಾದ ಅಂಶವೆಂದರೆ ಇಬ್ರಾಹಿಮ್‌ನು ಕಿರಿಕಿರಿಗೊಂಡು ಪ್ರಕ್ಷುಬ್ಧ ಮನಸ್ಸಿನವನಾದಾಗ ಅವನ ಮತ್ತು ಅವನ ಸಲಹೆಗಾರ ಅಂತೂಪಂಡಿತನ ನಡುವಿನ ಮಾತುಕತೆ ಮರಾಠಿಯಲ್ಲಿ ಸಾಗಿತು.

ಫರ್ಮಾನದ ಮಹತ್ವದ ಭಾಗವೆಂದರೆ ಅದರ ಕೊನೆಯ ಭಾಗವಾಗಿತ್ತು. "ಏನೆಲ್ಲ ಅಸದ ಹೇಳುವನೋ ಅದು ಫರ್ಮಾನದ ಭಾಗವೆಂದು ಪರಿಗಣಿಸಬೇಕು ಮತ್ತು ಅದನ್ನು ಅನುಷ್ಠಾನಕ್ಕೆ ತರಬೇಕೆಂದು ಫರ್ಮಾನದ ಕೊನೆಯಲ್ಲಿ ಬರೆಯಲಾಗಿತ್ತು ಮತ್ತು ನೀವು ಏನು ಬಯಸುವಿರೋ ಅದನ್ನು ಅವನಿಗೆ ಹೇಳಿರಿ, ಅದನ್ನು ಅನುಷ್ಠಾನಗೊಳಿಸಲಾಗುವುದು. ಅಸದನ ಬಗೆಗೆ ಹೇಳುವುದಾದರೆ, ಅವನು ನನ್ನ ಅತ್ಯಂತ ವಿಶ್ವಾಸದ ಸೇವಕರಲ್ಲಿ ಒಬ್ಬನಾಗಿದ್ದು ಅವನೆದುರು ಎಲ್ಲವನ್ನು ನೀವು ಸಾದರಪಡಿಸಬಹುದು. ಮೀರನನ್ನು ಕಳಿಸುವಲ್ಲಿ ನೀವು ತಡ ಮಾಡಬೇಡಿರಿ. ಅಸದನ ಜೊತೆಯಲ್ಲಿ ಅವನು ಹೊರಟು ಬರುವಂತೆ ವ್ಯವಸ್ಥೆ ಮಾಡಿರಿ."

ಫರ್ಮಾನವನ್ನು ಓದಿದ ನಂತರ ಆದಿಲ್‌ಶಾಹಿಯ ಸೇವಕರಿಗೆ ಅಲ್ಲಿಂದ ನಿರ್ಗಮಿಸಬೇಕೆಂದು ಅಸದನು ಕೇಳಿಕೊಂಡನು. ಯಾಕೆಂದರೆ ಅಕ್ಬರನ ಮೌಖಿಕ ಸಂದೇಶವನ್ನು ಸುಲ್ತಾನನಿಗೆ ಅವನು ಹೇಳಬೇಕಾಗಿತ್ತು. ಇಬ್ರಾಹಿಮನು ಸಾಮ್ರಾಟನ ಸಂದೇಶವನ್ನು ನಿಂತುಕೊಂಡೇ ಕೇಳಲು ಬಯಸಿದನು, ಆದರೆ ಅಸದನು ಅವನನ್ನು ಕೂಡಿಸಿದನು. "ತನ್ನ ಹತ್ತಿರವೇ ಕೂಡಿಸಿಕೊಂಡು ಅವನು ನಂತರ ಮಾತಾಡಲು ಆರಂಭಿಸಿದನು. ಸಾಮ್ರಾಟನ ಪೂರ್ತಿ ಸಂದೇಶವನ್ನು ಅವನಿಗೆ ಬಿಂಬಿಸುವಂತೆ ತಿಳಿಹೇಳಿದನು. ಅವನಿಗೆ ಪರ್ಶಿಯನ್ ಭಾಷೆ ಚೆನ್ನಾಗಿ ತಿಳಿಯುತ್ತಿತ್ತು. ಆದರೆ ಅದನ್ನು ಚೆನ್ನಾಗಿ ಮಾತನಾಡಬಲ್ಲವನಾಗಿರಲಿಲ್ಲ ಮತ್ತು ಮಾತಾಡಿದರೂ ಅದು ಹರುಕು ಮುರುಕು ರೀತಿಯಲ್ಲಿತ್ತು. ನಾನು ಮೌಖಿಕ ಸಂದೇಶ ನೀಡುವುದನ್ನು ಮುಗಿಸಿದ ಮೇಲೆ ಅವನು ಹೊರಡಬೇಕೆಂಬಂತೆ ಎದ್ದು ನಿಂತನು. ಅವನು ಆತಂಕಗೊಂಡವನಂತಾಗಿ ನಾನು ಬಂದ ಕ್ಷಣವೇ ಹೊರಡಲು ಅನುಮತಿ ಕೇಳಿದ್ದು ಅಭೂತಪೂರ್ವವಾದದ್ದು ಎಂದನು. ನಾನು ಸಾಮ್ರಾಟನ ವಿನೀತ ಸೇವಕನಾಗಿದ್ದು ಕೇವಲ ಸುದ್ದಿ ತಿಳಿದುಕೊಳ್ಳಲು ಬಂದಿದ್ದಾಗಿಯೂ, ಮೀರನು ತಡವೇತಕ್ಕೆ ಮಾಡುತ್ತಿರುವನೆಂದು ತಿಳಿದುಕೊಳ್ಳಲು ಮತ್ತು ಸಾಮ್ರಾಟನ ಸಂದೇಶ ತಂದಿರುವುದಾಗಿಯೂ ಹೇಳಿದನು. ನೀವು ಯಾವ ಉತ್ತರ ನೀಡುವಿರೋ ಅದನ್ನು ಸಾಮ್ರಾಟರಿಗೆ ಮುಟ್ಟಿಸುವೆ.

ಮೀರನು ಇಲ್ಲಿಂದ ನಿರ್ಗಮಿಸುವಲ್ಲಿ ತಡವಾದುದ್ದಕ್ಕೆ ಆತನೇ ಕಾರಣವೆಂದು ನನಗೆ ಮನದಟ್ಟು ಮಾಡಲು ಇಬ್ರಾಹಿಮನು ನಮ್ಮ ಮಾತುಕತೆಯುದ್ದಕ್ಕೂ ಪ್ರಯತ್ನಿಸಿದನು. "ಅವನೇ ಇಲ್ಲಿಂದ ಹೋಗಲೊಲ್ಲನು. ಪ್ರತಿ ವರ್ಷ ಅವನಿಗಾಗಿ ನಾನು ದೊಡ್ಡ ಮೊತ್ತವನ್ನು ಖರ್ಚು ಮಾಡಿದ್ದೇನೆ. ನಾನು ಅವನನ್ನು ಇಲ್ಲಿಂದ ಹೊರದೂಡಲಾರೆ". ಹೀಗಾದ ಮೇಲೆ, ಮಂಗಳವೇಢೆಯಲ್ಲಿ ಮೀರನೊಡನೆ ಇರುವ ಆದಿಲ್‌ಶಾಹಿ ಅಧಿಕಾರಿಗಳಿಗೆ ಫರ್ಮಾನುಗಳನ್ನು ಸಿದ್ಧಗೊಳಿಸಲು ಅಂತೂಪಂಡಿತನಿಗೆ ಹೇಳಲು ಇಬ್ರಾಹಿಮ್ ಆದಿಲ್‌ಶಾಹಿಗೆ ಅಸದನು ಕೇಳಿಕೊಂಡನು. ಈ ಫರ್ಮಾನುಗಳ ವಿಷಯವನ್ನು ಸ್ವತಃ ಅಸದನೇ ಹೇಳಿ ಬರೆಯಿಸಿದನು ಮತ್ತು ಅವನ್ನು ತಾನೇ ಅಲ್ಲಿಗೆ ತೆಗೆದುಕೊಂಡು ಹೋಗಲು ಸಿದ್ಧನಾದನು. ಒಂದು ಫರ್ಮಾನವನ್ನು ಮೀರನಿಗೆ ಬರೆಸಲಾಗಿತ್ತು.

ಸುಲ್ತಾನನ ಪರಿಚಾರಕರನ್ನು ಸಂದರ್ಶನ ಸಭಾಗೃಹಕ್ಕೆ ಮರಳಿ ಕರೆಸಲಾಗಿತ್ತು. ಅವರು ಮತ್ತು ಸುಲ್ತಾನ ಕೂಡಿಯೇ ಅಸದಬೇಗನು ಇನ್ನಷ್ಟು ಕಾಲ ಬಿಜಾಪುರದಲ್ಲಿರುವಂತೆ ಮನವೊಲಿಸಲು ಪ್ರಯತ್ನಿಸಿದರು. ಈ ಮಾತುಕತೆಯಲ್ಲಿ ಇಬ್ರಾಹಿಮ್‌ನು ಅಸದನಿಗೆ 'ಗುರುಭಾಯಿ' ಎಂದು ಸಂಬೋಧಿಸಿದನು. ತನ್ಮೂಲಕ ಅವನು ತಾನೂ ಅಕ್ಬರನ ಶಿಷ್ಯನೆಂದು ಸೂಚಿಸಿದನು. ಚಂಚಲ ಎಂಬ ಹೆಸರಿನ ಆನೆಯೊಂದನ್ನು ಕೊಡುಗೆಯಾಗಿ ಇಬ್ರಾಹಿಮನು ಕೊಟ್ಟಿದ್ದನು ಮತ್ತು ಮನಸ್ಸಿಲ್ಲದೇ ಅದನ್ನು ಸಾಮ್ರಾಟನಲ್ಲಿಗೆ ಕಾಣಿಕೆಯಾಗಿ ಕಳಿಸಲು ಒಪ್ಪಿದ್ದನು. ಆ ಆನೆಗೆ ವಿಶೇಷ ಉಡುಗೆ ತೊಡುಗೆಯನ್ನು ಅತ್ಯಂತ ಶೀಘ್ರ ಅವಧಿಯಲ್ಲಿ ಹೊಂದಿಸಿಕೊಡುವವರೆಗೆ ಬಿಜಾಪುರದಲ್ಲಿ ಇರುವುದಾಗಿ ಅಸದಬೇಗನು ಕರಾರು ಹಾಕಿದನು. ಈ ಉದ್ದೇಶಕ್ಕಾಗಿ ಹತ್ತು ಮಣ ಬಂಗಾರವನ್ನು ಉಪಯೋಗಿಸಲು ಬಯಸುವುದಾಗಿ ಹೇಳಿದನು. ಈ ಬಂಗಾರದಿಂದ ಸಮರ್ಪಕ ನಮೂನೆಯಲ್ಲಿ ಅಲಂಕಾರಗಳನ್ನು ಮತ್ತು ಅಗತ್ಯವಾದ ಪರಿಕರಗಳನ್ನು ಸಿದ್ಧಗೊಳಿಸಲು ಕೆಲ ಸಮಯ ಬೇಕಾಗಿತ್ತು. ಅವಶ್ಯಕತೆಗಿಂತ ಹೆಚ್ಚುಕಾಲ ತನ್ನನ್ನು ಅಲ್ಲಿ ಉಳಿಸಿಕೊಳ್ಳುವ ತಂತ್ರ ಅದಾಗಿರಬಹುದೆಂದು ಅಸದಬೇಗನೆ ಸಂದೇಹ ಹುಟ್ಟಿತು. ಆ ಕೆಲಸವನ್ನು ಬಹುಬೇಗನನೆ ಮುಗಿಸಿಕೊಂಡು ವಿಜಾಪುರದಿಂದ ನಿರ್ಗಮಿಸಲು ಅವನಿಗೆ ಸಾಧ್ಯವಾಗುತ್ತಿತ್ತು.

ಹಾಗಾಗಿ ಅಸದಬೇಗನು "ತಾನು ತಂದಿದ್ದ ಕಾಣಿಕೆಗಳನ್ನು ತರಲು ಕಳಿಸಿದನು. ಇದನ್ನು ನೋಡಿದ ರಾಜನು ಅದೆಲ್ಲ ತನಗಾಗಿ ತಂದಿದ್ದೇ ಎಂದು ಮರಾಠಿಯಲ್ಲಿ ವಿಚಾರಿಸಿದನು. ಅಂತೂ ಪಂಡಿತನು ಅದು ಹೌದೆಂದು ಮರಾಠಿಯಲ್ಲೇ ಹೇಳುತ್ತ ಅವೆಲ್ಲ ಅಸದಬೇಗನಿಂದ ಬಂದಿವೆ ಎಂದು ಮಾತು ಸೇರಿಸಿದನು" ಇವುಗಳಲ್ಲದೇ ಎರಡು ಕುದುರೆಗಳಿದ್ದವು, ಅವುಗಳನ್ನು ನೋಡಿ ಇಬ್ರಾಹಿಮ ಹಿಗ್ಗಿದನು. ಇವುಗಳನ್ನಲ್ಲದೆ ಅಸದಬೇಗ ತಂದಿದ್ದ ಒಂಟಿಗಳನ್ನು ಸ್ವೀಕರಿಸಿ ಅಲ್ಲಿಂದ ನಿರ್ಗಮಿಸಿದನು.

ಅಸದಬೇಗನು ಬಿಜಾಪುರದಲ್ಲಿ ತಂಗಿದ್ದು ಮತ್ತು ಇಬ್ರಾಹಿಮನೊಡನೆ ಅವನ ಎರಡನೆಯ ಭೇಟಿ:

"ಅಸದಬೇಗನಿಗಾಗಿ ಗೊತ್ತುಪಡಿಸಿದ್ದ ನಿವಾಸಕ್ಕೆ ಆದಿಲ್‌ಶಾಹಿಯ ಅಧಿಕಾರಿಗಳಲ್ಲೊಬ್ಬನಾಗಿದ್ದ ಅನ್ವರಖಾನನು ಅವನನ್ನು ಕರೆದೊಯ್ದನು. ಅಸದಬೇಗನು ಅಲ್ಲಿಗೆ ಹೋದೊಡನೆಯೇ ಸೋನಾರರನ್ನು ಕರೆಸಲು ಹೇಳಿದನು. ಮರುದಿನವೇ ಅನ್ವರಖಾನನು ೧೦೦ ಕರಕುಶಲಕರ್ಮಿಗಳನ್ನು ಕರೆತಂದನು. ಅಸದನು ತನ್ನ ಇಬ್ಬರು ಜನರನ್ನು ಅವರ ಕೆಲಸದ ಮೇಳ್ವಿಚಾರಣೆಗಾಗಿ ನೇಮಿಸಿದನು. ಹತ್ತೇ ದಿನಗಳಲ್ಲಿ ಒಡವೆಗಳು ಸಿದ್ಧವಾದವು.

"ಚಂಚಲನಿಗಾಗಿ ಆಭರಣಗಳನ್ನು ತಯಾರಿಸುವ ಕೆಲಸ ನಡೆದಾಗ ನಾನು ಅಲ್ಲಿ ಇರಲೇಬೇಕಾದ ಸಮಯದಲ್ಲಿ ಆ ಊರಲ್ಲಿ ಮತ್ತು ಪೇಟೆಗಳಲ್ಲಿರುವ ವಿಧವಿಧವಾದ ಆಭರಣಗಳಿಂದ ಮತ್ತು ರತ್ನಖಚಿತ ಒಡವೆಗಳಿಂದ ಕೆಲವೊಂದು ಆರಿಸಿ ಮಹಾ ಸಾಮ್ರಾಟನಿಗೆ ಕಾಣಿಕೆಯನ್ನು ಆರಿಸಿಕೊಳ್ಳಬೇಕೆಂದು ಬಯಸಿದೆನು. ಆ ಉದ್ದೇಶಕ್ಕಾಗಿ ಅಖಾ ರಿಝಾ ಮತ್ತು ಮನ್ಸೂರಖಾನ ಇಬ್ಬರನ್ನೂ ಅವುಗಳಿಂದ ಕೆಲವೊಂದು ಆರಿಸಿ ತರಲು ನೇಮಿಸಿದೆನು. ಎರಡು ಮೂರು ದಿನಗಳಲ್ಲಿ ನಾನು ಬೆರಗಾಗುವಂತೆ ಅನೇಕ ಸಿದ್ಧವಸ್ತುಗಳನ್ನು ಸಂಗ್ರಹಿಸಿದರು. ಆದರೆ ಮೇಲಿಂದ ಮೇಲೆ ನನ್ನನ್ನು ಭೆಟ್ಟಿಯಾಗುತ್ತಿದ್ದ ಬಿಜಾಪುರದ ವ್ಯಾಪಾರಸ್ಥರು ಆಭರಣ ವ್ಯಾಪಾರಿಗಳ ಸಂಘದ ಮುಖದ್ದಮನಾಗಿದ್ದ ರಾಮಜೀ ಎಂಬ ಆಭರಣ ವ್ಯಾಪಾರಿಯ ಹೆಸರನ್ನು ಸೂಚಿಸಿದರು. ನಾನು ಅವನನ್ನು ಕರೆಸಿ ಸಂಗ್ರಹಿತ ಆಭರಣಗಳನ್ನು ತೋರಿಸಿದೆನು. ಅವುಗಳನ್ನೆಲ್ಲ ಬೇಡವೆಂದು ತಳ್ಳಿಹಾಕುತ್ತ ನನಗೆ ಎಷ್ಟು ಆಭರಣ ವಸ್ತುಗಳು ಬೇಕು ಮತ್ತು ನಾನೆಷ್ಟು ಅದಕ್ಕಾಗಿ ಖರ್ಚು ಮಾಡಲು ಶಕ್ಯವಿದೆ ಎಂದು ಕೇಳಿದನು, ಯಾಕೆಂದರೆ ಆ ಮೊತ್ತಕ್ಕೆ ಸರಿಯಾಗಿ ಆಭರಣಗಳನ್ನು ನೀಡುವುದಾಗಿ ಹೇಳಿದನು.

"ನನ್ನಲ್ಲಿ ಅಕಸ್ಮಾತ್ ಅಷ್ಟು ಹಣವಿರಲಿಲ್ಲ ಮತ್ತು ಆದಿಲ್‌ಖಾನನು ನನಗೆ ಎಷ್ಟು ಕೊಡುವನು ಎಂಬುದು ಗೊತ್ತಿರಲಿಲ್ಲ. ಆದ್ದರಿಂದ ನಾನು ರಾಮಜೀಗೆ ಹೇಳಿದ್ದೇನೆಂದರೆ ಸಾಮ್ರಾಟನಿಗೆ ವಜ್ರಗಳನ್ನು, ಮುತ್ತು ಮತ್ತು ಮಾಣಿಕ್ಯಗಳನ್ನು ನಾನು ಕೊಡಬಯಸಿದ್ದರಿಂದ ಏನೆಲ್ಲವನ್ನೂ ದೊರಕಿಸಲು ಸಾಧ್ಯವೊ ಹಾಗೆ ಮಾಡಲು ವಿನಂತಿಸಿದೆನು. ಇದನ್ನು ಕೇಳಿದ ಬಳಿಕ ರಾಮಜೀ ಹೊರಟು ಹೋದನು. ಮರುದಿನ ಅವನು ರೂ. ೩೦೦೦೦ ಬೆಲೆಯ ಸುಂದರವಾದ ವಜ್ರವೊಂದನ್ನು ಮತ್ತು ಕೊರಳಲ್ಲಿ ಧರಿಸುವ ರೂ. ೨೫೦೦೦ ಬೆಲೆಯ ಆಭರಣವೊಂದನ್ನು 'ಯಾಕೂತ'ದಲ್ಲಿ ಕೂಡಿಸಿದ 'ದುಗ್ದುಗೀ'ಯನ್ನು ತಂದನು. ಆದರೆ ಸಾಮ್ರಾಟನಿಗೆ ಕೊಡಲು ಯೋಗ್ಯವಾದ ಒಳ್ಳೆಯ ಮುತ್ತುಗಳು ಲಭ್ಯವಿರಲಿಲ್ಲ. ರಾಮಜೀ ತಂದಿರುವ ಇವುಗಳಲ್ಲದೆ ಅಖಾ ರಿಝಾ

ಮತ್ತು ಮನ್ಸೂರ ಖಾನರು ತಂದಿದ್ದ ಸಂಗ್ರಹದಿಂದಲೂ ನಾನು ರೂ. ೨೫೦೦೦ ಬೆಲೆಯಲ್ಲಿ ಪಚ್ಚೆಮಣಿ, ಪೋಖರಾಜ, ನೀಲಂ ಮತ್ತು ರತ್ನಾಭರಣಗಳಿಂದ ಮಾಡಿದ ಪಕ್ಷಿಗಳನ್ನು ಖರೀದಿಸಿದೆನು. ವಜ್ರ ಮತ್ತು ದುದ್ದುಗೀಗಳನ್ನು ರೂ. ೫೫೦೦೦ಗಳಿಗೆ ಕೊಂಡುಕೊಂಡು, ಮಂಗಳವೇಢೆಯಲ್ಲಿದ್ದ ಮೀರ ಜಮಾಲುದ್ದೀನನು ಸರಿಯೆಂದು ಒಪ್ಪಿದರೆ ಆ ಮೊತ್ತವನು ಕೊಡಲು ಒಪ್ಪಿದೆನು. ರೋಖ ವ್ಯವಹಾರಕ್ಕೆ ರಾಮಜೀ ಒತ್ತಿ ಹೇಳಿದನು. ಆದರೆ ಒಂದು ವೇಳೆ ಮೀರನು ಅವುಗಳಿಗೆ ಒಪ್ಪಿಗೆ ಕೊಡದಿದ್ದರೆ ವಸ್ತುಗಳನ್ನು ತಿರುಗಿಸಬಹುದು ಮತ್ತು ಕೊಟ್ಟ ಹಣವನ್ನು ವಾಪಸ್ ಕೊಡಲು ಸಾಧ್ಯವೆಂದೂ ಹೇಳಿದನು. ಸ್ವಲ್ಪದರಲ್ಲಿ ಹೇಳುವುದಾದರೆ, ಈ ಕರಾರಿನ ಮೇಲೆ ನಾನು ಅವುಗಳನ್ನು ಕೊಂಡುಕೊಂಡು ಹಣವನ್ನು ಕೊಟ್ಟೆನು."

ಆಭರಣಗಳು ಮತ್ತು ಪರಿಕರಗಳು ಸಿದ್ಧವಾದೊಡನೆ ಬೇಗನು ಹೊರಡುವ ಸಮಯ ಬಂದಿತು. ಸಾಮ್ರಾಟನಿಗಾಗಿ ಈಗಾಗಲೇ ತಯಾರಿಸಿ ಇಟ್ಟಿದ್ದ ಕಾಣಿಕೆಗಳಿಗೆ ಆದಿಲ್‌ಶಾಹನು ಸುಂದರವಾದೊಂದು ಕುದುರೆಯನ್ನು ಜೋಡಿಸಿದನು. ಇದೊಂದು ಕೃಷ್ಣವರ್ಣದ ಕುದುರೆಯಾಗಿದ್ದು ಬಹಳ ಅಪರೂಪದ ಕೊಡುಗೆಯಾಗಿತ್ತು; ಇದಕ್ಕೆ ಇಬ್ರಾಹಿಮ್‌ನು ೩೦೦೦ ಹಂಸಗಳನ್ನು ಕೊಟ್ಟಿದ್ದನು. ತನ್ನನ್ನು ಬೀಳ್ಕೊಡುವ ಭೇಟಿಯಲ್ಲಿ ಸಾಮ್ರಾಟನಿಗಾಗಿ ಇಬ್ರಾಹಿಮನಿಂದ ರತ್ನಖಚಿತ ಬಟ್ಟಲಾಕಾರದ ಸಂಪುಟವೊಂದನ್ನು ಪಡೆದುಕೊಂಡನು. ಆ ಸಂಪುಟವು ಇಬ್ರಾಹಿಮನಿಗೆ ಬಹಳ ಮಹತ್ವದ ವಸ್ತುವಾಗಿತ್ತು. ಕಾರಣವೆಂದರೆ ಆತನ ಪಟ್ಟಾಭಿಷೇಕ ಸಮಾರಂಭಕ್ಕೆಂದು ಅದನ್ನು ಅವನ ತಾಯಿಯು ಹೇಳಿ ಅವನಿಗಾಗಿಯೇ ಮಾಡಿಸಿದ್ದಳು.

ಶಹಬಾನದ ೨೭ನೇ ದಿನದ ರಾತ್ರಿ ಇಬ್ರಾಹಿಮ್ ಆದಿಲ್‌ಶಾಹನಿಗೆ ವಿದಾಯ ಹೇಳಲು ಅಸದಬೇಗನನ್ನು ಅರಮನೆಗೆ ಆಮಂತ್ರಿಸಲಾಯಿತು. ವೈಭವಪೂರ್ಣವಾಗಿ ಸಂಗೀತ ಸಮಾರಂಭವನ್ನು ಏರ್ಪಡಿಸಲಾಗಿತ್ತು. ಅಸದನ ಪ್ರಶ್ನೆಗಳಿಗೆ ಉತ್ತರಿಸದಷ್ಟು ಇಬ್ರಾಹಿಮನು ತನ್ಮಯನಾಗಿ ಸಂಗೀತ ಆಲಿಸುತ್ತಿದ್ದದನ್ನು ಅವನು ಕಂಡನು. ಅವರ ಮಾತು ಕೆಲ ಸಮಯ ಪ್ರಧಾನವಾಗಿ ಸಂಗೀತ ಮತ್ತು ಸಂಗೀತಗಾರರನ್ನು ಕುರಿತಾಗಿತ್ತು. ಅಕ್ಬರನು ಸಂಗೀತಪ್ರೇಮಿ ಆಗಿದ್ದನೊ ಹೇಗೆಂದು ಇಬ್ರಾಹಿಮನು ತಿಳಿಯಬಯಸಿದನು. ಅವನು ಒಮ್ಮೊಮ್ಮೆ ಸಂಗೀತ ಆಲಿಸುತ್ತಿದ್ದನೆಂದು ಅಸದನು ಉತ್ತರಿಸಿದನು. ಹಾಡುತ್ತಲಿದ್ದಾಗ ತಾನಸೇನನು ಸಾಮ್ರಾಟನ ಎದುರು ನಿಲ್ಲುತ್ತಿದ್ದನೊ ಇಲ್ಲವೆ ಕೂಡುತ್ತಿದ್ದನೊ ಎಂದು ಇಬ್ರಾಹಿಮನು ತಿಳಿಯಬಯಸಿದನು. ದರ್ಬಾರದಲ್ಲಿ ಅಥವಾ ಹಗಲಿನ ವೇಳೆಯಲ್ಲಿ ಹಾಡುವಾಗ ತಾನಸೇನನು ನಿಲ್ಲಬೇಕಾಗಿತ್ತು. ಆದರೆ ರಾತ್ರಿಯಲ್ಲಿ ಮತ್ತು ಹಬ್ಬಗಳಲ್ಲಿ ತಾನಸೇನ ಮತ್ತು ಉಳಿದ ಸಂಗೀತಗಾರರು ಹಾಡುವಾಗ ಕೂಡಬಹುದಿತ್ತು ಎಂದು ಅಸದಬೇಗನು ಹೇಳಿದನು. "ಸಂಗೀತವೆಂದರೆ ಯಾವಾಗಲೂ

ಎಲ್ಲ ಸಮಯದಲ್ಲಿ ಕೇಳಬೇಕಾದದ್ದು, ಸಂಗೀತಗಾರರನ್ನು ಸಂತಸದಿಂದ ಇಡಬೇಕು".

"ಈ ಎಲ್ಲ ಮಾತು ನಡೆದಾಗ ಇಬ್ರಾಹಿಮನ ದೃಷ್ಟಿ ನನ್ನ ತಲೆಯ ಮೇಲೆ ನೇತಾಡುತ್ತಿದ್ದ ಶಾಸ್ಟ–ಇ–ಮುರೀದೀಯ ಮೇಲೆ ಬಿತ್ತು. 'ಗುರುಭಾಯಿ ಇದೇನು? ಎಂದು ಕೇಳಿದನು. ಅದು ಶಾಸ್ಟ–ಇ–ಮುರೀದೀ(ಸುವರ್ಣ ಪತ್ರದ ಲಾಂಛನ) ಎಂದೂ ಮತ್ತು ಅದನ್ನು ಸಾಮ್ರಾಟನು ತನ್ನ ಕೈಯಿಂದಲೇ ಕತ್ತರಿಸಿ ತನ್ನ ಪ್ರೀತಿಯ ಶಿಷ್ಯರಿಗೆ ಕೊಡುತ್ತಾನೆ ಎಂದೂ ಹೇಳಿದೆನು. ಅದನ್ನು ನನ್ನ ಪಗಡಿಯಿಂದ ತೆಗೆದುಕೊಂಡು ತನ್ನ ಶಿರಪೋಷಾಕದ ಬಂಗಾರಪಟ್ಟಿಗೆ ಅದರ ಕೊಕ್ಕೆಯನ್ನು ಸಿಕ್ಕಿಸಿಕೊಂಡನು ಮತ್ತು ತಾನು ಒಬ್ಬ 'ಮುರೀದೀ' ಎಂದು ಹೇಳುತ್ತ ಅದನ್ನು ಕೊಡಬೇಕೆಂದು ಕೇಳಿದನು. ಅದು ನನ್ನ ಶಾಸ್ಟ–ಇ–ಮರೀದಿ ಇದ್ದು, ಅವನು ತನ್ನ ಸಮಸ್ತ ರಾಜ್ಯವನ್ನು ಕೊಟ್ಟರೂ ಅದನ್ನು ಕೊಡಲಾರೆನೆಂದು ಹೇಳಿದನು. ಅದನ್ನು ಧರಿಸಿಕೊಂಡಿದ್ದರಿಂದ ತಾನು ಹಜ್ರತನ ಭಕ್ತನಾಗಿರುವೆನೆಂದೂ, ಅದನ್ನು ಕೊಡುವುದಿಲ್ಲವೆಂದೂ ಹೇಳಿದೆನು. ನಾನು ಆಸ್ಥಾನಕ್ಕೆ ಮರಳಿದ ಮೇಲೆ ನನಗಾಗಿ ಮತ್ತೊಂದನ್ನು ಪಡೆಯಬೇಕೆಂದು ಸೂಚಿಸಿದನು. ಆಸ್ಥಾನಕ್ಕೆ ತಲುಪಿದೊಡನೆಯೇ ಮೊದಲನೆಯ ಕೆಲಸವೆಂದರೆ ನಾನು ಅವನಿಗಾಗಿ ಒಂದು 'ಶಾಸ್ಟ'ನ್ನು ಕಳಿಸಿಕೊಟ್ಟೆ. ಈ ಕೆಳಗಿನ ಸಂದೇಶವನ್ನು ಕಳಿಸಿದನು. "ಭಗವಂತನು ನಿನ್ನನ್ನು ಮತ್ತು ನಿನ್ನ ಸಾಮ್ರಾಟನಿಷ್ಠೆಯನ್ನು ಆಶೀರ್ವದಿಸಲಿ. ಕೇವಲ ನಿನ್ನನ್ನು ಪರೀಕ್ಷಿಸಲು ಹಾಗೆ ಮಾಡಿದ್ದೆ. ಸಮರ್ಪಿತ ಭಕ್ತನೆಂದರೆ ನಿನ್ನಂತಿರಬೇಕು. ಗುರುಭಾಯಿಯು ನನಗಾಗಿ ಶಾಸ್ಟ–ಇ–ಮುರೀದಿಯನ್ನು ಕಳಿಸಲು ಸಮರ್ಥನಾಗುವನೆಂದು ಆಶಿಸುತ್ತೇನೆ.

ಬಿಜಾಪುರದಿಂದ ಅಸದ ಬೇಗನ ನಿರ್ಗಮನ:

ಅಸದಬೇಗನು ರಮಜಾನದ ೨ನೇ ದಿನ (ಜನವರಿ ೨೪, ೧೬೦೪) ವಿಜಾಪುರದಿಂದ ಮಂಗಳವೇಢೆಗೆ ಹೊರಟನು. ಮಂಗಳವೇಢೆಯಲ್ಲಿ ಸ್ವಲ್ಪ ಸಮಯ ತಂಗಿ, ಆಮೇಲೆ ಮೀರ ಜಮಾಲುದ್ದೀನ ಮತ್ತು ವಧೂ ಜನರೊಡಗೂಡಿ ಅಹಮ್ಮದ ನಗರವನ್ನು ತಲುಪಿದನು. ರಾಜಕುಮಾರಿಯ ನೆರವಿಗಾಗಿ ಇತಿಹಾಸಕಾರ ಫಿರಿಸ್ತಾ ಅವಳ ಹತ್ತಿರವೇ ಇದ್ದನು. ಆದರೆ ಈ ಸಂಗತಿಯನ್ನು ಅಸದಬೇಗನು ದಾಖಲಿಸಿಲ್ಲ. ಅಸದಬೇಗನು ತನಗೊಪ್ಪಿಸಿದ ಮಹತ್ಕಾರ್ಯವನ್ನು ಯಶಸ್ವಿಯಾಗಿ ನೆರವೇರಿಸಿದ್ದಕ್ಕಾಗಿ ಅವನನ್ನು ಶ್ಲಾಘಿಸುತ್ತ ರಾಜಕುಮಾರ ದಾನಿಯಾಲನು ಅವನಿಗೆ ಅಂದವಾದ ಕಾಣಿಕೆಗಳನ್ನು ಕೊಟ್ಟನು. ಮುಘಲ ಪಾಳಯದಲ್ಲಿ ಸಾಕಷ್ಟು ಸವಿಯೂಟದ ಸಡಗರದ ಸಮಾರಂಭ ಕಾಣಿಸಿತು. "ಈ ರೀತಿಯ ಸಂತಸದ, ಉತ್ಸಾಹದ ವಾತಾವರಣದಲ್ಲಿ ಕೆಲದಿನಗಳು ಕಳೆದ ಮೇಲೆ ಮಹೋದಯ ಮಹಾದಂಡನಾಯಕ ಖಾನ–ಖಾನಾನನನ್ನು ಭೆಟ್ಟಿಯಾದೆನು, ನನಗೆ ಆಗ್ರಾಕ್ಕೆ ಹೊರಡಲು ಅನುಮತಿ ನೀಡಬೇಕೆಂದು

ಬಿನ್ನವಿಸಿದೆನು. ಬಹಳ ದಯೆಯಿಂದ ನನ್ನ ವಿನಂತಿಯನ್ನು ಮನ್ನಿಸಿದನು ಮತ್ತು ಅದೇ ರಾತ್ರಿ ಸಂತೋಷಚಿತ್ತದಲ್ಲಿದ್ದ ರಾಜಕುಮಾರನಿಗೆ ನಾನು ಬಹುಬೇಗನೆ ಸಾಮ್ರಾಟ ಸನ್ನಿಧಿಗೆ ತಲುಪಿ ಈ ಸಂತೋಷದ ವಿಷಯವನ್ನು ತಿಳಿಸಲು ಹೋಗಬಯಸಿರುವುದಾಗಿ ತಿಳಿಸಿದೆನು. ಶ್ರೇಷ್ಠ ರಾಜಕುಮಾರನು ಇದನ್ನು ಸಮ್ಮತಿಸುವಂತೆ ಇರದಿದ್ದರೂ ನನ್ನ ಸುಯೋಗ್ಯ ಸೇವೆಯನ್ನು ಮತ್ತು ಮಹಾದಂಡನಾಯಕರ ಮನವಿಯನ್ನು ಗಣನೆಗೆ ತೆಗೆದುಕೊಂಡು ಸಮ್ಮತಿಯಿತ್ತನು. ಮರುದಿನ ರಾಜಯೋಗ್ಯ ಜಶನ್ (ಸಮಾರಂಭ)ವನ್ನು "ಬಾಫ–ಇ–ಫರಾಹ ಬಕ್ಷ"ದಲ್ಲಿ ಏರ್ಪಡಿಸಲಾಯಿತು. ಎಲ್ಲ ರಾಜಪರಿವಾರದವರು ಮತ್ತು ಆದಿಲ್‌ಶಾಹಿಯ ಪ್ರಮುಖರು ನೆರೆದಿರುವಾಗ ಮತ್ತು ಕೆಂಪುವರ್ಣದ ಮದ್ಯವನ್ನು ಹೀರುವ ಸಭ್ಯಗೃಹಸ್ಥರ ಹಾಗೂ ಸರದಾರರ ಕಪೋಲಗಳು ಕಡುರಾಗದಿಂದ ಮಿನುಗುತ್ತಿದ್ದಾಗ ರಾಜಕುಮಾರನು ನನಗೆ ಈ ದೀನ ಸೇವಕನಿಗೆ, ವಿಶೇಷ ಬಗೆಯ ಜರದ ಖಿಲಾತ (ಶ್ರೇಷ್ಠ ಪೋಷಾಕ) ಮತ್ತು ಸುವರ್ಣ ಪಟ್ಟಿಯ ಖಡ್ಗವನ್ನು, ಅಲಂಕೃತ ಕಿರುಗತ್ತಿಯನ್ನು ಮತ್ತು ಸರ್ವಾಲಂಕೃತ ಥಡಿಯುಳ್ಳ ಇರಾಕ ದೇಶದ ಕುದುರೆಯನ್ನು ಕೊಟ್ಟು ಪುರಸ್ಕರಿಸುತ್ತ ನನಗೆ ಹೊರಡಲು ಅನುಮತಿಯಿತ್ತನು.

ಸರಿಯಾದ ಕಾಲದಲ್ಲಿ ಅಸದಬೇಗನು ಆಗ್ರಾದಲ್ಲಿ ಸಾಮ್ರಾಟನಿಗೆ ತನ್ನ ಕಾರ್ಯದ ಯಶಸ್ಸನ್ನು ವಿವರಿಸಿದನು. ಹಾಗೆಯೇ ತಾನು ಬಿಜಾಪುರದಿಂದ ತಂದಿದ್ದ ಕಾಣಿಕೆಗಳನ್ನು ಅವನೆದುರು ಹರಹಿದನು. ಇವುಗಳಲ್ಲಿ ಕೆಲವು ಕುತೂಹಲ ಹುಟ್ಟಿಸುವ ವಸ್ತುಗಳಿದ್ದವು; ಅವು ಸಾಮ್ರಾಟನ ಲಕ್ಷ್ಯವನ್ನು ಸೆಳೆದವು. ಅವು ಯಾವೆಂದರೆ, (೧) ಒಂದು ಸಹೂನ–ಇ–ನೌರಸ, (೨) ಒಂಬತ್ತು ಇಬ್ರಾಹಿಮಿಯ ಒಂದು ಘಟಕ, (೩) ಒಂಬತ್ತು ಬೇರೆ ಹೂನಗಳು, (೪) ಒಂಬತ್ತು ಖಾಂಸ(ಸ್ವರ್ಣ) (೫) ಒಂಬತ್ತು ಟೆಂಗಿನಕಾಯಿಗಳು (೬) ಒಂಬತ್ತು ಲ್ಯಾರಿಗಳು, ಇಬ್ರಾಹಿಮ್ ಆದಿಲ್‌ಶಾಹನು ಡೆಕ್ಕನ್ನದ ಒಂಬತ್ತು ಹಂಸಗಳಿಗೆ ಸಮನಾದ ಹೂನ–ಇ–ನವರಸ ಎಂಬ ಹೆಸರಿನ ಹೊಸ ನಾಣ್ಯವೊಂದನ್ನು ವಿನ್ಯಾಸಗೊಳಿಸಿದ್ದಾನೆ ಎಂದು ಅಸದಬೇಗನು ಅಕ್ಬರನಿಗೆ ಹೇಳಿದನು. ಆ ಹೂನ–ಇ–ನವರಸದ ಮೇಲೆ ಕೆಳಗಿನ ಒಕ್ಕಣಿಕೆಯನ್ನು ಕೆತ್ತಲಾಗಿತ್ತು :

(ಕೆಳಗಿನದು ಪರ್ಶಿಯನ್ ಭಾಷೆಯಲ್ಲಿಯ ಪದ್ಯದ ಕನ್ನಡ ಅನುವಾದ)

"ನವರಸ ಮುಹರ–ಇ–ಆದಿಲ್‌ಶಾಹಿ ಜಗದ್ಗುರುದಾದ ಇಲಾಹಿ"

ರಾಜಕುಮಾರ ದಾನಿಯಾಲನೊಡನೆ ಸುಲ್ತಾನಾ ಬೇಗಂಳ ವಿವಾಹ:

ರಾಜಕುಮಾರ ದಾನಿಯಾಲನು ಆತನ ಬಿಡಾರದೊಡನೆ ಮತ್ತು ವಧುವಿನ ಪರಿವಾರದವರು ಅಹಮ್ಮದ ನಗರದಿಂದ ಪೈಠಣಕ್ಕೆ ಹೊರಟರು. ಸಫಾರ ೧೦೧೩, ಎ.ಎಚ್ ತಿಂಗಳಲ್ಲಿ (೧೯ ಜೂನ್–೧೭ ಜುಲೈ ೧೬೦೪) ಗೋದಾವರಿ ತೀರದಲ್ಲಿರುವ

ಆ ಪಟ್ಟಣದ ಸಮೀಪದಲ್ಲಿ ವಿದ್ಯುಕ್ತವಾಗಿ ಮದುವೆ ನಡೆಯಿತು. ಬಹುಶಃ ಈ ಘಟನೆಯ ಸ್ಮರಣಾರ್ಥವಾಗಿ ಅಕ್ಬರನು ಸುಮಾರು ಈ ಸಮಯದಲ್ಲಿ ಬಂಗಾರ ನಾಣ್ಯವೊಂದನ್ನು ಹೊರತಂದನು. ಈ ವಿಶಿಷ್ಟ ಕೃತಿಯು (ನಾಣ್ಯದ) ಮುಂಭಾಗದಲ್ಲಿ ರಾಮ-ಸೀತಾರ ಎದೆ ವಿಗ್ರಹವಿದ್ದು ಅದರ ಹಿಂಬದಿಯಲ್ಲಿ ಜಗ್ಗಿ ಹಿಡಿದ ಧನುಸ್ಸು ಮತ್ತು ಬತ್ತಳಿಕೆಯುಳ್ಳ ಕಿರೀಟಧಾರಿಯಾದ ಧನುರ್ಧಾರಿಯು ಅವಕುಂಠನಧಾರಿಯಾದ ಸ್ತ್ರೀಯೊಂದಿಗೆ ನಿಂತಿರುವ ಚಿತ್ರವಿದೆ.

ಅಕ್ಬರನು ಹೊರಡಿಸಿರುವ ಈ ನಾಣ್ಯದೊಂದಿಗೆ ಬಿಜಾಪುರಕ್ಕೆ ಅಸದಬೇಗನನ್ನು ಕಳಿಸಿದ್ದ ಕಾರ್ಯವು ಸಮಾಪ್ತವಾಯಿತೆಂದು ಹೇಳಬಹುದು.

■

*

II. ಅಸದ ಬೇಗನ ನೆನಪುಗಳು

(ಈ ಕೃತಿಯನ್ನು ಹಾಲಾಯಿ–ಇ–ಅಸದ ಎಂದು ಕರೆಯಲಾಗುತ್ತದೆ. ಇದು ಅಕ್ಬರ್‌ನ ಆಳ್ವಿಕೆಯ ಉತ್ತರಾರ್ಧ ಕಾಲದಲ್ಲಿ ಅಸದಬೇಗನು ಬರೆದ ವೈಯಕ್ತಿಕ ದಾಖಲೆಯಾಗಿದ್ದು ಆ ಕಾಲದಲ್ಲಿ ಜರುಗಿದ ಕೆಲವು ರಾಜಕೀಯ ಘಟನೆಗಳನ್ನು, ವಿಶೇಷವಾಗಿ ಅಬೂಲ್ ಫಜಲ್‌ನ ಹತ್ಯೆಯನ್ನು ಒಳಗೊಂಡಿದೆ.)

ಸರ್ ಎಚ್.ಎಂ. ಎಲಿಯಟ್‌ನ ಹಸ್ತಪ್ರತಿಯ ಕೊನೆಯಲ್ಲಿರುವ ಪರ್ಶಿಯನ್ ಟಿಪ್ಪಣಿಯು ಲೇಖಕನನ್ನು ಕುರಿತು ಕೆಳಗಿನ ವಿವರ ನೀಡುತ್ತದೆ :–

ಈ ಕೃತಿಯ ಕರ್ತೃ, ಕಾಜ್ವಿನ್‌ದ ಅಸದಬೇಗ್‌ನು ತನ್ನ ದಯೆ, ಉದಾರಭಾವ, ಉಪಕಾರ ಬುದ್ಧಿ ಮತ್ತು ಹಿರಿದಾದ ವ್ಯವಹಾರಾನುಭವ ಇವುಗಳಿಗೆ ಹೆಸರಾಗಿದ್ದನು. ಭಾರತದೇಶಕ್ಕೆ ಬಂದ ಬಳಿಕ ಇವನು ಶೇಖ ಮುಬಾರಕನ ಪುತ್ರನಾಗಿದ್ದ ಶೇಖ ಅಬುಲ್ ಫಜಲ್ಲನ ಸೇವೆಯಲ್ಲಿ ಹದಿನೇಳು ವರ್ಷಗಳನ್ನು ಕಳೆದನು. ಶೇಖ ಅಬುಲ್ ಫಜಲ್ಲನ ಕೊಲೆಯಾದ ಮೇಲೆ ಸಾಮ್ರಾಟ ಅಕ್ಬರ್‌ನ ಆಸ್ಥಾನದಲ್ಲಿ ಅಧಿಕಾರಿಯೆಂದು ನಿಯಮಿಸಲ್ಪಟ್ಟನು; ಸಂಪತ್ತು ಮತ್ತು ಮರ್ಯಾದೆಗಳನ್ನು ನೀಡುವ ಉನ್ನತ ಹುದ್ದೆಗಳನ್ನು ಮತ್ತು ಅಧಿಕಾರವನ್ನು ಪಡೆದುಕೊಂಡನು. ಸ್ವಲ್ಪಕಾಲದಲ್ಲಿ ಅಕ್ಬರ್‌ನ ಜೀವನ ಮತ್ತು ಕಾಲ ಕೊನೆಗೊಂಡು ಬಾದಶಾಹ ಜಹಾಂಗೀರನ ಆಳ್ವಿಕೆ ಆರಂಭವಾಯಿತು. ಮೊದಲು ಅಸದಬೇಗನಿಗೆ ಆಸ್ಥಾನದಲ್ಲಿ ಪ್ರವೇಶ ದೊರಕದಿದ್ದರೂ ಅವನು ಪ್ರಭುತ್ವದ ಪ್ರಾಮಾಣಿಕ, ಸತತ ಸೇವಕನಾಗಿಯೇ ಮುಂದುವರೆದನು. ಜಹಾಂಗೀರನ ಆಳಿಕೆಯು ಕೊನೆಗೊಳ್ಳಲಿರುವಾಗ ಅವನಿಗೆ ಪೇಶ್ರನ್ ಖಾನ ಎಂಬ ಬಿರುದು ನೀಡಲಾಯಿತು. ಸಾಮ್ರಾಟ ಶಾಹ ಜಹಾನನ ಆಳ್ವಿಕೆಯ ಆರಂಭದಲ್ಲಿ ಹಿ.ಶ. ೧೦೪೧ರಲ್ಲಿ, ಅಸದಬೇಗನು ಮೃತನಾದನು.

ಬಂಗಾಲ ಪ್ರಾಂತದ ಪೌರಸೇವೆಯಲ್ಲಿ ಅಧಿಕಾರಿಯಾಗಿದ್ದ ಬಿ.ಡಬ್ಲ್ಯೂ. ಚಾಪಮನ್ ಈ ಸಂಪೂರ್ಣ ಗ್ರಂಥವನ್ನು ಸರ್ ಎಚ್.ಎಂ. ಎಲಿಯಟ್ ಈತನಿಗಾಗಿ ಭಾಷಾಂತರಿಸಿದನು. ಅದರಿಂದ ತೆಗೆದುಕೊಂಡ ಕೆಲವು ಉದ್ಧರಣಗಳು ಇಲ್ಲುಂಟು. ಆ ಗ್ರಂಥದ ವಿಷಯ ವಿವರಗಳ ಸಾಮಾನ್ಯ ಸಂಗ್ರಹರೂಪ ಕೆಳಗಿನಂತಿದೆ.

ಪ್ರಥಮ ಉದೃತ ಭಾಗದಲ್ಲಿಯ ಅಬೂಲ್ ಫಜಲ್ಲನ ಹತ್ಯೆಯ ವಿವರವು ಲೇಖಕನು ನೀಡಿದ್ದಾಗಿದೆ. ಅಸದಬೇಗನ ಮನಸ್ಸಿನ ಮತ್ತು ಅವನು ಮಾಡಿಕೊಂಡ ವಿನಂತಿಯ ವಿರುದ್ಧವಾಗಿ ಅಬೂಲ್ ಫಜಲ್ಲನು ಅವನನ್ನು ಬಿಟ್ಟು ಸಿರೋಂಜಕ್ಕೆ ಹೋದನು. ನಾಲ್ಕುದಿನಗಳ ನಂತರ ಶೇಖನ ಕೊಲೆಯ ಸುದ್ದಿ ತಿಳಿಯಿತು. ಆಗ ತಾನೇ ಸಿರೋಂಜಕ್ಕೆ ಹೋಗಿ ರಕ್ಷಣೆಗೆ ನಿಲ್ಲಬೇಕೆಂದು ಅಸದಬೇಗನು ಹೊರಟಾಗ ಹಾಗೆ ಮಾಡದೆ ಆಸ್ಥಾನಕ್ಕೆ ಹೋಗಬೇಕೆಂದು ಕಟ್ಟಾಜ್ಞೆ ಬಂದಿತು. ಕಾಲಾಬಾಘಕ್ಕೆ ಹೋಗಲಾಗಿ ಅಲ್ಲಿಯೇ ಹಿಂದೆಬಿಟ್ಟು ಹೋಗಿದ್ದ ಅಬೂಲ್ ಫಜಲ್ಲನ ದೊಡ್ಡ ಸರಕು ಮೂಟೆ ಕಂಡಿತು, ಅದನ್ನು ಅಲ್ಲಿದ್ದ ಅಧಿಕಾರಿಗಳು ನೆಲದಲ್ಲಿ ಹೂಳಿ ರಕ್ಷಿಸಿದ್ದರು. ಅದಲ್ಲದೆ ಆ ವಿಧ್ವಸ್ತಗೊಂಡ ಸ್ಥಳಕ್ಕೆ ಬಂದು ನೋಡಿದಾಗ ಅಲ್ಲೊಂದು ಆಭರಣಗಳ ಪೆಟ್ಟಿಗೆ (ಸಂಪುಟ) ಸಿಕ್ಕಿತು; ಅದನ್ನು ಒಬ್ಬ ಸೇವಕನು ಅಡವಿಯಲ್ಲಿ ಬಚ್ಚಿಟ್ಟು ರಕ್ಷಿಸಿದ್ದನು. ಅಲ್ಲಿದ್ದ ಗಂಟಿನಮೂಟೆ ನಾಲ್ಕೈದು ಲಕ್ಷ ರೂಪಾಯಿಗಳ ಬೆಲೆಯುಳ್ಳದ್ದಾಗಿತ್ತು. ಅದನ್ನು ಸುರಕ್ಷಿತವಾಗಿ ಆಗ್ರಾಕ್ಕೆ ಸಾಗಿಸಲಾಯಿತು.

ಮೂಲ : ಇಲಿಯಟ್ ಮತ್ತು ಡೌಜನ್ನನ 'History of as told by its own historians, Vol VI'

ಅಸದನು ತನ್ನ ಒಡೆಯ ಅಬೂಲ್ ಫಜಲ್‌ನನ್ನು ರಕ್ಷಿಸುವಲ್ಲಿ ಅಲಕ್ಷ್ಯ ತೋರಿದ್ದಾನೆಂಬ ಭಾವ ಹೊಂದಿದ್ದ ಅಕ್ಬರನು ಅವನ ಮೇಲೆ ವಿಪರೀತವಾಗಿ ಕ್ರುದ್ಧನಾಗಿದ್ದನು. "ಆತನನ್ನು ಸ್ನಾನಗೃಹಕ್ಕೆ ಕರೆತನ್ನಿ. ನನ್ನ ಕೈಯಿಂದಲೇ ಅವನನ್ನು ಕಡಿದು ತುಂಡು ಮಾಡುವೆ" ಎಂದು ಸಾಮ್ರಾಟನು ಆಜ್ಞಾಪಿಸುವುದನ್ನು ಭಯಗ್ರಸ್ತನಾದ ಅಸದನು ಕೇಳಿದನು. ಸತ್ಯಸಂಗತಿಗಳನ್ನು ಮನದಟ್ಟು ಮಾಡಿಕೊಂಡ ಮೇಲೆ ಸಾಮ್ರಾಟನು ಶಾಂತನಾದನು. ಅವನೊಡನೆ ಮುಕ್ತವಾಗಿ ಮಾತನಾಡಿದನು. ಅಸದನಿಗೆ ಮರ್ಯಾದೆಯ ಪೋಷಾಕು ಕೊಟ್ಟು ಸನ್ಮಾನಿಸಲಾಯಿತು. ಅದಾದ ಮೇಲೆ ಕೆಲದಿನಗಳಲ್ಲಿಯೇ ಅವನನ್ನು ಸಾಮ್ರಾಟನ ಅಂಗರಕ್ಷಕದಳದ ಮುಖ್ಯಸ್ಥನನ್ನಾಗಿ ಮಾಡಲಾಯಿತು. ಅದಲ್ಲದೆ "ಅಪರಾಧಿ ಶಾ ಅಲಿಖಾನನ ರದ್ದುಪಡಿಸಿದ್ದ ಜಮೀನುಗಳಿಗೆ ಸಂಬಂಧಿಸಿದ ಆಸ್ತಿಯೊಂದನ್ನು" ಅವನಿಗೆ ಕೊಡಲಾಯಿತು. ಈ ಆಸ್ತಿಯಿಂದ ಅವನು ಮೊದಲ ವರ್ಷ ೧೭೦೦೦ ಮತ್ತು ಎರಡನೆಯ ವರ್ಷ ೨೦೦೦೦ ಮತ್ತು ಮೂರನೆಯ ವರ್ಷ ೨೩೦೦೦ ರೂಪಾಯಿಗಳನ್ನು ಪಡೆದುಕೊಂಡನು.

ಅಬೂಲ್ ಫಜಲ್‌ನನ್ನು ಕೊಲೆಗೈದ ನರಸಿಂಘನನ್ನು ಒಂದು ಕೋಟೆಯಲ್ಲಿ ಹಿಡಿದಿಟ್ಟಿದ್ದನು. ಕೋಟೆಯಿಂದ ಪಾರಾಗಿ ಅವನು ಓಡಿಹೋಗಿದ್ದನು. ಈ ವಿಷಯಕ್ಕೆ ಸಂಬಂಧಿಸಿದ ವಿಚಾರಣಾ ಆಯೋಗದ ಅಧ್ಯಕ್ಷನೆಂದು ಅಸದಬೇಗನನ್ನು ನಿಯಮಿಸಿ ಅವನನ್ನು ರಾಯರಾಯನ್‌ನ ಬಿಡಾರಕ್ಕೆ ಕಳಿಸಲಾಯಿತು. ಅಸದನು ಅಲ್ಲಿಗೆ ಹೋದಾಗ ಅವನ ಅನುಗ್ರಹಕ್ಕೆ ಪಾತ್ರರಾಗಲು ಪ್ರಯತ್ನಿಸುವ ಅಲ್ಲಿಯ ಅಧಿಕಾರಿಗಳು ಅವನಿಗೆ ರೂ. ೧೮೦೦೦ ಬೆಲೆಯುಳ್ಳ ಕಾಣಿಕೆಗಳನ್ನು ಕೊಡಲು ಬಂದಾಗ ಅವನು ಅವುಗಳನ್ನು ಸ್ವೀಕರಿಸಲು ನಿರಾಕರಿಸಿದನು. ರಾಯರಾಯನ್ನನು ಅಸದಬೇಗನ ವಿಷಯದಲ್ಲಿ ಬಹಳಷ್ಟು ಗಮನ ನೀಡಿದನು; ವಿಚಾರಣೆಗೆ ಸಂಬಂಧಿಸಿದ ವಿಷಯಗಳನ್ನೆಲ್ಲ ಮುಚ್ಚಿಹಾಕುವ ನಿರ್ಣಯ ತೆಗೆದುಕೊಳ್ಳಲಾಯಿತು ಮತ್ತು ಅದರಿಂದ ಎಲ್ಲರಿಗೂ ಸಮಾಧಾನವಾಯಿತು. ಅವನೇ ಹೇಳುವ ಪ್ರಕಾರ ರಾಯರಾಯನ್ನನಿಂದ ವಿದಾಯದ ಉಡುಗೊರೆಯಾಗಿ ಒಂದು ಕುದುರೆ ಮತ್ತು ಪೋಷಾಕುಗಳನ್ನು ಅವನು ಸ್ವೀಕರಿಸಿದನು. ಆದರೆ ಆನೆಯನ್ನು ನಿರಾಕರಿಸಿದನು. ಆಸ್ಥಾನಕ್ಕೆ ಮರಳಿ ಬಂದಮೇಲೆ ಆತನು ಸಾಮ್ರಾಟನಿಗೆ ತನ್ನ ವರದಿಯನ್ನು ಒಪ್ಪಿಸಿದನು. ಆ ವರದಿಯನ್ನು ಸಾಮ್ರಾಟನು ಒಪ್ಪಿದ್ದರಿಂದ ಅಧಿಕಾರಿಗಳು ಮತ್ತು ಅವರ ಸ್ನೇಹಿತರು ಸಂತೋಷಗೊಂಡರು. ಅಸದನು ಹೇಳುತ್ತಾನೆ "ಇದು ನನಗೊಪ್ಪಿಸಿದ ಮೊದಲ ಕೆಲಸವಾಗಿತ್ತು. ಅದನ್ನು ನಾನು ಸುಖಾಂತ್ಯಕ್ಕೆ ತಂದೆನು. ಅದರಿಂದ ಯಾರಿಗೂ ಮರ್ಯಾದೆಯು ಸಿಗಲಿಲ್ಲ. ಹಾಗೆಯೇ ಯಾರ ಮುಖಭಂಗವೂ ಆಗಲಿಲ್ಲ. ಆದರೆ ಅದರಿಂದಾಗಿ ನನಗೆ ದೊಡ್ಡ ಮೆಚ್ಚುಗೆಯೂ, ಅದರೊಡನೆ ಸಾಕಷ್ಟು ಹಣವೂ ಲಭ್ಯವಾಯ್ತು. ಆಗ ನಾನು ತುರಂತವಾಗಿ ಸಾಮ್ರಾಟನ ಆಪ್ತಸೇವೆಗೆ ಮರಳಿದೆನು. ಅಲ್ಲಿ ದಿನದಿಂದ ದಿನಕ್ಕೆ ಸಾಮ್ರಾಟನ ಕೃಪೆಯನ್ನು ಸಂಪಾದಿಸುತ್ತ ಕೊನೆಗೆ ಬಹು ಆಕರ್ಷಕವಾದ 'ಕಾಣಿಕೆಗಳ ಕೋಶಾಧಿಕಾರಿ ಹುದ್ದೆಗೆ ನೇಮಕಗೊಂಡೆನು.'

ಈ ಹುದ್ದೆಯಲ್ಲಿ ಅಸದಬೇಗನು ಕೆಲವೇ ತಿಂಗಳು ಕಳೆದಿರಲಿಕ್ಕಿಲ್ಲ. ಸಾಮ್ರಾಟನು ಅವನನ್ನು ಒಂದು ಮಹತ್ಕಾರ್ಯಕ್ಕೆಂದು ದಕ್ಷಿಣಕ್ಕೆ ಕಳಿಸಿದನು. ಹಿಜರಿ ೧೦೦೯ರಲ್ಲಿ ಅಕ್ಬರನು ತನ್ನ ಮಗನಾದ ರಾಜಕುಮಾರ ದಾನಿಯಲ್ ಮತ್ತು ಬಿಜಾಪುರದ ರಾಜನ ಮಗಳ ಮಧ್ಯದಲ್ಲಿ ವಿವಾಹವನ್ನೇರ್ಪಡಿಸಲು ಮೀರ್‌ಜಮಾಲುದ್ದೀನನನ್ನು ಬಿಜಾಪುರಕ್ಕೆ ಕಳಿಸಿದ್ದನು. ಕೊಡುಮಾಡಿರುವ ಆ ವಧುವಿನೊಡನೆ ಮೀರನನ್ನು ಮರಳಿ ಕರೆತರಲು ಅಸದನನ್ನು ಕಳಿಸಲಾಯಿತು. ಅವನು ಅಲ್ಲಿ ಹೋದದ್ದು ಹಿಜರಿ ೧೦೧೩ರಲ್ಲಿ ಅಥವಾ ಅದಕ್ಕಿಂತ ತುಸುಮುಂಚೆ ಇರಲೇಬೇಕು. ಯಾಕೆಂದರೆ ಆ ಮದುವೆ ೧೦೧೩ರಲ್ಲಿ ಘಟಿಸಿತು. ಉಧೃತ ಭಾಗಗಳಲ್ಲಿ ಅವನಿತ್ತ ಆದೇಶಗಳು ಸಿಗುತ್ತವೆ. ಖರ್ಚಿಗಾಗಿ ಅವನು ೨೦೦೦೦ ರೂಗಳನ್ನು ಪಡೆದನು. ಬಿಡಾರಕ್ಕೆ ಅವನು ಬಂದೊಡನೆ ಅಲ್ಲಿ ರಾಜಕುಮಾರ ದಾನಿಯಲನು ಅವನನ್ನು ಆದರದಿಂದ

ಸತ್ಕರಿಸಿದನು. ಅವನಿಂದ ಮತ್ತು ಅವನ ಸರದಾರರಿಂದ ಅಸದನು "ಸುಮಾರು ೧೦೦,೦೦೦ ರೂಪಾಯಿಗಳನ್ನು ಮತ್ತು ಐವತ್ತು ಕುದುರೆ ಮತ್ತು ಹತ್ತು ಒಂಟೆಗಳನ್ನು ಕಾಣಿಕೆಯಾಗಿ ಪಡೆದನು. ಬಿಜಾಪುರದ ಪ್ರಾಂತದಲ್ಲಿ ಕಾಲಿಟ್ಟಾಗ ಮೀರ ಜಮಾಲುದ್ದೀನ ಮತ್ತು ಆದಿಲ್‌ಖಾನನ ಪುತ್ರ ಇಬ್ಬರೂ ಅಸದನನ್ನು ಬರಮಾಡಿಕೊಂಡರು.

ಬಿಜಾಪುರ ತಲುಪಿದ ಸ್ವಲ್ಪ ಸಮಯದಲ್ಲಿಯೇ ಅಸದನು ರಾಜನನ್ನು ಭೇಟಿಯಾದನು. ಅವನೇ ಹೇಳುವಂತೆ ರಾಜನಿಗೆ "ಪರ್ಶಿಯನ್ ಭಾಷೆ ಚೆನ್ನಾಗಿ ಅರ್ಥವಾಗುತ್ತಿದ್ದರೂ ಅದರಲ್ಲಿ ನಿರರ್ಗಳವಾಗಿ ಮಾತನಾಡಲು ಬರುತ್ತಿರಲಿಲ್ಲ" ಹಾಗಾಗಿ ಅವನು ಮರಾಠಿಯಲ್ಲಿ ಮಾತಾಡಿದನು. ಬಿಜಾಪುರದಲ್ಲಿ ಕೇವಲ ಒಂದೇ ಒಂದುದಿನ ಇರಬೇಕೆಂದು ಅಸದನಿಗೆ ಅಕ್ಬರನು ಆಜ್ಞಾಪಿಸಿದ್ದನು. ಇದರಿಂದ ಬಿಜಾಪುರದ ರಾಜನಿಗೆ ಬೇಜಾರವೆನಿಸಿತು. ಅದಲ್ಲದೆ ತನ್ನ ರಾಜ್ಯಕ್ಕೆ ಗ್ವಾಲಿಯರ್ ಪಟ್ಟಣವನ್ನು ಸೇರಿಸಿರಲಿಲ್ಲವೆಂಬ ಮನಸ್ತಾಪವೂ ಅವನಿಗಿತ್ತು. ಅಸದಬೇಗನಿಗೆ ಅವನ ಯೋಜನೆಯನ್ನು ಬದಲಿಸಲೆಂದು ರಾಜನು ೨೦೦,೦೦೦ ಪಗೋಡಾಗಳನ್ನು ಕೊಡಲು ಮುಂದಾದನು. ಲಂಚದ ಆಶೆಯಿಲ್ಲದ ತನ್ನ ಶ್ರೇಷ್ಠತೆಯನ್ನು ಅಸದನು ದಾಖಲಿಸಿದರೂ ತನ್ನ ಸೌಮ್ಯ ಮನಸ್ಥಿತಿಯಿಂದ ತಾನೇ ಬೆರಗಾದನು. ಅವನು ಹೇಳುತ್ತಾನೆ". ೬೦೦,೦೦೦ ರೂಪಾಯಿಗಳಿಗೆ ಸಮನಾದ ೨೦೦,೦೦೦ ಪಗೋಡಾಗಳಲ್ಲಿ ಒಂದೇ ಒಂದು ನಾಣ್ಯವನ್ನೂ ನಾನು ಮುಟ್ಟಲಿಲ್ಲ. ಅಷ್ಟೊಂದು ಆತ್ಮಸಾಕ್ಷಿಯಿಂದ ಅವನಿರುವುದನ್ನು ಮೀರಜಮಾಲನು ಸರಿಯಲ್ಲವೆಂದು ತೆಗಳಿದನು. ಮೀರನು ದಕ್ಷಿಣ ಬಿಟ್ಟು ಮರಳಿಹೋಗದೇ ಇರುವುದಕ್ಕೆ ಕಾರಣವು ಯಾವುದೆಂದು ಅವನಿಗೆ (ಅಸದನಿಗೆ) ಗೊತ್ತಾಯಿತು. "ಅವನಿಗೆ ಬಿಜಾಪುರ ಮತ್ತು ಗೋವಳಕೊಂಡಗಳಿಂದ ಪ್ರತಿವರ್ಷ ಮೂರರಿಂದ ನಾಲ್ಕು ನೂರು ಸಾವಿರ ಪಗೋಡಾಗಳು (೩೦೦೦೦೦ ದಿಂದ ೪೦೦೦೦೦ ಪಗೋಡಾಗಳು) ಸಿಗುತ್ತಿದ್ದವು."

ಸಾಮ್ರಾಟನಿಗೆ ಕೊಡಬೇಕೆನ್ನುವ ಕಾಣಿಕೆಗಳ ವಿಷಯ ಕುರಿತು ಪ್ರಶ್ನೆ ಹುಟ್ಟಿತು; ರಾಜ ಮತ್ತು ಅಸದನ ನಡುವೆ ಚೌಕಾಶಿ ನಡೆಯಿತು. ಸಾಮ್ರಾಟನಿಗೆ ಯಾವ ವಸ್ತುವಿನ ವಿಷಯಕ್ಕೆ ಅತ್ಯಂತ ಹೆಚ್ಚಿನ ಅಭಿರುಚಿಯುಂಟೆಂದು ರಾಜನು ಕೇಳಲು ಅಸದನು "ಅಪರೂಪದ ಮಣಿರತ್ನಗಳು ಮತ್ತು ಶ್ರೇಷ್ಠವಾದ ಆನೆಗಳು" ಎಂದನು. ಒಂದು ಆನೆ ಮತ್ತು ರತ್ನಾಭರಣಗಳನ್ನು ಕೊಡಲಾಯಿತು. ಅಸದನು ಹೊರಡಲನುವಾದನು. ಅವನಿಗಾಗಿಯೇ ಎಂದು ೧೦೦,೦೦೦ 'ಇದ್ರಿಸ'ಗಳನ್ನು ಅಂದರೆ ೩೩,೦೦೦ ರೂಪಾಯಿಗಳಿಗೆ ಸಮನಾದ ಮೊತ್ತವನ್ನು, ಆನೆಯೊಂದನ್ನು, ಕುದುರೆಗಳನ್ನು ಇತ್ಯಾದಿ ರಾಜನು ಕೊಡಮಾಡಿದನು, ಆದರೆ ಅವನು ಅವುಗಳನ್ನು ಸ್ವೀಕರಿಸಲು ನಿರಾಕರಿಸಿದನು. ಅಕ್ಬರ್‌ನ "ದಿವ್ಯ ಧರ್ಮ"ದ ಅನುಯಾಯಿಯಾಗಿದ್ದ

ಅಸದನು ಅದರ ಚಿಹ್ನೆ ಧರಿಸಿದ್ದನು. ಅದನ್ನು ಪರೀಕ್ಷಿಸಲು ರಾಜನು ಅವನಿಂದ ತೆಗೆದುಕೊಂಡು ತಾನೂ ಅಂಥ ಅನುಯಾಯಿಯೇ ಆಗಿದ್ದರಿಂದ ಅದು ತನಗಾಗಿ ಬೇಕು. ತನ್ನಲ್ಲಿ ಇಟ್ಟುಕೊಳ್ಳುವೆನೆಂದನು. ರಾಜನಿಗಾಗಿಯೇ ವಿಶಿಷ್ಟವಾದ ಅಂಥದೊಂದನ್ನು ತರಿಸಿಕೊಡುವುದಾಗಿ ಅವನಿಗೆ ಭರವಸೆಕೊಟ್ಟು ತನ್ನ ಚಿಹ್ನೆಯನ್ನು ಕಷ್ಟದಿಂದ ಮರಳಿ ಪಡೆದನು. ಅಸದನು ಅಲ್ಲಿಂದ ಹೊರಟು ಹೋದ ಬಳಿಕ ರಾಜನು ಕಾಣಿಕೆಯಾಗಿ ೯೦೦೦ ಪಗೋಡಾಗಳನ್ನು ಅವನಿಗಾಗಿ ಕಳಿಸಿದನು. ಈ ಕೃತಿಯಿಂದ ಉದ್ಧೃತವಾದ ಭಾಗವೊಂದರಲ್ಲಿ ಬಿಜಾಪುರದ ಸಂಕ್ಷಿಪ್ತ ವರ್ಣನೆಯುಂಟು. ಅಲ್ಲಿಂದ ಅಸದಬೇಗನು ಹೊರಟಾಗ ಅವನ ಜೊತೆಯಲ್ಲಿ ರಾಜಕುಮಾರಿ ಮತ್ತು ಮೀರ ಜಮಾಲುದ್ದೀನ ಹೊರಟರು; ಆದರೆ ಸರಹದ್ದಿನಲ್ಲಿರುವ ಹೊಳೆಯನ್ನು (ಭೀಮಾ?) ತಲುಪಿದಾಗ, ಸೈನ್ಯ ಮತ್ತು ರಾಜಕುಮಾರಿ ಮುಂದೆ ಸಾಗಲು ಮನಸ್ಸಿಲ್ಲದವರಾಗಿ ಹಿಂಜರಿದರು. ರಾತ್ರಿಯಲ್ಲಿ ಬಿರುಗಾಳಿ ಬೀಸಿ ಹಾಕಿದ್ದ ಬಿಡಾರವನ್ನೆಲ್ಲ ನೆಲಸಮಗೊಳಿಸಿತು. ಬಿಜಾಪುರದಿಂದ ಬಂದಿದ್ದ ಬೆಂಗಾವಲುಪಡೆ, ರಾಜಕುಮಾರಿ ಅಲ್ಲಿಂದ ಪಲಾಯನ ಮಾಡಿದರು. ಆದರೆ ಮರ್ಯಾದೆಗೆಟ್ಟ ಅವರನ್ನು ಬೆಳಗ್ಗೆ ಮೀರಜಮಾಲುದ್ದೀನನು ಹಿಡಿದು ತರಿಸಿದನು. ರಾಜಕುಮಾರಿಗಾಗಿ ಏರ್ಪಟ್ಟಿದ್ದ ಈ ವಿವಾಹ ಸಂಬಂಧವು ಅವಳಿಗೆ ಮತ್ತು ಅವಳ ಸ್ನೇಹಿತೆಯರಿಗೆ ಇಷ್ಟವಿರಲಿಲ್ಲವೆಂದು ಸ್ಪಷ್ಟವಿತ್ತು. ಅವಳು ಬಂದ ಬಳಿಕ ಅಸದನು ತನ್ನ ಪ್ರಯಾಣವನ್ನು ಮುಂದುವರೆಸುತ್ತ ರಾಜಕುಮಾರಿಯನ್ನು ಅಹಮ್ಮದಾಬಾದಕ್ಕೆ ಕರೆದೊಯ್ದರು. ಅಲ್ಲಿ ರಾಜಕುಮಾರ ದಾನಿಯಲನು ಅಸದನನ್ನು ಸುಯೋಗ್ಯವಾಗಿ ಸ್ವಾಗತಿಸುತ್ತ ಅವನಿಗೆ ವಸ್ತ್ರಮರ್ಯಾದೆ ಮತ್ತು ಅಸ್ತ್ರಗಳನ್ನು ನೀಡಿದನು. ೧೦,೦೦೦ ರೂಪಾಯಿಗಳನ್ನು ಅವನಿಗೆ ಕೊಡಬೇಕೆಂದು ರಾಜಕುಮಾರನು ಆಜ್ಞೆಯಿತ್ತರೂ ಅಸದನು "ಕೇವಲ ೨೦೦೦ ಮುಝಾಪಾರಿಸ" ಪಡೆದನು. ಮೀರ ಜಮಾಲುದ್ದೀನನನ್ನು ರಾಜಕುಮಾರನೊಡನೆ ಬಿಟ್ಟು ಆಗ್ರಾದ ಕಡೆಗೆ ಪ್ರಯಾಣಗೈದನು. ಬಿಜಾಪುರದ ರಾಜನು ಸಾಮ್ರಾಟನಿಗೆ ಕಾಣಿಕೆಯಾಗಿ ಕೊಟ್ಟಿದ್ದ ಆನೆಯು ಅವನ ಹತ್ತಿರವೇ ಇತ್ತು. ದಿನಾಲು ಎರಡು ಮಣ ಮದ್ಯ ಕುಡಿಯುವ ರೂಢಿ ಈ ಪ್ರಾಣಿಗಿತ್ತು. ದಾರಿಯಲ್ಲಿ ಅದಕ್ಕೆ ಮದ್ಯ ಲಭ್ಯವಾಗಲಿಲ್ಲವಾದ್ದರಿಂದ ಸಾಮ್ರಾಟನಿಗೆ ಕೊಡಬೇಕೆಂದು ಬಿಜಾಪುರದಲ್ಲಿ ಕೊಂಡುಕೊಂಡಿದ್ದ "ದುಬಾರಿ ಬೆಲೆಯ ಪೋರ್ಚುಗಲ್ಲ ಮದ್ಯವನ್ನೇ ಅದಕ್ಕೆ ಕುಡಿಸಬೇಕಾಯಿತು.

ಆಸ್ಥಾನಕ್ಕೆ ಬಂದಾಗ ಅಸದನನ್ನು ಮರ್ಯಾದೆಪೂರ್ವಕವಾಗಿ ಬರಮಾಡಿಕೊಳ್ಳಲಾಯಿತು. ಅವನು ದಾಖಲಿಸಿದಂತೆ ಅವನು ಅಲ್ಲಿಗೆ ತಲುಪಿದ ದಿನ ಅಕ್ಬರನು ಕ್ರೋಧಾವೇಶದ ಮನಸ್ಥಿತಿಯಲ್ಲಿ ಒಬ್ಬ ನತದೃಷ್ಟ ಸೇವಕನನ್ನು ಕೋಟೆಯ

ಗೋಡೆಯಿಂದ ಎಸೆದುಬಿಡಲು ಆಜ್ಞಾಪಿಸಿದನಲ್ಲದೆ ಅಪಮಾನಿಸುತ್ತ ತನ್ನ ಅರಮನೆ ಅಧಿಕಾರಿಯನ್ನು ಕೆಲಸದಿಂದ ತೆಗೆದುಹಾಕಿದನು. ಖಾಲಿಯಿದ್ದ ಹುದ್ದೆಗೆ ಅಸದನನ್ನು ನೇಮಿಸಲಾಯಿತು. ಸಾಮ್ರಾಟನಿಗೆ ಬಂದ ವ್ಯಕ್ತಿಗಳನ್ನು ಭೇಟಿಮಾಡಿಸುವುದು ಅವನ ಕರ್ತವ್ಯವಾಗಿತ್ತು. ಈ ಹುದ್ದೆಯಲ್ಲಿ ಅವನು ಒಂದು ವರ್ಷ ಇದ್ದನು. ೨೫೦ ಸೈನಿಕ ಪಡೆಯ ಹುದ್ದೆಗೆ ಇವನನ್ನೇರಿಸಲಾಯಿತು ಮತ್ತು ಶಾಹ ಅಲಿಖಾನನ ಜಹಗೀರಿಯಿಂದ ೧೭,೦೦೦ ರೂ.ಗಳನ್ನು ಭತ್ಯೆಯೆಂದು ಕೊಡಲಾಯಿತು. ತನಗೊದಗಿಸಿದ ಸುಖಸಂಪತ್ತಿಯಿಂದ ತೃಪ್ತನಾಗಿದ್ದ ಅಸದನು ಆನಂದದಿಂದ ಉದ್ಗರಿಸುತ್ತಾನೆ. "ಅದೆಂಥ ಸುಖದ ದಿನಗಳು, ದೈವಾನುಗ್ರಹ ಸುರಿದ ದಿನಗಳು!" ಈ ಕೃತಿಯಿಂದ ಕೆಳಗಿನ ಎರಡು ಉದ್ಧರಣೆಗಳುಂಟು: ಒಂದು, ಆ ಸೇವಕನನ್ನು ಅನಾಗರಿಕ ರೀತಿಯಲ್ಲಿ ಮರಣದಂಡನೆಗೆ ಒಳಪಡಿಸಿದ್ದು ಮತ್ತು ಎರಡನೆಯದು, ಅಲ್ಲಿಯವರೆಗೆ ಸಾಮ್ರಾಟನ ಆಸ್ಥಾನಕ್ಕೆ ಅಪರಿಚಿತವಾಗಿದ್ದ ತಂಬಾಕನ್ನು ಅಸದನು ಪರಿಚಯಿಸಿದ್ದ.

ಇಲ್ಲಿಯ ಉದ್ಧೃತ ಭಾಗದಲ್ಲಿ ಕಾಣಿಸಿದ ಉದ್ದೇಶಗಳೊಂದಿಗೆ ಅಸದನನ್ನು ದಕ್ಷಿಣದ ನಾಲ್ಕು ಪ್ರಾಂತಗಳ ರಾಯಭಾರಿಯೆಂದು ನೇಮಿಸಲಾಯಿತು. ಅವನು ದಕ್ಷಿಣದಿಂದ ತಿರುಗಿ ಬಂದ ಮೇಲೆ ೧೦೦೦ ಸೈನಿಕರ ಮುಖ್ಯಸ್ಥನ ಹುದ್ದೆಗೇರಿಸಲಾಗುವುದೆಂದು ಆಶ್ವಾಸನೆ ಕೊಡಲಾಗಿತ್ತು. ಆದರೆ ಆ ಹುದ್ದೆ ಅವನಿಗೆ ಎಂದಿಗೂ ಸಿಗಲಿಲ್ಲ. ಆತನು ತನ್ನ ಕಾರ್ಯಕ್ಕಾಗಿ ಸಾಗಿದನು; ಚಂದಾ ಕಣಿವೆಯ ರಕ್ಷಣಾ ದಾರಿಗೆ ಬಂದಾಗ "ರಾಜಾಭೋಜ"ನ ಜನರು ರೂಢಿಯಲ್ಲಿದ್ದ ಸುಂಕವನ್ನು ಕೇಳಲು ಅಲ್ಲಿ ಅವರೊಡನೆ ಹೋರಾಟವಾಯ್ತು. ರಾತ್ರಿಯಲ್ಲಿ ಅಸದನು ಹಾಗೆಯೇ ಮುನ್ನುಗ್ಗಿ ಹೋದನು. ಉಜ್ಜಯನಿಗೆ ಹೋದಾಗ ಸಾಮ್ರಾಟನ ಸಾವಿನ ಸುದ್ದಿ ತಿಳಿಯಿತು. ಪ್ರಯಾಣವನ್ನು ಮುಂದುವರೆಸುತ್ತ ಅವನು ಬರ್ಹಾಣಪುರ ತಲುಪಿದನು. ಅಲ್ಲಿ ಮತ್ತು ಬೇರೆ ಕಡೆಗೆ ಶ್ರೀಮಂತ ವರ್ಗದಲ್ಲಿ ನಡೆಯುತ್ತಿದ್ದ ವ್ಯಭಿಚಾರ ಮತ್ತು ಜೂಜಾಟಗಳನ್ನು ದಾಖಲಿಸಿದ್ದಾನೆ; ಅಲ್ಲೆಲ್ಲ ಬಹಳ ಉತ್ಸಾಹದಿಂದ ಪ್ರವೇಶಿಸಿ ನೋಡಿದ್ದಾನೆ. ಜಹಾಂಗೀರನು ಪಟ್ಟಕ್ಕೆ ಬಂದ ಕೆಲ ದಿನಗಳಲ್ಲಿಯೇ ಅಸದನನ್ನು ಮರಳಿ ಕರೆಸಿಕೊಳ್ಳಲಾಯಿತು. ಮರಳಿಬಂದ ಅವನು ಕಂಡಿದ್ದು ಕೋಪದಲ್ಲಿದ್ದ ಮತ್ತು ತನ್ನ ವಿಷಯದಲ್ಲಿ ಪ್ರತಿಕೂಲಭಾವದ ಹೊಸ ಸಾಮ್ರಾಟನನ್ನು, ಅಸದನನ್ನು ನೋಡಿದೊಡನೆಯೇ "ಅವನು ನನ್ನ ಹತ್ತಿರ ಇರಕೂಡದು,– ಅವನಿಗೆ ಇಷ್ಟಬಂದಲ್ಲಿಗೆ ಹೋಗಲಿ" ಎಂದು ಬಿರುನುಡಿಯುತ್ತ ಅವನನ್ನು ಹೊರಗೆ ಹಾಕಿದನು. ಅಕ್ಬರನ ಮರಣವನ್ನು ಕುರಿತು ಮತ್ತು ಜಹಾಂಗೀರನ ಪಟ್ಟಾಭಿಷೇಕದ ಬಗ್ಗೆ ಇರುವ ವಿವರಗಳು ಉದ್ಧೃತ ಭಾಗಗಳಲ್ಲುಂಟು.

ಅಲ್ಲಾಹನ ಅತ್ಯಂತ ಕಿರಿಯ ಭ್ರತ್ಯನು, ಮುಹಮ್ಮದ ಮುರಾದನ ಮಗನೂ ಆಗಿರುವ ಅಸದನು ಕೆಳಗಿನ ವಿಷಯವನ್ನು ಬರೆದಿದ್ದಾನೆ : ತನ್ನ ಕಾಲದಲ್ಲಿ ಅತ್ಯಂತ ಶ್ರೇಷ್ಠ ಪ್ರತಿಭಾವಂತನೂ, ಅತ್ಯಂತ ಶ್ರೇಷ್ಠ ಮನುಷ್ಯನೂ ಆಗಿದ್ದ ಮಹಾವಿದ್ವಾಂಸನೂ ಎನಿಸಿದ್ದ ನವಾಬ ಶೇಖ ಅಬೂಲ್ ಫಜಲ್‌ನು (ಶೇಖ ಮುಬಾರಕನ ಮಗನು) ಸಿರೋಂಜ್ ಪ್ರಾಂತದ ಸರಾಯಿ ಬರಾರ ಎಂಬಲ್ಲಿ ಹಿಜರಿವರ್ಷ ೧೦೧೧ರ ರುಬೀ-ಉಲ್ ಅವ್ವಲದ ೭ನೇ ದಿನ ಅಂದರೆ ಶುಕ್ರವಾರ ಪ್ರಾರ್ಥನೆಯ ವೇಳೆಯಲ್ಲಿ ಹತ್ಯೆಯಾದನು. ಈ ಭೀಕರ ದುರಂತದ ವಾರ್ತೆ ಭಗವಂತನ ಛಾಯೆಯಾಗಿರುವ ಸಾಮ್ರಾಟ ಅಕ್ಬರನಿಗೆ ತಿಳಿದಾಗ ಅವನು ಅತೀವ ದುಃಖಿತನೂ, ಚೈತನ್ಯ ಉಡುಗಿದವನೂ, ನಿರಾಶೆಯಲ್ಲಿ ಮುಳುಗಿ ಹೋದವನೂ ಆಗಿ ಅಳುತ್ತ ಗೋಳಿಡತೊಡಗಿದನು. ಅಂದು ಹಗಲು ರಾತ್ರಿ ಅಕ್ಬರನು ದಿನವು ಮಾಡಿಕೊಳ್ಳುತ್ತಿದ್ದ ಕ್ಷೌರವನ್ನು ಮಾಡಿಸಿಕೊಳ್ಳಲಿಲ್ಲ. ಅಪುವನ್ನು ತಿನ್ನಲಿಲ್ಲ. ಇಡೀ ಸಮಯವನ್ನು ಅಳುತ್ತ, ಗೋಳಿಡುತ್ತ ಕಳೆದನು. ಆಗ ಜಗದ ಸಾಮ್ರಾಟನ ಪ್ರೀತಿ ಥಳಥಳಿಸಿದ್ದು ಹೀಗೆ; ತನ್ನ ದುಃಖ, ದುಮ್ಮಾನ ನಿರಾಶಯದ ಮಧ್ಯದಲ್ಲಿಯೂ ಈ ಪಂಕ್ತಿಗಳನ್ನು ಬರೆಯುತ್ತಿರುವ ಈ ಬರಹಗಾರನನ್ನು ನೆನಪಿಸುತ್ತ ಸುತ್ತಲಿದ್ದವರಿಗೆ "ಅಸದನಿಗೆ ಏನಾಗಿದೆ?" ಎಂದು ಕೇಳಿದನು. ಪಕ್ಕ ಕತ್ತರಿಸಿದ ಹಕ್ಕಿಯಂತಾಗಿದ್ದ ನನಗೆ ಏನಾಗಿದೆ ಎನ್ನುವುದು ಗೊತ್ತಿಲ್ಲದ ಅವರು ಏನೂ ಉತ್ತರಿಸಲಿಲ್ಲ. ಅಷ್ಟರಲ್ಲಿಯೇ ಮಿರ್ಜಾ ಜಾಫರ್ ಆಸಫಖಾನನು ಅಲ್ಲಿಗೆ ಬಂದನು; ತನ್ನ ಪ್ರಭು ಅಳುತ್ತ ದುಃಖದಲ್ಲಿರುವುದನ್ನು ಕಂಡು ಅವನಿಗೆ ತನ್ನ ಅಳುವನ್ನು ನಿಯಂತ್ರಿಸುವುದಾಗಲಿಲ್ಲ. ಅಸದನ ವಿಷಯಕ್ಕೆ ಏನಾದರೂ ತಿಳಿದಿದೆಯೇ ಎಂದು ಪ್ರಭುವು ವಿಚಾರಿಸಿದನು. ಅವನು ಅಬೂಲ್ ಫಜಲ್‌ನೊಡನೆ ಇದ್ದನೊ ಹೇಗೆಂದು ಕೇಳಿದನು. ಕಣ್ಣಿರು ಒರೆಸಿಕೊಳ್ಳುತ್ತ ಆ ಶ್ರೇಷ್ಠ ಸರದಾರನು ವಿನಯಪೂರ್ವಕ ಉತ್ತರಿಸಿದನು; "ಸಿರೋಂಜದವರೆಗೆ ಅಸದಬೇಗನು ಅವನೊಡನೆ ಇದ್ದನು. ಆದರೆ ಮೃತನಾದ ಶೇಖನು ತಾನು ದಕ್ಷಿಣದಿಂದ ತಂದಿದ್ದ ಸೈನ್ಯವನ್ನು ಅಸದನೊಡನೆ ಬಿಟ್ಟು ತಾವು ಗೆದ್ದಿದ್ದ ಮುಲ್ವಾ ಪ್ರಾಂತದ ಪ್ರದೇಶಗಳನ್ನು ಆಳಲು ಅವನನ್ನು ನಿಯಮಿಸಿ, ಮುಲ್ವಾದಲ್ಲಿ ಗೋಪಾಲದಾಸ ನಾಕಟಾ ಹೊಸದಾಗಿ ಸೇರಿಸಿಕೊಂಡಿದ್ದ ಸೈನಿಕರೊಡನೆ ತಾನು ಆಸ್ಥಾನದ ಕಡೆಗೆ ಸಾಗಿದನು. ಅಬೂಲ್ ಫಜಲ್‌ನ ಆಜ್ಞೆಯನ್ನು ಪಾಲಿಸಲು ಅಸದನಿಗೆ ಮನಸ್ಸಿರಲಿಲ್ಲ. ಬಹಳ ತ್ರಸ್ತ ಮನಸ್ಸಿನಲ್ಲಿದ್ದ ಆತನು ತನ್ನ ಯಜಮಾನ ಶೇಖನನ್ನು ಗ್ವಾಲಿಯರವರೆಗೆ ಬೆಂಗಾವಲಾಗಿ ಕಳಿಸಿಬರಬೇಕೆಂದು ಅನುಮತಿಗಾಗಿ ಕೋರಿದನು. ಆದರೆ ಶೇಖನು ಅದಕ್ಕೆ ಸಮ್ಮತಿಸಲಿಲ್ಲ. ಹಿರಿಯ ಯುದ್ಧವೀರರ ಜೊತೆಯಲ್ಲಿ ಅವನನ್ನು ಬಿಟ್ಟು ಸಿರೋಂಜದಿಂದ ಹೊರಟುಹೋದನು.

ಹೋರಾಟ ನಡೆದಾಗ ಅಸದನು ಮೃತಶೇಖನ ಬೆಂಬಲಿಗರನ್ನು ಸಿರೋಂಜದಲ್ಲಿ ಗೋಪಾಲದಾಸನೊಡನೆ ಬಿಟ್ಟು, ಸಾಧ್ಯವಿಲ್ಲದ್ದು ತ್ವರಿತವಾಗಿ ತನ್ನ ಜನರೊಡನೆ ಆಸ್ಥಾನಕ್ಕೆ ಬರಬೇಕೆಂದು ಸ್ವತಃ ತನ್ನ ಕೈಯಿಂದಲೇ ಫರ್ಮಾನ್ ಬರೆಯಲು ಸಾಮ್ರಾಟನು ಅಸಫಖಾನನಿಗೆ ತತ್‌ಕ್ಷಣವೇ ಅಪ್ಪಣೆಯಿತ್ತನು. ಅಸಫಖಾನನು ತಾನೇ ಗಟ್ಟಿಯಾಗಿ ಕುಳಿತು, ಪ್ರಭುಗಳು ಹೇಳಿದಂತೆ ಬರೆದು, ಅದಕ್ಕೆ ತನ್ನ ಮುದ್ರೆಯೊತ್ತಿ ಆ ಒಕ್ಕಣಿಕೆಯನ್ನು ಮಿಯಾಗದಾನಿಗೆ ಕೊಟ್ಟು, ಅದನ್ನು ಅವನು ತನ್ನೊಬ್ಬ ಸಹೋದರನೊಡನೆ ಸಿರೋಂಜದಲ್ಲಿರುವ ಅಸದನಿಗೆ ಮುಟ್ಟಿಸಿ, ಅಸದನನ್ನು ಅವನ ಸೇವಕರೊಡನೆ ಕರೆತರಬೇಕೆಂದು ಆಜ್ಞಾಪಿಸಿದನು.

ಆ ಮಹಾ ವಿದ್ವಾಂಸನು ಆ ರೀತಿಯಾಗಿ ಪ್ರಯಾಣಿಸಬೇಕೆಂದು ದೈವೇಚ್ಛೆಯಾಗಿತ್ತು. ಅವನ ವಿಧಿ ಅವನಿಗೆ ವಿದ್ರೋಹಿಯಾಗಿತ್ತು. ಆದ್ದರಿಂದಲೇ ಅವನು ಗೋಪಾಲದಾಸ ನಾಕಟಾನ ಮಾತನ್ನು ಕೇಳಿ ಅಂಗರಕ್ಷಕರಿಲ್ಲದೆ, ರಕ್ಷಣೆರಹಿತನಾಗಿ ತನ್ನ ಆ ಮೃತ್ಯುಸ್ಥಾನಕ್ಕೆ ಹೋದನು. ನಾನೀಗ ಅದನ್ನು ವಿವರಿಸುವೆ; ಮಹಾವಿದ್ವಾಂಸ ಅಬುಲ್ ಫಜಲ್ ಸಿರೋಂಜಕ್ಕೆ ಹೋದಾಗ ಅಲ್ಲಿಯ ಬಹುಭಾಗವನ್ನು ಆಳುತ್ತಿದ್ದವನು ಆ ದರಿದ್ರ, ದುಷ್ಟ ಗೋಪಾಲದಾಸನು ಎಲ್ಲವನ್ನೂ ವ್ಯಸ್ತ ಸ್ಥಿತಿಯಲ್ಲಿಟ್ಟಿದ್ದನು. ಆ ಅಸಮರ್ಥ ಆಳುಗನು ತರಬೇತಿಯಿಲ್ಲದ ೩೦೦ ಕುದುರೆಗಳನ್ನು ಇಟ್ಟುಕೊಂಡಿದ್ದನು. ಅವರೆಲ್ಲ ಕೆಳವರ್ಗದ ರಜಪೂತರಾಗಿದ್ದು ತಿಂಗಳಿಗೆ ಇಪ್ಪತ್ತು ರೂಪಾಯಿ ಸಂಬಳದವರಾಗಿದ್ದರು. ಈ ಒಳಗಾಗಿ ಅಬೂಲ್ ಫಜಲ್‌ನಿಗೆ ಮತ್ತು ನಮಗೆಲ್ಲ ಗೊತ್ತಿದ್ದ ವಿಷಯವೆಂದರೆ ದಕ್ಷಿಣದಲ್ಲಿ ರಾಜಾ ನರಸಿಂಗದೇವನು ದಾಳಿಮಾಡಿ ಸುಲಿಗೆ ಮಾಡುತ್ತಿದ್ದನು ಮತ್ತು ಅಬುಲ್‌ಖಾನನಿಂದ ಈ ವಿಷಯ ಕುರಿತು ಓಲೆಬರದ ದಿನವೇ ಇರಲಿಲ್ಲ; ಎಲ್ಲ ವಿಶ್ವಾಸಿಕ ಅನುಯಾಯಿಗಳಿಗೆ ತಿಳಿದ ವಿಷಯ ಇದಾಗಿತ್ತು. ಹೀಗಿದ್ದರೂ ವಿಧಿಯ ಅಪೇಕ್ಷೆಯಾಗಿದ್ದರಿಂದ ಆ ವಿದ್ವಾಂಸನು, ಜ್ಞಾನಿಯು ಈ ಯಾವುದನ್ನು ಗಣನೆಗೆ ತೆಗೆದುಕೊಳ್ಳಲಿಲ್ಲ. ನಾವು ಸಿರೋಂಜ ತಲುಪಿದಾಗ ಗೋಪಾಲದಾಸನು ಅಬೂಲ್ ಫಜಲನಿಗೆ ಮನಬಿಂಬಿಸುವಂತೆ ಹೇಳಿದ್ದೆಂದರೆ ಅವನು (ಫಜಲ್‌ನು) ದಕ್ಷಿಣದಿಂದ ತಂದಿದ್ದ ಸೈನಿಕರೆಲ್ಲನೇಕರು ಅಸ್ವಸ್ಥರಾಗಿದ್ದಾರೆ. ಶೀಘ್ರವಾಗಿ ಬಂದಿದ್ದರಿಂದ ಅವರು ಸುಸ್ತಾಗಿದ್ದರೆ, ಆ ಕಾರಣದಿಂದ ಅವರಿಗೆ ಸಿರೋಂಜದಲ್ಲಿ ತಂಗಲು ವ್ಯವಸ್ಥೆ ಮಾಡಬೇಕು ಮತ್ತು ಅವರು ಅಸದಬೇಗನೊಡನಿದ್ದು ಇಂದ್ರಜಿತ್ ಬುಂದೇಖಾನೊಡನೆ ಹೋರಾಟಮಾಡಲು ಇರಲಿ, ಮತ್ತು ತಾನು ಸೇರಿಸಿಕೊಂಡಿರುವ ಸೈನಿಕರನ್ನು ರಕ್ಷಣೆಗಾಗಿ ಅವನು (ಫಜಲ್) ತನ್ನೊಡನೆ ತೆಗೆದುಕೊಂಡು ಹೋಗಲು ಆ ದುರ್ದೈವಿ ಪಂಡಿತನು ಗೋಪಾಲದಾಸನ ಅಪ್ರಬುದ್ಧ ಸೂಚನೆಗೆ ಸಮ್ಮತಿಸಿದನು. ಸಾವಿರಾರು ಯುದ್ಧಗಳಲ್ಲಿ ಭಾಗಿಯಾಗಿ ನುರಿತಿದ್ದ ತನ್ನ ಅಜೇಯ ಸೈನಿಕರನ್ನು ಬಿಟ್ಟು ಯುದ್ಧದ ಮುಖವನ್ನೇ

ನೋಡಿರದ, ಹೊಸದಾಗಿ ಸೇರಿದ ಸೈನಿಕರನ್ನು ಆಯ್ಕೆ ಮಾಡಿಕೊಂಡು ತನ್ನ ಜೀವನವನ್ನೇ ಬಲಿಕೊಟ್ಟನು. ಸತ್ಯಸಂಗತಿಯೆಂದರೆ ಈ ಸೈನಿಕರೆಲ್ಲನೇಕರು ಸರಿಯಾದ ವೇಳೆಗೆ ಬರದ್ದರಿಂದ ಅವರಿಂದ ಕಿಂಚಿತ್ ಉಪಯೋಗವೂ ಆಗಲಿಲ್ಲ. ಅಬೂಲ್ ಫಜಲ್ಲನು ಅಫ್‌ಘಾನದ ಗದಾಯಿಖಾನ ಮತ್ತು ಅವನ ಮಗನನ್ನು ತನ್ನೊಡನೆಗೆ ತೆಗೆದುಕೊಂಡು ಅವರ ಸೈನಿಕರನ್ನು ನನ್ನೊಡನೆ ಬಿಟ್ಟುಹೋದನು. ಒಂದುವೇಳೆ ಅವರಲ್ಲಿ ಕೇವಲ ಒಂದು ನೂರು ಸೈನಿಕರನ್ನು ತೆಗೆದುಕೊಂಡು ಅವರ ಸೈನಿಕರನ್ನು ತನ್ನೊಡನೆ ತೆಗೆದುಕೊಂಡು ಹೋಗಿದ್ದರೆ ಆ ಅನಾಹುತಕಾರಿ ಘಟನೆ ಸಂಭವಿಸುತ್ತಿರಲಿಲ್ಲ. ಗದಾಯಿಖಾನನು ನಿಜಕ್ಕೂ ಅನುಭವಿಕನಾದ ವೀರಯೋಧನಾಗಿದ್ದ. ಆದರೆ ಒಂಟಿಗನಾಗಿ ಹೋರಾಡಿದನು. ವೈರಿಯನ್ನೆದುರಿಸುತ್ತ ಮರಣವನ್ನಪ್ಪಿದನು; ಒಂದು ಗಾಯಹೊಂದಿದ ಅವನ ಮಗನು ಪಾರಾದನು. ಜಲಾಲಖಾನ ಎಂಬ ಹೆಸರಿನ ಇನ್ನೊಬ್ಬ ಅಪಘಾನನು ಹೋರಾಡಿ ಮೃತನಾದನು; ಸಲೀಮಖಾನ ಮತ್ತು ಶೇರಖಾನ ಹೆಸರಿನ ಇಬ್ಬರು ಸೆರೆಹಿಡಿಯಲ್ಪಟ್ಟರು; ವಿದ್ವಾಂಸ ಅಬೂಲ್ ಫಜಲ್‌ನಿಗೆ ದ್ರೋಹ ಮಾಡಲು ಒಪ್ಪದ ಅವರನ್ನು ಕೊಲ್ಲಲಾಯಿತು. ನವಾಬ ಖಾನ-ಖಾನುವನ ಸೇವಕರಲ್ಲಿ ಒಬ್ಬನಾಗಿದ್ದ ಮನ್ಸೂರ ಚಾಬೂಕನು ಹೋರಾಡಿ ಮಡಿದನು. ಈತನು ತುರ್ಕಮನ್ ಜನಾಂಗದವನಾಗಿದ್ದು, ಫಕೀರ ಆಗುತ್ತೇನೆ ಎಂಬ ನೆಪದಲ್ಲಿ ತನ್ನ ಮೊದಲಿನ ಹುದ್ದೆಯನ್ನು ತ್ಯಜಿಸಿ ಸಿರೋಂಜಕ್ಕೆ ಬಂದು ಇಲ್ಲಿ ಅಗೆಮನೆಯಲ್ಲಿ ಸೇವೆಯಲ್ಲಿದ್ದನು. ಮಿರ್ಜಾ ಮುಹಮ್ಮದ ಖಾನಬೇಗನು ಹಾಗೆಯೇ ಅವನ ಜೊತೆಯಲ್ಲಿದ್ದ ಅಬಿಸಿನಿಯಾದ ಜಬ್ಬಾರ ಖಾಸಾ-ಖೈಲ ಎಂಬುವನೂ ಕೊಲ್ಲಲ್ಪಟ್ಟರು. ನವಾಬನು ಇರಿಯಲ್ಪಟ್ಟು ಕೆಳಗೆ ಬೀಳುವಾಗ ಅವನಿಗೆ ಗಾಯಮಾಡಿದ ರಜಪೂತ ಸೈನಿಕನನ್ನು ಕೊಂದು ಶತ್ರುವಿನ ಮೇಲೆ ಎರಗಿದನು. ಇನ್ನೂ ಅವನಲ್ಲಿ ಪ್ರಾಣವಿತ್ತು. ಆಗ ಮುಖ್ಯಸೈನ್ಯ ತಂಡದೊಂದಿಗೆ ಅಲ್ಲಿಗೆ ಬಂದ ನರಸಿಂಘನು ಜಬ್ಬಾರಖಾಸಾನನ್ನು ತನ್ನ ಕಾಲ್ಕೆಳಗೆ ತುಳಿದನು, ಆಮೇಲೆ ಆ ಶ್ರೇಷ್ಠ ಅಲ್ಲಾಮಿಯ ತಲೆ ಕಡಿದನು. ಮೇಲೆ ನಾನು ಹೆಸರಿಸಿದವರನ್ನು ಹೊರತುಪಡಿಸಿ ಎಲ್ಲರೂ, ಯುದ್ಧದಲ್ಲಿ ನುರಿತವರು ಅಥವಾ ಹೊಸದಾಗಿ ಸೈನ್ಯ ಸೇರಿದವರೆಲ್ಲರೂ ಅಲ್ಲಿಂದ ಕಾಲ್ದೆಗೆದರು. ಬಾದಕ್ಷಾನದ ಫಜಲಖಾನನ ಅಳಿಯ ಮಿರ್ಜಾ ಮುಹಸಿನನು ದರೋಡೆಕೋರರು ಹೊಂಚುಹಾಕಿ ಕುಳಿತಿದ್ದಾರೆ. ಅಲ್ಲಿಂದ ಓಡಿಹೋಗಿರೆಂದು ಅವರಿಗೆ ಹೇಳಿದಾಗ ಅಲ್ಲಿಂದ ಹೋಗಿದ್ದರೆ ಸುರಕ್ಷಿತವಾಗಿ ಅವರೆಲ್ಲರು ತಲುಪಬಹುದಿತ್ತು. ಆದರೆ ವಿಧಿಯು ಬೇರೆಯಾಗಿಯೇ ನಿರ್ಣಯಿಸಿದ್ದರಿಂದ ಇದೆಲ್ಲ ದುರಂತ ಘಟಿಸಿತು; ಮತ್ತೇನೂ ಮಾಡುವಂತಿರಲಿಲ್ಲ. ಮೃತನಾದ ಅಲ್ಲಾಮಿಯು ನನಗೆ ಮರ್ಯಾದೆಯ ಪೋಷಾಕವನ್ನು ಮತ್ತು ಒಂದು ಕುದುರೆಯನ್ನು ಕೊಟ್ಟು, ಗೋಪಾಲದಾಸ ಮತ್ತು ಮಹದಿ ಅಲಿ ಕಾಶ್ಮೀರಿ ಅಲ್ಲದೆ ಎಲ್ಲ ಸೇವಕರಿರುವಾಗ ಕಣ್ಣೀರು ತುಂಬಿದ ಅವನು ನನ್ನನ್ನು ಕಳಿಸಿಕೊಟ್ಟಾಗ ನಾನು

ಅವನೊಡನೆ ಗ್ವಾಲಿಯರ್‌ದವರೆಗೆ ನನ್ನೊಡನೆ ಇರಿಸಿದ್ದ ಸೈನಿಕರೊಡನೆ ಬೆಂಗಾವಲಾಗಿ ಬರುವೆನೆಂದು ಪ್ರಾರ್ಥಿಸಿದೆನು; ಏನು ಮಾಡಿದರೂ ಅದಕ್ಕೆ ಅವನು ಸಮ್ಮತಿಸಲಿಲ್ಲ. ಯಾಕೆಂದರೆ ಆ ಮಹಾತ್ಮನ ಕೊನೆ ಬಂದಿತ್ತು ಮತ್ತು ಅವನೊಬ್ಬನೇ ಹೋಗಬೇಕೆಂದು ವಿಧಿಯ ನಿರ್ಣಯವಾಗಿತ್ತು. ಅವನು ಕುದುರೆ ಹತ್ತಿದಾಗ ನಾನೂ ಕುದುರೆ ಏರಿದೆ, ಅವನನ್ನು ಅನುಸರಿಸಲು; ಅಂತಿಮವಾಗಿ ಹಾಗೆ ನಾನು ಮಾಡಕೂಡದು ಎಂದು ಹೇಳಿದನು; ಅಷ್ಟೇ ಅಲ್ಲ ನನ್ನ ಮನೆಯ ಹೊರಗೆ ಕೂಡ ಬರಬೇಡವೆಂದು ಹೇಳಿ ಅಲ್ಲಿಂದ ನನ್ನನ್ನು ಕಳಿಸಿಬಿಟ್ಟನು.

ಅಲ್ಲಾಮಿಯು ಸರಾಯಿ ಬರಾರಕ್ಕೆ ಬಂದು ಕುದುರೆಯಿಂದ ಇಳಿದಾಗ ಒಬ್ಬ ಧರ್ಮ ಭಿಕ್ಷುಕ ಅವನ ಹತ್ತಿರ ಬಂದು ನರಸಿಂಗ ಬುಂದೇಲಾನ ಬಗ್ಗೆ ತಿಳಿಸುತ್ತ ಆತನು ಅಲ್ಲಾಮಿಯನ್ನು ಮರುದಿನ ದಾರಿಯಲ್ಲಿ ಕೊಲ್ಲುವ ಹೊಂಚಿನಲ್ಲಿರುವುದನ್ನು ತಿಳಿಸಿದನು. ಆದರೆ ಅವನ ಮಾತನ್ನು ಗಂಭೀರವಾಗಿ ತೆಗೆದುಕೊಳ್ಳದೆ ಅಲ್ಲಾಮಿ ಅವನಿಗೆ ಹಣ ದಾನಮಾಡಿ ಕಳಿಸಿಕೊಟ್ಟನು, ಅಂಥ ಜನ ಬಂದಾಗ ಕೊಡುವಂತೆ. ಆ ರಾತ್ರಿ ಅವನು ತನ್ನ ರಕ್ಷಣೆಯ ವಿಷಯಕ್ಕೆ ನಿಷ್ಕಾಳಜಿಯುಳ್ಳವನಾಗಿದ್ದನು. ಶುಕ್ರವಾರ ಬೆಳಿಗ್ಗೆ ಎದ್ದು, ಸ್ನಾನಾದಿ ದೇಹಶುದ್ಧಿ ಕಾರ್ಯಗಳನ್ನು ಮುಗಿಸಿ, ಪದ್ಧತಿಯ ಪ್ರಕಾರ ಶುಕ್ರವಾರದ ಶುಭ್ರ ವಸ್ತ್ರಗಳನ್ನು ಧರಿಸಿ, ಜರದಂಚಿನ ಯುದ್ಧವಿಜೇತನ ಪೋಷಾಕದಲ್ಲಿದ್ದನು. ಆ ಬಳಿಕ ಸವಿನಯವಾಗಿ ತನ್ನನ್ನು ನೋಡಿ ಮರ್ಯಾದೆ ಸಲ್ಲಿಸಲು ಬಂದಿದ್ದವರನ್ನೆಲ್ಲ ಬೀಳ್ಕೊಟ್ಟನು. ಹಾಗೆ ಬಂದಿದ್ದ ಆ ಜನರಲ್ಲಿ ಸುತ್ತಮುತ್ತಲಿನ ಜಹಗೀರದಾರು, ಕಂದಾಯ ಪಡೆಯುವ ವತನದಾರರು ಇದ್ದರು. ಉದಾಹರಣೆಗೆ ಆ ಭಾಗದಲ್ಲಿದ್ದ ಒಂದು ಜಹಗೀರಿಯ ಒಡೆಯನಾದ ಮಿರ್ಜಾ ರುಸ್ತುಮನ ಸೇವಕರು ಮತ್ತು ಅವನು ಕಳಿಸಿದ್ದ ನಲವತ್ತು ಐವತ್ತು ಕುದುರೆದಳದವರು, ಕಾಲಾಭಾಗದ ಗವರ್ನರ್ ಶೇಖ ಮುಸ್ತಾಫಾ ತನ್ನ ಅಂಗರಕ್ಷಕರೊಡನೆ ಬಂದಿದ್ದನು, ಇನ್ನೂ ಅನೇಕರು ಸುಮಾರು ೨೦೦ ಕುದುರೆ ಸವಾರರೊಡನೆ ಬಂದಿದ್ದರು. ಅವರನ್ನು ಅಲ್ಲಿಯೇ ಉಳಿಸಿಕೊಂಡಿದ್ದರೆ ಬಹು ದೊಡ್ಡ ಸಹಾಯ ಅವನಿಗೆ ಲಭ್ಯವಿತ್ತು. ಅದಕ್ಕಾಗಿ ಈಗ ಗೋಳಿಟ್ಟರೆ ಎಲ್ಲವೂ ವ್ಯರ್ಥ. ವಿಧಿಯು ಆಕಾಶದಿಂದ ತನ್ನ ರೆಕ್ಕೆಯರಳಿಸುತ್ತ ಕೆಳಗೆರಗಿದರೆ ಬಹಳ ಸಮರ್ಥರೂ, ಬಲಶಾಲಿಗಳೂ ಕಿವುಡಾಗುತ್ತಾರೆ, ಮೂಕರಾಗುತ್ತಾರೆ.

ಸೂರ್ಯೋದಯವಾದೊಡನೆ ಯಾಕೂಬಖಾನನು ಹೊರಹೊರಟನು. ನಗಾರಿಯ ಸಪ್ಪಳ ಕೇಳುತ್ತಲೇ ಅವನ ಸೇವಕರು ಅವನನ್ನು ಹಿಂಬಾಲಿಸಲು ಸಿದ್ಧರಾದರು. ಅಬೂಲ್ ಫಜಲ್‌ನ ಅವನೇ ಹಾಕಿಸಿಕೊಂಡಿದ್ದ ಬಿಡಾರ ಇನ್ನೂ ಅಲ್ಲಿತ್ತು. ಕೇಕೆ ಹಾಕುತ್ತ ಸರಾಯಿ ಹಿಂದಿನಿಂದ ಬುಂದೇಲಾದ ಸೈನಿಕರು ಆ ಬಿಡಾರದ ಮೇಲೆ ಮುತ್ತಿಗೆ ಹಾಕಿದರು. ಸಿದ್ಧರಾಗಿದ್ದ ಸೇವಕರೆಲ್ಲ ಕುದುರೆ ಏರಿ ಬೀದಿ ಹಿಡಿದು ಪಲಾಯನ

ಮಾಡಿದರು. ಆಗ ಬುದಾಕ್ಷನದ ಮಿರ್ಜಾ ಮಹಶಿನನು ಕುದುರೆ ಏರಿ ಮುಂದೆಸಾಗಿ ದರೋಡೆಕೋರರನ್ನು ಕುರಿತು ತಪಾಸಿಸಲು ಅವರತ್ತ ಹೊರಟಿದ್ದನು. ಸ್ವಲ್ಪ ಮುಂದೆ ಹೋಗುವುದರಲ್ಲಿಯೇ ನರಸಿಂಗನ ಮುಖ್ಯಸೇನೆ ಎದುರಿಗೆ ಬಂದಿತು. ಎತ್ತರದ ಸ್ಥಳದಿಂದ ಆ ಸೈನ್ಯವನ್ನು ಸೂಕ್ಷ್ಮವಾಗಿ ಅವಲೋಕಿಸುತ್ತ ಆ ಧೀರಯೋಧನು ಆ ಪದಾತಿದಳ, ಅಶ್ವದಳಗಳ ಮಧ್ಯದಲ್ಲಿಯೇ ದಾರಿಕೊರೆದು, ಅಶ್ವಾರೋಹಿಯಾಗಿ ಬಾಣದಂತೆ ಸಾಗುತ್ತ ಅಲ್ಲಾಮಿಯ ಹತ್ತಿರ ಬಂದನು. ಬೆಂಗಾವಲೊಡನೆ ಬಂದೊಡನೆಯೇ ಅವನಿಗೆ ಕಣ್ಣೋಟದಲ್ಲಿಯೇ ತಿಳಿದದ್ದು: ಆ ದರೋಡೆಗಾರ ಸೈನ್ಯವು ನಿರ್ಲಕ್ಷ್ಯದಿಂದಿದ್ದರು. ಅಶಿಸ್ತಿನ ನಡಿಗೆಯಲ್ಲಿದ್ದರು ಅಲ್ಲದೆ ಶಸ್ತ್ರರಹಿತರಾಗಿ ಸಾಗಿದ್ದರು. ಆ ದರೋಡೆಗಾರರ ಇರುವಿಕೆಯನ್ನು ತಾನು ಕಂಡದ್ದನ್ನು ಆತನು ಹೇಳಿದನು. ಅವನ ಈ ಮಾತನ್ನು ಕೇಳಿದೊಡನೆ ಶೇಖನು ತಡೆದು ನಿಂತು ಏನು ಮಾಡಬೇಕೆಂದು ಕೇಳಿದನು. ಮಿರ್ಜಾ ತ್ವರಿತವಾಗಿ ಅಲ್ಲಿಂದ ಸಾಗಿಹೋಗಲು ಹೇಳಿದನು. "ನಾವು ಇಲ್ಲಿಂದ ಹೊರಟು ಹೋಗಬೇಕಷ್ಟೆ" ರಿಕಾಪುವನ್ನು ಕುದುರೆಯ ಹೊಟ್ಟೆಗೆ ಒತ್ತುತ್ತ ದ್ರುತಗತಿಯಲ್ಲಿ ಸಾಗುತ್ತಲೇ ಶೇಖನಿಗೆ ಹೇಳಿದನು, "ಹೀಗೆ ಇಲ್ಲಿಂದ ಸಾಗೋಣ; ನನ್ನಂತೆಯೇ ನೀವೂ ಗ್ವಾಲಿಯರ್‌ದವರೆಗೆ ಸಾಗಬೇಕು."

ಅಲ್ಲಾಮಿಯು ಸ್ವಲ್ಪು ನಿಲ್ಲುವುದರಲ್ಲಿಯೇ ದರೋಡೆಗಾರರ ತಂಡವೊಂದು ಧ್ವಜ ಮತ್ತು ನಗಾರಿ ಹೊತ್ತೊಯ್ಯುತ್ತಿದ್ದ ಆನೆಯನ್ನು ಹಿಡಿದರು, ಬೆಂಗಾವಲ ಸೈನಿಕರ ಮೇಲೆರಗಿದರು. ಸೆಣಸಾಟ ಶುರುವಾಯ್ತು. ಶೇಖನು ಹೊರಳಿ ನೋಡಿದನು. ಸಮೀಪದಲ್ಲಿಯೇ ಇದ್ದ ನಗಾರಿ ಮತ್ತು ರಾಜಧ್ವಜದ ಹತ್ತಿರ ಬರುವಷ್ಟರಲ್ಲಿಯೇ ಚಿಲಕತ್ತಿನಲ್ಲಿದ್ದ ೫೦೦ ಅಶ್ವಾರೋಹಿಗಳಿಂದ ಕೂಡಿದ್ದ ನರಸಿಂಘನ ಸೇನೆಯ ಅಬ್ಬರ ಕೇಳಿಬಂತು. ಮುಂಚೂಣಿಯಲ್ಲಿದ್ದ ಅಫಘಾನದ ಗದಾಯಿಯು ಉದ್ಗರಿಸಿದನು. "ನೀವು ಇಲ್ಲಿ ಮಾಡುವುದೇನಿದೆ? ಇಲ್ಲಿಂದ ಹೊರಟುಹೋಗಿರಿ. ಇದು ನಮ್ಮ ಕೆಲಸ" ಈ ಮೊದಲು ಹೇಳಿದಂತೆ ಹೀಗೆ ಮಾತಾಡುತ್ತಲೇ ಗದಾಯಿಯು ತನ್ನ ಮಗನನ್ನು ಕೂಡಿಕೊಂಡು ಶತ್ರುವಿನ ಮೇಲೆ ಬಿದ್ದು ಹೋರಾಡತೊಡಗಿದನು; ನೆಲಕ್ಕುರುಳಿದನು. ಅಲ್ಲಿದ್ದ ಅಪರಿಚಿತರಲ್ಲೊಬ್ಬನು ಹೇಳಿದನು, "ದರೋಡೆಗಾರರು ಸಶಸ್ತ್ರರಾಗಿದ್ದಾರೆ, ನಿಮ್ಮ ಸೇವಕರಲ್ಲಿ ಶಸ್ತ್ರಗಳಿಲ್ಲ. ಕಿರುಬೆಟ್ಟಗಳ ಬುಡದಲ್ಲಿ ನಾವು ಅಡಗಿಕೂಡುವುದು ಒಳಿತು. ಅಂದರೆ ನಾವು ಬದುಕಿ ಉಳಿಯಬಹುದು." ಹೀಗೆ ಹೇಳುತ್ತ ಶೇಖನ ಕುದುರೆಯ ಲಗಾಮನ್ನು ಕೈಯಲ್ಲಿ ಅದನ್ನು ಹೊರಳಿಸಿದನು. ಅಷ್ಟರಲ್ಲಿಯೇ ದರೋಡೆಗಾರರು ಎರಗಿದರು. ಸಮೀಪದಲ್ಲಿದ್ದ ಪ್ರತಿಯೊಬ್ಬನನ್ನು ಈಟಿಯಿಂದ ಚುಚ್ಚುತ್ತ ಇರಿಯಲು ಅದು ಅವನ ಎದೆಸೀಳಿ ಹೊರಬಂದಿತು. ಆ ಸ್ಥಳದಲ್ಲೊಂದು ಸಣ್ಣ ಝರಿಣೆ ಇತ್ತು. ಅದರಾಚೆಗೆ ತನ್ನ ಕುದುರೆಯನ್ನು ಜಿಗಿಸಲು

ಶೇಖನು ಯತ್ನಿಸಿದನು. ಆದರೆ ಹಾಗೆ ಮಾಡುವುದರಲ್ಲಿ ಕೆಳಗುರುಳಿದನು. ಅವನ ಹಿಂಬದಿಯಲ್ಲಿಯೇ ಇದ್ದ ಜಬ್ಬಾರ ಖಾಸಾ-ಖೈಲನು ಆ ರಜಪೂತನನ್ನು ಕೊಂದನು. ಕುದುರೆಯಿಂದಿಳಿದು ತನ್ನ ಕುದುರೆಯ ಕೆಳಗೆ ಬಿದ್ದಿದ್ದ ಶೇಖನನ್ನು ಜಗ್ಗಿ ತೆಗೆದು ದಾರಿಯಿಂದ ಸ್ವಲ್ಪ ಸನಿಹದಲ್ಲಿ ಅವನನ್ನು ಹೊತ್ತುಕೊಂಡು ಒಯ್ದನು. ಆದರೆ ಆ ಗಾಯವು ಪ್ರಾಣಾಂತಿಕವಿದ್ದದರಿಂದ ಶೇಖನು ನೆಲಕ್ಕುರುಳಿದನು.

ಅಷ್ಟರಲ್ಲಿಯೇ ಉಳಿದ ರಜಪೂತ ಹೋರಾಟಗಾರರ ಜೊತೆಯಲ್ಲಿ ನರಸಿಂಘನು ಬರುವುದನ್ನು ನೋಡಿದ ಜಬ್ಬಾರನು ಗಿಡವೊಂದರ ಹಿಂದೆ ಅಡಗಿಕೊಂಡನು. ಆದರೆ ಶೇಖನ ಕುದುರೆಗಳು ನರಸಿಂಘನ ಲಕ್ಷ್ಯವನ್ನು ಸೆಳೆದವು. ಅವನು ಅಲ್ಲಿಯೇ ತಡೆದನು. ಶೇಖನ ಹೆಣ್ಣಾನೆಯ ಮಾವುತರು ಅವನ ಜೊತೆಯಲ್ಲಿಯೇ ಇದ್ದನು; ಆತನು ಗಾಯಗೊಂಡು ಬಿದ್ದಿದ್ದ ತನ್ನ ಒಡೆಯನನ್ನು ತೋರಿಸಿದನು. ಹಾಗೆ ಗಾಯವಾಗಿ ಬಿದ್ದಿದ್ದ ಶೇಖನನ್ನು ನೋಡಿದೊಡನೆ ನರಸಿಂಘನು ಕುದುರೆ ಇಳಿದು ಅವನ ತಲೆಯನ್ನೆತ್ತಿ ತನ್ನ ಮೊಳಕಾಲುಗಳ ಮೇಲಿರಿಸುತ್ತ ತನ್ನ ಅಂಗವಸ್ತ್ರದಿಂದ ಅವನ ಬಾಯಿಯನ್ನು ಒರೆಸಲು ತೊಡಗಿದನು. ಗಿಡದ ಹಿಂದೆ ನಿಂತು ಇದನ್ನೆಲ್ಲ ನೋಡುತ್ತಿದ್ದ ಜಬ್ಬಾರನು ನರಸಿಂಘನು ಅನುಕಂಪದಿಂದ ಇದ್ದದ್ದನ್ನು ನೋಡಿ ಮುಂದೆಬಂದು ಅವನಿಗೆ ನಮಸ್ಕರಿಸಿದನು. ನರಸಿಂಘನು ಅವನಾರೆಂದು ಕೇಳಿದನು. ಸರಿಯಾಗಿ ಅದೇ ವೇಳೆಗೆ ಶೇಖನು ಕಣ್ಣು ತೆರೆದನು. ಕುಳಿತಲ್ಲಿಂದಲೇ ನರಸಿಂಗನು ಅವನಿಗೆ ನಮಸ್ಕರಿಸಿದನು ಮತ್ತು ಫರ್ಮಾನುಗಳನ್ನು ತರಲು ತನ್ನ ಸೇವಕರಿಗೆ ಹೇಳುತ್ತ ಮುಖಸ್ತುತಿ ಮಾಡುವ ರೀತಿಯಲ್ಲಿ ಅವನಿಗೆ ಅಂದನು. "ಎಲ್ಲರನ್ನು ಜಯಿಸುವ ನಿನ್ನೊಡೆಯನು ಸೌಜನ್ಯಪೂರ್ವಕವಾಗಿ ನಿನ್ನನ್ನು ಕರೆಕಳಿಸಿದ್ದಾನೆ" ಶೇಖನು ಅವನನ್ನು ಕಠೋರವಾಗಿ ನೋಡಿದನು. ನರಸಿಂಘನು ಅವನನ್ನು ಅವನ ಸ್ವಾಮಿಯೆಡೆಗೆ ಸುರಕ್ಷಿತವಾಗಿ ಕರೆದೊಯ್ಯುತ್ತೇವೆಂದು ಆಣೆಮಾಡಿ ಹೇಳಿದನು. ಆಗ ಶೇಖನು ಅವನನ್ನು ಸಿಟ್ಟಿನಿಂದ ಬಯ್ಯಲು ಆರಂಭಿಸಿದನು. ಸಿಂಘನ ಸೇವಕರು ಹೇಳಿದ್ದೇನೆಂದರೆ ಶೇಖನ ಗಾಯ ವಿಪರೀತ ಸ್ವರೂಪದ್ದಿರುವುದರಿಂದ ಅವನನ್ನು ಕರೆದೊಯ್ಯಲು ಆಗಲಾರದೆಂದು. ಅವರ ಮಾತನ್ನು ಕೇಳಿ ಕ್ರುದ್ಧನಾದ ಜಬ್ಬಾರನು ಖಡ್ಗ ಹೊರದೆಗೆದು ಅವರಲ್ಲಿ ಹಲವರನ್ನು ಕೊಂದು ನರಸಿಂಘನ ಸಮೀಪಕ್ಕೆ ಹೋಗುವಷ್ಟರಲ್ಲಿ ಅವರು ಅವನನ್ನು ಕೊಂದು ಕಾಲಕೆಳಗೆ ಹಾಕಿ ತುಳಿದರು. ಆಗ ನರಸಿಂಘನು ಶೇಖನ ತಲೆಹತ್ತಿರದಿಂದ ಎದ್ದನು. ಅವನ ಸೇವಕರು ಅವನನ್ನು ಕಳಿಸಿಕೊಟ್ಟರು. ಅವರು ಆ ದೊಡ್ಡ ಜೀವಿಯ (ಶೇಖನ) ತಲೆಯನ್ನು ಕತ್ತರಿಸಿ ಹೊರಟುಹೋದರು; ಅವರು ಯಾರ ಗೊಡವೆಗೂ ಹೋಗದೇ, ತಮ್ಮ ಕೈಸೆರೆಯಾದ ಎಲ್ಲ ಕೈದಿಗಳನ್ನು ಬಿಡುಗಡೆಗೊಳಿಸಿ ಹೋದರು.

ಅಧಿಕಾರಿಗಳ ವರ್ತನೆಯನ್ನು ವಿಚಾರಿಸಲು ರಾಯ-ರಾಯನ ಸೇನಾಸ್ಥಳಕ್ಕೆ ನನ್ನ ನಿಯೋಜನೆ

ರಾಯರಾಯನ ನೇತೃತ್ವದಲ್ಲಿ ನರಸಿಂಘನನ್ನು ಶಿಕ್ಷಿಸಲು ಕಳಿಸಿದ್ದ ಸೇನೆಯಿಂದ ಎರಡು ಮೂರು ತಿಂಗಳಾದ ಮೇಲೆ ಸುದ್ದಿಯೊಂದು ಬಂದಿತು. ಬಹಳ ಘನತೆವೆತ್ತ ಅಧಿಕಾರಿಗಳು ಅವನ ಜೊತೆ ಇದ್ದರು; ಜೇಯಾಲ್ ಮುಲ್ಕ ಕಾಸೀ ಈತನು ಅಧಿಕಾರದಲ್ಲಿ ದ್ವಿತೀಯನಾಗಿದ್ದನು. ಅವರೆಲ್ಲರಿಂದಲೂ ಒಮ್ಮೆಲೇ ಕೆಳಗಿನ ಒಕ್ಕಣಿಕೆಯ ಓಲೆಗಳು ಬಂದವು: "ನರಸಿಂಘನನ್ನು ನಾವು ಸಂಪೂರ್ಣವಾಗಿ ಸೋಲಿಸಿ ಓಡಿಸಲು ಅವನು ೪೦೦ ಜನ ರಜಪೂತ ಸೈನಿಕರ ತಂಡದೊಡನೆ ಇರಾಜ ಕೋಟೆಯೊಳಗೆ ಸೇರಿಕೊಂಡನು. ಆ ಕೋಟೆಯನ್ನು ನಾವು ಮುತ್ತಿದೆವು. ಒಳಗೆ ಪ್ರವೇಶಿಸಲು ಮಾರ್ಗಗಳನ್ನು ಮಾಡಿಕೊಂಡೆವು. ಮರುದಿನ ಅವನು ನಮ್ಮ ಕೈಯಲ್ಲಿ ಬಂದು ಬೀಳದೆ ಬೇರೆ ದಾರಿ ಅವನಿಗಿಲ್ಲ ಎಂದು ನಮಗನಿಸಿತು. ಆ ಕೋಟೆಯ ವಿಶಾಲವಾದ ನದಿಯೊಂದರ ದಂಡೆಯಲ್ಲಿ ಇದೆ; ಉಳಿದ ಮೂರು ಕಡೆಗಳಲ್ಲಿ ನೆಲವಿದೆ. ಸೇನಾನಿ ರಾಯ-ರಾಯನ್ನನೇ ಸ್ವತಃ ನದಿ ತಟಾಕವನ್ನು ಕಾಯಲು ನಿಂತನು, ಉಳಿದ ಮೂರು ಕಡೆಗಳಲ್ಲಿ ಉಳಿದ ಅಧಿಕಾರಿಗಳನ್ನು ಕಾವಲಿಗಿಟ್ಟನು. ಮಧ್ಯರಾತ್ರಿಯಲ್ಲಿ ನಾವೆಲ್ಲ ಗಾಢನಿದ್ರೆಯಲ್ಲಿದ್ದಾಗ ಆ ರಜಪೂತರು ಹೊರಬಂದರು. ನದಿಯ ಕಡೆಗಿರುವ ಕೋಟೆಗೋಡೆಯನ್ನು ಕತ್ತರಿಸಿ ದಾರಿಮಾಡಿ, ತಮ್ಮ ಕುದುರೆಗಳನ್ನು ನೀರ್ಗಲ್ಲ ಮೇಲೋಡಿಸುತ್ತ, ನದಿ ದಂಡೆಯನ್ನೇರಿ, ಕಾಲ್ನಡಿಗೆಯ ದಾರಿಯಲ್ಲಿ ಕುದುರೆಗಳನ್ನೋಡಿಸುತ್ತ ರಾಯ-ರಾಯನ್ನದ ಗಜಶಾಲೆಯಲ್ಲಿಯೇ ಹಾಯ್ದು ಓಡಿಹೋದರು. ನಿಮ್ಮ ಸೇವಕರು ಮತ್ತು ಅವರ ಪ್ರಮುಖರು ಏನಾಗಿದೆಯೆಂದು ತಿಳಿದುಕೊಳ್ಳುವಷ್ಟರಲ್ಲಿ ಅವನು(ನರಸಿಂಘನು) ತನ್ನ ದಾರಿಯಲ್ಲಿ ಬಹುದೂರ ಕ್ರಮಿಸಿದ್ದನು. ಈ ಮೋಸತಂತ್ರದಿಂದ ಅವನು ಪಲಾಯನಗೈದನು.

ನರಸಿಂಘನ ರಕ್ತಕ್ಕಾಗಿ ನೀರಡಿಸಿದ್ದ ಸಾಮ್ರಾಟ ಅಕ್ಬರನೆದುರು ಈ ಪತ್ರಗಳನ್ನು ಓದಿದಾಗ ಅವನು ಅತ್ಯಂತ ವಿಕಾರಮಯದ ಕ್ರೋಧಕ್ಕೊಳಗಾದನು. ಶೇಖ ಫರೀದನ ಕಡೆಗೆ ಹೊರಳಿ ಅವನು ಅಲ್ಲಿಗೆ ಹೋಗಿ ಯಾರ ತಪ್ಪಿನಿಂದ ಇದು ಘಟಿಸಿತು ಎನ್ನುವುದನ್ನು ವಿಚಾರಣೆ ಮಾಡಬೇಕೆಂದು ಹೇಳಿದನು. ಯಾಕೆಂದರೆ ರಾಯರಾಯನ್ನನು ಹೇಳುವ ಪ್ರಕಾರ ಅವನು ಗ್ವಾಲಿಯರ್ ರಾಜನ ಸೇನಾಪಡೆಯ ಮಧ್ಯದಿಂದಲೇ ಹೋದನಂತೆ; ಆ ರಾಜಾ ಹೇಳುತ್ತಾನೆ. ಸೇನಾನಿಯ ಬಿಡಾರದಲ್ಲಿಯೇ ಹಾಯ್ದುಹೋದನಂತೆ; ದ್ವಿತೀಯ ಸೇನಾಪ್ರಮುಖಾಧಿಕಾರಿಯು ಹೇಳುವಂತೆ ಆ ರಾಜದ್ರೋಹದ ಕೃತ್ಯದ ರಚನೆ ಬಹುದಿನದಿಂದ ಇದ್ದು ತಾನು ಪೂರ್ತಿಯಾಗಿ ಬಲಿ ಬಿದ್ದೆನೆನ್ನುತ್ತಾನೆ. ಸಂಕ್ಷಿಪ್ತದಲ್ಲಿ ಹೇಳುವುದಾದರೆ, ಪ್ರತಿಯೊಬ್ಬರು ಇನ್ನೊಬ್ಬರ ಮೇಲೆ ದೋಷಾರೋಪಣೆ ಮಾಡುತ್ತಿದ್ದರು. ಅಲ್ಲಾಮಿಯ ಸಹೋದರನಾದ ಶೇಖ್ ಅಬುಲ್

ಖೈರನು ವಿಚಾರಣೆ ನಡೆಸುವುದರಲ್ಲಿ ಬಹಳ ಚಾಣಾಕ್ಷನೆಂದು ಶೇಖ ಫರೀದನು ಹೇಳಿದನು. ಆ ಹೆಸರನ್ನು ಕೇಳಿದಾಕ್ಷಣ ಸಾಮ್ರಾಟನೆಂದನು, "ಅರ್ಥವಾಯಿತು: ಅಸದನನ್ನು ಕರೆಸಿರಿ." ಕಾವಲು ಕೋಣೆಯಲ್ಲಿ ಆಕಾ ಮುಲ್ಲಾನೊಡನೆ ನಾನು ಆ ರಾತ್ರಿ ಕಾವಲು ಕರ್ತವ್ಯದಲ್ಲಿದ್ದೆನು.

ಸುಮಾರು ಎಂಟುಗಂಟೆಗೆ ವಾರ್ತಾಕಾರರು ಬಂದು ತತ್‌ಕ್ಷಣವೇ ನಾನು ಕೋಟೆಗೆ ಬರಬೇಕೆಂದು ಹೇಳಿದರು. ನಾನು ಬಂದದ್ದನ್ನು ಹೇಳಿದೊಡನೆ ಸಾಮ್ರಾಟನು ನನಗೆ ಬರಹೇಳಿದನು. ನಾನು ಬಗ್ಗಿ ನಮಸ್ಕರಿಸಿದೆ. ಆ ರಾಜಮುಖದಲ್ಲಿ ಸಿಟ್ಟು ಮತ್ತು ರೌದ್ರವನ್ನು ನೋಡಿ ನನ್ನನ್ನು ಕೊಲ್ಲಿಸುವುದರಲ್ಲಿದ್ದಾನೆಂದು ಭಯಪಟ್ಟೆ. ಸಾಮ್ರಾಟನ ಆಸ್ಥಾನಿಕರು ನನ್ನ ಭೀತಿಯನ್ನು ನೋಡಿ ಮುಗುಳ್ನಕ್ಕರು; ನನ್ನೆದುರು ಓಲೆಗಳನ್ನೆಸೆಯಲಾಯಿತು. ಅವುಗಳನ್ನು ಓದಿಸಬೇಕೆಂದು ಆಜ್ಞೆ ಬಂದಿತು. ಮೊಟ್ಟಮೊದಲು ನಾನು ರಾಯನ್ನನ ಪತ್ರವನ್ನು ಗಮನವಿಟ್ಟು ಓದಿದೆನು. ಮುಂದಿನ ಪತ್ರಗಳನ್ನು ಓದತೊಡಗಿದಾಗ ಪತ್ರದ ವಿಷಯ ನನಗೆ ಅರ್ಥವಾಗಿದೆಯೆ? ಎಂದು ಸಾಮ್ರಾಟನು ಪ್ರಶ್ನಿಸಿದನು. ಭಾಗಶಃ ನನಗೆ ತಿಳಿದಿದೆಯೆಂದು ಉತ್ತರಿಸಿದೆ. ಅವನೆಂದನು, "ಈಗಂತೂ ಇದು ಸಂಭವಿಸಿದೆ. ನೀನು ಅಲ್ಲಿಯ ಬಿಡಾರಕ್ಕೆ ಹೋಗಿ ಯಾರ ತಪ್ಪು ಎಂದು ವಿಚಾರ ಮಾಡಿ ಸಮಗ್ರ ತನಿಖೆ ಮಾಡುವೆಯಾ? ಏಕೆಂದರೆ ಈ ಘಟನೆಯಿಂದ ನನಗೆ ಅತೀವ ನೋವಾಗಿದೆ. ಆದ್ದರಿಂದ ನಿನ್ನನ್ನು ಅಲ್ಲಿಗೆ ಕಳಿಸಬೇಕೆಂದು ನಿರ್ಧರಿಸಿದ್ದೇನೆ." ನಾನು ಸಲಾಂ ಸಲ್ಲಿಸುತ್ತ ನಾನು ಯಶಸ್ವಿಯಾಗುವ ದಿಶೆಯಲ್ಲಿ ಏನೆಲ್ಲ ಸಾಧ್ಯವೊ ಅದನ್ನೆಲ್ಲ ಮಾಡುವೆ ಎಂದು ಹೇಳಿದೆನು.....ರಾಜಾ ಮತ್ತು ಆತನ ಎಲ್ಲ ಅಧಿಕಾರಿಗಳು ಕೂಡಿದೊಡನೆ ಅವರೆದುರು ಅರಿವೆ ತುಂಡುಗಳಿಂದ ಹೊಲಿದು ಮಾಡಿದ್ದ ಹಾಳೆಯನ್ನೊಂದು ತಂದಿಟ್ಟೆನು. ಒಂದು ಕಡೆ ನದಿ ಉಳಿದ ಮೂರು ಕಡೆಗಳಲ್ಲಿ ದ್ವಾರಗಳು ಮತ್ತು ಗೋಪುರಗಳು ಇರುವ ಇರಾಜಕೋಟೆಯ ನಕಾಶೆಯನ್ನು ಅದರಲ್ಲಿ ಬರೆಯಲಾಗಿತ್ತು; ಸೈನಿಕರ ಸಂಖ್ಯೆ ಸಮೇತ ಪ್ರತಿಯೊಬ್ಬ ಪ್ರಮುಖನ ಬಿಡಾರವನ್ನು ಅಲ್ಲಿ ತೋರಿಸಲಾಗಿತ್ತು. ಜಿಯಾ–ಉಲ್–ಮುಲ್ಕನನ್ನು ಕರೆದು ಪ್ರತಿಯೊಬ್ಬ ಸರದಾರನು ತನ್ನ ಸೈನ್ಯದೊಡನೆ ಆಕ್ರಮಿಸಿಕೊಂಡಿದ್ದ ಬಿಡಾರಸ್ಥಳವನ್ನು ಅಲ್ಲಿ ಗುರುತಿಸಲು ಹೇಳಿದೆನು ಮತ್ತು ಅವರೆಲ್ಲರು ತಮ್ಮ ಮೊಹರನ್ನು ಹಾಕುವಂತೆ ಮಾಡಿದೆನು. ಹಾಗೆಯೆ ನರಸಿಂಘನು ಪಾರಾಗಿ ಹೋದ ಸ್ಥಳವನ್ನು ಗುರುತಿಸಿದೆ. ಅದರಂತೆ ಅವನು ಹೋದ ಹೊಳೆದಾರಿಯ ಸ್ಥಳವನ್ನು ಗುರುತಿಸಿ ತೋರಿಸಿದೆನು. ಈ ಹಾಳೆಯ ಮೇಲೆ ಆ ಎಲ್ಲ ಪ್ರಮುಖರು ತಮ್ಮ ಮುದ್ರೆಯನ್ನೊತ್ತಿದ್ದ ಬಳಿಕ ಅವರು ಅದನ್ನು ಪ್ರತಿನಿಧಿಸುತ್ತಿರುವುದನ್ನು ಖಚಿತಪಡಿಸಿಕೊಂಡೆನು. ವೀಳ್ಯೆ ತಿಂದು, ಸುಗಂಧ ಸ್ವೀಕರಿಸಿದ ನಂತರ ಅವರಿಗೆ ವಿದಾಯ ಹೇಳಿ ಹೊರಟೆನು. ನನ್ನ ಸನಿಹದ ಸಂಬಂಧಿಯಾಗಿದ್ದ

ಮುಹಮ್ಮದಖಾನ ತಾತಾರನನ್ನು ನನ್ನೊಡನೆ ೧೦೦೦ಕುದುರೆಗಳೊಂದಿಗೆ ಬೆಂಗಾವಲಾಗಿ ಗ್ವಾಲಿಯರಕ್ಕೆ ಹೊರಡಲು ನಿಯಮಿಸಲಾಯಿತು......

(ಗ್ವಾಲಿಯರದಿಂದ ಮರಳಿದ ಮೇಲೆ)

ಮುಸಾಹಿಬನ ಜೊತೆಯಲ್ಲಿ ನಾನು ರಾಜಾಸ್ಥಾನಕ್ಕೆ ಹೋದೆನು; ರಾಮದಾಸನಿಗೆ ನಾನು ಬಂದದ್ದನ್ನು ತಿಳಿಸಿದೆನು; ಆತನು ನನ್ನನ್ನು ಮೊಟ್ಟಮೊದಲಿನ ಕಟಕಟೆಗೆ ಒಯ್ದನು. ನಾನು ಬಗ್ಗಿ ಸಲಾಂ ಮಾಡಿದೆನು. ಅತ್ಯಂತ ಸಹನೆಯಿಂದ ಸಾಮ್ರಾಟನು ನನ್ನನ್ನು ಕರೆದನು. ಒಂದು ಬಂಗಾರ ಮುಹುರ ಮತ್ತು ಒಂಬತ್ತು ರೂಪಾಯಿಗಳನ್ನು ಕಾಣಿಕೆಯಾಗಿ ಕೊಡುತ್ತ ನಾನು ಅವನೆದುರು ಸಾಷ್ಟಾಂಗವೆರಗಿದೆನು. ತತ್‌ಕ್ಷಣ ಸಾಮ್ರಾಟನು ಕೇಳದ್ದೇನೆಂದರೆ "ಅದು ಯಾರ ತಪ್ಪಾಗಿತ್ತು?" ಅವನು ಸಹನೆಯ ಸ್ಥಿತಿಯಲ್ಲಿರದ್ದನ್ನು ಕಂಡು ನಾನು ಉತ್ತರಿಸಿದೆನು. "ಯಾರೊಬ್ಬರೂ ಉದ್ದೇಶಪೂರ್ವಕವಾಗಿ ತಪ್ಪು ಮಾಡಿದ್ದಾರೆಂದು ಹೇಳಲಾರೆ. ಈ ವಿಷಯದಲ್ಲಿ ಅಲಕ್ಷ್ಯ ಸಂಭವಿಸಿದೆ. ಎಲ್ಲರೂ ಸಮನಾಗಿಯೇ ತಪ್ಪಿತಸ್ಥರೇ. ಇದು ನನ್ನ ಸವಿನಯ ಅಭಿಪ್ರಾಯ." ಶೇಖ ಫರೀದ ಹೇಳಿದನು, "ಅಲಕ್ಷ್ಯವೂ ಒಂದು ಪ್ರಮಾದವೇ." ಅದಕ್ಕೆ ನಾನು ಉತ್ತರಿಸಿದ್ದು ಹೀಗೆ "ಉದ್ದೇಶಪೂರ್ವಕವಾಗಿ ಎಸಗಿದ್ದು ಪ್ರಮಾದ, ಯಾವ ದುರುದ್ದೇಶವಿಲ್ಲದೇ ಘಟಿಸಿದ್ದು ನಿಷ್ಕಾಳಜಿ." ಇನ್ನೂ ಹೆಚ್ಚಿಗೆ ಶೇಖನಿಗೆ ಹೇಳಲು ಹೊರಟಿದ್ದೆ, ಅಷ್ಟರಲ್ಲಿ ಎದ್ದುನಿಂತು ಹೇಳಿದನು. "ಅಸದ ಹೇಳಿದ್ದು ಸರಿ." ಅವನು ಹೇಳಿದ ರೀತಿಯಿಂದ ಅವನಿಗೆ ಸಮಾಧಾನವಾಗಿದ್ದು ಸ್ಪಷ್ಟವಾಯಿತು. ನನ್ನ ಮಾತು ಅವನಿಗೆ ಇಷ್ಟವಾಯಿತೆಂದು ಗೊತ್ತಾಯ್ತು."

■

*

ದಕ್ಷಿಣದಿಂದ ಜಮಾಲುದ್ದೀನನನ್ನು ಕರೆತರಲು ನಿಯಮಿಸಿದ್ದನ್ನು ಕುರಿತು

ಬರ್ಹಾಣಪುರದಲ್ಲಿ ಸಾಮ್ರಾಟನು ವಾಸ್ತವ್ಯ ಮಾಡಿದಾಗ ಆದಿಲ್‌ಖಾನ ಸವಾಯಿಯೊಡನೆ ರಕ್ತಸಂಬಂಧ ಬೆಳೆಸಲು ಕಾರ್ಯಗೈಯಲು ಸೈಯದ್ ಮೀರಜಮಾಲುದ್ದೀನ ಹುಸೇನ ಇಂಜುನನ್ನು ಅವನಲ್ಲಿಗೆ ಕಳಿಸಿದನು. ಬಿಜಾಪುರದ ರಾಜನು ತಾನು ಸಾಮ್ರಾಟನ ಅನುಯಾಯಿಯೆಂದು ಘೋಷಿಸಿದ್ದರಿಂದ ಆತನ ಮಗಳನ್ನು ರಾಜಕುಮಾರ ದಾನಿಯಲನಿಗೆ ವಧುವಾಗಿ ತಂದುಕೊಂಡು ಆತನನ್ನು ಅತ್ಯುನ್ನತ ಸ್ಥಾನಕ್ಕೇರಿಸಬೇಕೆಂದು ಸಾಮ್ರಾಟನ ವಿಚಾರವಾಗಿತ್ತು. ಆ ಕಾರ್ಯಕ್ಕಾಗಿ ಸೈಯದನು ಅಲ್ಲಿಗೆ ಹೋಗಿ ಬಹಳ ಕಾಲವಾಗಿತ್ತು. ಅನಾವಶ್ಯಕವಾಗಿ ವಿಳಂಬ ಮಾಡಿದ್ದನು; ಆದ್ದರಿಂದ ಸಾಮ್ರಾಟನಿಗೆ ಅವನ ಮೇಲೆ ಸಿಟ್ಟು ಬಂದಿತ್ತು. ನಾನು ಪ್ರಸ್ತಾಪಿಸುತ್ತಿರುವ ಆ ವೇಳೆಗೆ ಖಾನೆಖಾನಾನ ಮತ್ತು ಸೈಯಿದ ಇಬ್ಬರೂ ಕೂಡಿ ಕಳಿಸಿದ ವರದಿಯೊಂದು ಸಾಮ್ರಾಟನ ಕೈಸೇರಿತು. ಆಗ ಸಾಮ್ರಾಟನು ಅತ್ಯಂತ ಕ್ರುದ್ಧನಾಗಿ ಉದ್ಗರಿಸಿದನು. "ಆ ಸರದಾರರನ್ನು ತನ್ನ ಸಂಗದಿಂದ ಹಾಳುಗೈದಿದ್ದಾನೆ. ದೈವೇಚ್ಛೆಯಿಂದ, ಅವನನ್ನು ಅವಮರ್ಯಾದೆಯಿಂದ ಇಲ್ಲಿಗೆ ಕರೆತರಲು ಒಬ್ಬನನ್ನು ಕಳಿಸುವೆ." ತನ್ನ ಸುತ್ತಲಿದ್ದ ಸೇವಕರನ್ನು ಒಂದುಬಾರಿ ಈಕ್ಷಿಸಿದನು.

ಭಗವಂತನ ಛಾಯೆಯಾಗಿದ್ದ ಆ ಸಾಮ್ರಾಟನ ಮಿಂಚಿನಕಣ್ಣು ನನ್ನ ಮೇಲೆ ಬೀಳಲು, ಅತ್ಯಂತ ಕಡೆಯವರನ್ನು ಕಾಳಜಿಯಿಂದ ನೋಡುವ ಆ ದೊರೆಯು ತನ್ನ ಹಿರಿಯ ಅಧಿಕಾರಿಗಳಿಗೆ ಹೇಳಿದನು. "ಅವನಿಗೆ ಲೂಟಿಮಾಡಲು ಮತ್ತು ನೀರು ಕುಡಿಯಲೂ ಅವಕಾಶಕೊಡದೆ ಇಲ್ಲಿ ಕರೆತರಲು ಅಸದನನ್ನು ಕಳಿಸುವೆ. ನನ್ನೆಡೆಗೆ ತಿರುಗುತ್ತ ಅವನೆಂದನು "ನಿನ್ನನ್ನು ದಕ್ಷಿಣಕ್ಕೆ ಹೋಗಲು ನಿಯಮಿಸಿದ್ದೇನೆ. ಆ ಸೇವೆಯು ನಿನಗೆ ಸಮೃದ್ಧ ಸಂಪತ್ತನ್ನು ತರುತ್ತದೆ".

ಕೆಲದಿನಗಳಲ್ಲಿ ನಾನು ಎಲ್ಲವನ್ನೂ ಸಿದ್ಧಗೊಳಿಸಿದೆನು, ರಾಜಾಜ್ಞೆಗಳು ಬರೆಯಲ್ಪಟ್ಟವು. ಬಿಜಾಪುರದ ಆದಿಲ್‌ಖಾನನಿಗೆ ಸಕಲಸೌಜನ್ಯದಿಂದ ಕೂಡಿದ ಕೃಪಾಭರಿತ ಫರ್ಮಾನವೊಂದನ್ನು ಬರೆಸಲಾಯ್ತು. ಅದರ ಒಕ್ಕಣಿಕೆ ಕೆಳಗಿನಂತಿತ್ತು: ಸೈಯದನ ಪತ್ರಗಳಿಂದ ತಿಳಿದುಬರುವಂತೆ ನೀನು ಗ್ವಾಲಿಯರ್ ಪಟ್ಟಣವನ್ನು ಇಚ್ಛಿಸುತ್ತಿರುವಿ. ಬಹಳ ಒಳ್ಳೆಯದು ನೀನು ನಿಜಕ್ಕೂ ಆ ವಿಷಯದಲ್ಲಿ ಕಾತರತೆ ಹೊಂದಿದ್ದರೆ ನಮ್ಮ ವಿಶ್ವಾಸಿಕ ಸೇವಕನಾದ ಅಸದನ ಮುಂದೆ ನಿನ್ನ ಮನದಿಂಗಿತವನ್ನು ತಿಳಿಸು, ನಿನ್ನ ಇಚ್ಛೆಗೆ ಅನುಗುಣವಾಗಿ ನಾವು ಆಜ್ಞೆ ಹೊರಡಿಸುವೆವು, ಅದನ್ನು ಶಾಶ್ವತವಾಗಿ ನಿನಗೇ ನೀಡುವೆವು. ಹಾಗಾಗಿ ನೀನು ನಿನ್ನ ಆಡಳಿತಗಾರರನ್ನು ಅಲ್ಲಿ ನೇಮಿಸಬಹುದು. ಮೀರ ಜಮಾಲುದ್ದೀನನಿಗೆ ಈ ಪ್ರಕಾರದ ಅಪ್ಪಣೆಯನ್ನೊಯ್ದೆನು: "ನೀನು ಅಸದನೊಡನೆ ಆ ಸ್ಥಾನಕ್ಕೆ ಬರದಿದ್ದರೆ, ನಿನಗೆ ಮತ್ತು ನಿನ್ನ ಮಕ್ಕಳಿಗೆ ಏನಾಗುವುದೆಂದು ನೀನೇ ನೋಡುವೆ."

■

*

ಬಿಜಾಪುರದ ವರ್ಣನೆ

ಹಜ್ಜಾಹ ಎಂದು ಕರೆಯಲ್ಪಡುವ ಅರಮನೆಯಲ್ಲಿಯ ಪ್ರತಿ ಮನೆಗೂ ಎರಡು ಅಂಗಣಗಳಿದ್ದವು. ಎರಡು ಅಂಗಣಗಳಿದ್ದ ಮನೆಗೆ ಅವರು ಹಜ್ಜಾಹ ಎಂದು ಕರೆಯುತ್ತಿದ್ದರು. ನನ್ನ ನಿವಾಸದ ದ್ವಾರದ ಸುತ್ತೆಲ್ಲ ಎದುರಿಗೆ ಮನೆಗಳು ಮತ್ತು ಮುಖ ಮಂಟಪಗಳು ಇರುವ ಎತ್ತರದ ಕಟ್ಟಡಗಳಿದ್ದವು; ಅದು ಆರೋಗ್ಯಕರವಾದ, ಗಾಳಿಯಾಡುವ ವಾತಾವರಣದಲ್ಲಿತ್ತು. ಆ ನಿವಾಸಸ್ಥಾನವು ವಿಸ್ತಾರವಾದ ಮುಕ್ತ ಬಯಲಿನಲ್ಲಿತ್ತು. ಸುಮಾರು ಮೂವತ್ತು ಗಜ (ಮೂರು ಅಡಿ)ಅಗಲ ಮತ್ತು ಎರಡು ಕೋಸ ಉದ್ದ ಇರುವ ದೊಡ್ಡ ಬಜಾರದ ಪೂರ್ವಕ್ಕೆ ಮುಖಮಾಡಿ ಈ ನಿವಾಸದ ಉತ್ತರ ಮುಖಮಂಟಪವುಂಟು. ಪ್ರತಿಯೊಂದು ಅಂಗಡಿಯ ಮುಂದೆ ಹಚ್ಚಹಸಿರಾದ ಸುಂದರ ವೃಕ್ಷವೊಂದಿತ್ತು ಮತ್ತು ಇಡೀ ಬಜಾರವು ಅತ್ಯಂತ ಸ್ವಚ್ಛ, ಶುದ್ಧವಾಗಿತ್ತು. ಇನ್ನುಳಿದ ಊರುಗಳಲ್ಲಿ ಕಾಣದ, ಕೇಳರಿಯದ ಅಪರೂಪದ ವಸ್ತುಗಳಿಂದ ತುಂಬಿತ್ತು. ವಸ್ತ್ರಮಾರಾಟಗಾರರ, ಆಭರಣ ವ್ಯಾಪಾರಿಗಳ, ಚಿಲಕತ್ತುಗಳನ್ನು ಮಾರುವವರ, ಆಹಾರ ಮತ್ತು ಮತ್ಸ್ಯವ್ಯಾಪಾರಿಗಳಿಂದ ಹಾಗೆಯೇ ಅಡುಗೆ ಮಾಡುವವರ ಮಳಿಗೆಗಳಿದ್ದವು. ಇಡೀ ಪೇಟೆಯ ಬಗೆಗೆ ತಿಳುವಳಿಕೆ ಕೊಡಲು ಕೇವಲ ಒಂದು ಸಣ್ಣ ಭಾಗವನ್ನು ವಿವರವಾಗಿ ವರ್ಣಿಸುತ್ತೇನೆ.

ಆಭರಣ ಮಾರಾಟಗಾರರ ಅಂಗಡಿಗಳಲ್ಲಿ ಎಲ್ಲ ಬಗೆಯ ಒಡವೆಗಳಿದ್ದವು. ವಿಧವಿಧದ ವಸ್ತುಗಳನ್ನು ಅಂದರೆ ಕಿರುಗತ್ತಿಗಳು, ಚೂರಿಗಳು, ಕನ್ನಡಿಗಳು, ಕಂಠಹಾರಗಳು, ಪಕ್ಷಿಗಳ ಪ್ರತಿರೂಪಗಳು– ಗಿಳಿ, ಪಾರಿವಾಳ, ನವಿಲು, ಇತ್ಯಾದಿ ಪ್ರತಿರೂಪಗಳು– ಇವೆಲ್ಲ ಬೆಲೆಬಾಳುವ ರತ್ನ ಮತ್ತು ವಜ್ರಗಳಿಂದ ಅಲಂಕರಿಸಲ್ಪಟ್ಟಿದ್ದವು; ಇವುಗಳನ್ನು ತೆರೆದ ಕಪಾಟುಗಳಲ್ಲಿ ಒಂದರ ಮೇಲೊಂದರಂತೆ ಸಾಲುಸಾಲಾಗಿ ಜೋಡಿಸಲಾಗಿತ್ತು. ಅಪರೂಪದ ಖಾದ್ಯಗಳುಳ್ಳ ತಿಂಡಿ–ತಿನಿಸುಗಳನ್ನು ಮಾಡುವವರ ಅಂಗಡಿಗಳಲ್ಲಿ

ಇದೇ ರೀತಿಯಾಗಿ ಪದಾರ್ಥಗಳನ್ನು ಸಾಲುಸಾಲಾಗಿ ಕಪಾಟುಗಳಲ್ಲಿ ಒಂದರ ಮೇಲೊಂದರಂತೆ ಇಡಲಾಗಿತ್ತು. ವಸ್ತ್ರವಿನ್ಯಾಸದಂಗಡಿಗಳಲ್ಲಿ ಎಲ್ಲ ಬಗೆಯ ಬಟ್ಟೆಗಳನ್ನು ಇದೇ ಬಗೆಯಲ್ಲಿ ಕಪಾಟುಗಳಲ್ಲಿ ಇಡಲಾಗಿತ್ತು. ಬಟ್ಟೆಹೊಲಿಗೆಗಾರರು, ಮದ್ಯದಂಗಡಿಯವರು ಅಲ್ಲದೆ ಬೇರೆ ವ್ಯಾಪಾರಸ್ಥರ ಸರಕುಗಳಿದ್ದವು. ಮದ್ಯದಂಗಡಿಗಳಲ್ಲಿ ಬೆಲೆಯುಳ್ಳ ಚೀನಿಮಣ್ಣಿನ ಕಪ್ಪುಗಳಲ್ಲಿ ವಿರಳವಾದ ರಸಗಳನ್ನು ತುಂಬಿ ಇಡಲಾಗಿತ್ತು. ಆ ಅಂಗಡಿಯ ಮಗ್ಗುಲಲ್ಲಿ ಹಣ್ಣಿನಂಗಡಿಯಿತ್ತು; ಅಲ್ಲಿ ನಾನಾ ಬಗೆಯ ಹಣ್ಣುಗಳು, ಮಿಠಾಯಿ ಪದಾರ್ಥಗಳು ಅಂದರೆ ಉದಾಹರಣೆಗೆ ಪಿಸ್ತಾ, ಕಲ್ಲುಸಕ್ಕರೆ, ಬದಾಮ ಹಾಗೆಯೇ ಅನೇಕ ಸ್ವಾದಿಷ್ಟ ಪದಾರ್ಥಗಳನ್ನು ಇಡಲಾಗಿತ್ತು.

ಇನ್ನೊಂದು ಬದಿಯಲ್ಲಿ ಮದ್ಯದಂಗಡಿಯಾದ ಮೇಲೆ ಹಾಡುಗಾರರು, ನೃತ್ಯಗಾರರು, ಬಗೆಬಗೆಯ ಆಭರಣಗಳಿಂದ ಅಲಂಕೃತರಾದ ಸುಂದರ ಸ್ತ್ರೀಯರು ಗೀತಮೇಳಗಳಲ್ಲಿ ಹಾಡುವ ಆಕರ್ಷಕರೂಪದ ಬಾಲಕರು ತಂಡಗಳಲ್ಲಿದ್ದು ಬಯಸಿದ್ದ ಆಮೋದ ಪ್ರಮೋದ ನೀಡಲು ಸಿದ್ಧರಾಗಿದ್ದರು. ಸ್ವಲ್ಪದರಲ್ಲಿ ಹೇಳುವುದಾದರೆ, ಸೌಂದರ್ಯವತಿಯರು, ನರ್ತಕಿಯರು, ಪರಿಮಳದ್ರವ್ಯ, ಎಲ್ಲ ತೆರನಾದ ಸ್ವಾದಿಷ್ಟ ತಿನಿಸುಗಳು, ಮದ್ಯ, ಹಾಗೆಯೆ ಬಗೆಬಗೆಯ ಆಭರಣಗಳು, ಅರಮನೆ ಸಿರಿಮನೆಗಳು ಇವೆಲ್ಲವುಗಳಿಂದ ಸಮಸ್ತ ಪೇಟೆ ತುಂಬಿತುಳುಕುತ್ತಿತ್ತು. ಒಂದು ಓಣಿಯಲ್ಲಿ ಸಾವಿರಾರು ಪಾನಪ್ರಿಯರು, ಆಮೋದಪ್ರಿಯರು, ನೃತ್ಯಗಾರರು, ಪ್ರೇಮಿಗಳು ಕೂಡಿದ್ದರು; ಅವರಾರೂ ಒದರಾಟ, ಜಗಳ ಇಲ್ಲವೆ ವಾದ ಮಾಡುವುದರಲ್ಲಿ ತೊಡಗಿದವರಲ್ಲ; ಈ ಸುಂದರ ಶಾಂತ ದೃಶ್ಯ ಎಲ್ಲೆಡೆಯಲ್ಲಿ ಸದಾ ಇತ್ತು. ಬಹುಶಃ ವಿಸ್ತಾರವಾದ ಈ ಜಗತ್ತಿನ ಯಾವ ಸ್ಥಳದಲ್ಲಿಯೂ (ಊರಲ್ಲಿಯೂ) ಇದಕ್ಕಿಂತ ವಿಸ್ಮಯದ ದೃಶ್ಯವು ಪ್ರವಾಸಿಗರ ಕಣ್ಣಿಗೆ ಬೀಳದು.

ಸೇವಕನೊಬ್ಬನನ್ನು ಗೋಪುರದ ಮೇಲಿಂದ ಎಸೆಯಲು ಅಕ್ಬರನು ಆಜ್ಞಾಪಿಸಿದನು

ಸಾಮ್ರಾಟ ಅಕ್ಬರನು ಆಸ್ಥಾನದಿಂದ ಹೊರಟಹೋಗಿ ಬಹಳ ಹೊತ್ತಿನ ಮೇಲೆ, ವಿಶ್ರಾಂತಿ ತೆಗೆದುಕೊಂಡು ಮತ್ತೆ ಬರುತ್ತಿದ್ದನು. ಅವನಿಲ್ಲದಾಗ ಆಸ್ಥಾನಿಕರು ಮತ್ತು ಸೇವಕರು ತಾವೂ ಹೊರಟುಹೋಗಿ ಮತ್ತೆ ಸಾಮ್ರಾಟನು ಬರುವ ಸಮಯಕ್ಕೆ ಹಾಜರಿರುತ್ತಿದ್ದರು. ಆ ಒಂದು ದಿನ ದಿನನಿತ್ಯಕ್ಕಿಂತ ಮುಂಚಿತವಾಗಿಯೇ ಸಾಮ್ರಾಟನ ಆಗಮನವಾಯಿತು. ಕಾರಣವೆಂದರೆ ದಕ್ಷಿಣದಿಂದ ಬರಬಹುದಾಗಿದ್ದ ಸುದ್ದಿಯನ್ನು ತಿಳಿದುಕೊಳ್ಳುವ ಕುತೂಹಲವುಳ್ಳವನಾಗಿದ್ದನು. ಆಗ ಅಲ್ಲಿ ಯಾವ ಸೇವಕನೂ ಇರಲಿಲ್ಲ. ಸಿಂಹಾಸನ ಮತ್ತು ಒರಗುವ ಸುಪ್ಪತ್ತಿಗೆಯ ಹತ್ತಿರಬಂದಾಗ ಅಲ್ಲಿ ಹಾವು ಸುತ್ತಿಕೊಂಡು ಬಿದ್ದಂತೆ. ಮರಣನಿದ್ರೆಯಲ್ಲಿದ್ದಂತೆ ಒಬ್ಬ ದುರ್ದೈವಿ ದೀಪ ಹಚ್ಚುವ ಸೇವಕನು ನಿದ್ದೆಯಲ್ಲಿ ಬಿದ್ದುಕೊಂಡಿದ್ದನು. ಅವನನ್ನು ನೋಡಿ ಕ್ರುದ್ಧನಾಗಿ ಆತನನ್ನು

ಗೋಪುರದಿಂದ ಎತ್ತೆಸೆಯಲು ಆಜ್ಞೆ ಮಾಡಲಾಗಿ ಹಾಗೆಯೇ ಮಾಡಲಾಯಿತು. ಆ ಮನುಷ್ಯನು ನೂರಾರು ತುಂಡಾಗಿ ಹೋದನು. ಈ ಸಿಟ್ಟಿನ ಭರದಲ್ಲಿ ಸಾಮ್ರಾಟನಿದ್ದಾಗ ಅಲ್ಲಿಯ ಕಾವಲಿಗಿದ್ದ ನತದೃಷ್ಟ ಖ್ವಾಜಾ ಅಮೀರುದ್ದೀನ ದೀನ್ ಆಗ ಅಲ್ಲಿ ಕಾಣಿಸಿಕೊಂಡನು. ಕಠೋರವಾಗಿ ಸಿಟ್ಟಿನಿಂದ ಅವನನ್ನು ತರಾಟೆಗೆ ತೆಗೆದುಕೊಳ್ಳುತ್ತ, ಮರ್ಯಾದೆ ತೆಗೆದು ಆಸ್ಥಾನದಿಂದ ಹೊರಗೆ ಹಾಕಿ, ಅಲ್ಲಿಂದ ತತ್‌ಕ್ಷಣ ನಿರ್ಗಮಿಸಲು ಆಜ್ಞೆಯಿತ್ತು ರಾಜಕುಮಾರನ ಬಿಡಾರದಲ್ಲಿ ಸೇವೆಗೆ ಸೇರಿಕೊಳ್ಳಲು ಹೇಳಿದನು. ಆಗ ಅಲ್ಲಿ ಕಾವಲಿಗಾಗಿದ್ದ ದೌಲತಖಾನನಿಗೆ ಕಠೋರವಾಗಿ ಬೈದು ಮರ್ಯಾದೆ ತೆಗೆದನು. ಆ ಕೆಟ್ಟ ಗಳಿಗೆಯ ಫಲದಲ್ಲಿ ಒಂದು ಭಾಗವು ರಾಮದಾಸನಿಗೂ ಮುಟ್ಟಿತು. ಆದರೆ ಅವನನ್ನು ಕಠೋರವಾಗಿ ಶಿಕ್ಷಿಸಲಿಲ್ಲ. ಇದಾದ ಮೇಲೆ ಸಾಮ್ರಾಟನು ರಾಜಪರ್ಯಂಕದ ಮೇಲೆ ಕುಳಿತನು. ಅಂಜಂಜುತ್ತ ಹೋಗಿ ಅವನಿಗೆ ಸಲಾಂ ಸಲ್ಲಿಸಿದೆನು.

ಅವನು ನನ್ನನ್ನು ನೋಡಿದೊಡನೆಯೇ ಖ್ವಾಜಾ ಅಮೀರುದ್ದೀನನು ಕೆಲವು ವರ್ಷಗಳವರೆಗೆ ಗೌರವಾದರಗಳನ್ನು ಯಾವ ಹುದ್ದೆಯಲ್ಲಿ ಇದ್ದು ಗಳಿಸಿದ್ದನೊ ಆ ಹುದ್ದೆಯನ್ನು ನನಗಿತ್ತನು. ಅಲ್ಲದೆ ಅದೇ ವೇಳೆಯಲ್ಲಿ ರಾಮದಾಸನಿಗೆ ಹೀಗೆ ಹೇಳಿದನು. "ಕಾವಲಿನ ಹುದ್ದೆಯನ್ನು ಅಸದನಿಗೆ ನೀಡಿದ್ದೇನೆ: ಅವನು ಅದು ಹೇಗೆ ನಡೆದುಕೊಳ್ಳುತ್ತಾನೆ ಎನ್ನುವುದನ್ನು ನೋಡೋಣ. ಮರ್ಯಾದೆ ಸಲ್ಲಿಸಲು ಅವನನ್ನು ಇಲ್ಲಿಗೆ ಕರೆದುತನ್ನಿ."

ತಂಬಾಕನ್ನು ಪರಿಚಯಿಸಿದ್ದು

ಬಿಜಾಪುರದಲ್ಲಿ ನನಗೆ ಸ್ವಲ್ಪ ತಂಬಾಕು ಸಿಕ್ಕಿತ್ತು. ಭಾರತದಲ್ಲಿ ಅಂಥದ್ದನ್ನು ನಾನು ಕಂಡಿದ್ದಿಲ್ಲವಾದ್ದರಿಂದ ನನ್ನೊಡನೆ ಸ್ವಲ್ಪ ತೆಗೆದುಕೊಂಡೊಯ್ದೆನು. ರತ್ನಖಚಿತವಾದ ಕುಶಲತೆಯಿಂದ ಕೂಡಿದ ಒಂದು ಸುಂದರ ಕೊಳವೆ ಚಿಲುಮೆಯನ್ನು ಸಿದ್ಧಮಾಡಿದೆನು. ಆ ಕೊಳವೆಯ ಉದ್ದನೆಯ ಭಾಗವು ಮೂರುಮೊಳ ಉದ್ದ ಇತ್ತು; ಅದನ್ನು ನಾನು 'ಅಚೆನ್' ಎಂಬ ಊರಲ್ಲಿ ಪಡೆದುಕೊಂಡಿದ್ದೆನು. ಅದನ್ನು ಚೆನ್ನಾಗಿ ಕಾಸಿ ಒಣಗಿಸಲಾಗಿತ್ತು; ಎರಡೂ ಬದಿಗಳಲ್ಲಿ ಅದನ್ನು ಹೊಳೆಹೊಳೆವ ವಜ್ರದಿಂದ ಎರಕ ಹೊಯ್ಯಲಾಗಿತ್ತು. ಯಮನ್ ದೇಶದಲ್ಲಿ ನನಗೆ ಸಿಕ್ಕಿದ್ದ ಅಂಡಾಕಾರದ ಕಾರ್ಲಿನಿಯವನ್ನು ಆ ತಂಬಾಕುಸೇದುವ ಕೊಳವೆಯ ಬಾಯಿಗೆ ಜಡಿಸಿದ್ದೆನು. ಅದೊಂದು ಸಮಗ್ರ ಸುಂದರವಾದ ವಸ್ತುವಾಗಿತ್ತು. ಅದನ್ನು ಹೊತ್ತಿಸಲು ಬಂಗಾರ ದೀಪವನ್ನಿಟ್ಟಿದ್ದೆನು. ಬಿಜಾಪುರದ ದೊರೆ ಆದಿಲ್‌ಖಾನನು ನನಗೊಂದು ಎಲೆಯಡಿಕೆ ಪೆಟ್ಟಿಗೆಯನ್ನು ಕೊಟ್ಟಿದ್ದನು; ಅದು ಬಹಳ ಹಸ್ತಕುಶಲತೆಯಿಂದ ಮಾಡಿದ್ದಾಗಿತ್ತು. ಹದಗೊಳಿಸಿದ ನುಣುಪಾದ ತಂಬಾಕನ್ನು ಅದರಲ್ಲಿ ತುಂಬುತ್ತಿದ್ದೆನು; ಒಂದೇ ತಂಬಾಕಿನ ಎಲೆಯನ್ನು ಹೊತ್ತಿಸಿದರೆ ಅದೆಲ್ಲವನ್ನು ಆವರಿಸಿ ಉರಿಯುತ್ತಿತ್ತು. ಸೊಬಗಿನಿಂದ

ಸೊಗಸಾಗಿ ಅದನ್ನೆಲ್ಲ ಬೆಳ್ಳಿಯ ಹರಿವಾಣದಲ್ಲಿ ವ್ಯವಸ್ಥೆಗೊಳಿಸುತ್ತಿದ್ದೆ. ಈ ಕೊಳವೆಯ ಉದ್ದನೆಯ ಭಾಗವನ್ನು ಇಡುವುದಕ್ಕಾಗಿ ನನ್ನಲ್ಲಿ ಬೆಳ್ಳಿಯ ಕೊಳವೆಯಿತ್ತು ಮತ್ತು ಅದನ್ನು ಕೆಂಪುನೀಲಿ ಮಖಮಲ್ಲ ಅರಿವೆಯಲ್ಲಿ ಇಡುತ್ತಿದ್ದೆ.

ನಾನು ಕೊಟ್ಟ ಕಾಣಿಕೆಗಳನ್ನೆಲ್ಲ ಸ್ವೀಕರಿಸುತ್ತ ಸಾಮ್ರಾಟನು ಸಂತೋಷಪಡುತ್ತಿದ್ದನು. ಅಷ್ಟೆಲ್ಲ ವಿಚಿತ್ರ ಸಾಮಾನುಗಳನ್ನು ಸ್ವಲ್ಪೇ ಅವಧಿಯಲ್ಲಿ ಅದು ಹೇಗೆ ನಾನು ಸಂಗ್ರಹಿಸಿದ್ದೆನೆಂದು ಕೇಳುತ್ತಿರುವಾಗ ಆತನ ದೃಷ್ಟಿ ತಂಬಾಕದ ಹುಕ್ಕಾ ಕೊಳೆಯನ್ನಿಟ್ಟ ರಜತ ತಟ್ಟೆಯ ಮೇಲೆ ಬಿತ್ತು. ಅದನ್ನು ನೋಡಿ ಬಹಳ ಚಕಿತಗೊಂಡು ಕೈಗೆತ್ತಿ ಪೈಪದಲ್ಲಿ ತುಂಬಿದ್ದ ತಂಬಾಕನ್ನು ಪರೀಕ್ಷಿಸುತ್ತ ಅದೇನು ಮತ್ತು ಎಲ್ಲಿ ನನಗೆ ಅದು ಸಿಕ್ಕಿತೆಂದು ವಿಚಾರಿಸಿದನು. ನವಾಬ ಖಾನ-ಇ ಉತ್ತರಿಸಿದನು. "ಇದು ತಂಬಾಕು, ಮೆಕ್ಕಾ ಮದೀನಾದಲ್ಲಿ ಇದು ಎಲ್ಲರಿಗೂ ಗೊತ್ತು. ಈ ವೈದ್ಯರು ತಮಗೆ ಔಷಧವೆಂದು ತಂದಿದ್ದಾರೆ. ಪ್ರಭು ಅದನ್ನು ನೋಡಿದರು. ತನಗಾಗಿ ಒಂದು ಪೈಪು ತುಂಬಿಕೊಡಲು ಹೇಳಿದನು. ಚಕ್ರವರ್ತಿಯು ಸೇದಲು ಶುರುಮಾಡಲು ಅವನ ವೈದ್ಯನು ಬಂದು ಹಾಗೆ ಮಾಡಬೇಡಿರೆಂದು ಒತ್ತಾಯಿಸಿದನು. ಆದರೆ ಕರುಣೆಯಿಂದ ಕೂಡಿದ ಸಾಮ್ರಾಟನು ನನ್ನನ್ನು ಸಂತೋಷಪಡಿಸಲು ಸೇದಲೇಬೇಕೆಂದನು, ಕೊಳವಿಯ ಮುಖವನ್ನು ಬಾಯಲ್ಲಿಟ್ಟು ಒಂದೆರಡು ಬಾರಿ ಉಸಿರೆಳೆದನು. ವೈದ್ಯನು ಚಡಪಡಿಸುತ್ತಿದ್ದನು, ಹೆಚ್ಚಿಗೆ ಸೇದುವುದು ಬೇಡವೆಂದನು. ಅವನು ತನ್ನ ಬಾಯಿಯಿಂದ ಪೈಪನ್ನು ತೆಗೆದು ಖಾನೆ ಅಜಂನಿಗೆ ಕೊಟ್ಟು ಅವನಿಗೆ ಸೇದಿ ನೋಡೆಂದು ಹೇಳಿದೆನು, ಆಗ ಅಜಂ ಒಂದೆರಡು ಸಾರಿ ಸೇದಿ ಹೊಗೆ ಬಿಟ್ಟನು. ಬಾದಶಹನು ತನ್ನ ಔಷಧ ತಜ್ಞನನ್ನು ಕರೆಸಿ ಅದರ ವಿಶಿಷ್ಟ ಗುಣಗಳೇನೆಂದು ಪ್ರಶ್ನಿಸಿದನು. ತನ್ನ ಗ್ರಂಥಗಳಲ್ಲಿ ಅದರ ಪ್ರಸ್ತಾಪವಿಲ್ಲವೆಂದು ಅವನು ಹೇಳಿದನು. ಆದರೆ ಅದು ಚೀನಾದಿಂದ ಆಮದುಗೊಂಡಿದ್ದು, ಯುರೋಪದ ವೈದ್ಯರು ಅದನ್ನು ಕುರಿತು ಶ್ಲಾಘಿಸಿ ಬರೆದಿದ್ದಾರೆ. ಅದಕ್ಕೆ ಮೊದಲಿನ ವೈದ್ಯ ಹೇಳಿದನು. "ನಿಜಕ್ಕೂ ಇದೊಂದು ಪ್ರಯೋಗಗೊಳ್ಳದ ಔಷಧ, ವೈದ್ಯರು ಇದನ್ನು ಕುರಿತು ಏನೂ ಹೇಳಿಲ್ಲ. ಹೀಗಿರುವಾಗ ಯಾರೂ ಉಪಯೋಗಿಸದ ಅಜ್ಞಾತ ವಸ್ತುವಿನ ಗುಣಗಳನ್ನು ಕುರಿತು ಹೇಳುವುದಾದರೂ ಏನು? ಮಹಾಪ್ರಭು ನೀವು ಇದನ್ನು ಸೇವಿಸಕೂಡದು, ಹಾಗೆ ಮಾಡುವುದು ಸರಿಯಲ್ಲ." ಆ ವೈದ್ಯನಿಗೆ ನಾನು ಹೇಳಿದೆನು, "ಇದರ ವಿಷಯಕ್ಕೆ ಎಲ್ಲವನ್ನು ತಿಳಿದುಕೊಳ್ಳದಷ್ಟು ಯುರೋಪಿಯನ್ನರು ಮೂರ್ಖರಲ್ಲ; ಅಲ್ಲಿಯ ಜಾಣರು ವಿರಳವಾಗಿ ತಪ್ಪುಗ್ರೆಯುತ್ತಾರೆ ಅಥವಾ ತಪ್ಪಾಗಿ ತಿಳಿಯುತ್ತಾರೆ. ಯಾವುದೇ ವಿಷಯವನ್ನು, ವಸ್ತುವನ್ನು ಪರೀಕ್ಷಿಸಿ ನೋಡದೆ, ಅದರ ಗುಣಗಳನ್ನು ತಿಳಿಯದೆ ಅದರ ಮೇಲೆ ತೀರ್ಪನ್ನು ಹೇಗೆ ಕೊಡುತ್ತೀರಿ? ಹಾಗೆ ತೀರ್ಮಾನಿಸಿದರೆ ಅದರ ಮೇಲೆ ವೈದ್ಯರು,

ರಾಜರು, ದೊಡ್ಡಜನರು, ಸರದಾರರು, ಶ್ರೀಮಂತವರ್ಗದವರು ವಿಶ್ವಾಸವಿಡುವುದು ಹೇಗೆ? ಏನನ್ನಾದರೂ ನಿರ್ಣಯಿಸಿ ತೀರ್ಪು ಕೊಡಬೇಕಾದರೆ ಆ ವಸ್ತುವಿನ, ವಿಷಯದ ಒಳ್ಳೆಯ ಇಲ್ಲವೆ ಕೆಟ್ಟ ಗುಣಗಳನ್ನು ಪರೀಕ್ಷಿಸಿ ತೀರ್ಮಾನಗೈಯಬೇಕು. ಅಂದರೆ ಆ ವಿಷಯಕ್ಕೆ ಸಂಬಂಧಿಸಿದ ಸತ್ಯಸಂಗತಿಗಳ ಮೇಲೆ ತೀರ್ಮಾನ ನಿಲ್ಲಬೇಕು, ಆ ವೈದ್ಯನ ಪ್ರತಿಕ್ರಿಯೆ ಹೀಗಿತ್ತು, "ನಮ್ಮಲ್ಲಿಯ ಜ್ಞಾನಿಗಳು ಒಪ್ಪದ ಯಾವುದೇ ಪದ್ಧತಿಯನ್ನು, ರೂಢಿಯನ್ನು ನಾವು ಅನುಸರಿಸುವುದಿಲ್ಲ, ಅಳವಡಿಸಿಕೊಳ್ಳುವುದಿಲ್ಲ." ನಾನು ಹೇಳಿದೆ, "ಇದೊಂದು ವಿಚಿತ್ರವೇ ಸರಿ. ಯಾಕೆಂದರೆ ಪ್ರಪಂಚದ ಯಾವುದೇ ಪದ್ಧತಿ ಅಥವಾ ಸಂಪ್ರದಾಯವನ್ನು ನೋಡಿದರೆ ಅದು ಒಂದಿಲ್ಲೊಂದು ಕಾಲದಲ್ಲಿ ಹೊಸದಾಗಿಯೇ ಇರುತ್ತದೆ. ಅವೆಲ್ಲ ಅದಮ್‌ಕಾಲದಿಂದ ಇಲ್ಲಿಯವರೆಗೂ ಕಾಲಕ್ರಮದಲ್ಲಿ ಆವಿಷ್ಕಾರಗೊಂಡಿವೆ. ಒಂದುಹೊಸ ವಿಷಯ ಒಂದು ಜನಾಂಗದಲ್ಲಿ ಪ್ರವೇಶ ಪಡೆದಾಗ ಅದು ಜಗತ್ತಿನಾದ್ಯಂತ ಪರಿಚಿತಗೊಳ್ಳುತ್ತದೆ. ಪ್ರತಿಯೊಬ್ಬರೂ ಅದನ್ನು ಅಳವಡಿಸಿಕೊಳ್ಳುತ್ತಾರೆ. ಜ್ಞಾನಿಗಳು ಮತ್ತು ವೈದ್ಯರು ಪ್ರತಿ ವಸ್ತುವಿನ ಒಳ್ಳೆಯ ಇಲ್ಲವೆ ಕೆಟ್ಟ ಗುಣಗಳನ್ನು ನೋಡಿ ನಿರ್ಣಯಿಸಬೇಕು; ಒಳ್ಳೆಯ ಗುಣಗಳು ಒಮ್ಮೆಲೇ ಪ್ರಕಟಗೊಳ್ಳಲಿಕ್ಕಿಲ್ಲ. ಹೀಗೆ ಚೈನಾಬೇರು ಪ್ರಾಚೀನರಿಗೆ ಗೊತ್ತಿರಲಿಲ್ಲ. ಹೊಸದಾಗಿ ಆವಿಷ್ಕಾರಗೊಂಡ ಅದು ಈಗ ಅನೇಕ ಜಾಡ್ಯಗಳಲ್ಲಿ ಪ್ರಯೋಜನಕಾರಿಯಾಗಿದೆ" ನಾನು ಹೀಗೆ ವೈದ್ಯನೊಡನೆ ವೈಚಾರಿಕವಾಗಿ ವಾದಿಸಿದ್ದನ್ನು ಕೇಳಿದ ಸಾಮ್ರಾಟನು ವಿಸ್ಮಿತನಾದನು, ಅತ್ಯಂತ ಸಂತೋಷಗೊಂಡ ಆತನು ನನ್ನನ್ನು ಆಶೀರ್ವದಿಸುತ್ತ ಖಾನ-ಇ-ಅಜಂನಿಗೆ ಹೇಳಿದನು, "ಅಸದನು ಎಷ್ಟೊಂದು ತಿಳುವಳಿಕೆಯಿಂದ ಹೇಳಿದನು, ಕೇಳಿದೆಯಾ? ನಿಜವಾಗಿಯೂ ಬೇರೆ ದೇಶಗಳ ಜ್ಞಾನಿಗಳು ಹೇಳಿದ್ದು ನಮ್ಮ ದೇಶದ ಗ್ರಂಥಗಳಲ್ಲಿ ಹೇಳಲಾಗಿಲ್ಲವೆಂದು ತಿರಸ್ಕರಿಸಬಾರದು; ಇಲ್ಲದಿದ್ದರೆ ನಾವೆಂತು ಪ್ರಗತಿ ಹೊಂದುವೆವು? ವೈದ್ಯನು ಇನ್ನೂ ಏನೋ ಹೆಚ್ಚಿಗೆ ಹೇಳಬೇಕೆಂದಿದ್ದನು- ಅಷ್ಟರಲ್ಲಿಯೇ ಮಹಾಪ್ರಭು ಅವನನ್ನು ತಡೆದು ಪುರೋಹಿತರನ್ನು ಕರೆಕಳಿಸಿದನು, ಪುರೋಹಿತನು ಅವರಲ್ಲಿ ಅನೇಕ ಒಳ್ಳೆಯ ಗುಣಗಳನ್ನು ಕಂಡನು. ಆದರೆ ಯಾರಿಂದಲೂ ಆ ವೈದ್ಯನಿಗೆ ಮನವೊಲಿಸಿ ತಿಳಿಸಲಾಗಲಿಲ್ಲ; ಹೀಗಿದ್ದಾಗ್ಯೂ ಅವನೊಬ್ಬ ಒಳ್ಳೆಯ ವೈದ್ಯನಾಗಿದ್ದನು.

ತಂಬಾಕ ಮತ್ತು ಪೈಪಗಳನ್ನು ದೊಡ್ಡ ಪ್ರಮಾಣದಲ್ಲಿ ನಾನು ತಂದಿದ್ದರಿಂದ ಅದರಲ್ಲಿ ಸ್ವಲ್ಪು ತಂಬಾಕನ್ನು ಮತ್ತು ಚಿಲುಮೆಗಳನ್ನು ಶ್ರೀಮಂತ ಪ್ರತಿನಿಧಿಗಳಿಗೆ ಕಳಿಸಿದೆನು ಮತ್ತು ಉಳಿದವರು ತಮಗಷ್ಟು ಬೇಕೆಂದು ಹೇಳಿ ಕಳಿಸಿದರು. ನಿಜಕ್ಕೂ ಒಬ್ಬರನ್ನೂ ಬಿಡದೇ ಎಲ್ಲರೂ ಸ್ವಲ್ಪಾದರೂ ಬೇಕೆಂದು ಬಯಸಿದರು: ಸೇದುವ ಪದ್ಧತಿಯನ್ನು ಹೀಗೆ ಪರಿಚಯಿಸಿದೆನು. ಅದಾದ ಮೇಲೆ ವ್ಯಾಪಾರಿಗಳು ಅದನ್ನು

ಮಾರಲು ಶುರು ಮಾಡಿದರು. ಹೀಗೆ ಸೇದುವುದು ಶೀಘ್ರವಾಗಿ ಹರಡಿತು. ಆದರೆ ಮಹಾಪ್ರಭು ಇದನ್ನು ರೂಢಿಸಿಗೊಳ್ಳಲಿಲ್ಲ.

ಮಹತ್ವದ ಕೆಲಸದ ಮೇಲೆ ದಕ್ಷಿಣಕ್ಕೆ ಹೋದದ್ದು

ಫರ್ಮಾನುಗಳನ್ನು ದಕ್ಷಿಣದ ಪ್ರಾಂತಗಳಾದ ಬಿಜಾಪುರ, ಗೋಲಕೊಂಡ, ಬೀದರ ಮತ್ತು ಕರ್ನಾಟಕಗಳ ಗವರ್ನರರಿಗೆ ಕಳಿಸಬೇಕೆಂದು ಆಜ್ಞೆ ಹೊರಟಿತು. ಸಾಮ್ರಾಟನು ನನಗೆ ಹೇಳಿದನು. "ಜಮಾಲುದ್ದೀನನನ್ನು ಮತ್ತು ಆದಿಲ್‌ಖಾನನನ್ನು ಮತ್ತು ಆದಿಲ್‌ಖಾನನ ಮಗಳನ್ನು ಹಾಗೆಯೇ ಕಾಣಿಕೆಗಳನ್ನು ಇಲ್ಲಿಗೆ ತರಲು ನೀನು ಅಸಮಾಧಾನದಿಂದ ಈ ಮೊದಲು ಅಲ್ಲಿಗೆ ಹೋಗಿದ್ದಿ. ಅದು ಅವಶ್ಯವಿತ್ತು. ಈಗ ನೀನು ದಕ್ಷಿಣದ ಪ್ರಾಂತಗಳಿಗೆ ರಾಷ್ಟ್ರವೈಭವದಿಂದ ಹೋಗಬೇಕು. ಅವರ ರಾಜ್ಯಗಳಲ್ಲಿರುವ ಉತ್ತಮ ಆನೆಗಳನ್ನು ಮತ್ತು ವಜ್ರರತ್ನಗಳನ್ನು ಸಂಗ್ರಹಿಸಿ ತರಲು ಅವಶ್ಯವಿದ್ದಷ್ಟು ದಿನಗಳವರೆಗೆ ಪ್ರತಿಯೊಂದು ಸ್ಥಳದಲ್ಲಿ ನಿಲ್ಲಬೇಕು. ಅವರು ಕೊಡುವ ಹಣವನ್ನು ನೀನು ಇಟ್ಟುಕೊ. ಅವರ ಅಪರೂಪದ ಆನೆಗಳು ಮತ್ತು ವಜ್ರರತ್ನಗಳನ್ನು ಬಿಟ್ಟು ನನಗೇನೂ ಬೇಕಿಲ್ಲ. ಸರ್ಕಾರಕ್ಕೆ ಈ ಎಲ್ಲವುಗಳನ್ನು ಪಡೆದುಕೊಂಡು ಬರಬೇಕು. ಉಳಿದೆಲ್ಲವುಗಳನ್ನು ನಾನು ನಿನಗೆ ಕೊಡುವೆ. ದಕ್ಷಿಣ ಭಾರತದಲ್ಲಿ ಒಂದೇ ಒಂದು ಶ್ರೇಷ್ಠ ಆನೆ ಮತ್ತು ವಿರಳವಾದ ರತನ ನಿನ್ನ ಕೈಗೆ ಸಿಗದೇ ಹೋಗುವವರೆಗೆ ನೀನು ನಿನ್ನ ಪ್ರಯತ್ನವನ್ನು ಸಡಿಲಿಸಬಾರದು." ಸ್ವಲ್ಪದರಲ್ಲಿ ಹೇಳಬೇಕೆಂದರೆ, ಈ ಉದ್ದೇಶಗಳಿಗಾಗಿ ನನ್ನನ್ನು ಕಳಿಸಲಾಯ್ತು. ನನ್ನನ್ನು ಅಲ್ಲಿಗೆ ಕಳಿಸಬೇಕೆಂದು ನೇಮಿಸಿದ ನಂತರ ಸುಮಾರು ಎರಡು ತಿಂಗಳು ಗತಿಸಿದ ಮೇಲೆ ನನ್ನ ಮಹಾಪ್ರಭು ಮತ್ತೆ ಹೇಳಿದನು, "ಹಣದ ಸಲುವಾಗಿ ಚಿಂತಿಸಬೇಡ. ಆ ಎಲ್ಲ ದೇಶಗಳು ನಿನ್ನ ಅಧೀನದಲ್ಲಿವೆ. ನಿನ್ನ ಸುಪರ್ದಿಗೆ ಬರುತ್ತವೆ. "ನನ್ನ ಸಿದ್ಧತೆಗಳನ್ನು ಮಾಡಿಕೊಂಡೆನು. ನಾನು ಕೇವಲ ೨೦೦ ಸೈನಿಕರ ಪ್ರಮುಖನಾಗಿದ್ದರೂ ಇರಾಕ್, ಖುರಾಸನ್ ಮತ್ತು ತುರ್ಕಸ್ತಾನದ ೬೦೦ ಕುದುರೆ ಸವಾರರನ್ನು ಆರಿಸಿಕೊಂಡೆನು; ಅವರೆಲ್ಲನೇಕರು ಶ್ರೇಷ್ಠ ಹುದ್ದೆ ಹೊಂದಿದ್ದರು. ಪ್ರತಿಯೊಬ್ಬನಿಗೂ ನಾನು ಒಳ್ಳೆಯ ಒಂದು ಕುದುರೆ ಮತ್ತು ಮೂರು ನಾಕು ತಿಂಗಳ ಮುಂಚಿತ ಪಗಾರನ್ನು ಕೊಟ್ಟೆನು. ೨೦೦೦ ಅಥವಾ ೩೦೦೦ ಸೇನೆ ಹೊಂದಿದ್ದು ಪ್ರಮುಖರು ಕೂಡ ನನ್ನ ಸೈನ್ಯದಷ್ಟು ಸುಸಜ್ಜಿತ ವ್ಯವಸ್ಥೆ ಹೊಂದಿರಲಿಲ್ಲ. ಇಸ್ಫಹಾನದ ಶಾಹಾ ಅಲಿ ಎಂಬ ಬಹಳ ಚೆನ್ನಾಗಿ ಬರೆಯುವ ಬರಹಗಾರನನ್ನು ನನ್ನ ಬಕ್ಷಿಯೆಂದು ನೇಮಿಸಿಕೊಂಡೆನು, ೧೦೦ ತುಪಾಕಿಧಾರಿಗಳನ್ನು ತೆಗೆದುಕೊಂಡೆನು. ಹಾಗೆಯೆ ೧೦೦ ಬೆಂಗಾವಲಿಗರನ್ನು, ಸೇವಕರನ್ನು ಮತ್ತು ೧೦೦ ಬಿಲ್ಲುಗಾರರನ್ನು ನೇಮಿಸಿಕೊಂಡೆನು. ಸಂಕ್ಷಿಪ್ತದಲ್ಲಿ ಹೇಳಬೇಕೆಂದರೆ, ನಾನು ಸಕಲ ಸಿದ್ಧತೆಗಳನ್ನು ಮಾಡಿಕೊಂಡೆನು.

ಮಹಾಪ್ರಭುವಿನ ಮೃತ್ಯು ಅದಕ್ಕೆ ಸಂಬಂಧಿಸಿದ ವಿಷಯಗಳು

ನಾನು ಅಸದನು ದುಷ್ಟ ವಿಧಿಯ ಅರಣ್ಯದಲ್ಲಿ ಸುತ್ತಾಡುತ್ತಿದ್ದಾಗ, ದಕ್ಷಿಣದ ನಾಲ್ಕು ರಾಜ್ಯಗಳಾದ ಬಿಜಾಪುರ, ಗೋಲಕೊಂಡ, ಬೀದರ ಮತ್ತು ಕರ್ನಾಟಕ್‌ಗಳಿಗೆ ರಾಯಭಾರಿಯೆಂದು ಹೊರಟಾಗ ಅಪ್ರತಿಮ ಸಾಮ್ರಾಟನು ಈ ಜೀವನದಿಂದ ನಿರ್ಗಮಿಸಿದಾಗ ಉಪಸ್ಥಿತನಿದ್ದಿಲ್ಲ. ನನ್ನ ರಾಯಭಾರತ್ವದ ಪ್ರಶ್ನೆಯು ತಳಮಳದಲ್ಲಿದ್ದಾಗ ಚಂಚಲ ಮತ್ತು ಗಿರಾಣಬಾರ ಎಂಬೆರಡು ಆನೆಗಳ ಮಧ್ಯದ ದ್ವಂದ ಹೋರಾಟದ ಯೋಜನೆಯನ್ನು ಹಾಕಿದ್ದನು. ಈಗ ಚಿರಶಾಂತಿಯಲ್ಲಿರುವ ಆ ಮಹಾದೊರೆ ಆನೆಗಾಳಗ ನೋಡಿದ ಮೇಲೆಯೇ ಹೊರಡಲು ಆಜ್ಞಾಪಿಸಿದ್ದನು. ಆದರೆ ದೈವನಿರ್ಣಯವೇ ಬೇರೆಯಾಗಿತ್ತು. ನನ್ನ ನಿರ್ಗಮನದ ಬಳಿಕ ಅದು ಘಟಿಸಿತು. ಆ ಆನೆಗಾಳಗದ ವಿಷಯಕ್ಕೆ ಸಾಮ್ರಾಟನಿಗೆ ಅತೀವಕ್ರೋಧವಿತ್ತು. ಅದಕ್ಕೆ ಇದ್ದ ಕಾರಣವನ್ನು ನಂತರ ಹೇಳುವೆ, ಅದಕ್ಕಾಗಿ ನನಗೇನೂ ವ್ಯಥೆಯಿಲ್ಲ.

ನಾನು ಆಗ್ರಾದಿಂದ ತೆರಳಿದ ಬಳಿಕ ಮಹಾಪ್ರಭುವಿನ ಆರೋಗ್ಯದಲ್ಲಿ ತುಸು ಏರುಪೇರಾಯಿತು. ನಂತರ ಕೆಲಸಮಯದಲ್ಲಿಯೇ ಕುಸಿದು ಹೋಯಿತು. ಈ ಸ್ಥಿತಿಯಲ್ಲಿ ಸಾಮ್ರಾಟನಿರುವಾಗ ರಾಜಕುಮಾರನ ಗಿರಾನಬಾರ ಎಂಬ ಹೆಸರಿನ ಆನೆಯೊಡನೆ ಚಂಚಲ ಈ ಆನೆಯ ಕಾಳಗವೇರ್ಪಟ್ಟಿತು. ಈ ಆನೆಗಾಳಗ ನಡೆದಾಗ ರಾಜಕುಮಾರ ಸಲೀಮ ಮತ್ತು ಸುಲ್ತಾನ ಖುಸ್ರು ಇವರಿಬ್ಬರ ಸೇವಕರು ಸಭ್ಯತೆಯ ಸರಹದ್ದನ್ನು ಮೀರಿ ಕ್ರೋಧದಿಂದ ಬೈದಾಡಿದರು. ಸಾಮ್ರಾಟನಿಗೆ ಇದು ತಿಳಿದಾಗ ಆತನು ಬಹಳ ಕ್ರುದ್ಧನಾಗಿ, ಸಂಕಟಪಡುತ್ತ ತ್ರಸ್ತಗೊಂಡನು. ಹಾಗೆ ಅವನ ಚಿತ್ತ ಪ್ರಕ್ಷುಬ್ಧವಾದದ್ದಕ್ಕೆ ದೈಹಿಕ ಅಸ್ವಾಸ್ಥ್ಯ ವಿಪರೀತವಾಯಿತು; ಆ ಕಾಲದಲ್ಲಿ ಸುಪ್ರಸಿದ್ಧ ಮತ್ತು ಪರಿಣಿತರೆನಿಸಿದ್ದ ರಾಜವೈದ್ಯನಿಗೆ ಏನೂ ಮಾಡಲಾಗಲಿಲ್ಲ. ಸಾಮ್ರಾಟನು ಹೀಗೆ ಹಾಸಿಗೆ ಹಿಡಿದಾಗ ವ್ಯವಹಾರ ಭಾರವೆಲ್ಲ ಖಾನಿ-ಇ-ಅಜಂನ ಮೇಲೆ ಬಿತ್ತು. ಕೀರ್ತಿವಂತ ಸಾಮ್ರಾಟನು ಸಾವಿನೆಡೆಗೆ ಸಮೀಪಿಸುತ್ತಿದ್ದಾನೆಯೆಂದು ಸ್ಪಷ್ಟವೆನಿಸಿತು. ಆಗ ಪ್ರಮುಖ ಸರದಾರರಲ್ಲಿ ಒಬ್ಬನಾಗಿದ್ದ ರಾಜಾ ಮಾನಸಿಂಗನೊಡನೆ ಅಜಂ ಮಂತ್ರಾಲೋಚನೆ ಮಾಡಿ ಸುಲ್ತಾನ ಖುಸ್ರುನನ್ನು ಸಾಮ್ರಾಟನನ್ನಾಗಿ ಮಾಡಲು ಇಬ್ಬರೂ ನಿರ್ಧರಿಸಿದರು. ಅವರಿಬ್ಬರೂ ವ್ಯವಹಾರತಜ್ಞರೂ, ಬಲಶಾಲಿಗಳೂ ಆಗಿದ್ದರು. ಪ್ರತಿದಿನದಂತೆ ರಾಜಕುಮಾರ ಸಲೀಮನು ರಾಜಾಸ್ಥಾನಕ್ಕೆ ಆಗಮಿಸಿ ನಮನ ಸಲ್ಲಿಸಲು ಬಂದಾಗ ಅವನನ್ನು ಬಂಧಿಸಲು ನಿರ್ಣಯಿಸಿದರು; ತಮ್ಮ ಮನದ ಸಹಜ ಸ್ವಭಾವವನ್ನು ಹೊರಗೆಡಹಿದರು. ಸೂರ್ಯನ ಮೇಲೆ ಕೆಸರೆರಚಲು ಸಾಧ್ಯವಿಲ್ಲ ಮತ್ತು ವಿಧಿಯ ಲೇಖನಿಯ ಕುರುಹುಗಳನ್ನು ಮೋಸದ ಕಿರುಚೂರಿಯೆಂದು ಅಳಿಸಲು ಆಗಲಾರದು ಎಂದು ಅವರಿಗೆ ತಿಳಿಯಲಿಲ್ಲ. ಯಾವ ವ್ಯಕ್ತಿಯನ್ನು ಅಲ್ಲಾಹನ ಕೈ ಎತ್ತಿ ಹಿಡಿವುದೋ ಅವನು ಅಸಹಾಯಕನಾಗಿದ್ದರೂ, ಎಲ್ಲ ಕೆಡಕಿನಿಂದ ಸುರಕ್ಷಿತವಾಗಿ ಇರುತ್ತಾನೆ.

ಮರುದಿನ ಅಲ್ಲಾಹನ ಆಯ್ಕೆಗೆ ಪಾತ್ರನಾದ ರಾಜಕುಮಾರ ಸಲೀಮನು, ಶತ್ರುಗಳು ಹಾಕಿದ ದ್ರೋಹ ತಂತ್ರದ ಎಳ್ಳಷ್ಟೂ ಅರಿವಿಲ್ಲದೆ, ರೂಢಿಯಂತೆ ತನ್ನ ನಮನ ಸಲ್ಲಿಸಲು ರಾಜಾಸ್ಥಾನಕ್ಕೆ ಹೋದನು. ತನ್ನ ಸೇವಕರೊಡನೆ ನಾವೆ ಏರಿದನು. ರಾಜಗೋಪುರದ ಮಹಾದ್ವಾರದೆಡೆಗೆ ಹೊರಟಿತು. ಅವರು ಇನ್ನೇನು ನಾವೆಯಿಂದ ಇಳಿವವರಿದ್ದರು. ಆಗ ಕಜ್ವೀನ್‌ದ ಮೀರ್ ಜಿಯಾವುಲ್ ಮುಲ್ಕ ಉದ್ವೇಗದಿಂದ ಓಡುತ್ತ ಬಂದು ನಾವೆಯಲ್ಲಿ ಜಿಗಿದನು. ಸಾಮ್ರಾಟ ಅಕ್ಬರ್‌ನ ಅಸಹಾಯಕ ಸ್ಥಿತಿಯನ್ನು ಕುರಿತು ಮತ್ತು ಆ ದುಷ್ಟ ಜನರ ಸ್ನೇಹ ತಂತ್ರ ಹಾಗೂ ವಿಶ್ವಾಸಘಾತಕತನವನ್ನು ಕುರಿತು ಸುದ್ದಿ ಅರುಹಿದನು. ನಾವೆ ಮರಳಿತು. ಕಣ್ಣೀರು ಸುರಿಸುತ್ತ ದುಃಖತಪ್ತ ಹೃದಯದಿಂದ ರಾಜಕುಲ ಶ್ರೇಷ್ಠನು ತನ್ನ ಸ್ವಂತ ನಿವಾಸಕ್ಕೆ ಮರಳಿದನು. ಆ ವಿಶ್ವಾಸಿಕ ಸ್ನೇಹಿತ ಮತ್ತು ಕಳಕಳಿಯ ಹಿತೈಷಿಯ ಪ್ರಯತ್ನದಿಂದಾಗಿ ಆ ದ್ರೋಹಿ ಶತ್ರುಗಳು ಬಿಟ್ಟ ಬಾಣವು ಗುರಿತಪ್ಪಿತು.

ಆ ಪಾಪಿಗಳು ಹೂಡಿದ್ದ ಹೊಂಚು ಬಯಲಾದ ಮೇಲೆ, ಗಗನೆತ್ತರಕ್ಕೆ ಹಾರಾಡುವ ಫೀನಿಕ್ಸ್ ಆ ವಂಚಕರ ಬಲಿಯಿಂದ ಪಾರಾಗಿಹೋದ ಬಳಿಕ, ಅವರ ದುಷ್ಟ ವಾಂಛೆಗಳನ್ನು ಮುಚ್ಚಿದ್ದ ಪರದೆ ಕತ್ತರಿಸಿ ಹೋದ ಬಳಿಕ ತಮ್ಮ ಮೋಸದ ಸೋಗನ್ನು ಅವರು ತೆಗೆದೊಗೆಯಲೇಬೇಕಾಯಿತು.

ಆಗಿನ್ನೂ ಸಾಮ್ರಾಟನ ದೇಹದಲ್ಲಿ ಪ್ರಾಣವಿತ್ತು. ಅವನ ಎಲ್ಲ ಸೇವಕರು ಮತ್ತು ಅಧಿಕಾರಿಗಳು ಬಹು ದುಃಖಾವಿಷ್ಟರಾಗಿ ದಿಕ್ಕುಗಾಣದೆ ಸಂದರ್ಶನ ಭವನದಲ್ಲಿ ಕುಳಿತಿದ್ದರು. ಖಾನೆ ಅಜಂ ಮತ್ತು ರಾಜಾ ಮಾನಸಿಂಘ ಕೆಳಗೆ ಕುಳಿತು ಎಲ್ಲ ಸರದಾರರನ್ನು ಕರೆದರು ಮತ್ತು ಅವರೊಡನೆ ಸಮಾಲೋಚನೆಗೆ ತೊಡಗಿದರು. ನಂತರ ನುಡಿದಿದ್ದು ಹೀಗೆ "ಹೀಗೆ ಉನ್ನತಸ್ಥಾನದ ಬಲಶಾಲಿಯಾದ ರಾಜಕುಮಾರ ಸುಲ್ತಾನ ಸಲೀಮನ ನಡತೆ ಎಲ್ಲರಿಗೂ ತಿಳಿದದ್ದೇ: ಸಾಮ್ರಾಟನಿಗೆ ಅವನ ವಿಷಯಕ್ಕಿರುವ ಭಾವನೆಗಳು ಅಸಂತೋಷದಿಂದ ಕೂಡಿದ್ದಾಗಿವೆ. ಅವನು ತನ್ನ ತರುವಾಯ ಪಟ್ಟಕ್ಕೆ ಬರುವ ಇಚ್ಛೆ ಸಾಮ್ರಾಟನಿಗಿಲ್ಲ. ನಾವೆಲ್ಲರೂ ಸುಲ್ತಾನ ಖುಸ್ರೋನನ್ನು ಪಟ್ಟಗಟ್ಟಲೇಬೇಕು." ಅವನು ಹೀಗೆಂದಾಗ, ಮಹಾನ್ ಸರದಾರರಲ್ಲೊಬ್ಬನಾದ, ರಾಜಮನೆತನದ ಸಂಬಂಧಿಯಾದ, ಪ್ರಾಚೀನ ಪ್ರಸಿದ್ಧ ಮುಘಲ ಕುಟುಂಬದ ಸಂತಾನನಾಗಿದ್ದ ಸೈಯಿದ ಖಾನನು ಜೋರಾಗಿ ಒದರಿದನು "ನೀವೇನು ಹೇಳುತ್ತಿದ್ದೀರಿ? ಸಲೀಮ ಶಾಹನಂತಹ ರಾಜಕುಮಾರನಿರಲಿಕ್ಕೆ ಅವನ ಮಗನನ್ನು ಪಟ್ಟಕ್ಕೆ ಕೂಡಿಸುವುದು! ಛಗತಾಯಿ ಟಾಟಾರರ ಕಾನೂನು ಮತ್ತು ಸಂಪ್ರದಾಯಗಳಿಗೆ ವಿರುದ್ಧವಾದ ವಿಚಾರ. ಇದು ಎಂದಿಗೂ ಆಗದು." 'ಆಗ ಅಲ್ಲಿದ್ದ ವ್ಯವಹಾರತಜ್ಞ ಹಾಗೂ ಬಹುದೊಡ್ಡ ಪ್ರಮುಖನೂ ಆಗಿದ್ದ ಮಲಿಕ ಖೈರ ಮತ್ತು ಇದೇ ಅಭಿಪ್ರಾಯದ ಇನ್ನುಳಿದವರೊಂದಿಗೆ

ಸೈಯಿದಖಾನನು ಎದ್ದುಹೋದನು. ಈ ಎಲ್ಲ ಕುತಂತ್ರ ಹೆಣೆದ ಖಾನ-ಇ- ಅಜಂ ತನ್ನ ರೋಷವನ್ನು ಅದುಮಿಟ್ಟುಕೊಂಡು ಏನು ಮಾತಾಡದೇ ಸುಮ್ಮನಿದ್ದನು. ಸಭೆಯು ಚದುರಿತು, ಎಲ್ಲರೂ ತಮ್ಮ ತಮ್ಮ ಮನೆಗೆ ಹೋದರು. ರಾಜಾ ರಾಮದಾಸ ಕಛ್ವಾ ತನ್ನ ಸಂಗಡಿಗರೊಂದಿಗೆ ಕೋಶಾಗರ ರಕ್ಷಿಸಲು ತತ್‌ಕ್ಷಣವೇ ಹೊರಟುಹೋದನು; ಮುರ್ತಾಜಾ ಖಾನನು ಕೋಟೆಯನ್ನು ಬಿಟ್ಟು ತನ್ನ ನಿವಾಸಕ್ಕೆ ಬಂದು, ಸೈಯಿದ ಬಾರಾಹ ಮತ್ತು ತನ್ನ ಅನುಯಾಯಿಗಳನ್ನು ಕಲೆಹಾಕಲು ಕ್ರಮಗಳನ್ನು ತೆಗೆದುಕೊಂಡನು. ಅಷ್ಟರಲ್ಲಿ ಮಿರ್ಜಾ ಶರೀಫ ಮತ್ತು ಮುತಾಮದ್ ಖಾನ ಇವರು ಆಗಮಿಸಿ ಅವನು ಏನು ಮಾಡಬೇಕೆಂದಿದ್ದಾನೆ ಎಂದು ಕೇಳಿದರು. ಅವರು ಸ್ನೇಹಿತರಾಗಿದ್ದರಿಂದ ಮುರ್ತಾಜಾಖಾನನು ಹೇಳಿದನು. "ನಾನು ರಾಜಕುಮಾರನನ್ನು ಕೂಡಿಕೊಳ್ಳುವೆ." ಮುತಾಮುದ್‌ಖಾನನು ತಾನೂ ಹಾಗೇ ಮಾಡುವುದಾಗಿ ಹೇಳಿದನು, ಮುರ್ತಾಜಖಾನನು ಮೊದಲು ರಾಜಕುಮಾರನ ಬಳಿಗೆ ಹೋಗಲು ಹೇಳಿದರು ಮತ್ತು ತಾನೂ ತನ್ನವರನ್ನು ಕರೆದುಕೊಂಡು ಸದ್ಯದಲ್ಲಿ ಬರುವುದಾಗಿ ತಿಳಿಸಲು ಹೇಳಿದನು. ಹಾಗೆಯೆ ರಾಜಕುಮಾರನಲ್ಲಿಗೆ ತಾನು ಹೋದನು.

ರಾಜಕುಮಾರನು ಮೀರ ಝಿಯಾನು ಹೇಳಿದಂತೆ ತನ್ನ ಅರಮನೆಗೆ ಹೋದೊಡನೆಯೇ ಅವನ ಸುತ್ತಲಿದ್ದ ಎಲ್ಲ ಮೂರ್ಖ ಜನರು ಅವನನ್ನು ಎಚ್ಚರಿಸುತ್ತ ಹೇಳಿದರು. "ಪ್ರಭುವೆ ಹೀಗೇಕೆ ನಿಷ್ಕಾಳಜಿಯಿಂದ ಇಲ್ಲಿ ಕುಳಿತಿದ್ದೀರಿ? ನಿಮ್ಮ ಶತ್ರುಗಳು ತಮ್ಮ ಕೆಲಸವನ್ನು ಪೂರ್ತಿಗೊಳಿಸಿದ್ದಾರೆ. ಸುಲ್ತಾನ ಖುಸ್ರುನನ್ನು ಸಿಂಹಾಸನದ ಮೇಲೆ ಕೂಡ್ರಿಸಿದ್ದಾರೆ. ಈ ನಿಮ್ಮ ಮನೆಯ ಮೇಲೆಯೇ ತಮ್ಮ ತುಪಾಕಿಗಳನ್ನು ಗುರಿಯಾಗಿಸುವೆವು ಎಂದು ಅವರೆಲ್ಲ ಘೋಷಿಸುತ್ತಾರೆ. "ಇವರ ದುಷ್ಟ ಸಲಹೆಗಳು ರಾಜಕುಮಾರನ ಮೇಲೆ ಪರಿಣಾಮ ಬೀರುವುದರಲ್ಲಿದ್ದವು. ಅವನೂ ನಾವೆಗಳನ್ನು ತರಿಸಿ ತನ್ನನ್ನು ಉಳಿಸಿಕೊಳ್ಳಲು ಓಡಿಹೋಗುವುದರಲ್ಲಿದ್ದನು. ಅಷ್ಟರಲ್ಲಿ ತನ್ನ ಧೈರ್ಯಕ್ಕೆ ಹೆಸರಾದ, ಬೆಂಬಲಿಗರ ದೊಡ್ಡ ಪಡೆಹೊಂದಿದ, ರಾಜಕುಮಾರನ ಅತ್ಯುತ್ತಮ ಸೇವಕರಲ್ಲೊಬ್ಬನಾದ ಶೇಖ ರುಕೂದ ದಿನ್ ರೋಹಿಲ್ಲಾನು ಇವನಲ್ಲಿಗೆ (ರಾಜಕುಮಾರನಲ್ಲಿಗೆ)ಬಂದು ಉದ್ವಿಗ್ನಗೊಳ್ಳದೆ ಏನಾಗುವುದು ಎನ್ನುವುದನ್ನು ಎರಡು ಗಂಟೆ ಕಾಯ್ದುನೋಡಿರಿ ಎಂದು ಪ್ರಾರ್ಥಿಸಿದನು. ಈ ವೀರನ ಸಲಹೆಯನ್ನು ಮಗ್ನನಾಗಿ ರಾಜಕುಮಾರನು ಕೇಳುತ್ತ ಇರುವಾಗ ಒಮ್ಮೆಲೇ ಅಲ್ಲಿಗೆ ಮಿರ್ಜಾ ಶರೀಫನು ಬಂದು ಹೇಗೆ ಶತ್ರುಗಳ ಗುಂಪು ಒಡೆದು ಹೋಗಿದೆ ಮತ್ತು ಮುರ್ತಾಜಾಖಾನನು ಅವನನ್ನು ಕೂಡಿಕೊಳ್ಳಲು ಬರುತ್ತಿದ್ದಾನೆಯೆನ್ನುವುದನ್ನು ಹೇಳಿದರು. ರಾಜಕುಮಾರನಿಗೆ ಬಹಳೇ ಸಂತೋಷವಾಯಿತು. ತನ್ನ ಜನರನ್ನು ಹುರಿದುಂಬಿಸಲು ತೊಡಗಿದನು. ಆಗ ಅಲ್ಲಿಗೆ ಫರಾಬೇಗ ಆಗಮಿಸಿ ನಮಸ್ಕರಿಸಿದನು

ಮತ್ತು ಮೀರ ಮುರ್ತಾಜಾ ಖಾನನು ದೊಡ್ಡ ಸಂಖ್ಯೆಯಲ್ಲಿದ್ದ ತನ್ನ ಸೇವಕನು ಮತ್ತು ಅನೇಕ ಸೈಯಿದರೊಡನೆ ಬಂದು ನಮಸ್ಕರಿಸಿ ನಗಾರಿ ಬಾರಿಸುತ್ತ ವಿಜಯದ ದಿನವನ್ನು ಆಚರಿಸತೊಡಗಿದನು. ಸಾಮ್ರಾಟನು ಮರಣಶಯ್ಯೆಯಲ್ಲಿ ಇರುವಾಗ ಆ ಪ್ರಕಾರದ ಸಂಗೀತ–ಸಂಭ್ರಮ ಬೇಡೆಂದು ಸಲೀಮನು ತಡೆದನು. ಆದರೆ ಮುರ್ತಾಜಾಖಾನನಿಗೆ ವಿಶೇಷವಾದ ಮರ್ಯಾದಾ ಪೋಷಕ ಮತ್ತು ರತ್ನಖಚಿತ ಕಿರುಗತ್ತಿಯನ್ನು ಕೊಟ್ಟು ಸನ್ಮಾನ ಮಾಡಿದನು. ಜನರು ಒಳನುಗ್ಗತೊಡಗಿದರು. ಪ್ರತಿಯೊಬ್ಬರೂ ಮೊದಲು ಆಗಮಿಸಬೇಕೆನ್ನುವವರೇ. ಕೊನೆಗೆ ಖಾನಾನಿ ಅಜಂ ಲಜ್ಜೆಯಿಂದ ಒಳಗೆ ಬಂದು ತನ್ನ ನಮನಗಳಮ್ನು ಸಲ್ಲಿಸಿದನು. ರಾಜಕುಮಾರನು ಅವನ ದುರ್ನಡತೆಯನ್ನು ಎಳ್ಳಷ್ಟೂ ಗಮನಕ್ಕೆ ತಂದುಕೊಳ್ಳದೆ ಅವನ ಮೇಲೆ ರಾಜಕೃಪೆಯನ್ನೆರೆದನು.

ಅಲ್ಲಿಯ ವಿದ್ಯಮಾನಗಳಲ್ಲಿ ಬದಲಾವಣೆ ಮುಖವನ್ನು ಕಂಡ ರಾಜಾ ಮಾನಸಿಂಗನು ಸುಲ್ತಾನ ಖುಸ್ರುವನ್ನು ತನ್ನ ಅರಮನೆಗೆ ಕರೆದುಕೊಂಡು ಹೋದನು; ಮರುದಿನ ಬಂಗಾಲಕ್ಕೆ ಓಡಿಹೋಗಲು ನಾವೆಗಳನ್ನು ಅಣಿಗೊಳಿಸಿದನು. ಘಟನೆಗಳು ಸಂಭವಿಸುವುದರಿಂದ ಉದ್ಭವಿಸಿದ ತಲ್ಲಣದಿಂದ ಮುಕ್ತಗೊಂಡ ರಾಜಕುಮಾರನು ಶ್ರೇಷ್ಠರಾದ ಸರ್ದಾರರೊಡನೆ, ಯಾವ ಭಯವೂ ಇಲ್ಲದೆ, ಮೀರ ಮುರ್ತಾಜಾಖಾನನ ಮುಂದಾಳತ್ವದಲ್ಲಿ ಎಲ್ಲ ಸರದಾರರು ಇರಲು, ಕೋಟೆಯತ್ತ ಸಾಗಿದನು. ಕೊನೆಕ್ಷಣದಲ್ಲಿರುವ ಸಾಮ್ರಾಟನ ಹತ್ತಿರ ಹೋದನು. ಆ ಕೀರ್ತಿವಂತ ಮಗನನ್ನು ನೋಡುವುದಕ್ಕಾಗಿ ಕಾಯುತ್ತಿರುವೆನೊ ಎಂಬಂತೆ ಇನ್ನೂ ಉಸಿರಾಡುತ್ತಿದ್ದನು ಆ ಸಾಮ್ರಾಟ. ಆ ಬಹು ಸುದೈವಿ ಆಗಮಿಸುತ್ತಲೇ ತಂದೆಯ ಪಾದಗಳಿಗೆ ಬಗ್ಗಿ ನಮಸ್ಕರಿಸಿದನು; ಸಾಮ್ರಾಟನ ಕೊನೆಯ ಸಂಕಟ ಕ್ಷಣಗಳಿದ್ದದ್ದನ್ನು ಕಂಡನು. ಸಾವ್ರಾಟನು ಮತ್ತೊಮ್ಮೆ ಕಣ್ತೆರೆದನು. ರಾಜಕುಮಾರನಿಗೆ ಪೇಟಾ ಮತ್ತು ರಾಜಪೋಷಾಕದಿಂದ ಶೃಂಗರಿಸಿ ಅವನ ಟೊಂಕಕ್ಕೆ ಕಿರುಗತ್ತಿಯನ್ನು ಇಡಲು ಸನ್ನೆ ಮಾಡಿದನು. ಸೇವಕರೆಲ್ಲ ರಾಜಕುಮಾರನೆದುರು ಸಾಷ್ಟಾಂಗವೆರಗಿ ಮರ್ಯಾದೆ ಸಲ್ಲಿಸಿದರು; ಅದೇ ಸಮಯದಲ್ಲಿ ಯಾವನ ಪಾಪಗಳೆಲ್ಲ ಕ್ಷಮಿಸಲ್ಪಟ್ಟಿದ್ದವೊ ಆ ಸಾಮ್ರಾಟನು ಬಗ್ಗಿ ವಂದನೆ ಮಾಡಿದನು. ತನ್ನ ಜೀವನವನ್ನು ಕೊನೆಗೊಳಿಸಿದನು. ಎಲ್ಲೆಡೆಗೂ ಜೋರಾದ ಗೋಳು ಪುಟಿದೆದ್ದಿತು; ಮನುಷ್ಯಲೋಕದಿಂದ ಚೀರಾಟ, ಭೋರಾಟ ಮೇಲೆದ್ದು ಮುಗಿಲಮುಟ್ಟಿತು. ದೇವಲೋಕದ ಪಕ್ಕ ಬೀಸುತ್ತ ಹಾರಾಡುವ ಮುಗ್ಧ ಶಿಸುಗಳು ನುಡಿಯುತ್ತಲಿದ್ದರು. "ಅವನನ್ನು ದೇವ ಸೃಷ್ಟಿಸಿದ್ದನು. ಈಗ ಅವನು ದೇವನೆಡೆಗೆ ತೆರಳಿದನು."

"ಮಹಾದೊರೆ ಅಕ್ಬರನು ಅಸುನೀಗಲು
ಭುವಿಯಿಂದ ಸುರಲೋಕಕೇರಿತಳಲು"

ಆ ದುಃಖದ ಘಟನೆಯ ನಂತರ, ಕರುಣಾಳು ಸಾಮ್ರಾಟ ಜಹಾಂಗೀರನು ತನ್ನ ವಿಶ್ವಾಸಿಕ ಸೇವಕರಿಗೆ ಮತ್ತು ನಂಬಿಕೆಯ ಸ್ನೇಹಿತರಿಗೆ ಮಡಿದ ಸಾಮ್ರಾಟನ ಉತ್ತರಕ್ರಿಯೆಗಳನ್ನು ವಿಧಿಪೂರ್ವಕವಾಗಿ ಅವನ ಅಂತಸ್ತಿಗೆ ಯೋಗ್ಯವಾದ ರೀತಿಯಲ್ಲಿ ನೆರವೇರಿಸಲು ಆಜ್ಞಾಪಿಸಿದನು. ಧಾರ್ಮಿಕ ಮತ್ತು ಪಾರಂಪರಿಕ ವಿಧಿವಿಧಾನಗಳು ಮುಗಿದಮೇಲೆ ಮತ್ತು ರಾಜ ಕಳೇಬರವನ್ನು ಸಕಲ ರಾಜ್ಯಮಯಾದೆಯಲ್ಲಿಟ್ಟು ಸಿದ್ಧತೆ ಮಾಡಿದಾಗ ಸಾಮ್ರಾಟನು ವೈಭವಪೂರ್ಣವಾಗಿ ಆದರೆ ಕಣ್ಣೀರು ಸುರಿಸುತ್ತಾ ಭಾರಹೃದಯದಿಂದ ಶವಪೆಟ್ಟಿಗೆಯ ಕಾಲನ್ನೆತ್ತಿ ತನ್ನ ಹೆಗಲಿಗಿಟ್ಟುಕೊಂಡನು. ಸಾರ್ವಜನಿಕ ಸ್ವಾಗತ ಭವನದ ದ್ವಾರದವರೆಗೆ ಹೊತ್ತುಕೊಂಡೊಯ್ದನು; ಅಲ್ಲಿಂದ ದೊಡ್ಡ ದೊಡ್ಡ ಸರದಾರರು, ಮರ್ಯಾದೆ ಪಡೆದ ಕಾತರದಿಂದ, ಬೇಗ ಬೇಗನೆ ಒಬ್ಬೊಬ್ಬರಾಗಿ ಕೋಟೆಯ ಬಾಗಿಲವರೆಗೆ ಆ ಮೃತ ಮಹಾರಾಜನನ್ನು ಹೊತ್ತುಕೊಂಡು ಹೋದರು. ಅಲ್ಲಿಂದ ಸರದಾರರು, ಶ್ರೀಮಂತರು, ಮಂತ್ರಿಗಳು, ಆಸ್ಥಾನಿಕರು, ಇಮಾಮರು ಮತ್ತು ಸೇವಕರು, ಸೈನಿಕರು ಎಲ್ಲರೂ ತೆರೆದ ತಲೆಯಿಂದ, ಬರಿಗಾಲಿನಿಂದ ಶವಪೆಟ್ಟಿಗೆಯನ್ನು ಹಿಂಬಾಲಿಸಿದರು.

ಸಾಮ್ರಾಟ ಜಹಾಂಗೀರನು ಈ ಅವಶ್ಯವಾದ ವಿಧಿಕರ್ಮಗಳನ್ನು ಮುಗಿಸಿದ ಮೇಲೆ ರಾಜಾರಾಮದಾಸನಿಗೆ ಕೋಟೆಯನ್ನು ಮತ್ತು ಖಜಾನೆಯನ್ನು ಒಪ್ಪಿಸಿದನು; ಅವನನ್ನು ಶ್ಲಾಘಿಸಿದನಲ್ಲದೆ ಅವನನ್ನು ಸಮಾಧಾನಗೊಳಿಸಿದನು. ಕೋಟೆಯನ್ನು ಬಿಟ್ಟು ಬಾದಶಹನು ತನ್ನ ಅರಮನೆಗೆ ಹೋದನು. ರಾಜಾ ಮಾನಸಿಂಘನು ಸುಲ್ತಾನ ಖುಸ್ರುನನ್ನು ಕರೆದುಕೊಂಡು ತನ್ನ ಸೇವಕರು ಹಾಗೂ ಸೈನಿಕರೊಡನೆ ಬಂಗಾಲಕ್ಕೆ ಹೋಗಲು ನಾವೆಗಳಲ್ಲಿ ಕುಳಿತು ಸಾಗುತ್ತಿದ್ದಾನೆಂಬ ಸುದ್ದಿ ಬಂದಿತು. ಇದರಿಂದ ಸಾಮ್ರಾಟನ ಹೃದಯ ತ್ರಸ್ತಗೊಂಡರೂ ಮಾನಸಿಂಗನ ಸಹೋದರ ಮಾಧವಸಿಂಗನನ್ನು ಕರೆದು ಅವನ ಸಹೋದರನಿಗೆ ಭರವಸೆ ನೀಡಿ ಮರಳಿ ಕರೆದುಕೊಂಡು ಬರಲು ಹೇಳಿಕಳಿಸಿದನು. ಮಾಧವಸಿಂಗನು ರಾಜಾನ ಹತ್ತಿರ ಹೋಗಿ ಕಠೋರವಾಗಿ ಬೈಯುತ್ತ ಅಂಥ ಸಾಮ್ರಾಟನ ವಿಷಯಕ್ಕೆ ಹಾಗೆ ನಡೆದುಕೊಳ್ಳುವ ಉದ್ದೇಶವೇನೆಂದು ಕೇಳಿ ಅದರಿಂದ ಪ್ರಯೋಜನವೇನಾಗುತ್ತದೆ ಎಂದು ಪ್ರಶ್ನಿಸಿದನು. ಅವನು ಅದಕ್ಕೆ ಉತ್ತರಿಸಿದನು. "ನಾನೇನು ಮಾಡಲಿ? ರಾಜಕುಮಾರನು ಸಣ್ಣವನು. ಈ ಎಲ್ಲ ವಿಷಯಗಳು ಅವನಿಗೆ ಗೊತ್ತಿಲ್ಲ. ಅವನನ್ನು ಸಮಾಧಾನಗೊಳಿಸಲು ನಾನೆಲ್ಲ ಹೀಗೆ ಮಾಡಲೇಬೇಕಾಯಿತು." ಮುಂದುವರೆದು ಅವನು ಮಾಧವನಿಗೆ ಹೇಳಿದನು "ಹೋಗಿ ಸಾಮ್ರಾಟನಿಗೆ ಹೇಳು ಯಾವ ಪ್ರಕಾರದ ಭಯವಿಲ್ಲದಂತೆ ಭರವಸೆ ಕೊಡಲಿ,

ರಾಜಕುಮಾರನಿಗೆ ಯಾವ ಪ್ರಕಾರದ ತೊಂದರೆ, ಕೇಡು ಆಗುವುದಿಲ್ಲವೆಂದು ನನಗೆ ಸಮಾಧಾನವಾಗಲಿ. ಆಗ ನಾನು ಅವನನ್ನು ಕರೆತಂದು ಸಾಮ್ರಾಟನ ಪಾದಕ್ಕೆರಗಿಸುವೆ." ಮಾಧವಸಿಂಗನು ಮರಳಿಬಂದು ರಾಜಾ ಮಾನಸಿಂಗನ ಇಚ್ಛೆಯನ್ನು ಮತ್ತು ವಿನಂತಿಯನ್ನು ಮಹಾಪ್ರಭುವಿಗೆ ನಿವೇದಿಸಿದನು. ಪ್ರಭುವು ಅತ್ಯಂತ ಕರುಣೆಯಿಂದ ವಚನವಿತ್ತು ಅವನಿಗೆ ಯಾವ ಕೇಡು, ಅಪಾಯ ಯಾರಿಂದಲೂ ಆಗದಂತೆ ನೋಡಿಕೊಳ್ಳುವೆ ಎಂದು ಗಂಭೀರ ಶಪಥವಿತ್ತು ಮಾಧವನನ್ನು ಅವನ ಅಣ್ಣನೆಡೆಗೆ ಕಳಿಸಿದನು. ಮರುದಿನ ರಾಜಾ ಮಾನಸಿಂಗನು ದರಬಾರಕ್ಕೆ ಆಗಮಿಸಿದನು. ಸುಲ್ತಾನ ಖುಸ್ರುವನ್ನು ಸಾಮ್ರಾಟನ ಪಾದಕ್ಕೆ ಎರಗುವಂತೆ ಮಾಡಿದನು. ಸಾಮ್ರಾಟನು ಅವನನ್ನು (ಖುಸ್ರುವನ್ನು) ಅತ್ಯಂತ ಕರುಣೆಯಿಂದ ಸ್ವೀಕರಿಸುತ್ತ, ಅವನನ್ನು ತನ್ನ ಎದೆಗಪ್ಪಿಕೊಂಡು ಅವನ ಮುಖಕ್ಕೆ ಮುದ್ದಿಕ್ಕಿದನು. ಕೆಲಕ್ಷಣಗಳ ನಂತರ ಆ ಕುಮಾರನನ್ನು ಅವನ ನಿವಾಸಕ್ಕೆ ಬೀಳ್ಕೊಟ್ಟನು. ಇದೆಲ್ಲವನ್ನು ಸಾಮ್ರಾಟನು ಮುಗಿಸಿದ ಬಳಿಕ, ಕೆಲದಿನಗಳನ್ನು ಶೋಕಾಚರಣೆಯಲ್ಲಿ ಕಳೆದನು. ಹಾಗೆಯೆ ದಾನಗಳನ್ನು ನೀಡಿದನು. ಇದೆಲ್ಲವೂ ಆತನು ಸಿಂಹಾಸನಾರೋಹಣ ಮಾಡುವ ದಿನದವರೆಗೆ ನಡೆಯಿತು.

■

ಆದಿಲಶಾಹಿ ಸುಲ್ತಾನರ ಪ್ರಭುತ್ವದಲ್ಲಿಯ ಸ್ಥಾನಿಕ ಆಡಳಿತ

ಲೇ: ಕೋತಾನಿ

ಅನುವಾದಕರು: ಡಾ. ಆರ್.ಕೆ. ಕುಲಕರ್ಣಿ

*

ಪ್ರಾಸ್ತಾವಿಕ ಮಾತು

ಆದಿಲಶಾಹಿ ಸುಲ್ತಾನ ರಾಜ್ಯವನ್ನು ೧೪೮೯ರಲ್ಲಿ ಯುಸೂಫ ಆದಿಲಖಾನನು ಸ್ಥಾಪಿಸಿ ವಿಜಯಪುರವನ್ನು ಅವರ ರಾಜಧಾನಿಯಾಗಿ ಮಾಡಿಕೊಂಡನು. ಬಹಮನಿ ಸುಲ್ತಾನ ರಾಜ್ಯವು ನಾಶವಾದ ಬಳಿಕ ಮೇಲೆದ್ದು ಬಂದ ದಕ್ಷಿಣದ ಐದು ಸುಲ್ತಾನ ರಾಜ್ಯವು ನಾಶವಾದ ಬಳಿಕ ಮೇಲೆದ್ದು ಬಂದ ದಕ್ಷಿಣದ ಐದು ಸುಲ್ತಾನ ರಾಜ್ಯಗಳಲ್ಲಿ ವಿಜಯಪುರವು ಒಂದಾಗಿತ್ತು. ೧೬೮೬ರಲ್ಲಿ ಬಲಾಢ್ಯ ಮುಘಲ ಸಾಮ್ರಾಜ್ಯದಲ್ಲಿ ಸೇರ್ಪಡೆಯಾಗುವವರೆಗೆ ಈ ರಾಜಪ್ರಭುತ್ವದ ಗದ್ದುಗೆಯನ್ನು ಎಂಟು ಸುಲ್ತಾನರು ಏರಿದ್ದರು. ದಕ್ಷಿಣದ ಸುಲ್ತಾನ ರಾಜ್ಯಗಳಲ್ಲಿಯೇ ಇದು ಬಹು ವಿಸ್ತಾರವಾದದ್ದು ಮತ್ತು ಬಲಿಷ್ಠವೂ ಆಗಿತ್ತು; ಮಧ್ಯಯುಗೀನ ಭಾರತದ ರಾಜಕೀಯ ಹಾಗೂ ಸಾಂಸ್ಕೃತಿಕ ಇತಿಹಾಸದಲ್ಲಿ ಬಹಳ ದೊಡ್ಡ ಪಾತ್ರವನ್ನು ವಹಿಸಿತು.

ಆದರೆ ಈ ಲೇಖನದ ಉದ್ದೇಶವು ವಿಜಯಪುರ ಸುಲ್ತಾನರಾಜ್ಯದ ರಾಜಕೀಯ-ಸಾಂಸ್ಕೃತಿಕ ಇತಿಹಾಸವನ್ನು ಚರ್ಚಿಸುವುದಾಗಿಲ್ಲ. ಸುಮಾರು ಭೀಮಾದಿಂದ ತುಂಗಭದ್ರೆಯವರೆಗೆ ಹರಡಿದ್ದ ಪ್ರದೇಶದಲ್ಲಿಯ ಸ್ಥಳೀಯ ಸಂಸ್ಥೆಗಳನ್ನು ವಿಶ್ಲೇಷಿಸುವುದಾಗಿದೆ.

ಮೇಲಿನ ಉದ್ದೇಶದಿಂದ ಈ ವಿಷಯವನ್ನು ನಾವು ಕೈಗೆತ್ತಿಕೊಂಡಾಗ ಈ ಸುಲ್ತಾನ ರಾಜ್ಯದಲ್ಲಿ ಮೂಲಭೂತವಾಗಿ ಭಿನ್ನವಾಗಿರುವ ಆಡಳಿತಾತ್ಮಕ ಎರಡು ಬಗೆಯ ಸಿಬ್ಬಂದಿಗಳನ್ನು ಗುರುತಿಸುತ್ತೇವೆ. ಮೊದಲನೆಯದು ಭಾರತೀಯ ದೇಶೀಯ ವಂಶಪಾರಂಪರ್ಯವಾಗಿ ಬಂದ ಅಧಿಕಾರಿಗಳು ಇವರನ್ನು ಸಾಮುದಾಯಿಕವಾಗಿ 'ದೇಶಕ' ಎಂದು ಕರೆಯಲಾಗುತ್ತಿತ್ತು. ಮುಸಲ್ಮಾನ ಆಕ್ರಮಣಕ್ಕಿಂತ ಮೊದಲು ಪ್ರಾಚೀನ ಕಾಲದಲ್ಲಿ ಈ ಅಧಿಕಾರವರ್ಗದ ಮೂಲರೂಪ ಇದ್ದಿರಬಹುದು. ಈ

ವಂಶಪಾರಂಪರ್ಯದ ಅಧಿಕಾರಿಗಳಲ್ಲಿ ಈ ಕೆಳಗಿನವರಿದ್ದರು: ದೇಸಾಯಿ (ಅಥವಾ ಅದರ ಸಣ್ಣ ಭಾಗದ ಮುಖ್ಯಸ್ಥ) ಪರಗಣೆ ಎಂದರೆ ಸುಮಾರು ೧೦ರಿಂದ ೨೦೦ ಹಳ್ಳಿಗಳನ್ನೊಳಗೊಂಡಿತ್ತು. ದೇಶ ಕುಲಕರ್ಣಿ (ಅಥವಾ ದೇಶಪಾಂಡೆ) ಇವನು ಪರಗಣೆಯ ಅಥವಾ ಅದರ ಚಿಕ್ಕಭಾಗದ ಕರಣಿಕ ಆಗಿದ್ದು ಲೆಕ್ಕಪತ್ರ ಇಡುವ ಅಧಿಕಾರಿ; ಪಾಟೀಲ (ಅಥವಾ ಮುಖದ್ದಮ) ಇವನು ಹಳ್ಳಿಯೊಂದರ ಮುಖ್ಯಸ್ಥ; ಹಳ್ಳಿಯೊಂದರ ಕರಣಿಕನಾಗಿದ್ದು ಅಲ್ಲಿಯ ಲೆಕ್ಕಪತ್ರ ಇಡುವವನು ಕುಲಕರಣಿ; ಬಜಾರಕಟ್ಟೆಯ ಮುಖ್ಯಸ್ಥ ಸೇಟೆ; ಬಜಾರಸ್ಥಳದ ಲೆಕ್ಕಪತ್ರ ಇಡುವವನು ಮಹಾಜನ; ಕೋಟೆಯ ಕಾವಲುಗಾರನು ನಾಯಕವಾಡಿ. ಇದಲ್ಲದೆ ಅನೇಕ ಸಾರೆ ಹಳ್ಳಿಯ ಮುಖ್ಯಸ್ಥನ ಸಹಾಯಕನಾಗಿ ಚೌಗಲಾ ಮತ್ತು ಬಜಾರ ನೋಡಿಕೊಳ್ಳುವ ಉಪಮುಖ್ಯಾಧಿಕಾರಿಯಾಗಿ ಚೌಧರಿ ಎಂದೂ ಇದ್ದರು.

ಆಡಳಿತ ವ್ಯವಸ್ಥೆಯ ಎರಡನೆಯ ಸಿಬ್ಬಂದಿಯು ಸುಲ್ತಾನರ ನೇರ ಅಧಿಕಾರಿಗಳಾಗಿದ್ದರು. ಇವರನ್ನು ರಾಜಾಧಿಕಾರಿಗಳೆಂದು ಕರೆಯಬಹುದು. ಈ ಅಧಿಕಾರಿಗಳು ಸ್ಥಾನಿಕ ಆಡಳಿತವನ್ನು ಎರಡು ಬಗೆಯಲ್ಲಿ ನಡೆಸಿಕೊಂಡು ಹೋಗುತ್ತಿದ್ದರು. ಈ ಎರಡು ವಿಧಾನಗಳು ಸುಲ್ತಾನಶಾಹಿಯ ಎರಡು ಬಗೆಯ ಆಡಳಿತಾತ್ಮಕ ವಿಭಾಗಗಳಿಗೆ ಸಂವಾದಿಯಾಗಿದ್ದವು. ಮೊದಲನೆಯ ವಿಧಾನವು 'ಮುವಾಮಲಾ' ಅಥವಾ 'ಖಲಾಬ' ಎಂದು ಕರೆಯಲ್ಪಡುವ ಕೇಂದ್ರಾಡಳಿತದ ಪ್ರಮುಖ ಜಿಲ್ಲೆಗಳ (ರಾಜ್ಯದ ಸಮಸ್ತ ಭಾಗದಲ್ಲಿಯ ಮಹತ್ವದ ಪ್ರದೇಶಗಳು ಎಂದು) ಗುರುತಿಸುತ್ತ ಅವುಗಳಿಗೆ ಹವಾಲ್ದಾರರನ್ನು (ವ್ಯವಸ್ಥಾಪಕರನ್ನು) ನಿಯಮಿಸುವುದಾಗಿತ್ತು. ಹಾಗೆಯೇ ಅವರ ಸಹಾಯಕ್ಕೆ ಅಧಿಕಾರಿಗಳನ್ನು ಗೊತ್ತುಪಡಿಸುತ್ತಿತ್ತು. ಎರಡನೆಯ ವಿಧಾನದ ಪ್ರಕಾರ ಪ್ರಥಮ ಶ್ರೇಣಿಯ ಮತ್ತು ಮಧ್ಯಮ ಶ್ರೇಣಿಯ ಅಧಿಕಾರಿಗಳಿಗೆ ವತನದಾರರನ್ನು ನಿಯಮಿಸಲಾಗುತ್ತಿತ್ತು. ಪ್ರತಿಯೊಬ್ಬ ವತನದಾರರಿಗೆ ಆಡಳಿತ ನಡೆಸಲು ಇಂತಿಷ್ಟು ಪ್ರದೇಶವೆಂದು ಗೊತ್ತುಪಡಿಸಲಾಗುತ್ತಿತ್ತು. ಈ ಪ್ರಕಾರದ ವತನದಾರರನ್ನು ಪರಗಣೆಗಳು ಎಂದು ಗುರುತಿಸಲ್ಪಡುವ ಕ್ಷೇತ್ರದಲ್ಲಿ ನಿಯಮಿಸಲಾಗಿತ್ತು.

ಪರಗಣೆಗಳ ಆಡಳಿತ ವ್ಯವಸ್ಥೆಯನ್ನು ಕುರಿತು ಕೊಂಚ ವಿವರಣೆ ಅವಶ್ಯವಿದೆ. ಯಾಕೆಂದರೆ ಎಲ್ಲ ಪರಗಣೆಗಳನ್ನು ರಾಜಾಧಿಕಾರಿಗಳಿಗೆ ಒಪ್ಪಿಸಿದ್ದಿಲ್ಲ. ಈ ಪರಗಣೆಗಳ ಆಡಳಿತವು ಏಕರೂಪವಾಗಿ ನಡೆಯುತ್ತಿದ್ದಿಲ್ಲ. ಅದು ಕನಿಷ್ಠ ಮೂರು ಬೇರೆ ಬೇರೆ ರೀತಿಯಲ್ಲಿ ನಡೆಯುತ್ತಿತ್ತು. ಮೊದಲನೆಯ ವಿಧಾನದಲ್ಲಿ ಒಂದು ಅಥವಾ ಹೆಚ್ಚು ಪರಗಣೆಗಳನ್ನು ಒಬ್ಬ ಉನ್ನತ ಶ್ರೇಣಿಯ ಅಧಿಕಾರಿಗೆ ವತನವೆಂದು ಒಪ್ಪಿಸಿ ಅದನ್ನು ಅವನ ಸಂಪೂರ್ಣ ಅಧೀನಕ್ಕೆ ಒಳಪಡಿಸುವುದಾಗಿತ್ತು. ಎರಡನೆಯ ವಿಧಾನದಲ್ಲಿ ಒಂದು ಪರಗಣೆಯ ಭಾಗವನ್ನು ಚಿಕ್ಕ ವತನಗಳಲ್ಲಿ ವಿಭಜಿಸಿ, ಹಾಗೆ ವಿಭಜಿಸಲ್ಪಟ್ಟ

ಹಳ್ಳಿಗಳನ್ನು ಮಧ್ಯಮ ವರ್ಗದ ಅಧಿಕಾರಿಯ ಸುಪರ್ದಿಗೆ ಒಪ್ಪಿಸಲಾಗುತ್ತಿತ್ತು ಮತ್ತು ಆ ಪರಗಣೆಯ ಉಳಿದ ಭಾಗವನ್ನು ಕೇಂದ್ರ ನ್ಯಾಯಾಲಯಕ್ಕೆ ಸೇರಿಸಿಬಿಡಲಾಗುತ್ತಿತ್ತು. ಇದಕ್ಕೆ ಸಂಬಂಧಿಸಿ, ಆ ಪರಗಣೆಯ ದೇಸಾಯಿಗೆ (ಅಥವಾ ದೇಶಮುಖನಿಗೆ) ಹಾಗೆ ಸೇರಿಸಲ್ಪಟ್ಟ ಭಾಗವನ್ನು ನೋಡಿಕೊಳ್ಳುವ ಜವಾಬ್ದಾರಿಯನ್ನು ಹೊರಿಸಲಾಗಿತ್ತು. ಮೂರನೆಯ ವಿಧಾನದಲ್ಲಿ ಸಮಸ್ತ ಪರಗಣೆಯೊಂದನ್ನು ಕೇಂದ್ರ ಸರಕಾರಕ್ಕೆ ಸೇರಿಸಿ ಅದನ್ನು ಸಂಬಂಧಿಸಿದ ದೇಸಾಯಿಯ ಆಡಳಿತದ ಆಧೀನದಲ್ಲಿ ಇಡಲಾಗುತ್ತಿತ್ತು. ವಿಶೇಷ ಅಧಿಕಾರಿಯೊಬ್ಬರು ಆಗಾಗ ಭೆಟ್ಟಿಕೊಟ್ಟು ಆಡಳಿತವನ್ನು ತಪಾಸಿಸುತ್ತಿದ್ದನು. ಈ ಬೇರೆ ಬೇರೆ ವಿಧಾನಗಳನ್ನು ಕುರಿತು ಮುಂದೆಯೂ ಪ್ರಸ್ತಾಪಿಸುವುದಿದೆ. ಯಾವುದೇ ವಿಧಾನವಿರಲಿ, ಈ ಮೂರೂ ವಿಧಾನಗಳಲ್ಲಿ ಪರಗಣೆಗಳ ಆಡಳಿತ ವ್ಯವಸ್ಥೆಯನ್ನು ವತನಗಳ ವಿಂಗಡಣೆಯ ಮೂಲಕ ನಡೆಸಿಕೊಂಡು ಹೋಗುವುದನ್ನು ಮೊದಲನೆಯ ಮತ್ತು ಎರಡನೆಯ ಪದ್ಧತಿಯಿಂದಲೇ ಪಾಲಿಸಲಾಗುತ್ತಿತ್ತು.

ಆದಾಗ್ಯೂ, ಎಲ್ಲ ವತನಗಳನ್ನು ಪರಗಣೆಯ ಅಧೀನಕ್ಕೆಂದೇ ಪರಿಮಿತಗೊಳಿಸಿರಲಿಕ್ಕಿಲ್ಲ ಎನ್ನುವುದನ್ನು ಸ್ಪಷ್ಟಪಡಿಸಲೇಬೇಕು. ಪ್ರಮುಖ ಜಿಲ್ಲೆಯ ಭಾಗವನ್ನು ಕೂಡ ಆ ಜಿಲ್ಲೆಯಿಂದ ಬೇರ್ಪಡಿಸಿ ಮಧ್ಯಮಶ್ರೇಣಿಯ ಅಧಿಕಾರಿಯೊಬ್ಬನ ವತನವೆಂದು ಗೊತ್ತುಪಡಿಸಲಾಗುತ್ತಿತ್ತು. ಈ ರೀತಿಯಾಗಿ 'ಮುವಾಮಲಾ' ಅಥವಾ 'ಖಲಾಬ'ದಿಂದ ಬೇರ್ಪಡಿಸಲ್ಪಟ್ಟು ಗೊತ್ತುಪಡಿಸಿದ ಭಾಗವು ಬಹಳ ಚಿಕ್ಕದಿರುತ್ತಿತ್ತು ಎನಿಸುತ್ತಿದೆ. ಇಡೀ ಮುವಾಲಾ ಅಥವಾ ಖಲಾಬನ್ನು ವತನವೆಂದು ಕೊಟ್ಟುಬಿಟ್ಟಿದ್ದು ವಿರಳ. ಸಂಕ್ಷಿಪ್ತವಾಗಿ ಹೇಳಬೇಕಾದರೆ, ಸಣ್ಣ ವತನಗಳನ್ನು ಕೇವಲ ಪರಗಣೆಗಳಲ್ಲಷ್ಟೇ ಅಲ್ಲ ಪ್ರಮುಖ ಜಿಲ್ಲೆಗಳಲ್ಲೂ ಗೊತ್ತುಪಡಿಸಿ ನೀಡಲಾಗುತ್ತಿತ್ತು. ಆದರೆ ದೊಡ್ಡ ವತನಗಳನ್ನು ಬಹುತರವಾಗಿ ಪರಗಣಾ ಪ್ರದೇಶದಲ್ಲಿ ಮಾತ್ರ ನಿಗದಿಪಡಿಸಲಾಗುತ್ತಿತ್ತು.

ಸಂಗ್ರಹರೂಪದಲ್ಲಿ ಹೇಳುವುದಾದರೆ ಅಧಿಕಾರಿಗಳಿಂದ ನಿರ್ವಹಣೆಗೊಳ್ಳುವ ಆಡಳಿತವು ಹವಾಲ್ದಾರನ ಮುಖಾಂತರ ಮತ್ತು ಆತನ ಕೆಳಗಿನವರಿಂದ ಪ್ರಮುಖ ಜಿಲ್ಲೆಗಳಲ್ಲಿ ನಡೆಯುತ್ತಿದ್ದರೆ, ವತನದಾರ ಅಧಿಕಾರಿಗಳಿಂದ ಅವರವರ ವತನಗಳಲ್ಲಿ ಆಡಳಿತ ನಡೆಯುತ್ತಿತ್ತು.

ಈ ಪ್ರಾಥಮಿಕ ಚರ್ಚೆಯ ಆಧಾರದ ಮೇಲಿಂದ ನಮ್ಮ ವಿಶ್ಲೇಷಣೆಯನ್ನು ನಾಲ್ಕು ವಿಷಯಗಳಡಿಯಲ್ಲಿ ಇಡಲು ತೊಡಗುತ್ತೇವೆ. ಮೊದಲನೆಯದಾಗಿ ಪರಗಣೆ, ಮುವಾಮಲಾ ಮತ್ತು ಖಲಾಬ ಎಂಬ ಆಡಳಿತಾತ್ಮಕ ಉದ್ದೇಶಗಳೇನಿದ್ದವೆಂದು ಕಂಡುಕೊಳ್ಳುವುದು. ಎರಡನೆಯದಾಗಿ ಪರಂಪರಾಗತವಾಗಿ ಬಂದಿರುವ, ಸರ್ವತ್ರ ಇರುವ ಅಧಿಕಾರಿಗಳ, ಅದರಲ್ಲೂ ವಿಶೇಷತಃ ದೇಸಾಯಿ ಮತ್ತು ದೇಶಪಾಂಡೆ ಇವರ ಕಾರ್ಯಗಳನ್ನು ಮತ್ತು ಅವರಿಗೆ ನೀಡುವ ಸಂಭಾವನೆಯ ಸಾಧನಗಳನ್ನು

ಅವಲೋಕಿಸುವುದಾಗಿದೆ; ಪರಂಪರೆಯಿಂದ ಬಂದ ಅಧಿಕಾರ ಹುದ್ದೆಗಳಲ್ಲಿ ಈ ದೇಸಾಯಿ ಮತ್ತು ದೇಶಪಾಂಡೆಯವರದು ಅತ್ಯಂತ ಉನ್ನತ ಅಧಿಕಾರವಾಗಿತ್ತು. ಮೂರನೆಯದಾಗಿ ಸುಲ್ತಾನನಿಂದಲೇ ನಿಯಮಿಸಲ್ಪಟ್ಟ ಹವಲ್ದಾರನ ಕಾರ್ಯಗಳನ್ನು ಮತ್ತು ಅವನಿಗೆ ಸಲ್ಲುವ ಸಂಭಾವನೆಯ ರೀತಿಯನ್ನು ವಿಶ್ಲೇಷಿಸುವ ಉದ್ದೇಶ ಹೊಂದಿದ್ದು ಅವನು ತನ್ನ ಕೆಳಗಿನವರೊಡನೆ ಹಾಗೆಯೇ ಪಾರಂಪರಿಕ ಅಧಿಕಾರಿಗಳೊಡನೆ (ತನ್ನ ಜಿಲ್ಲೆಯಲ್ಲಿ) ಯಾವ ಬಗೆಯ ಸಂಬಂಧ ಹೊಂದಿದ್ದರು ಎನ್ನುವುದನ್ನು ಕಂಡುಕೊಳ್ಳುವುದಾಗಿದೆ. ನಾಲ್ಕನೆಯ ಉದ್ದೇಶವೆಂದರೆ ಅಧಿಕಾರಿಗಳಿಗೆ ನೀಡಿರುವ ವತನಗಳ ಪ್ರಕಾರಗಳನ್ನು ವರ್ಗೀಕರಿಸಿ, ಅವರ ನಿರ್ವಹಣೆಯ ಪದ್ಧತಿಯನ್ನು ಮತ್ತು ಅವರ ಮೇಲಧಿಕಾರದ ವ್ಯಾಪ್ತಿಯನ್ನು ಅಭ್ಯಸಿಸುವುದಾಗಿದೆ.

■

*

II. ಸುಲ್ತಾನಶಾಹಿಯ ಆಡಳಿತಾತ್ಮಕ ವಿಭಜನೆಗಳು

ಸುಲ್ತಾನಶಾಹಿಯ ಆಡಳಿತಾತ್ಮಕ ವಿಭಜನೆಗಳು ಹೀಗಿದ್ದವು.

ಪರಗಣೆಗಳು : ಪರಗಣೆಗಳ ಒಳಗೆ ಇಲ್ಲವೆ ಹೊರಗೆ ಇದ್ದ ಕಿರಿಯ ವಿಭಜನೆಗಳು; ಮತ್ತು 'ಮಾಮುವಲಾ' ಮತ್ತು ಖಲಾಬ.

೧. ಪರಗಣೆಗಳು:

'ಪರಗಣೆ' ಈ ಪರ್ಶಿಯನ್ ಶಬ್ದದ ಅರ್ಥ ಒಂದು ಪ್ರದೇಶ ಇಲ್ಲವೆ ಜಿಲ್ಲೆ ಎಂದಾಗುತ್ತದೆ. ಇದನ್ನು ಭಾರತಕ್ಕೆ ಪರಿಚಯಿಸಿದವರು ಮುಸಲ್ಮಾನ ಆಳಿಕೆದಾರರು. ಉತ್ತರ ಭಾರತ ಹಾಗೂ ದಕ್ಷಿಣ ಭಾರತ ಎರಡರಲ್ಲೂ ಇದು ವಿಶಾಲವಾಗಿ ಬಳಸಲ್ಪಟ್ಟಿತು. ಸಾಮಾನ್ಯವಾಗಿ ಈ ಶಬ್ದವನ್ನು ಒಂದು ಪ್ರದೇಶದಲ್ಲಿದ್ದ ದೊಡ್ಡ ಪಟ್ಟಣಗಳ ಹೆಸರಿನ ಪ್ರಾರಂಭದಲ್ಲಿ ಬಳಸಲಾಗುತ್ತಿತ್ತು. ಉದಾ: ಪರಗಣಾ ಪುಣೆ, ಪರಗಣಾವಾಯಿ, ಹೀಗೆ, ಈ ಶಬ್ದವು ದಕ್ಷಿಣ ಭಾರತದಲ್ಲಿ ಪ್ರವೇಶ ಪಡೆದದ್ದು ತುಘಲಕ್‌ನ ಕಾಲದಲ್ಲಿ, ಅಂದರೆ ಹದಿನಾಲ್ಕನೆಯ ಶತಮಾನದ ಪೂರ್ವಾರ್ಧದಲ್ಲಿ ಎಂದು ಹೇಳಲ್ಪಡುತ್ತದೆ. ಆದರೆ ಈ ಪರಗಣಾ ವಿಭಜನೆಗಳು ಹೇಗೆ ಸೃಷ್ಟಿಸಲ್ಪಟ್ಟವೆಂಬುದು ಸ್ಪಷ್ಟವಿಲ್ಲ. ಆದಿಲ್‌ಶಾಹಿ ದಾಖಲೆಗಳಿಂದ ಪಡೆದ ಹಲವಾರು ಮಹತ್ವದ ಸಂಗತಿಗಳನ್ನು ಗಮನಕ್ಕೆ ತರಬಹುದು.

ಪ್ರಪ್ರಥಮ ಸಂಗತಿಯೆಂದರೆ ಈ ಪರಗಣೆಗಳ ಗಾತ್ರದಲ್ಲಿದ್ದ ಬಹು ದೊಡ್ಡ ವೈವಿಧ್ಯ. ಪರಗಣೆಯೊಂದರಲ್ಲಿ ೫೦ ರಿಂದ ೧೦೦ ವರೆಗೆ ಹಳ್ಳಿಗಳಿದ್ದವು. ಮೊಟ್ಟಮೊದಲು ಬಾರಿಗೆ ತುಘಲಕ ಆಡಳಿತಗಾರರು ಈ ಪರಗಣಾ ವಿಭಜನೆಗಳನ್ನು ಆರಂಭಿಸಿದರೂ ಅವರು ಅವುಗಳನ್ನು ಯಾವ ತತ್ತ್ವದ ತಳಹದಿಯ ಮೇಲೆಯೂ (ಉದಾ: ಖಚಿತ ಪ್ರಮಾಣದ ಭೂಕಂದಾಯ) ಸ್ಥಾಪಿಸಲಿಲ್ಲವೆಂದು ತಿಳಿದುಬರುತ್ತದೆ. ಆದರೆ ಈ ದೇಶದಲ್ಲಿಯೇ ಇದ್ದ ಸ್ಥಾನಿಕ ವಿಭಜನೆಗಳನ್ನು ಪುನರ್ನಾಮಕರಣಗೊಳಿಸಿ

ಬಳಸತೊಡಗಿದರು. ನನ್ನ ಈ ಪ್ರಾಕಲ್ಪನೆ ಎರಡು ಸಂಗತಿಗಳಿಂದ ಧೃಡವಾಗುತ್ತದೆ. ಮೊದಲನೆಯದಾಗಿ ಹಿಂದಿ, ಮರಾಠಿ, ಕನ್ನಡ, ತೆಲುಗು ಮತ್ತು ಗುಜರಾತ ಭಾಷೆಗಳಲ್ಲಿ ಆಗಲೇ ಇದ್ದ ವಿಭಾಗೀಯ ಶಬ್ದ 'ಟಪ್ಪಾ' ಕೆಲವೊಂದು ಅರ್ಥವ್ಯತ್ಯಾಸದೊಂದಿಗೆ ಸಾಮಾನ್ಯವಾಗಿ ಎಲ್ಲೆಡೆ ಬಳಸಲಾಗುತ್ತಿತ್ತು. ನಮಗೆ ಮಹತ್ವವೆನಿಸುವ ಸಂಗತಿಯೆಂದರೆ 'ಪರಗಣೆ'ಗೆ ಪರ್ಯಾಯವಾಗಿ ಈ ಶಬ್ದ 'ಪಟ್ಟಾ'ವನ್ನು ಉಪಯೋಗಿಸಲಾಗುತ್ತಿತ್ತು ಎನ್ನುವುದು ಆದಿಲ್‌ಶಾಹಿ ದಾಖಲೆಗಳಿಂದ ಗೊತ್ತಾಗುತ್ತದೆ. ಉದಾಹರಣೆಗೆ, ಒಂದು ಫರ್ಮಾನ್‌ದಲ್ಲಿ "ಟಪ್ಪಾಗಳು ಎಂದು ಕಾಣಿಸಿದ್ದು ಮೂರು ದಿನಗಳ ನಂತರ ಹೊರಡಿಸಿದ ಇನ್ನೊಂದು ಫರ್ಮಾನ್‌ದಲ್ಲಿ 'ಪರಗಣೆ'ಗಳು ಎಂದು ಪುನರ್ನಾಮಗೊಂಡಿದೆ. ಕೆ.ವ್ಹಿ. ಪುರಂದರೆ ಅವರು ಕೂಡ 'ಟಪ್ಪಾ' ಇದು 'ಪರಗಣಾ' ಇದಕ್ಕೆ ಪರ್ಯಾಯ ಪದವೆನ್ನುತ್ತಾರೆ. ಇದಕ್ಕೆ ವಿರುದ್ಧವಾಗಿ ಮೂವಳ ಮತ್ತು ಸಾಲಸೆಟ್ಟೆ ಭಾಗಗಳಲ್ಲಿ ಮುಸಲ್ಮಾನ ಪ್ರಭಾವವು ನಂತರದ ಕಾಲದಲ್ಲಿ ದಕ್ಷಿಣದಲ್ಲಿಯಕ್ಕಿಂತ ನಿಧಾನವಾಗಿ ಒಳಹೊಕ್ಕು ಸಾಗಿದ್ದನ್ನು ನೋಡುತ್ತೇವೆ. ಆದರೆ 'ಪರಗಣಾ'ಕ್ಕಿಂತ 'ಟಪ್ಪಾ' ಇದು ಹೆಚ್ಚಾಗಿ ಉಪಯೋಗಿಸಲ್ಪಡುತ್ತಿತ್ತು. ಆದಾಗ್ಯೂ 'ಟಪ್ಪಾ' ಈ ವಿಭಾಗೀಯ ಪದವು ಎಷ್ಟು ಹಳೆಯದೆಂದು ಸ್ಪಷ್ಟವಿಲ್ಲ. ಯಾವಾಗ ದೇಶೀಯ ಶಬ್ದವೊಂದು ವಿದೇಶಿಯ ಪದಕ್ಕೆ ಪರ್ಯಾಯವಾಗಿ ಬಳಸಲ್ಪಡುತ್ತದೆ. ಆಗ ಅದು ಹೆಚ್ಚು ಹಳೆಯದು (ಮೊದಲು ಬಂದದ್ದು) ಇರಬೇಕು. ಹಾಗಾಗಿ, ಮುಸಲ್ಮಾನ ವಿಜೇತರು 'ಟಪ್ಪಾ' ಎಂದು ಅಸ್ತಿತ್ವದಲ್ಲಿದ್ದ ವಿಭಜನೆಗಳನ್ನು ಪರಗಣೆಗಳೆಂದು ನಾಮಬದಲಾವಣೆ ಮಾಡಿದರೆಂದು ತಿಳಿಯಬಹುದು. ಕೆಲವು ಪ್ರದೇಶಗಳಲ್ಲಿ ಹಿಂದಿನ ಚಲಾವಣೆಯಲ್ಲಿದ್ದ ಶಬ್ದವನ್ನು ಸಂಪೂರ್ಣವಾಗಿ ಪುನರ್ನಾಮಕರಣಗೊಳಿಸದೇ ಕೆಲವು ವಿಭಾಗೀಯ ಪದವನ್ನಾಗಿ ಉಳಿಸಲಾಯಿತು. ಆದರೆ, ಕೆಲವು ಸಾರೆ ಈ ಎರಡು ಶಬ್ದಗಳು ಒಂದೇ ಅರ್ಥ ಸೂಚಿಸುವ ಪದಗಳಾಗದೇ ಬಳಸಿದ್ದನ್ನು ನೋಡುತ್ತೇವೆ– ಅಂಥ ಸಂದರ್ಭದಲ್ಲಿ "ಪರಗಣೆ' 'ಟಪ್ಪಾ'ಕ್ಕಿಂತ ದೊಡ್ಡದಾಗಿರುವ ಪ್ರದೇಶಗಳಿಗೆ ಬಳಸಿದ್ದನ್ನು ನೋಡುತ್ತೇವೆ. (ಉದಾ:ಪರಗಣಾ ಪುಣೆಯ ಟಪ್ಪಾ ಮಸಖೋರೆ) ಹಲವಾರು ಟಪ್ಪಾಗಳನ್ನು ಒಮ್ಮೊಮ್ಮೆ ಪರಗಣೆಗಳಲ್ಲಿಯೇ ಸೇರಿಸಿಬಿಡಲಾಗುತ್ತಿತ್ತು.

ಎರಡನೆಯ ಗಮನಿಸಬೇಕಾದ ಸಂಗತಿಯೆಂದರೆ ಪ್ರತಿಯೊಂದು ಪರಗಣೆಗೆ ದೇಸಗತಿ ಇತ್ತು. ಮುಸಲ್ಮಾನಪೂರ್ವ ಹಿಂದು ಆಡಳಿತ ಕಾಲದಲ್ಲಿ ಈ ದೇಸಗತಿ ಮಾದರಿ ಇತ್ತೆಂದು ಹೇಳಲಾಗುತ್ತದೆ. ಕೆ.ವಿ.ಪುರಂದರೆಯವರ ಪ್ರಕಾರ ದೇಸಾಯಿಯೊಬ್ಬನು ಆಳುವ ಪ್ರದೇಶದ ವ್ಯಾಪ್ತಿಯ ಮೇಲೆ ಪರಗಣೆಯ ವ್ಯಾಪ್ತಿ ಅವಲಂಬಿಸಿತ್ತು. ಆ ಪ್ರಕಾರ, ದೇಸಾಯಿ ಮಾದರಿಯ ಅಧಿಕಾರಿಯು ನಿಯಂತ್ರಿಸುತ್ತಿದ್ದ ಟಪ್ಪಾ ಪ್ರದೇಶವನ್ನು ಮುಸಲ್ಮಾನ ವಿಜೇತರು ಪರಗಣೆಯನ್ನಾಗಿ ಪರಿವರ್ತಿಸಿದರೆಂದು ನಾವು ಭಾವಿಸಬಹುದು.

ಇದಕ್ಕೆ ವ್ಯತಿರಿಕ್ತವಾಗಿ, ಅನೇಕ ಪರಗಣೆಗಳಲ್ಲಿ ಹಲವಾರು ದೇಸಾಯರು ಇದ್ದರು. ಕಾಲಕ್ರಮದಲ್ಲಿ ದೇಸಗತಿಯೊಂದರ ಮೊದಲಿನ ದೇಸಾಯಿಯ ಕುಟುಂಬದಲ್ಲಿ ವಿಭಜನೆಯಾದಾಗ ಅದರ ಸದಸ್ಯರಲ್ಲಿ ದೇಸಗತಿ ಹಂಚಿಹೋಗಲಾಗಿ ಅಥವಾ ಭಾಗಶಃ ವರ್ಗಾಯಿಸಲ್ಪಟ್ಟಾಗ ಒಂದೇ ಪರಗಣೆಯಲ್ಲಿ ಹಲವಾರು ದೇಸಾಯರು ಅಸ್ತಿತ್ವಕ್ಕೆ ಬಂದರು. ಸುಲ್ತಾನಶಾಹಿಯಲ್ಲಿ ಒಟ್ಟು ಇದ್ದ ಪರಗಣೆಗಳ ಸಂಖ್ಯೆಯನ್ನು ಖಚಿತಪಡಿಸಲು ಸಾಧ್ಯವಿಲ್ಲದಿದ್ದರೂ ಏನೇ ಆಗಲಿ, ಕನಿಷ್ಠಪಕ್ಷ ೩೦ ಪರಗಣೆಗಳು ಇದ್ದದ್ದು ತಿಳಿಯುತ್ತದೆ ಮತ್ತು ಅವುಗಳನ್ನು ಕೆಳಗೆ ಮುವಾಮಲಾ ಮತ್ತು ಖಲಾಹ ಇವುಗಳೊಡನೆ ತೋರಿಸಲಾಗಿದೆ.

ಮುವಾಮಲಾ

೧. ಬಿಜಾಪುರ
೨. ಮುಹಮ್ಮದಪುರ
೩. ರಾಯಚೂರು
೪. ಮುದಗಲ್
೫. ತೊರಗಲ್
೬. ಬಂಕಾಪುರ
೭. ಗೋವಾ
೮. ಮಿರಜ (ಮುರ್ತಾಜಪುರ)
೯. ಸಂದಲಾಪುರ (ಶೋಲಾಪುರ)
೧೦. ಬೀದರ
೧೧. ಚೌಲ (ಪಾದಶಾಹಬಾದ)
೧೨. ಕಲ್ಯಾಣ (ಮುರಾನಜಾನ)
೧೩. ಬಿವಂಡಿ (ಇಸ್ಲಾಮಾಬಾದ)

ಖಲಾಹ

೧. ಕೊಪ್ಪಳ
೨. ಬಾದಾಮಿ

೩. ಪನಾಲಾ(ಸಿಕಂದರಾಬಾದ)
೪. ವಾಸೋಲಾ
೫. ಪರಾರಿ
೬. ಸಾತಾರಾ
೭. ಮಂಥನ
೮. ಚಂದನ
೯. ರೊಹಿರಾ (ರಾಹೇರ)
೧೦. ರಾಯಗಡ
೧೧. ಕೊಂಧಾನಾ
೧೨. ಶಾಹದುರ್ಗ

ಪರಗಣೆಗಳು

೧. ಕನಕಗಿರಿ
೨. ಗಂಗಾವತಿ
೩. ಗದಗ
೪. ಹುಬ್ಬಳ್ಳಿ
೫. ಲಕ್ಷ್ಮೇಶ್ವರ
೬. ಮುಧೋಳ
೭. ಕಾಗಲ
೮. ಕೊಲ್ಹಾಪುರ
೯. ರಾಂಜಾ
೧೦. ಕರ್ಹಾಡ
೧೧. ಖಟಾವ
೧೨. ಮಾನ
೧೩. ಪಲ್ವಣ
೧೪. ಮೇಢ
೧೫. ಉತ್ರೌಲಿ
೧೬. ಭೊರ
೧೭. ಬಿರ್ವಾಡಿ
೧೮. ಕುಡಲ
೧೯. ಸಿರ್ವಾರ
೨೦. ವಾಯಿ
೨೧. ಪುಣೆ
೨೨. ಸೂಪಾ
೨೩. ಇಂದಾಪುರ
೨೪. ಸಾಲ್ಸೆಟೆ
೨೫. ಆಲಮಲಾ (ಸಿಂದಗಿ)
೨೬. ಗಂಜುಟಿ
೨೭. ಆಳಂದ
೨೮. ಮಹಿದರಿ (ಅಕ್ಕಲ್ಕೋಟ)
೨೯. ದೊಂಕಿ (ಉಸ್ಮಾನಾಬಾದ)
೩೦. ಪಾಂಗ್ರಿ (ಬಾಲ್ಸಿ)

■

೨. ಪರಗಣೆಯ ಒಳಗಿನ ಮತ್ತು ಹೊರಗಿನ ಸಣ್ಣ ವಿಭಜನೆಗಳು

ಎಷ್ಟೋ ಸಾರೆ ಪರಗಣೆಯಲ್ಲಿ ಒಳಗೊಂಡು ಅದಕ್ಕೆ ಜೋಡಿಸಿದ ಇಲ್ಲವೇ ಸ್ವತಂತ್ರ ಬೇರೆ ಬೇರೆ ಘಟಕಗಳಾಗಿ ಅದರ ಹೊರಗಿದ್ದ ಚಿಕ್ಕ ವಿಭಜನೆಗಳೂ ಇರುತ್ತಿದ್ದವು. ಇವುಗಳಿಗೆ 'ಸಮ್ತ' 'ಖಾರ್ಯತ್' ಅಥವಾ 'ತಾರ್ಫ' ಎನ್ನುತ್ತಿದ್ದರು. ಇದೆಲ್ಲ ಅರೇಬಿಕ್ ಮೂಲದ ಶಬ್ದಗಳಾಗಿದ್ದು ಇವುಗಳನ್ನು ಮುಸಲ್ಮಾನ ಆಡಳಿತಗಾರರು ಡೆಕ್ಕನ್ನದಲ್ಲಿ (ದಕ್ಷಿಣದಲ್ಲಿ) ಪರಿಚಯಿಸಿದರು. ಪುರಂದರೆಯವರು ಹೇಳುವಂತೆ 'ತಾರ್ಫ' ಪುಣೆಯ ಪ್ರದೇಶದಲ್ಲಿ 'ಸಮ್ತ' ಇದು ಸಮಸ್ತ ಡೆಕ್ಕನ್‌ದಲ್ಲಿ ಬಳಸಲಾಗುತ್ತಿದ್ದವು. 'ಟಾರ್ಫ' ಈ ಶಬ್ದ ಉಳಿದ ಭಾಗಗಳಲ್ಲಿ ಬಳಸಲ್ಪಟ್ಟರೂ ಮುಖ್ಯವಾಗಿ ಪುಣೆ-ಭೋರ ಪ್ರದೇಶಗಳಲ್ಲಿ ಬಳಸಲಾಗುತ್ತಿತ್ತು. ಆದರೆ ಪುರಂದರೆ ಅವರು ದೃಢವಾಗಿ ಪ್ರತಿಪಾದಿಸುವುದಕ್ಕೆ ವ್ಯತಿರಿಕ್ತವಾಗಿ 'ಸಮ್ತ' ಇದು ಸಾತಾರಾದಲ್ಲಿ ಅಷ್ಟೇ ಅಲ್ಲ. ಉಳಿದ ಪ್ರದೇಶಗಳಲ್ಲೂ ಧಾರಾಳವಾಗಿ ಬಳಕೆಯಲ್ಲಿತ್ತು. ಮತ್ತು 'ಖಾರ್ಯತ್' ಮಾನ-ಕರ್ಹಾಡ-ಕೊಲ್ಹಾಪುರ ಪ್ರದೇಶಗಳಲ್ಲಷ್ಟೇ ಬಳಸಲ್ಪಡುತ್ತಿತ್ತು.

ಒಂದೇ ಸ್ಥಳ ಅಥವಾ ಪ್ರದೇಶದಲ್ಲಿ 'ಸಮ್ತ' ಮತ್ತು 'ಖಾರ್ಯತ್' ಎರಡೂ ಬಳಕೆಯಾಗುವ ಉದಾಹರಣೆಗಳನ್ನು ಗಮನಿಸಿದರೆ ನಮಗೆ ಎರಡು ಸಂಗತಿಗಳು ಗೊತ್ತಾಗುತ್ತವೆ. ಮೊದಲನೆಯದು, ಕೆಲವು ಪ್ರಕರಣಗಳಲ್ಲಿ ಈ ಎರಡೂ ಶಬ್ದಗಳ ಅರ್ಥದಲ್ಲಿ ಎದ್ದುಕಾಣುವ ಭಿನ್ನತೆ ಇರಲಿಲ್ಲ. ಆದರೆ ಅವು ಪರ್ಯಾಯವಾಗಿ ಉಪಯೋಗಿಸಲ್ಪಡುತ್ತಿದ್ದವು. 'ಸಮ್ತ' ವಿಭಜನೆಯಲ್ಲಿ ಒಂದೇ ಪ್ರದೇಶದಲ್ಲಿ ಇನ್ನೊಂದು ವಿಭಜನೆ 'ಹಿಸಾರ' ಇದು 'ಸಮ್ತ' ಮತ್ತು 'ಖಾರ್ಯತ್' ಇವುಗಳ ನಡುವೆ ಉಪಯೋಗವಾಗುತ್ತಿತ್ತು.

ಏನೇ ಇರಲಿ, ಈ ಚಿಕ್ಕ ವಿಭಜನೆಗಳು ಒಂದೇ ಪ್ರಮಾಣದಲ್ಲಿರಲಿಲ್ಲ. ಉದಾಹರಣೆಗೆ, ೧೬೨೭ರಲ್ಲಿ ಖಲಾಬ ಶಾಹದುರ್ಗದ ಒಂದು 'ಸಮ್ತ'ದಲ್ಲಿ ಐವತ್ತೊಂದು ಹಳ್ಳಿಗಳಿದ್ದರೆ ಸುಮಾರು ಅದೇ ಕಾಲದಲ್ಲಿ ಪುಣೆಯ ಆಗ್ನೇಯಕ್ಕಿರುವ ಖಾರ್ಯತ್ ಸಾಸವಾಡದಲ್ಲಿ ಕೇವಲ ಹತ್ತು ಹಳ್ಳಿಗಳಿದ್ದವು.

ಇವುಗಳ ಗಾತ್ರದಲ್ಲಿ ಕ್ರಮಬದ್ಧತೆ ಇಲ್ಲದಿರುವುದಕ್ಕೆ ಕಾರಣವೆಂದರೆ ಈ ಚಿಕ್ಕ ವಿಭಜನೆಗಳನ್ನು ಯಾವೊಂದು ಏಕರೂಪದ ಆಧಾರದ ಮೇಲೆ ಸೃಷ್ಟಿಸದೆ ಕೆಲವೊಂದು ದೇಶೀಯ ಪರಿಸ್ಥಿತಿಗಳ ಮೇಲೆ ಗೊತ್ತುಪಡಿಸಿರುವುದಾಗಿದೆ. ಪರಗಣೆಯೊಂದರ ವಿಭಜನೆಗಳನ್ನು ಆ ದೇಸಾಯಿ ಕುಟುಂಬದ ಸದಸ್ಯರು ಮಾಡಿಕೊಂಡಿದ್ದರಿಂದ ಅಥವಾ ಉಳಿದವರಿಗೆ ಅದನ್ನು ಭಾಗಶಃ ಪರಭಾರೆ ಮಾಡಿಕೊಂಡಿದ್ದರಿಂದ ಅಥವಾ ಉಳಿದವರಿಗೆ ಅದನ್ನು ಭಾಗಶಃ ಪರಭಾರೆ ಮಾಡಿದ್ದರಿಂದ ಇಂಥ ಸಣ್ಣ ವಿಭಜನೆಗಳು

ಹುಟ್ಟಿಕೊಂಡವೆಂದು ಪುರಂದರೆ ಅವರು ಹೇಳುವುದು ಬಹುತರವಾಗಿ ಸರಿಯಿದೆ. ಕೆಲವು ಸಾರೆ ಕೇಂದ್ರ ಸರಕಾರವು ಪರಗಣೆಯೊಂದರ ಭಾಗವನ್ನು ಕತ್ತರಿಸಿ ಚಿಕ್ಕ ವಿಭಜನೆಯನ್ನು ಮಾಡಿ ಹೊಸ ದೇಸಾಯಿಯನ್ನು (ಅಥವಾ ದೇಶಮುಖನನ್ನು) ನಿಯಮಿಸಿ ರಾಜಕೃಪೆಯನ್ನು ತೋರಲಾಗುತ್ತಿತ್ತು. ಈ ಚಿಕ್ಕ ವಿಭಜನೆಗಳಲ್ಲಿ ಪ್ರತಿಯೊಂದರಲ್ಲೂ, ನಿಜಕ್ಕೂ ನಾವು ಒಬ್ಬ ಇಲ್ಲವೆ ಹಲವು ದೇಸಾಯರನ್ನು ಕಾಣುತ್ತೇವೆ. ಒಂದು ಚಿಕ್ಕ ವಿಭಜನೆಯಲ್ಲಿ ಹಲವು ದೇಸಾಯರು ಇರಲು ಕಾರಣವೆಂದರೆ ಬಹುತರವಾಗಿ ಆ ದೇಶಗತಿಯಲ್ಲಿ ಇನ್ನಷ್ಟು ಚಿಕ್ಕಚಿಕ್ಕ ವಿಭಜನೆಗಳನ್ನು ಮಾಡದೇ ಆ ದೇಸಾಯಿಯ ಕುಟುಂಬದ ಸದಸ್ಯರು ಆ ದೇಶಗತಿಯಲ್ಲಿ ಹಂಚಿಕೊಂಡಿದ್ದರು ಎಂದರ್ಥ.

ಸ್ವಲ್ಪದರಲ್ಲಿ ಹೇಳುವುದಾದರೆ, ಪರಗಣೆಯೊಂದರ ಚಿಕ್ಕ ವಿಭಜನೆಗಳು ಅದರ ಒಳಗೆ ಮತ್ತು ಹೊರಗೆ, ಆ ಪರಗಣೆಯ ದೇಸಗತಿಯ ವಿಭಜನೆ ಮತ್ತು ಉಪವಿಭಜನೆಗಳೊಡನೆ ಹುಟ್ಟಿಕೊಂಡವೆಂದು ಹೇಳಬಹುದು.

೩. ಮುವಾಮಲಾ ಮತ್ತು ಖಲಾಹ:

ಇವೆರಡೂ ಅರೇಬಿಕ್ ಶಬ್ದಗಳೇ. 'ಮುವಾಮಲಾ' ಮೂಲತಃ 'ಭರವಸೆ' ಅಥವಾ 'ಒಪ್ಪಿಗೆ' ಎಂದು ಅರ್ಥ ಉಳ್ಳದ್ದು. ಮತ್ತು 'ಖಲಾಹ' ಎಂದರೆ 'ಕೋಟೆ' ಅಥವಾ 'ಶ್ರೀಮಂತ ಗೃಹ' ಎಂದು ಅರ್ಥ. ಈ ಶಬ್ದಗಳು ಯಾವಾಗ ದಕ್ಷಿಣದಲ್ಲಿ ಬಳಕೆಗೆ ಬಂದವು ಸ್ಪಷ್ಟವಿಲ್ಲ. ಆದರೆ ಆದಿಲ್‌ಶಾಹಿ ದಾಖಲೆಗಳು ತಿಳಿಸುವಂತೆ ಸುಲ್ತಾನನಿಂದ ನೇರವಾಗಿ ನಿಯಮಿಸಲ್ಪಟ್ಟ ಹವಾಲ್ದಾರನ ಆಡಳಿತಕ್ಕೊಳಪಟ್ಟ ಆಡಳಿತಾತ್ಮಕ ವಿಭಜನೆಗಳಾಗಿದ್ದವು ಎಂದು ಗೊತ್ತಾಗುತ್ತದೆ. ಇಲ್ಲಿ ಪ್ರಮುಖ ಜಿಲ್ಲೆಗಳು ಎಂದಲ್ಲಿ 'ಮುವಾಮಲಾ' ಮತ್ತು ಖಲಾಹ ಎಂದೇ ಅರ್ಥ.

'ಮುವಾಮಲಾ' ಮತ್ತು 'ಖಲಾಹ' ಇವುಗಳಿಗೆ ಸಂಬಂಧಿಸಿದ ಎರಡು ಮಹತ್ವದ ಅಂಶಗಳನ್ನು ಇಲ್ಲಿ ಹೇಳಬೇಕು : (೧) ಆದಿಲ್‌ಶಾಹಿ ಸುಲ್ತಾನರ ಆಡಳಿತಕ್ಕಿಂತ ಮೊದಲೇ ಈ ಶಬ್ದಗಳು ದಕ್ಷಿಣದಲ್ಲಿ ಪ್ರವೇಶ ಪಡೆದಿದ್ದರೂ ಈ ಸುಲ್ತಾನರೂ ಪ್ರಮುಖ ಜಿಲ್ಲೆಗಳನ್ನು ರಚಿಸಿದ್ದರು. (ಉದಾ: 'ಖಲಾ' ಶಾಹದುರ್ಗವನ್ನು ೧೫೬೦ರ ಸುಮಾರಿಗೆ ಮತ್ತು 'ಖಲಾ' ಸಾತಾರಾವನ್ನು ೧೫೪೦ರಲ್ಲಿ) (೨) ಚಿಕ್ಕ ಪ್ರಮುಖ ಜಿಲ್ಲೆಗಳು ಸಾಮಾನ್ಯವಾಗಿ ದೊಡ್ಡ ಪರಗಣೆಯಷ್ಟೇ ವ್ಯಾಪ್ತಿ ಹೊಂದಿದ್ದವು ಇಲ್ಲವೆ ಬಹಳಷ್ಟು ಸಾರೆ ಅದಕ್ಕಿಂತಲೂ ದೊಡ್ಡವಾಗಿದ್ದವು. ಯಾಕೆಂದರೆ ಈ ಬಹಳಷ್ಟು ಜಿಲ್ಲೆಗಳು ಎರಡರಿಂದ ಆರು ಸಣ್ಣ ವಿಭಾಗಗಳನ್ನು ('ಸಮ್ತ' ಮತ್ತು 'ಖಾರ್ಯತ್') ಒಳಗೊಂಡಿದ್ದವು ಮತ್ತು ಖಲಾಹ ಶಹಾದುರ್ಗವು ಏಳು ಪರಗಣೆಗಳು ಮತ್ತು ಒಂದು 'ಖಾರ್ಯತ್'ದಷ್ಟು ವಿಸ್ತಾರವಾಗಿತ್ತು.

ಹಾಗಾದರೆ ಎಂಥ ಪ್ರಕಾರದ ಪ್ರದೇಶಗಳನ್ನು ಪ್ರಮುಖ ಜಿಲ್ಲೆಗಳೆಂದು ಗುರುತಿಸಲಾಗಿತ್ತು? ಪ್ರಸಿದ್ಧ ಹೊಳೆಗಳು ಕೂಡುವಲ್ಲಿ (ಉದಾ: ಸಂದಲಾಪುರ, ರಾಯಚೂರು, ತೊರಗಲ್ಲ ಮತ್ತು ಬಂಕಾಪುರ) ಕಣಿವೆಗಳಲ್ಲಿ (ಉದಾ: ಮುದಗಲ್ಲ ಮತ್ತು ಮಿರಜ) ಬಂದರ ಪ್ರದೇಶಗಳಲ್ಲಿ (ಉದಾ: ಗೋವಾ ಮತ್ತು ಚೌಲ) ಮತ್ತು ಮಹತ್ವದ ಜನವಾಹನ ಸಂಚಾರದ ಕೇಂದ್ರಗಳಲ್ಲಿ (ಕಲ್ಯಾಣ ಮತ್ತು ಬಿವಂಡಿ) ಈ ಜಿಲ್ಲಾ ಕ್ಷೇತ್ರಗಳಿದ್ದವು. ಅವು ಒಳನಾಡಿನಲ್ಲಿಗಿಂತ ರಾಜ್ಯದ ಸರಹದ್ದುಗಳಗುಂಟ ಚದುರಿದ್ದವು. ಬೇರೆ ಶಬ್ದಗಳಲ್ಲಿ ಹೇಳುವುದಾದರೆ, ನೀರಿನ ಸೌಕರ್ಯವಿದ್ದು ಕೃಷಿ ಉತ್ಪನ್ನಕ್ಕೆ ಯೋಗ್ಯವಾದ ಫಲವತ್ತಾದ ಭೂಮಿಯುಳ್ಳ ಪ್ರದೇಶಗಳಲ್ಲಿ ಮತ್ತು ಆಯಕಟ್ಟಿನ ಸೈನ್ಯ ಜಮಾವಣೆ ಮತ್ತು ಸಂಚಾರದ ಕ್ಷೇತ್ರಗಳಲ್ಲಿ ಈ ಮುವಾಮುಲಾ ಮತ್ತು ಖಲಾಹ ಜಿಲ್ಲೆಗಳು ಆರ್ಥಿಕವಾಗಿ ಮತ್ತು ಸೈನ್ಯಕ್ಕೆ ಸಂಬಂಧಿಸಿ ಮಹತ್ವವೆನಿಸಿದ್ದ ವಲಯಗಳಿದ್ದವು.

ನಮ್ಮ ದಾಖಲೆಗಳಲ್ಲಿ 'ಮುವಾಮಲಾ' ಮತ್ತು 'ಖಲಾಹ' ಪರ್ಯಾಯಸೂಚಕ ಪದಗಳಾಗಿ ಉಪಯೋಗಿಸಲ್ಪಟ್ಟಿಲ್ಲ, ಆಡಳಿತಾತ್ಮಕವಾಗಿ ಬೇರೆ ಬೇರೆ ವಿಭಜನೆಗಳನ್ನು ಸೂಚಿಸುವ ಶಬ್ದಗಳಾಗಿವೆ. ಎರಡು ವಿಭಿನ್ನ ಪ್ರಕಾರದ ಜಿಲ್ಲೆಗಳನ್ನು ಏಕೆ ನಿರ್ಮಿಸಲಾಯಿತು ಎಂಬುದು ತಿಳಿಯಲಾರದು. 'ಮುವಾಮಲಾ' ಮತ್ತು 'ಖಲಾಹ' ಎರಡರಲ್ಲೂ ಹವಾಲ್ದಾರ ಮತ್ತು ಅವನ ಅಧೀನರನ್ನು ನಿಯಮಿಸಿಕೊಳ್ಳಲಾಗುತ್ತಿತ್ತು ಮತ್ತು ಅವರು ಒಂದೇ ಬಗೆಯ ಕಛೇರಿ ಕೆಲಸವನ್ನು ಮಾಡುತ್ತಿದ್ದರು. ಹವಾಲ್ದಾರನನ್ನು ಬಹಳ ಸಾರೆ ಒಂದು ಜಿಲ್ಲೆಯಿಂದ ಮತ್ತೊಂದಕ್ಕೆ ವರ್ಗ ಮಾಡಲಾಗುತ್ತಿತ್ತು. ಮುವಾಮುಲ್ಲಾದಲ್ಲಿಯೂ ಕೂಡ ಒಂದು ಕೋಟೆ ಅಥವಾ ಶ್ರೀಮಂತ ಗೃಹ ಇರುತ್ತಿತ್ತು. ಆದ್ದರಿಂದ ಎರಡು ಪ್ರಕಾರದ ಈ ಜಿಲ್ಲೆಗಳಲ್ಲಿ ಆಡಳಿತಾತ್ಮಕ ಕಾರ್ಯ ವ್ಯತ್ಯಾಸ ಯಾವುದೂ ಇರಲಿಲ್ಲ. ಆದರೆ, ಮುವಾಮಲಾ ಜಿಲ್ಲೆಗಳಲ್ಲಿ ಬಹುಶಃ ಸೈನಿಕ ಉದ್ದೇಶಗಳಿಗಿಂತ ಹಣಕಾಸಿನ ಉದ್ದೇಶಗಳಿಗಾಗಿ ಸ್ಥಾಪಿಸಲಾಯಿತು, ಖಲಾಹ ಜಿಲ್ಲೆಗಳ ವಿಷಯದಲ್ಲಿ ಇದು ತದ್ವಿರುದ್ಧವಾಗಿತ್ತು. ಮೇಲೆ ಹೇಳಿದಂತೆ ನಾವು ತಿಳಿದುಕೊಳ್ಳುವುದೇನೆಂದರೆ ಈ ಶಬ್ದಗಳಲ್ಲಷ್ಟೇ ವ್ಯತ್ಯಾಸವಿರಲಿಲ್ಲ. ಅವುಗಳ ಸ್ವರೂಪದಲ್ಲಿಯೂ ಅಂತರವಿತ್ತು : ಒಂದು ಮುವಾಮಲಾವು ವ್ಯಾಪಾರ ಮತ್ತು ಜನ–ವಾಹನಸಂಚಾರದ ಕೇಂದ್ರವಾಗಿದ್ದರೆ, ಖಲಾಹವು ಪಶ್ಚಿಮ ಘಟ್ಟದ ಆಯಕಟ್ಟಿನ ಸ್ಥಳದಲ್ಲಿ ಹಬ್ಬಿರುತ್ತಿತ್ತು ಮತ್ತು ಇದರಿಂದ ಬಂದ ಉತ್ಪನ್ನದ ಮೊತ್ತದಲ್ಲಿ ದೊಡ್ಡ ಭಾಗವನ್ನು ಕೋಟೆಯ ನಿರ್ವಹಣೆಗಾಗಿ ಇಲ್ಲವೆ ದುರಸ್ತಿಗಾಗಿ ಉಪಯೋಗಿಸಲಾಗುತ್ತಿತ್ತು. ಮುವಾಲಾಗಳ ವಿಷಯದಲ್ಲಿ ಹೀಗಿರಲಿಲ್ಲ.

■

*

ಪರಂಪರಾಗತ ಅಧಿಕಾರಿಗಳು–ವಿಶೇಷತಃ ದೇಸಾಯಿ (ಅಥವಾ ದೇಶಮುಖ) ಮತ್ತು ದೇಶ ಕುಲಕರ್ಣಿ (ಅಥವಾ ದೇಶಪಾಂಡೆ)

೧. ಪರಂಪರಾಗತ ಅಧಿಕಾರಿಗಳ ಬಗೆಗೆ ಒಟ್ಟಾರೆಯಾಗಿ ಅನ್ವಯಿಸುವ ಮಾತುಗಳು :

ದೇಸಾಯಿ (ಅಥವಾ ದೇಶಮುಖ), ದೇಶ ಕುಲಕರ್ಣಿ (ಅಥವಾ ದೇಶಪಾಂಡೆ), ಪಾಟೀಲ (ಅಥವಾ ಮುಖದ್ದಮ), ಕುಲಕರ್ಣಿ, ಸೆಟೆ, ಮಹಾಜನ ಇತ್ಯಾದಿ ಶಬ್ದಗಳಲ್ಲಿ ಮಖದ್ದಮ ಒಂದೇ ಅರೇಬಿಕ್ ಮೂಲದ್ದು, ಉಳಿದೆಲ್ಲವುಗಳೂ ಈ ದೇಶೀಯ ಹಿಂದು ಪದಗಳಾಗಿವೆ. ಮುಸಲ್ಮಾನ ಆಕ್ರಮಣಕ್ಕಿಂತ ಮೊದಲೇ ಈ ಪರಂಪರಾಗತ ಅಧಿಕಾರಿಗಳ ಕನಿಷ್ಠ ಮಾದರಿಯಾದರೂ ಅಸ್ತಿತ್ವದಲ್ಲಿತ್ತು ಎಂಬುದನ್ನು ಈ ಪದಗಳು ಸೂಚಿಸುತ್ತವೆ. ಒಂದು ಸಂಗತಿಯೆಂದರೆ 'ಪಾಟೀಲ' 'ಕುಲಕರ್ಣಿ' 'ಸೆಟೀ' ಮತ್ತು ಹದಿಮೂರನೆಯ ಶತಮಾನಗಳ ತಾಮ್ರಫಲಕಗಳ ಮೇಲೆ ಇರುತ್ತವೆ. ಆದರೆ ಆ ಕಾಲದಲ್ಲಿ ಅವುಗಳ ಕಾರ್ಯಗಳೇನಾಗಿದ್ದವು ಎಂಬುದು ಗೊತ್ತಾಗುವುದಿಲ್ಲ. ತದ್ವಿರುದ್ಧವಾಗಿ 'ದೇಸಾಯಿ' (ಅಥವಾ 'ದೇಶಮುಖ') ಮತ್ತು ದೇಶಕುಲಕರ್ಣಿ (ಅಥವಾ ದೇಶಪಾಂಡೆ) ಪದಗಳನ್ನು ನಾವು ಮುಸಲ್ಮಾನಪೂರ್ವ ಹಿಂದು ಕಾಲದಲ್ಲಿ ಕಾಣಲಾರೆವು. ನನಗೆ ತಿಳಿದಂತೆ ಈ ಪದಗಳಿಗೆ ಸಂಬಂಧಿಸಿದ ಅತಿ ಹಳೆಯ ಸಾಕ್ಷ್ಯಾಧಾರ ಪುರಾವೆ ೧೩೯೯ಕ್ಕಿಂತ ಮೊದಲು ಸಿಗುವುದಿಲ್ಲ; ಅಂದರೆ ಬಹಮನಿ ಸುಲ್ತಾನ ರಾಜ್ಯ ಸ್ಥಾಪಿತವಾದ ಐದು ದಶಕಗಳ ನಂತರ ಅದು ಲಭ್ಯವಾಗುತ್ತದೆ. ಆದಾಗ್ಯೂ ಪ್ರೊ. ಎ.ಎಸ್. ಅಲ್ಟೇಕರರ ಪ್ರಕಾರ 'ದೇಶಮುಖ' ಮತ್ತು 'ದೇಶಪಾಂಡೆ' ಇವುಗಳ ಮಾದರಿಯು, ಬೇರೆ ಶಬ್ದಗಳಲ್ಲಿ ಬಳಕೆಯಾದರೂ, ಎಂಟರಿಂದ ಹನ್ನೊಂದನೆಯ ಶತಮಾನಗಳವರೆಗೆ ಆಳಿದ ರಾಷ್ಟ್ರಕೂಟರ ಅವಧಿಯಲ್ಲಿ ಅಸ್ತಿತ್ವದಲ್ಲಿತ್ತು.

ಹಿಂದು ಅವಧಿಯಲ್ಲಿಯ ಪಾರಂಪರಿಕ ಅಧಿಕಾರಿಗಳ ಮಾದರಿಗಳು ಮಾಡುತ್ತಿದ್ದು ಕಾರ್ಯಗಳೇನಿದ್ದವು ಮತ್ತು ಅವರ ಸಂಭಾವನೆ ಎಷ್ಟಿತ್ತೆಂದು ನಿಖರವಾಗಿ ಗೊತ್ತಿಲ್ಲ. ಆದರೆ ಮುಸಲ್ಮಾನ ಕಾಲದ ಪಾರಂಪರಿಕ ಅಧಿಕಾರಿಗಳ ಕರ್ತವ್ಯಗಳು ಮತ್ತು ಅವರಿಗೆ ಕೊಡುತ್ತಿದ್ದ ಸಂಭಾವನೆಯ ವಿಧಾನಗಳು, ವಿಶೇಷತಃ ಆದಿಲ್‌ಶಾಹಿ ಆಡಳಿತ ಕಾಲದಲ್ಲಿ, ಸ್ಪಷ್ಟವಾಗಿ 'ಮಿರಾಸ' ಅಥವಾ 'ವತನ' ಎಂದು ಗೊತ್ತುಪಡಿಸಲಾಗಿತ್ತು. ಸಾಮಾನ್ಯವಾಗಿ ಸಂಭಾವನೆಯನ್ನು 'ಇನಾಮ' ಎಂದು ಕರೆಯುತ್ತಿದ್ದರು. 'ಇನಾಮ' ಶಬ್ದದ ಅರ್ಥ 'ನಿರಂತರ ಕಾಣಿಕೆ' ಎಂದಾಗುತ್ತದೆ. ಈ ಮೂರು ಶಬ್ದಗಳು ಅರೇಬಿಕ್ ಮೂಲದವು. ಇದು ತಿಳಿಸುವುದೇನೆಂದರೆ ದಕ್ಷಿಣದಲ್ಲಿ ಕಂಡುಬಂದ ಪಾರಂಪರಿಕ ಅಧಿಕಾರಿಗಳ ಮಾದರಿಗಳನ್ನು ಮುಸಲ್ಮಾನ ಆಡಳಿತಗಾರರು ಅಳವಡಿಸಿಕೊಂಡು ಅವರ ಕರ್ತವ್ಯಗಳನ್ನು ಗೊತ್ತುಪಡಿಸಿ ಮುಸಲ್ಮಾನ ಪರಿಕಲ್ಪನೆಯ ಪ್ರಕಾರ ಅವರ ಸಂಭಾವನೆಯ ವಿಧಾನಗಳನ್ನು ನಿಗದಿಪಡಿಸಿದರು. ಹೀಗೆ ಈ ಮಾದರಿಗಳನ್ನು ಮುಸಲ್ಮಾನ ಆಳುಗರು ತಮ್ಮ ಸತ್ತೆಯ ಸ್ಥಾನಿಕ ನಿಯೋಗಿಗಳನ್ನಾಗಿ ಉಪಯೋಗಿಸಿದರು.

ಆದಿಲ್‌ಶಾಹಿಗಳ ಆಡಳಿತದ ಅವಧಿಯಲ್ಲಿ ಪಾರಂಪರಿಕ ಅಧಿಕಾರಿಯ ಅಧಿಕಾರ ಸ್ಥಾನ ಮತ್ತು ಅವನ ಸಂಭಾವನೆಯನ್ನು (ದೇಸಾಯಿಯಿಂದ ಮಹಾಜನರವರೆಗೆ) ಸ್ವತಃ ಸುಲ್ತಾನನೇ ನೇರವಾಗಿ ಅಥವಾ ಕೊನೆಯಲ್ಲಿ ಧೃಡಪಡಿಸಿ ಖಚಿತಪಡಿಸುತ್ತಿದ್ದನು. ಈ ಕ್ರಮವು ಕೇವಲ ಪ್ರಮುಖ ಜಿಲ್ಲೆಗಳಿಗಷ್ಟೇ ಅಲ್ಲದೆ ಸರಕಾರಿ ಅಧಿಕಾರಿಗಳ ಜಹಗೀರಿಗಳಿಗೂ ಅನ್ವಯಿಸುತ್ತಿತ್ತು. ಕೊನೆಯಲ್ಲಿ ಇದರರ್ಥವೇನೆಂದರೆ, ಪಾರಂಪರಿಕ ಅಧಿಕಾರಿಗಳ ಸಂಭಾವನೆಯನ್ನು ಹೆಚ್ಚಿಸುವ ಇಲ್ಲವೆ ಜಹಗೀರಗಳಲ್ಲಿ ಖಾಲಿಯಿದ್ದ ಹುದ್ದೆಗಳನ್ನು ತುಂಬುವ ಅಧಿಕಾರವನ್ನು ಜಹಗೀರದಾರನು ಹೊಂದಿದ್ದರೂ ಸುಲ್ತಾನನು ಹಾಗೆ ಮಾಡಿದ್ದಕ್ಕೆ ಒಪ್ಪಿಗೆ ನೀಡಿ ಅಂತಹ ಅನುಕೂಲತೆಗಳನ್ನು ಅವನು ನೀಡುವುದಕ್ಕಾಗಿ ಜಹಗೀರದಾರನು ಮತ್ತು ಅವನ ಅಧಿಕಾರಿಗಳು ಸುಲ್ತಾನನಿಗೆ ನಿಷ್ಠೆ ಉಳ್ಳವರಾಗಲೇಬೇಕಿತ್ತು. ಅದಲ್ಲದೆ, ಒಮ್ಮೊಮ್ಮೆ ಸ್ವತಃ ಸುಲ್ತಾನನೇ ಇಂಥ ಅನುಕೂಲತೆಗಳನ್ನು ಸರಕಾರಿ ಅಧಿಕಾರಿಗಳ ಜಹಗೀರಗಳಿಗೆ ನೇರವಾಗಿ ಕೊಡುತ್ತಿದ್ದನು. ಇದಲ್ಲದೆ, ಒಂದು ವೇಳೆ ಸ್ಥಾನಿಕ ಅಧಿಕಾರಿಯ ಪಾರಂಪರಿಕ ಅಧಿಕಾರಿಯ ಹಕ್ಕುಗಳನ್ನು ಉಲ್ಲಂಘಿಸಿದ್ದರೆ ಆತನು ನೇರವಾಗಿ ಸುಲ್ತಾನನಿಗೆ ನ್ಯಾಯಕ್ಕಾಗಿ ವಿನಂತಿಸಿಕೊಳ್ಳಬಹುದಿತ್ತು. ಸ್ವಲ್ಪದರಲ್ಲಿ ಹೇಳಬೇಕಾದರೆ, ಪಾರಂಪರಿಕ ಅಧಿಕಾರಿಗಳು ಮೂಲಭೂತವಾಗಿ ಸುಲ್ತಾನನ ಸೇವಕರಾಗಿದ್ದರೆ ವಿನಾ ಸ್ಥಾನಿಕ ಅಧಿಕಾರಿಯ ಸೇವಕರು ಆಗಿದ್ದಿಲ್ಲ.

ಪಾರಂಪರಿಕ ಅಧಿಕಾರಿಗಳ ಅಧಿಕಾರ ಸ್ಥಾನ ಮತ್ತು ಸಂಭಾವನೆ ಎರಡೂ ಕೇವಲ ಹೆಸರಿಗೆ ಮಾತ್ರ, ಹಾಗೆಯೇ ನಿಜವಾಗಿಯೂ ಇದ್ದವು. ಯಾಕೆಂದರೆ ಅನೇಕ

ಫರ್ಮಾನುಗಳು ಮತ್ತು ಕೌಲನಾಮಗಳು ಕೆಳಗಿನ ಶಬ್ದಗಳನ್ನು ಒಳಗೊಂಡಿದೆ- "ಅವನ ನಂತರ, ಅವನ ಮಗ ಇಲ್ಲವೆ ಮೊಮ್ಮಗ" ಯುಗ ಮುಗಿಯುವವರೆಗೆ" "ಕಾಲದ ಕೊನೆಯವರೆಗೆ", "ಪೀಳಿಗೆಯಿಂದ ಪೀಳಿಗೆಗೆ", ಹೀಗೆ.

ಸಾಮಾನ್ಯವಾಗಿ ಪಾರಂಪರಿಕ ಅಧಿಕಾರಿಗಳ ಕರ್ತವ್ಯಗಳು ಸುಲ್ತಾನರ ವಿಷಯಕ್ಕೆ ನಿಷ್ಠೆ ಮತ್ತು ಗೌರವ ಭಾವನೆಯನ್ನು ವ್ಯಕ್ತಪಡಿಸುವಂತಹವು ಆಗಿದ್ದವು. ಅಂಥ ಭಾವ ಪ್ರದರ್ಶನಕ್ಕೆ ಪರ್ಶಿಯನ್ ಶಬ್ದಗಳನ್ನು ಬಳಸಲಾಗುತ್ತಿತ್ತು : 'ಹಲಾಲ-ಖ್ವಾರಿ' (ಸ್ವಾಮಿ ನಿಷ್ಠೆ) 'ಜಾನಫಿಶಾನಿ' (ಜೀವನ ಮುಡುಪು), 'ದೌಲತ್-ಖ್ವಾವರಿ'(ಪ್ರಭುವಿನ ಅಭ್ಯುದಕ್ಕಾಗಿ ಸದಿಚ್ಛೆ), 'ನಮಕ-ಹಲಾಲಿ' (ಉಪ್ಪಿನ ಋಣ), ಹೀಗೆ, ಅವರು ರಾಜ ಖಜಾನಿಗೆ ಇಂತಿಷ್ಟು ಪ್ರಮಾಣದಲ್ಲಿ ತೆರಿಗೆ ಕಟ್ಟುವುದಲ್ಲದೆ ಬೇರೆ ಬೇರೆ ಕಛೇರಿ ಕೆಲಸಗಳನ್ನು ಮಾಡಬೇಕಾಗಿತ್ತು.

ಮೊದಲೇ ಹೇಳಿದಂತೆ, ಸಂಭಾವನೆಯನ್ನು ಒಳಗೊಂಡ ಅಧಿಕಾರ ಸ್ಥಾನಕ್ಕೆ 'ಮಿರಾಸ' ಎನ್ನಲಾಗುತ್ತಿತ್ತು. ಮೂಲತಃ 'ಮಿರಾಸ' ಅಂದರೆ 'ಪೂರ್ವಿಕರಿಂದ ಬಂದದ್ದು' ಅಥವಾ 'ಪಿತ್ರಾರ್ಜಿತ' ಎಂದರ್ಥ. ಇದರ ಮಾಲೀಕನು (ಉಪಭೋಗಿಯು) ಇದನ್ನು ವಿಭಜಿಸಬಹುದು, ಮಾಡಬಹುದು ಇಲ್ಲವೆ ಪರಭಾರೆ ಮಾಡಬಹುದಾಗಿತ್ತು. ಆದರೆ ಅದರ ವಿಭಜನೆ, ಮಾರಾಟ ಅಥವಾ ಪರಭಾರೆ ಇವು ಎರಡು ವಿಧದಲ್ಲಿ ನಿರ್ಬಂಧಿತವಾಗಿದ್ದವು : ಅದಕ್ಕೆ ಸರಕಾರದ ಮಂಜೂರಾತಿ ದೊರಕಬೇಕಿತ್ತು ಮತ್ತು ಸ್ಥಾನಿಕ ಸಮಾಜದಿಂದ ಕ್ರಮಬದ್ಧ ಒಪ್ಪಿಗೆ ಬೇಕಾಗಿತ್ತು. ಈ ನಿರ್ಬಂಧನೆಗಳಿಂದಾಗಿ ಮಹತ್ವದ ಪರಿಣಾಮವೊಂದು ಉದ್ಭವಿಸಿತು: ಬ್ರಾಹ್ಮಣರು, ಮರಾಠರು, ಪ್ರಭುಗಳು ಮತ್ತು ಲಿಂಗಾಯಿತರು ಈ ಉಚ್ಚ ಹಿಂದು ಜಾತಿಗಳು ಸಾಮಾನ್ಯವಾಗಿ ಈ ಪಾರಂಪರಿಕ ಅಧಿಕಾರ ಹುದ್ದೆಗಳ ಮೇಲೆ ಏಕಸ್ವಾಮ್ಯತ್ವ ಪಡೆದವು. ಈ ಪಾರಂಪರಿಕ ಅಧಿಕಾರಿಗಳಲ್ಲಿ ಕೆಲವರಷ್ಟೇ ಮುಸಲ್ಮಾನರಿದ್ದರು ಮತ್ತು ಅವರೂ ಬಹುತರವಾಗಿ ವಿದೇಶಿಯರು ಆಗಿರದೇ ಮತಾಂತರಗೊಂಡ ದೇಶಿಯರಾಗಿದ್ದರು.

೨. ದೇಸಾಯಿ (ದೇಶಮುಖ) ಮತ್ತು ಸುಲ್ತಾನ

ಸುಲ್ತಾನನು ತನ್ನ ಅನಿರ್ಬಂಧಿತ, ಅಪರಿಮಿತ ದಯೆಯಿಂದ ಒಬ್ಬ ದೇಸಾಯಿಯ ಅಧಿಕಾರ ಸ್ಥಾನ ಮತ್ತು ಅವನ ಸಂಭಾವನೆಯನ್ನು ದೃಢಪಡಿಸುತ್ತಿದ್ದನು; ತನ್ನ ನಿರ್ಣಯವನ್ನು ಸ್ಥಾನಿಕ ಸರಕಾರಿ ಅಧಿಕಾರಿಗಳಿಗೆ, ಜಹಗೀರದಾರರಿಗೆ, ಉಳಿದ ಪಾರಂಪರಿಕ ಅಧಿಕಾರಿಗಳಿಗೆ, ಆ ಭಾಗದ ಸಾಮಾನ್ಯ ಪ್ರಜೆಗಳಿಗೆ ತಿಳಿಸುತ್ತಿದ್ದನು ಮತ್ತು ಆ ದೇಸಾಯಿಯ ಕರ್ತವ್ಯಕ್ಕೆ ಅಡ್ಡಿ ಮಾಡಬಾರದು ಮತ್ತು ಆತನ ಸಂಭಾವನೆಯ ಉಪಭೋಗಕ್ಕೆ ಬಾಧೆ ಬರಬಾರದು ಎಂದು ಅಪ್ಪಣೆ ಹೊರಡಿಸುತ್ತಿದ್ದನು.

ಸುಲ್ತಾನನು ನೀಡಿದ್ದ ಈ ಕೃಪೆಗಾಗಿ ದೇಸಾಯಿಯು ಕೆಳಗಿನ ಕರ್ತವ್ಯಗಳನ್ನು ನಿರ್ವಹಿಸಬೇಕಿತ್ತು :

೧.ಕಛೇರಿಯ ಕೆಲಸಗಳನ್ನು ಮಾಡಬೇಕು. ೨. ಸುಲ್ತಾನನಿಗೆ ಸ್ವಾಮಿನಿಷ್ಠನಾಗಿರಬೇಕು ೩. ರಾಜ ಖಜಾನೆಗೆ ಗೊತ್ತುಪಡಿಸಿ ವಾರ್ಷಿಕ ಕಾಣಿಕೆಯನ್ನು ಸಲ್ಲಿಸಬೇಕು. ೪. ತನ್ನ ಒಳ್ಳೆಯ ನಡತೆ ಮತ್ತು ನಿಷ್ಠೆಯ ಬಗ್ಗೆ ಒಬ್ಬ ಜಾಮೀನದಾರನನ್ನು ಕೊಡಬೇಕು. ೫. ಹವಾಲ್ದಾರನ ಮುಖಾಂತರ ಇನಾಮ–ಪಟ್ಟಿಯನ್ನು ರಾಜ ಖಜಾನೆಗೆ ಸಲ್ಲಿಸಬೇಕು ಇಲ್ಲವೆ ಪರಗಣೆಯು ಜಹಗೀರಕ್ಕೆ ಅಧೀನವಾಗಿದ್ದರೆ ಆ ಭಾಗದ ಜಹಗೀರದಾರನಿಗೆ ಅದನ್ನು ಒಪ್ಪಿಸಬೇಕು. ಇದಲ್ಲದೆ, ಪ್ರಮುಖ ಜಿಲ್ಲೆಯ ದೇಸಾಯಿಯು ಹವಾಲ್ದಾರನ ಆಜ್ಞೆಗಳನ್ನು ಆಡಳಿತವನ್ನು ಪಾಲಿಸಬೇಕೆಂದು ಸುಲ್ತಾನನು ಅಪ್ಪಣೆ ಕೊಡುತ್ತಿದ್ದನು. ಸರಕಾರಿ ಅಧಿಕಾರಿಯ ಅಧೀನದಲ್ಲಿದ್ದ ಪರಗಣೆಯ ದೇಸಾಯಿಯು ಅಲ್ಲಿಯ ಜಹಗೀರದಾರನ ಆಜ್ಞೆಯನ್ನು ಪಾಲಿಸಬೇಕೆಂದು ಸುಲ್ತಾನನು ಅಪ್ಪಣೆ ಹೊರಡಿಸುತ್ತಿದ್ದನು.

ಸುಲ್ತಾನನು ಪ್ರತಿಯೊಬ್ಬ ದೇಸಾಯಿಯ ಸ್ವಾಮಿನಿಷ್ಠೆಯನ್ನು ಖಾತ್ರಿಪಡಿಸಿಕೊಳ್ಳುತ್ತಿದ್ದನು ಮತ್ತು ಪ್ರಮುಖ ಜಿಲ್ಲೆಯ ಸರಕಾರಿ ಅಧಿಕಾರಿಗಳ ಮೂಲಕ ಇಲ್ಲವೆ ಜಹಗೀರದಾರ ಮತ್ತು ಗೊತ್ತುಪಡಿಸಿದ ಪರಗಣೆಯಲ್ಲಿದ್ದ ಅವರ ನಿಯೋಗಿಗಳಿಂದ ಆ ದೇಸಾಯಿಯ ಸೇವೆಯ ಮೇಲೆ ನಿಗಾ ಇಡುತ್ತಿದ್ದನು. ಇದಲ್ಲದೆ 'ಮಹಾಲ್ದಾರ' ಎಂಬ ಮೇಲ್ವಿಚಾರಕರ ಮೂಲಕವೂ ಈ ಕೆಲಸ ಮಾಡಿಸುತ್ತಿದ್ದನು; ವಿಶೇಷತಃ ಈ ಮಹಾಲ್ದಾರನೆಂಬ ಅಧಿಕಾರಿಯು ಕೇಂದ್ರ ಸರಕಾರದಿಂದ ಬಂದವನಾಗಿದ್ದು ತಾತ್ಪೂರ್ತಿಕವಾಗಿ ಕೇಂದ್ರ ನ್ಯಾಯಾಲಯಕ್ಕೆ ಅಧೀನಗೊಳಿಸಿದ್ದ ಪರಗಣೆಯಲ್ಲಿ ಅಂದರೆ ಅಲ್ಲಿಯ ದೇಸಾಯಿಯ ಆಡಳಿತದ ಹೊಣೆಗಾರಿಕೆಯಲ್ಲಿದ್ದ ಪರಗಣೆಯಲ್ಲಿದ್ದವನಾಗಿದ್ದನು.

ದೇಸಾಯಿಯು ಯಾವುದೇ ಅಲಕ್ಷ್ಯದ ಅಥವಾ ಕ್ರಮರಹಿತ ಕಾರ್ಯವೆಸಗಿದ್ದು ತಿಳಿದುಬಂದಾಗ ಸುಲ್ತಾನನು ಫರ್ಮಾನ ಹೊರಡಿಸಿ ಅವನು ತನ್ನ ಕರ್ತವ್ಯಗಳನ್ನು ತಪ್ಪದೇ ಮಾಡಬೇಕು. ತತ್‌ಕ್ಷಣವೇ ಕ್ರಮರಹಿತ ಕಾರ್ಯಗಳನ್ನು ನಿಲ್ಲಿಸಬೇಕು ಎಂದು ಆಜ್ಞಾಪಿಸುತ್ತಿದ್ದನು. ಒಂದು ವೇಳೆ ತನ್ನಾಜ್ಞೆಯನ್ನು ಪಾಲಿಸದಿದ್ದರೆ ಮತ್ತೆ ಮುಂದೆಯೂ ಹೀಗೆ ತಪ್ಪು ಮಾಡಿದರೆ ಆ ದೇಸಾಯಿಯ ಅಧಿಕಾರವನ್ನು ಮತ್ತು ಸಂಭಾವನೆಯನ್ನು ಬೇರೊಬ್ಬನಿಗೆ ಹಸ್ತಾಂತರಿಸಲಾಗುವುದು ಎಂದು ಎಚ್ಚರಿಸಿ ಆ ಫರ್ಮಾನ್‌ದಲ್ಲಿ ಕಾಣಿಸಲಾಗುತ್ತಿತ್ತು.

ದೇಸಾಯಿಯು ಅವಿಧೇಯನಾಗಿದ್ದರೆ, ಉಪಟಳ ಅಥವಾ ದಂಗೆಯಲ್ಲಿ ತೊಡಗಿದ ಅಪರಾಧ ಎಸಗಿದ್ದರೆ ಕೇಂದ್ರ ಸರಕಾರದಿಂದ ಸೈನ್ಯವನ್ನು ಕಳಿಸಿ ಇಲ್ಲವೆ ಹವಾಲ್ದಾರರು

ಮತ್ತು ಬೇರೆ ಪರಗಣೆಗಳ ದೇಸಾಯರು ತಮ್ಮಲ್ಲಿಟ್ಟಿದ್ದ ಸೈನ್ಯವನ್ನು ಕೂಡಿಸಿ ಅವನ ದಂಗೆಯನ್ನು ಸದೆಬಡಿದು, ಬಂಧಿಸಿ ರಾಜಧಾನಿಗೆ ಅವನನ್ನು ಕಳಿಸುವಂತೆ ಸುಲ್ತಾನನು ಕಾರ್ಯರ್ಗೈಯುತ್ತಿದ್ದನು. ಅವನ ಅಧಿಕಾರ ಮತ್ತು ಸಂಭಾವನೆಯನ್ನು ಕಿತ್ತುಕೊಳ್ಳಲಾಗುತ್ತಿತ್ತು, ಅಲ್ಲದೆ ತಾತ್ಪೂರ್ತಿಕವಾಗಿ ನ್ಯಾಯಾಲಯವೇ ಕಳಿಸಿದ ಸರಕಾರಿ ಅಧಿಕಾರಿಯಿಂದ ಆ ದೇಸಗತಿಯನ್ನು ನೋಡಿಕೊಳ್ಳುವಂತೆ ಮಾಡಲಾಗುತ್ತಿತ್ತು. ನಂತರ ಆ ದೇಸಾಯಿಯ ಬಂಧುಗಳು ಅಧಿಕಾರ ಮತ್ತು ಸಂಭಾವನೆಯನ್ನು ಮರಳಿಸಬೇಕೆಂದು ಸುಲ್ತಾನನಿಗೆ ಪ್ರಾರ್ಥಿಸಿಕೊಂಡರೆ ಸಾಮಾನ್ಯವಾಗಿ ಅವನು ಅವರ ವಿನಂತಿಯನ್ನು ಮನ್ನಿಸುತ್ತಿದ್ದನು. ಆದಾಗ್ಯೂ, ಒಮ್ಮೊಮ್ಮೆ ಆ ಮಿರಾಸನ್ನು ಶಾಶ್ವತವಾಗಿ ಕಿತ್ತುಕೊಂಡು ಮತ್ತೊಬ್ಬ ಯೋಗ್ಯನೆನಿಸಿದ ಹಿಂದು ವ್ಯಕ್ತಿಗೆ ರಾಜಕೃಪೆಯನ್ನು ನೀಡಲಾಗುತ್ತಿತ್ತು.

ಸಂಕ್ಷಿಪ್ತದಲ್ಲಿ ಆಯಾ ಪ್ರದೇಶದ ಅತ್ಯಂತ ಮಹತ್ವದ ಪರಂಪರಾಗತ ಹುದ್ದೆಯ ಅಧಿಕಾರಿಯಾಗಿರುವ ದೇಸಾಯಿಯು ಸಾಮಾನ್ಯವಾಗಿ ಸುಲ್ತಾನನ ಕಟ್ಟುನಿಟ್ಟಾದ ನಿಯಂತ್ರಣಕ್ಕೊಳಪಟ್ಟಿದ್ದನು.

೩. ದೇಸಾಯಿಯ ಕರ್ತವ್ಯಗಳು

ಪ್ರಮುಖ ಜಿಲ್ಲೆ ಮತ್ತು ಪರಗಣಾ ಕ್ಷೇತ್ರ ಇವೆರಡರಲ್ಲಿಯೂ ದೇಸಾಯಿ ನಿರ್ವಹಿಸಬೇಕಾಗಿದ್ದ ಕರ್ತವ್ಯಗಳನ್ನು "ಸಂಬಂಧಪಟ್ಟ ಭೂಮಿಯನ್ನು ಬೇಸಾಯಕ್ಕೆ ಯೋಗ್ಯವಾಗಿಡುವುದು ಮತ್ತು ಆ ಪ್ರದೇಶ ಸಂಪದ್ಭರಿತ ಆಗುವಂತೆ ನೋಡಿಕೊಳ್ಳುವುದು" ಎಂದು ಸ್ಪಷ್ಟ ಶಬ್ದಗಳಲ್ಲಿ ತಿಳಿಸಲಾಗಿತ್ತು. ಬೇರೆ ರೀತಿಯಲ್ಲಿ ಹೇಳುವುದಾದರೆ, ಆ ಭಾಗದ ಸಂಪತ್ತನ್ನು ಹೆಚ್ಚಿಸಲು ಮತ್ತು ಸುಲ್ತಾನ ರಾಜ್ಯದ ಕಂದಾಯವನ್ನು ವರ್ಧಿಸಲು ದೇಸಾಯಿಯು ಆ ಭಾಗದ ರಕ್ಷಣೆ, ಭದ್ರತೆಯನ್ನು ನೋಡಿಕೊಳ್ಳಬೇಕು ಮತ್ತು ವ್ಯಾಜ್ಯಗಳನ್ನು ಬಗೆಹರಿಸಿ ನ್ಯಾಯ ವಿತರಿಸಬೇಕು ಎಂದೆಲ್ಲ ವಿಧಿಸಲಾಗಿತ್ತು.

ಸುರಕ್ಷಿತತೆಯ ನಿರ್ವಹಣೆ : ಪ್ರಮುಖ ಜಿಲ್ಲೆ ಮತ್ತು ಪರಗಣೆಯ ಕ್ಷೇತ್ರಗಳೆರಡರಲ್ಲೂ ಸುರಕ್ಷಿತತೆಯನ್ನು ಕಾಪಾಡುವುದು ದೇಸಾಯಿಯ ಜವಾಬ್ದಾರಿ ಆಗಿತ್ತು. ಈ ಉದ್ದೇಶಕ್ಕಾಗಿಯೇ ಅವನು ತನ್ನ ಖರ್ಚಿನಲ್ಲಿಯೇ 'ಸೈನ್ಯವನ್ನು' ಅಥವಾ 'ಅಶ್ವದಳ' ಮತ್ತು 'ಕಾಲ್ದಳ'ವನ್ನು ಸನ್ನದ್ಧವಿಟ್ಟಿದ್ದನು. ಇಂಥ ಸೈನ್ಯ ಘಟಕಗಳಲ್ಲಿ ಕೆಲವು ಹನ್ನೆರಡು ಸೈನಿಕರಿದ್ದ ಗುಂಪುಗಳಿಂದ ಹಲವು ನೂರಾರು ಸೈನಿಕರಿದ್ದ ಗುಂಪುಗಳಿದ್ದವು. ದೇಸಾಯಿಯೊಬ್ಬನು ತನ್ನಲ್ಲಿ ಸಾಮಾನ್ಯವಾಗಿ ಎಷ್ಟು ಜನ ಸೈನಿಕರನ್ನು ಇಟ್ಟುಕೊಳ್ಳಬೇಕೆಂದು ನಿಗದಿಯಾದದ್ದು ಸ್ಪಷ್ಟವಿಲ್ಲದಿದ್ದರೂ, ಅವನು ಅವಶ್ಯವೆನಿಸಿದ್ದರೆ ಆ ಸಂಖ್ಯೆಯನ್ನು ಹೆಚ್ಚಿಸಿಕೊಳ್ಳಬಹುದಾಗಿತ್ತು ಎನ್ನುವುದು ಸ್ಪಷ್ಟವಿದೆ. ಮತ್ತು ಹಾಗೆಯೆ ಅವನು ತನ್ನ ಸೈನ್ಯವನು ಪೋಷಿಸುತ್ತಾನೆ ಎಂದು ಸರಕಾರವು ಸ್ಪಷ್ಟ ನಂಬಿಕೆ ಹೊಂದಿತ್ತು.

ನ್ಯಾಯಾಲಯದಿಂದ ಯಾವ ನಿರ್ದಿಷ್ಟ ಆಜ್ಞೆ ಬರದಿದ್ದರೂ ತನ್ನ ಕ್ಷೇತ್ರದಲ್ಲಿಯ ದೊಂಬಿಗಳನ್ನು ಸದೆಬಡಿಯುವುದು ಮತ್ತು ವ್ಯಾಜ್ಯಗಳನ್ನು ಬಗೆಹರಿಸುವುದು ದೇಸಾಯಿಯ ಕೆಲಸವಾಗಿತ್ತೆಂದು ನಿರೀಕ್ಷಿಸಲಾಗಿತ್ತು. ಇಲ್ಲದಿದ್ದರೆ, ಈ ವಿಷಯಕ್ಕೆ ಸಂಬಂಧಿಸಿ ಮಾಹಿತಿ ಪಡೆದಿದ್ದು ನ್ಯಾಯಾಲಯವು ದೇಸಾಯಿಯ ನಿರ್ಲಕ್ಷ್ಯಕ್ಕಾಗಿ ಅವನಿಗೆ ಛೀಮಾರಿ ಹಾಕಿ ತತ್‌ಕ್ಷಣವೇ ವಿಷಯವನ್ನು ಬಗೆಹರಿಸಬೇಕೆಂದು ಅವನಿಗೆ ಅಪ್ಪಣೆ ಮಾಡುತ್ತಿತ್ತು. ಉದಾಹರಣೆಗೆ ಗಲಭೆಕೋರ ಪಾಟೀಲರನ್ನು ಮತ್ತು ಉಳಿದ ದೇಸಾಯರನ್ನು ನಿಯಂತ್ರಿಸಲು ಜಹಗೀರಗಳಲ್ಲಿ ನುಗ್ಗಿಬರುವವರನ್ನು ಕಿತ್ತೆಸೆಯಲು ಅಥವಾ ದಂಗೆಯನ್ನು ಸದೆಬಡಿಯಲು ಮತ್ತು ಉನ್ಮಾರ್ಗದಲ್ಲಿ ತೊಡಗಿರುವ ಜಹಗೀರದಾರರನ್ನು ಹಾಗೆಯೇ ಸಾಮಾನ್ಯವಾಗಿ ವರಿಷ್ಠರೆನಿಸಿರುವ ಸ್ಥಾನಿಕ ಸರಕಾರಿ ಅಧಿಕಾರಿಗಳನ್ನು ಗಮನಿಸಲು ಸರಕಾರವು ದೇಸಾಯಿಗೆ ಆಜ್ಞೆ ನೀಡಬಹುದಿತ್ತು. ಈ ಅಂಶವನ್ನು ಸ್ಪಷ್ಟಪಡಿಸಲು ಕೆಲವು ಮಾತುಗಳನ್ನು ಇಲ್ಲಿ ಜೋಡಿಸಬೇಕು. ದೇಸಾಯಿಯು ಹವಾಲ್ದಾರನಿಗೆ ಅಥವಾ ಜಹಗೀರದಾರನಿಗೆ ತಲೆಬಾಗಿ ನಮಸ್ಕರಿಸುವುದು ಅವನು ಅವರಿಗೆ ಸಂಪೂರ್ಣವಾಗಿ ಸಲ್ಲಿಸುವ ವೈಯಕ್ತಿಕ ಅಧೀನತೆಯಾಗಿತ್ತೆಂದು ಅರ್ಥ ಮಾಡಬಾರದು. ಈ ಮೊದಲು ಹೇಳಿದಂತೆ ದೇಸಾಯಿಯ ಪ್ರಪ್ರಥಮ ವಿಧೇಯತೆ (ಸ್ವಾಮಿನಿಷ್ಠತೆ) ಇದ್ದದ್ದು ಸುಲ್ತಾನನಿಗೆ ಮಾತ್ರ. ಎಲ್ಲಿಯವರೆಗೆ ಸ್ಥಾನಿಕ ಅಧಿಕಾರಿಯು, ಅವನು ಹವಾಲ್ದಾರನಾಗಿರಲಿ ಇಲ್ಲವೆ ಜಹಗೀರದಾರನಾಗಿರಲಿ, ಸುಲ್ತಾನನಿಗೆ ಅವಿಧೇಯನಾಗಿರುವ ಲಕ್ಷಣಗಳು ಕಂಡುಬಂದರೆ ಆ ಅಧಿಕಾರಿಯನ್ನು (ಅಂಥವನನ್ನು) ಸದೆಬಡಿಯುವುದು ದೇಸಾಯಿಯ ಕರ್ತವ್ಯವಾಗಿತ್ತು.

ದೇಸಾಯಿಗೊಪ್ಪಿಸಿದ ಸುರಕ್ಷಿತತೆಯ ಹೊಣೆಗಾರಿಕೆಯನ್ನು ಕುರಿತು ಇನ್ನೆರಡು ಅಭಿಪ್ರಾಯಗಳನ್ನು ವ್ಯಕ್ತಪಡಿಸಬಹುದು. ಮೊದಲನೆಯದು, ಕೇಂದ್ರ ಸರಕಾರದ ಆಜ್ಞೆ ಇಲ್ಲದೆ ದೇಸಾಯಿಯು ಅಪರಾಧಿಗೆ ಗಲ್ಲಿನ ಶಿಕ್ಷೆ ಕೊಡುವ ಅಧಿಕಾರ ಹೊಂದಿರಲಿಲ್ಲ. ಎರಡನೆಯದು, ತಮ್ಮ ಪರಗಣೆಗಳಿಂದ ಓಡಿ ಹೋಗಿದ್ದವರನ್ನು ವಾಪಸ ಹಿಡಿದು ತರುವುದು ದೇಸಾಯಿಯ ಮತ್ತು ಉಳಿದ ಪಾರಂಪರಿಕ ಅಧಿಕಾರಿಗಳಿಂದ ಅಧಿಕಾರವಷ್ಟೇ ಅಲ್ಲದೆ ಅದು ಅವರಿಗೆ ಕಡ್ಡಾಯವಾಗಿತ್ತು. ಅನೇಕ ಬೇಡಿಕೆಗಳನ್ನು ಪೂರೈಸದಿದ್ದಕ್ಕೆ ಅಥವಾ ದಬ್ಬಾಳಿಕೆಗೆ ಅಂಜಿ ಜನ ಓಡಿಹೋಗಿದ್ದರೂ ಅವರನ್ನು ಸಂಬಂಧಪಟ್ಟ ಹಳ್ಳಿಗಳಿಗೆ ಕರೆತಂದು ಬೇಸಾಯ ಮಾಡುತ್ತ ಅಲ್ಲಿಯೇ ನೆಲೆಸುವಂತೆ ಮಾಡುವುದು ಮತ್ತು ಅವರಿಗೆ ಮುಂದೆ ಅಂಥ ಸ್ಥಿತಿ ಬರದಂತೆ ಸಾಂತ್ವನ ಮತ್ತು ಭರವಸೆಕೊಡುವುದು ಅವನ (ದೇಸಾಯಿಯ) ಕರ್ತವ್ಯವಾಗಿತ್ತು.

ಸೈನ್ಯಸಂಬಂಧಿ ಕರ್ತವ್ಯಗಳು : ತಮ್ಮ ಸೈನ್ಯ ಸಹಿತ ದೇಸಾಯರು ರಕ್ಷಣಾತ್ಮಕ ಮತ್ತು ಆಕ್ರಮಣಕಾರಿ ಚಟುವಟಿಕೆಗಳೆರಡರಲ್ಲೂ ತೊಡಗಬೇಕಾಗಿತ್ತು. ಒಂದುವೇಳೆ

ಹೊರಗಿನ ರಾಜ್ಯದೊಡನೆ ಸೈನ್ಯ ಕಾರ್ಯಾಚರಣೆಯಿದ್ದರೆ ಸಾಮಾನ್ಯವಾಗಿ ಸರಕಾರಿ ಜಿಲ್ಲೆಗಳ ದೇಸಾಯರು ಹವಾಲ್ದಾರನ ಅಧಿಪತ್ಯದಲ್ಲಿ ಜಮಾಯಿಸಿ ಯುದ್ಧಕ್ಕೆ ತೊಡಗುತ್ತಿದ್ದರು. ಆದರೆ ಒಮ್ಮೊಮ್ಮೆ ಅವರು ತಮ್ಮ ಸೈನ್ಯದೊಡನೆ ರಾಜಧಾನಿಗೆ ಬರಬೇಕು ಇಲ್ಲವೆ ಸುಲ್ತಾನನು ಕಳಿಸಿದ ಸೇನಾನಿಯನ್ನು ಸೇರಿಕೊಳ್ಳಬೇಕೆಂದು ಸರಕಾರದ ವಿಶೇಷ ಆಜ್ಞೆ ಬರುತ್ತಿತ್ತು.

ಜಹಗೀರಗಳಲ್ಲಿದ್ದ ಪರಗಣೆಗಳ ದೇಸಾಯರು ಆ ಜಹಗೀರದಾರನ ಅಪ್ಪಣೆಯನ್ನು ಪಾಲಿಸುತ್ತಿದ್ದರೆ, ನ್ಯಾಯಾಲಯಕ್ಕೆ ಜೋಡಿಸಿದ್ದ (ಅಧೀನದಲ್ಲಿದ್ದ) ಪರಗಣೆಗಳ ದೇಸಾಯರು ರಾಜಧಾನಿಗೆ ಬರಬೇಕು ಇಲ್ಲವೆ ನ್ಯಾಯಾಲಯ ಕಳಿಸಿದ್ದ ಸೇನಾನಿಯ ಕೆಳಗೆ ಯುದ್ಧಮಾಡಬೇಕೆಂದು ಆಜ್ಞಾಪಿಸಲ್ಪಡುತ್ತಿದ್ದರು. ಹೇಗಿದ್ದರೂ ಒಂದಿಲ್ಲ ಒಂದು ರೀತಿಯನ್ನು ದೇಸಾಯರು ಯುದ್ಧದಲ್ಲಿ ಭಾಗವಹಿಸುತ್ತಿದ್ದರು. ಯಾರು ಎಲ್ಲರಲ್ಲಿ ಎದ್ದುತೋರುವಂತೆ ಹೋರಾಟ ಮಾಡುತ್ತಿದ್ದರೊ ಅವರ ಇನಾಮುವನ್ನು ಹೆಚ್ಚಿಸಲಾಗುತ್ತಿತ್ತು. ಅಥವಾ ಅವರಿಗೆ 'ರಾಜ ಮರ್ಯಾದೆಯ ಪೋಷಾಕವನ್ನು ('ಖಿಲಾತ–ಇ–ಫಕಿರ' ಅಥವಾ 'ಖಿರಾತ–ಇ–ಶಬಿ') ಸುಲ್ತಾನನು ಕಳಿಸುತ್ತಿದ್ದನು. ಒಬ್ಬ ದೇಸಾಯಿಯು ಮುಘಲ ದಾಳಿಯ ವಿರುದ್ಧ ಚೆನ್ನಾಗಿ ಹೋರಾಡಿದ್ದರಿಂದ ಅವನಿಗೆ ಮಂತ್ರಿಪದವಿ ('ವಝೀರ್') ಎಂಬ ಬಿರುದು ಕೊಟ್ಟು ೫೦೦ ಅಶ್ವದಳವನ್ನಿತ್ತು ಜಹಗೀರವೊಂದನ್ನು ಸುಲ್ತಾನನು ನೀಡಿದನು.

ನ್ಯಾಯತೀರ್ಪಿಗೆ ಸಂಬಂಧಿಸಿದ ಕರ್ತವ್ಯಗಳು : ದುಷ್ಕರ್ಮೀಯ ಅಪರಾಧಿಗಳಿಗೆ ಸಂಬಂಧಿಸಿದಂತೆ ದೇಸಾಯಿಯ ಹೊಣೆಗಾರಿಕೆಗಳೇನಿದ್ದವು ಎಂಬುದನ್ನು ಈ ಒಳಗಾಗಿ ಚರ್ಚಿಸಲಾಗಿದೆ. ಇಲ್ಲಿ ನಾವು ನಮ್ಮ ಚರ್ಚೆಯನ್ನು ನಾಗರಿಕಾಪರಾಧಿ ಪ್ರಕರಣಗಳಿಗೆ ಸಂಬಂಧಿಸಿದ ಅವನ ಕಾರ್ಯಗಳ ಮೇಲೆ ಕೇಂದ್ರೀಕರಿಸುತ್ತೇವೆ. ಉದಾ: ಪಾರಂಪರಿಕ ಅಧಿಕಾರ ಹುದ್ದೆಗಳಿಗೆ ಸಂಬಂಧಿಸಿದ ಆಸ್ತಿ ಹಾಗೂ ಹಕ್ಕುಗಳನ್ನು ಕುರಿತು ತನ್ನೆದುರು ಬಂದಿರುವ ವ್ಯಾಜ್ಯಗಳನ್ನು ಹೇಗೆ ಬಗೆಹರಿಸುತ್ತಿದ್ದನು, ಇತ್ಯಾದಿ.

ವ್ಯಾಜ್ಯ ಒಂದರಲ್ಲಿರುವ ಎರಡೂ ಪಕ್ಷದವರು ತಮ್ಮ ಪ್ರಕರಣವನ್ನು ಸ್ಥಾನಿಕ ಸರಕಾರಿ ಅಧಿಕಾರಿಗಳು, ಜಹಗೀರದಾರರು, ಆ ಪ್ರದೇಶದ ದೇಸಾಯರು ಅಥವಾ ನೇರವಾಗಿ ಕೇಂದ್ರ ನ್ಯಾಯಾಲಯದ ಎದುರು ಸಾದರಪಡಿಸಬಹುದಿತ್ತು. ಕೇಂದ್ರ ನ್ಯಾಯಾಲಯಕ್ಕೆ ಮೇಲ್ಮನವಿ ಬಂದಾಗ ಸಾಮಾನ್ಯವಾಗಿ ಅದನ್ನು ಸ್ಥಾನಿಕ ಹವಾಲ್ದಾರನಿಗೆ ಪರತ ಕಳಿಸಲಾಗುತ್ತಿತ್ತು. ಇಲ್ಲವೆ ವ್ಯಾಜ್ಯದಾರರ ನೆರೆಹೊರೆಯವರ ಸಾಕ್ಷಿಗಳನ್ನು ಪರೀಕ್ಷಿಸಿ ಅದರ ಆಧಾರದ ಮೇಲೆ ವ್ಯಾಜ್ಯವನ್ನು ಬಗೆಹರಿಸಬೇಕೆಂದು ಸಂಬಂಧಪಟ್ಟ ಜಹಗೀರದಾರನಿಗೆ ಇಲ್ಲವೆ ದೇಸಾಯಿಗೆ ತಿಳಿಸಲಾಗುತ್ತಿತ್ತು. ಇದು ತೋರಿಸುವುದೇನೆಂದರೆ ದೇಸಾಯರು ಅಥವಾ ಸ್ಥಾನಿಕ ಸರಕಾರಿ ಅಧಿಕಾರಿಗಳು ಇಲ್ಲವೆ ಜಹಗೀರದಾರರು

ತಮ್ಮ ಮನಸ್ಸಿಗೆ ಬಂದಂತೆ ತೀರ್ಪು ಕೊಡುವ ಅಧಿಕಾರ ಹೊಂದಿರಲಿಲ್ಲ. "ನೆರೆಹೊರೆಯವರ ಸಾಕ್ಷಿಯ ಮೇಲೆ" ತೀರ್ಪು ನೀಡಬೇಕೆಂದು ಹೇಳುವುದರ ಅರ್ಥವೆಂದರೆ ವಾದಿ-ಪ್ರತಿವಾದಿಗಳು, ದೇಸಾಯಿ ಮತ್ತು ಇನ್ನುಳಿದ ಪಾರಂಪರಿಕ ಅಧಿಕಾರಿಗಳು, ಆ ಹಳ್ಳಿಯ ಕುಶಲಕರ್ಮಿಗಳು, ಕೆಲಸಗಾರರು ಮತ್ತು ರೈತರು ಹಾಗೆಯೇ ಸ್ಥಾನಿಕ ಅಧಿಕಾರಿಗಳು ಇವರೆಲ್ಲರ ಸಭೆ ಕರೆಯಬೇಕು. ಆ ಸಭೆಯಲ್ಲಿದ್ದ ಪ್ರಕರಣವನ್ನು ಬಲ್ಲಂತಹ ಪ್ರತಿಯೊಬ್ಬರಿಂದ ಪ್ರತ್ಯೇಕವಾಗಿ ಸಾಕ್ಷಿ ತೆಗೆದುಕೊಳ್ಳಬೇಕು. ಹಾಗೆ ಸಂಗ್ರಹಿಸಿದ ಸಾಕ್ಷ್ಯಾಧಾರದ ಮೇಲೆ ತೀರ್ಪು ನೀಡಿ ಅದರ ನಿರ್ಣಯದ ಮಹಝರನ್ನು ಸಂಬಂಧಪಟ್ಟ ಪಕ್ಷಗಾರರಿಗೆ ಮಝಲಿಸದ (ಸಭೆಯ) ಹೆಸರಿನಲ್ಲಿ ಕೊಡಬೇಕು. ಮಝಲಿಸಕ್ಕೆ ವ್ಯಾಜ್ಯವನ್ನು ಬಗೆಹರಿಸುವುದಾಗಿದ್ದರೆ ಅದನ್ನು ವಾದಿ ಮತ್ತು ಪ್ರತಿವಾದಿಗಳು ದೈವೇಚ್ಛೆಯ ಕಠಿಣ ಪರೀಕ್ಷೆಯಿಂದ ಬಗೆಹರಿಸಿಕೊಳ್ಳಲು ಒಪ್ಪಿಸುತ್ತಿತ್ತು. ಡಾ. ವ್ಹಿ.ಟಿ. ಗುಣೆಯವರು ಮಧ್ಯಯುಗೀನ ಮಹಾರಾಷ್ಟ್ರದ ಕಾನೂನ ಪದ್ಧತಿಯ ಮೇಲೆ ಕೃತಿಯೊಂದನ್ನು ಪ್ರಕಟಿಸಿದ್ದರಿಂದ ನಾವು ಅದಕ್ಕೆ ಸಂಬಂಧಿಸಿದ ವಿವರಗಳಿಗೆ ಹೋಗುವ ಅವಶ್ಯಕತೆಯಿಲ್ಲ. ಕೆಲವೇ ಮಾತುಗಳನ್ನು ಮಾತ್ರ ಇಲ್ಲಿ ಹೇಳುತ್ತೇನೆ. ಮೊದಲನೆಯದಾಗಿ, ಕೆಲವರು ಹೇಳುವಂತೆ, ಪ್ರಭುತ್ವದ ಭಾಗವಹಿಸುವಿಕೆಯಿಲ್ಲದೆ ಜನ ಸಮುದಾಯವೇ ತನ್ನ ಕೈಯೊಳಗೇ ಅಧಿಕಾರ ತೆಗೆದುಕೊಳ್ಳಲೆಂದು ನಡೆಸುವ ರಮ್ಯ (ಅವಾಸ್ತವವಾದ) ಸಭೆ ಆಮಝಲಿಸ್ ಆಗಿತ್ತೆನ್ನುವುದು ಸರಿಯಲ್ಲ. ದೇಸಾಯಿ ಮತ್ತು ಉಳಿದ ಪಾರಂಪರಿಕ ಅಧಿಕಾರಿಗಳು ಜನರಿಗೆ ಸಂಬಂಧಿಸಿದ ತಮ್ಮ ತಮ್ಮ ಸಂಬಂಧಕ್ಕನುಗುಣವಾಗಿ ರಾಜಪ್ರಭುತ್ವದ ಪ್ರತಿನಿಧಿಗಳಾಗಿ ಆ ಸಭೆಯಲ್ಲಿ ಭಾಗವಹಿಸುತ್ತಿದ್ದರು. ಎರಡನೆಯದಾಗಿ, ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ ಈ ಸಭೆಯಲ್ಲಿ ರಾಜಪ್ರಭುತ್ವವು ಭಾಗವಹಿಸುತ್ತಿದ್ದಿಲ್ಲ; ನಿರ್ಣಯವನ್ನು ನೀಡುವವನು ಕಾನೂನಿನ ಪ್ರಕಾರ ಅಧಿಕಾರ ಹೊಂದಿದ ಯಾವ ವ್ಯಕ್ತಿಯೂ ಅಂದರೆ ಹವಾಲ್ದಾರ, ಜಹಗೀರದಾರ ಅಥವಾ ದೇಸಾಯಿಯೂ ಆಗಿರಲಿಲ್ಲ ; ಸಾಮಾನ್ಯ ಜನರನ್ನೊಳಗೊಂಡ ಸಭೆಯು ಅದಾಗಿದ್ದು ಅಲ್ಲಿಯ ಸಮಾಜವು ಒಪ್ಪದಿದ್ದರೆ ಆ ಸಭೆ ನೀಡಿದ ನಿರ್ಣಯವು ಅಥವಾ ತೀರ್ಪು ತನ್ನ ಬೆಲೆ ಕಳೆದುಕೊಂಡು ಅಸಿಂಧುವೆನಿಸುತ್ತಿತ್ತು. ಸಂಕ್ಷಿಪ್ತವಾಗಿ ಹೇಳುವುದಾದರೆ, ದೇಸಾಯರ ಅದರಂತೆ ಅಧಿಕಾರಿಗಳ ಕಾರ್ಯಗಳು ಸಾಮಾನ್ಯವಾಗಿ ಸಭೆಯನ್ನು ಕರೆಯುವುದು. ಅದರ ಅಧ್ಯಕ್ಷತೆ ವಹಿಸುವುದು ಮತ್ತು ಸಭೆಯು ಕೈಕೊಂಡ ನಿರ್ಣಯವನ್ನು ದೃಢೀಕರಿಸುವುದು ಇಷ್ಟಕ್ಕೇ ಸೀಮಿತವಾಗಿದ್ದವು. ಮೂರನೆಯದಾಗಿ, ಇಂಥದೇ ಕಾನೂನು ಪದ್ಧತಿಯನ್ನು ನಾವು ಪ್ರಾಚೀನ ಭಾರತದಲ್ಲಿ ಗುರುತಿಸಬಹುದು. ಮುಸಲ್ಮಾನ ರಾಜವಂಶಗಳು ಅದೇ ಪದ್ಧತಿಯನ್ನೇ ಅಳವಡಿಸಿಕೊಂಡಂತೆ ಕಾಣುತ್ತದೆ. ಈ ಪದ್ಧತಿಯನ್ನು ಮುಂದುವರೆಸಿಕೊಂಡು ಹೋಗುವಲ್ಲಿ ಮುಸಲ್ಮಾನ ರಾಜರ ಉದ್ದೇಶ ಏನೇ ಇದ್ದರೂ,

ದೇಸಾಯಿಯ ಅಧಿಕಾರ ಅವನ ಹಳ್ಳಿಗಳ ಮೇಲೆ ಅಥವಾ ಜಹಗೀರದಾರನ ಅಧಿಕಾರ ಅವನ ಜಹಗೀರ ಪ್ರದೇಶದ ಮೇಲೆ ಇದ್ದರೂ ಇವರ ಮೇಲೆ ಬಲಿಷ್ಠವಾದ ನಿರ್ಬಂಧನಗಳನ್ನು ಈ ಪದ್ಧತಿ ಹಾಕಿತ್ತು, ಆ ಜನರ ಮೇಲೆ ಸಾಮಾಜಿಕ ಅಪೇಕ್ಷೆಯನ್ನು ಒತ್ತಾಯದಿಂದ ಹೊರಿಸಿತ್ತು ಮತ್ತು ಜನರಲ್ಲಿ ಸಾಂಪ್ರದಾಯಿಕವಾಗಿ ಬಂದಿದ್ದ ಸಮಾಜೋ-ಆರ್ಥಿಕ ವ್ಯವಸ್ಥೆಯನ್ನು ಕಾಯ್ದುಕೊಂಡು ಹೋಗಲು ಅದು ಕಾರಣವಾಯ್ತು.

ಕಂದಾಯ ವಸೂಲಿ : ರಕ್ಷಣೆ, ಸೈನ್ಯಕ್ಕೆ ಸಂಬಂಧಿಸಿದ ವಿಷಯಗಳು ಮತ್ತು ನ್ಯಾಯ ವ್ಯವಸ್ಥೆ ಇವುಗಳಿಗೆ ಸಂಬಂಧಿಸಿದ ದೇಸಾಯಿಯ ಕರ್ತವ್ಯಗಳು ಮತ್ತು ಕಾರ್ಯಗಳು ಮೂಲತಃ ಪ್ರಮುಖ ಜಿಲ್ಲೆಗಳಲ್ಲಿ ಹಾಗೆಯೇ ಪರಗಣೆಯ ಕ್ಷೇತ್ರದಲ್ಲಿ-ಒಂದೇ ಬಗೆಯದಾಗಿದ್ದವು. ಆದರೆ ಈ ಎರಡು ಪ್ರಕಾರದ ಆಡಳಿತಾತ್ಮಕ ವಿಭಜನೆಗಳಲ್ಲಿ ಕಂದಾಯ ಸಂಗ್ರಹಕ್ಕೆ ಸಂಬಂಧಿಸಿದ ಕರ್ತವ್ಯಗಳಲ್ಲಿ ಮಹತ್ವದ ವ್ಯತ್ಯಾಸವಿತ್ತೆಂದು ತೋರಿಬರುತ್ತದೆ. ಮೊಟ್ಟಮೊದಲು, ಪರಗಣೆಯ ಕಂದಾಯ ಸಂಗ್ರಹ ಮತ್ತು ಹಾಗೆ ಸಂಗ್ರಹವಾದ ಉತ್ಪನ್ನವನ್ನು ಹೇಗೆ ನೋಡಿಕೊಳ್ಳುತ್ತಿತ್ತು ಎನ್ನುವುದನ್ನು ಚರ್ಚಿಸೋಣ.

೧. ಈ ಮೊದಲು ಪ್ರಸ್ತಾಪಿಸಿದಂತೆ, ಪರಗಣೆಯೊಂದರ ಆಡಳಿತ ನಿರ್ವಹಿಸಲು ಮೂರು ದಾರಿಗಳಿದ್ದವು: ಒಂದನೆಯದು, ಸಮಸ್ತ ಪರಗಣೆಯನ್ನು ಒಬ್ಬ ಸರಕಾರಿ ಅಧಿಕಾರಿಗೆ ಅವನ ಜಹಗೀರವಾಗಿ ಕೊಟ್ಟು ಅದನ್ನು ನೋಡಿಕೊಳ್ಳುವುದನ್ನು ಅವನಿಗೇ ಒಪ್ಪಿಸುವುದು; ಎರಡನೆಯ ರೀತಿಯೆಂದರೆ, ಪರಗಣೆಯ ಒಂದು ಭಾಗವನ್ನು ಮಧ್ಯಮ ಶ್ರೇಣಿಯ ಸರಕಾರಿ ಅಧಿಕಾರಿಗಳಿಗೆ ಅವರ ಜಹಗೀರೆಂದು ಕೊಟ್ಟು ಉಳಿದ ಭಾಗವನ್ನು ಕೇಂದ್ರ ಸರಕಾರಕ್ಕೊಪ್ಪಿಸಿ ಆ ಪರಗಣೆಯ ದೇಸಾಯಿಯ ಸುಪರ್ದಿಯಲ್ಲಿ ಅದನ್ನಿಡುವುದು; ಮೂರನೆಯದೆಂದರೆ, ಇಡೀ ಪರಗಣೆಯನ್ನೇ ಕೇಂದ್ರ ಸರಕಾರಕ್ಕೆ ಜೋಡಿಸಿ ಅದರ ಆಡಳಿತವನ್ನು ತಪಶೀಲು ಮಾಡಲು ಉನ್ನತ ಮೇಲ್ವಿಚಾರಕನನ್ನು (ಮಾಹಲ್ದಾರನನ್ನು) ನಿಯಮಿಸುವುದು. ತಾತ್ಪೂರ್ತಿಕವಾಗಿ ಕೇಂದ್ರ ಸರಕಾರಕ್ಕೆ ಜೋಡಿಸಿದ್ದ ಪರಗಣೆಯ ತೆರಿಗೆ ವಸೂಲಿ ಮಾಡುವಲ್ಲಿರುವ ದೇಸಾಯಿಯ ಪಾತ್ರವೇನಿತ್ತೆಂದು ಪರಾಮರ್ಶಿಸೋಣ.

ಕೇಂದ್ರ ಸರಕಾರಕ್ಕೆ ಜೋಡಿಸಿದ್ದ ಪರಗಣೆಯ ಕಂದಾಯವನ್ನು ವಸೂಲಿಮಾಡಿ ಅದನ್ನು ರಾಜಧಾನಿಗೆ ಕಳಿಸುವ ಹಕ್ಕು ಮತ್ತು ಹೊಣೆಗಾರಿಕೆಗಳೆರಡೂ ದೇಸಾಯಿಯ ಮೇಲಿದ್ದವು. ೧೬೧೨ ಜನೆವರಿ ೨೦ರಲ್ಲಿ ಹೊರಡಿಸಿದ ಫರ್ಮಾನವು ವಿಶಿಷ್ಟವಾಗಿ ತಿಳಿಸುವಂತೆ ತೊರಗಲ್ಲ ಮುವಾಮಲಾದ ಹವಾಲ್ದಾರನೆ ನೆರೆಯ ಗದಗ ಪರಗಣೆಯ ದೇಸಾಯಿಯ ಕಂದಾಯ ವಸೂಲ ಮಾಡುವ ಕೆಲಸದಲ್ಲಿ ಹಸ್ತಕ್ಷೇಪ ಮಾಡಬಾರದು ಮತ್ತು ಹಾಗೆ ಸಂಗ್ರಹಿಸಿದ ಕಂದಾಯ ಹಣವನ್ನು ದೇಸಾಯಿಯು ಕೇಂದ್ರದ ರಾಜಧಾನಿಗೆ

ಕಳಿಸಬೇಕು ಎಂಬುದು ತಿಳಿದುಬರುತ್ತದೆ. ದೇಸಾಯಿಯು ಹಳ್ಳಿಗಳಿಂದ ಕಂದಾಯ ವಸೂಲಿ ಮಾಡಿ ಅದನ್ನು ಸುಲ್ತಾನನಿಗೆ (ಹುಜೂರರಿಗೆ) ಇಲ್ಲವೆ ರಾಜದರ್ಬಾರಿಗೆ (ದರ್ಗಾಕ್ಕೆ) ಕಳಿಸಬೇಕೆಂದು ತಿಳಿಸುವ ಅನೇಕ ಪರಗಣೆಗಳಿಗೆ ಕಳಿಸಿದ ಬೇರೆ ಫರ್ಮಾನುಗಳು ಉಂಟು. ದೇಸಾಯಿಯು ಯಾವಾಗಲೂ ಹುಜೂರ ಅಥವಾ ದರ್ಗಾಕ್ಕೆ ಕಂದಾಯವನ್ನು ಕಳಿಸಬೇಕಾಗಿರಲಿಲ್ಲ. ಒಮ್ಮೊಮ್ಮೆ, ನ್ಯಾಯಾಲಯವು ನಿರ್ದಿಷ್ಟಪಡಿಸಿದ್ದ ಸ್ಥಳಗಳಿಗೆ ಅದನ್ನು ಕಳಿಸಬೇಕೆಂದು ಅವನಿಗೆ ಆಜ್ಞೆನೀಡಲಾಗುತ್ತಿತ್ತು.

ಇಲ್ಲಿ ನಾವು ಕಂದಾಯದ ಉತ್ಪನ್ನವನ್ನು ಕಳಿಸುತ್ತಿದ್ದ ವಿಧಾನವನ್ನು ಚರ್ಚಿಸುವೆವು. ದೇಸಾಯಿ ಮತ್ತು ದೇಶಕುಲಕರ್ಣಿ ಇವರು ಪಾಟೀಲ ಮತ್ತು ಕುಲಕರ್ಣಿ ಇವರ ಸಹಯೋಗದಲ್ಲಿ ಪ್ರತಿಯೊಂದು ಹಳ್ಳಿಯ ಕಂದಾಯವನ್ನು ಬೆಲೆಕಟ್ಟಿ (ಸಂಚನಿ) ನ್ಯಾಯಾಲಯಕ್ಕೆ (ರಾಜಾಸ್ಥಾನಕ್ಕೆ) ಅದರ ಒಟ್ಟು ಮೊತ್ತವನ್ನು ವರದಿ ಮಾಡುತ್ತಿದ್ದರು. ನ್ಯಾಯಾಲಯವು ಆ ವರದಿಯನ್ನು ಪರಿಶೀಲಿಸಿ, ಸಂಗ್ರಹಿಸಲ್ಪಟ್ಟ ಮೊತ್ತ ಅದಾಗಿದೆಯೆಂದು ಖಾತ್ರಿ ಮಾಡಿಕೊಂಡು ದೇಸಾಯಿಗೆ ತಿಳಿಸುತ್ತಿತ್ತು. ಪ್ರತಿಯೊಂದು ಹಳ್ಳಿಗೆ ಇಷ್ಟೊಂದು ನಿಗದಿಪಡಿಸಿದ ಮೊತ್ತವನ್ನು ಆ ಊರಿನ ಪಾಟೀಲನಿಂದ ಸಂಗ್ರಹಿಸಿ ಅದನ್ನು ದೇಸಾಯಿಯು ನ್ಯಾಯಾಲಯಕ್ಕೆ ಕಳಿಸುತ್ತಿದ್ದನು.

ಕಂದಾಯ ಸಂಗ್ರಹಿಸುವುದಕ್ಕೆ ಸಂಬಂಧಿಸಿ ದೇಸಾಯಿ ಮಾಡಬೇಕಾಗಿದ್ದ ಇನ್ನೂ ಕೆಲವು ಜವಾಬ್ದಾರಿಗಳನ್ನು ಇಲ್ಲಿ ಪ್ರಸ್ತಾಪಿಸಬೇಕು. ೧) ಪರಗಣೆಗಳಿಂದ ಕೆಲವು ಸರಕು ಸಾಮಗ್ರಿಗಳನ್ನು ಸೈನಿಕ ಮತ್ತು ಇನ್ನುಳಿದ ಸರಕಾರಿ ಕೆಲಸಕ್ಕೆ ತರಿಸಿಕೊಳ್ಳುವುದು, ಕಟ್ಟಡಗಳನ್ನು ಕಟ್ಟುವುದಕ್ಕೆ, ಸೈನಿಕರಿಗಾಗಿ ಮತ್ತು ಸರಕಾರದ ಕಾಮಗಾರಿಗಾಗಿ ಬಲವಂತವಾಗಿ ಕೆಲಸಗಾರರನ್ನು ಕಲೆಹಾಕುವುದು, ಬಲವಂತದ ದುಡಿಮೆಯ ಬದಲಾಗಿ ಹಣ ತೆಗೆದುಕೊಳ್ಳುವುದು, ಕೆಲಸಗಾರರನ್ನು ನಿಯಮಿಸಿ ಅವರಿಗೆ ಪಗಾರ ಕೊಡುವುದು ಮತ್ತು ಸರಕಾರ ಗೊತ್ತುಪಡಿಸಿದ ಸ್ಥಳಕ್ಕೆ ಅವರನ್ನು ಕೆಲಸಕ್ಕಾಗಿ ಕಳಿಸುವುದು ಇವೆಲ್ಲವನ್ನು ಅವನು ಮಾಡಬೇಕಾಗಿತ್ತು. ಇನ್ನು ಕೆಲವು ದೇಸಾಯರುಗಳಿಗೆ ಹಳ್ಳಿಗಳಿಂದ ಬರಬೇಕಾಗಿದ್ದ ಕಂದಾಯ ಹಣವನ್ನು ಕೊಡಲಾಗುತ್ತಿತ್ತು ಮತ್ತು ಈ ಹಣವನ್ನು ಅವರು ಇಂತಿಷ್ಟೆಂದು ಖಚಿತಪಡಿಸಿದ (ಗೊತ್ತುಪಡಿಸಿದ) ಸಂಖ್ಯೆಯಲ್ಲಿ ಕಾಲಾಳುಗಳನ್ನು ಸರಕಾರಕ್ಕೆ ಒದಗಿಸಲು-ಪೋಷಿಸಲು ಖರ್ಚು ಮಾಡಬೇಕಾಗಿತ್ತು. ೨) ಸರಕಾರಕ್ಕೆ ಜೋಡಿಸಿದ ಪರಗಣೆಗಳ ಕಂದಾಯವನ್ನು ವಸೂಲಮಾಡಿ ಸರಕಾರಕ್ಕೆ ಕಳಿಸುವುದು ದೇಸಾಯಿಯ ಕರ್ತವ್ಯವಿದ್ದಂತೆ ಸರಕಾರದ ಪ್ರಮುಖ ಜಿಲ್ಲೆಗಳಲ್ಲಿಯ ಇಂಥ ಜವಾಬ್ದಾರಿಗಳನ್ನು ನಿರ್ವಹಿಸುವುದು ಹವಾಲ್ದಾರನದಾಗಿತ್ತು. ಒಂದು ಫರ್ಮಾನವು ಸ್ಪಷ್ಟಪಡಿಸುವಂತೆ ಒಂದು ಮುವಾಮಲದ ಹವಾಲ್ದಾರನು ತನ್ನ ಕಛೇರಿಯಿಂದ ಕಂದಾಯ ವಸೂಲಿಗಾರರನ್ನು ತಹಸಿಲ್ದಾರರನ್ನು) ಹಳ್ಳಿಗಳ ಕಂದಾಯ ವಸೂಲಿಗೆ ಕಳಿಸಿದನು.

ಬೇರೊಂದು ರೀತಿಯಲ್ಲಿ ಹೇಳಬೇಕಾದರೆ, ಸರಕಾರಿ ಜಿಲ್ಲೆಯಲ್ಲಿಯ ದೇಸಾಯಿಯಿಂದ ಪ್ರತ್ಯಕ್ಷ ತೆರಿಗೆ ವಸೂಲಿಯ ಮಹತ್ವದ ಕಾರ್ಯವನ್ನು ಕಿತ್ತುಕೊಳ್ಳಲಾಗಿತ್ತು.

ಆದಾಗ್ಯೂ ಸರಕಾರಿ ಜಿಲ್ಲೆಯಲ್ಲಿ ದೇಸಾಯಿಗೂ ಮತ್ತು ಕಂದಾಯ ವಸೂಲಿಗೂ ಏನೂ ಸಂಬಂಧವಿಲ್ಲವೆಂದು ಕಲ್ಪಿಸಲಾಗದು. ಉದಾಹರಣೆಗೆ, ಖಲಾಹ ಶಹಾದುರ್ಗದ ಹವಾಲ್ದಾರ ಮತ್ತು ಕಾರಕೂನರು ಸುಲ್ತಾನನಿಂದ ಹೀಗೆ ಆಜ್ಞಾಪಿಸಲ್ಪಟ್ಟಿದ್ದರು. "ಹಳ್ಳಿಗಳ ರಕ್ಷಣೆ, ಕಂದಾಯ ಹಂಚುವ ಹೊಣೆಗಾರಿಕೆ, ಅಂದರೆ ಇದಕ್ಕೆ ಸಂಬಂಧಿಸಿದ ಯಾವುದೇ ಅವಶ್ಯ ಕೆಲಸವನ್ನು ದೇಸಾಯಿಯ ಒಪ್ಪಿಗೆಯಿಲ್ಲದೆ ಕೈಕೊಳ್ಳಕೂಡದು ಮತ್ತು ಅವನ ಗೌರವ ಮತ್ತು ಸಾಂಪ್ರದಾಯಿಕ ಆಡಳಿತವನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಬೇಕು." ಮುವಾಮುಲಾ ಸಂದಲಪುರದ ಪಾಟೀಲರು ಆ ಮುವಾಮುಲಾದ ಬೇರೆ ಬೇರೆ ಭಾಗಗಳಲ್ಲಿ ಅಸಮಾನ ಕಂದಾಯ ದರಗಳು ಇರುವುದನ್ನು ತಮ್ಮ ಹವಾಲ್ದಾರರ ಗಮನಕ್ಕೆ ತರುತ್ತ ಅವು ಸಮಾನ ರೂಪದಲ್ಲಿರುವಂತೆ ನೋಡಿಕೊಳ್ಳಬೇಕೆಂದು ವಿನಂತಿಸಿಕೊಂಡಾಗ ಆ ಹವಾಲ್ದಾರರು ಹೀಗೆ ಉತ್ತರಿಸಿದರು. "ನಾವು ದೇಶಮುಖರ ಒಪ್ಪಿಗೆಯನ್ನು ಈ ದರಗಳಲ್ಲಿ ಕಂದಾಯ ವಸೂಲಿ ಮಾಡಲು ಪಡೆದುಕೊಂಡಿದ್ದೇವೆ" ಈ ವಿಷಯವನ್ನು ಈ ಒಳಗಾಗಿ ಹುಜೂರರವರಿಗೆ ತಿಳಿಸಿದ್ದೇವೆ. ಬದಲಿ ದರಗಳಂತೆ ಕಂದಾಯ ಸಂಗ್ರಹಿಸಲು ನಮಗೆ ಅನುಮತಿಯಿಲ್ಲದ್ದರಿಂದ ನಿಮ್ಮ ವಿನಂತಿಯನ್ನು ನಾವು ಹುಜೂರವರಿಗೆ ತಿಳಿಸುವೆವು ಮತ್ತು ಅವರಿಂದ ಉತ್ತರ ಬಂದ ನಂತರ ನಿಮ್ಮ ಅಪೇಕ್ಷೆಯನ್ನು ಪೂರೈಸಲು ಪ್ರಯತ್ನಿಸುವೆವು. ಸ್ವಲ್ಪದರಲ್ಲಿ ಹೇಳುವುದಾದರೆ, ಸರಕಾರಿ ಪ್ರಮುಖ ಜಿಲ್ಲೆಗಳಲ್ಲಿ ನೇರವಾಗಿ ಕಂದಾಯವನ್ನು ವಸೂಲು ಮಾಡುವುದಾಗಲಿ ಮತ್ತು ಅದನ್ನು ರಾಜಾಸ್ಥಾನಕ್ಕೆ ಕಳಿಸುವುದಾಗಲಿ ದೇಸಾಯಿಯ ಹಕ್ಕೂ ಆಗಿರಲಿಲ್ಲ ಮತ್ತು ಹೊಣೆಗಾರಿಕೆಯೂ ಆಗಿರಲಿಲ್ಲ. ಹಾಗಿದ್ದರೂ ಕಂದಾಯ ಜವಾಬ್ದಾರಿಗಳನ್ನು ಹಂಚುವುದರಲ್ಲಿ ಅಥವಾ ಕಂದಾಯ ದರಗಳನ್ನು ನಿರ್ಣಯಿಸುವುದರಲ್ಲಿ ಅವನ ಒಪ್ಪಿಗೆ ಪಡೆಯುವುದು ಅವಶ್ಯವಿತ್ತು.

೪. ದೇಸಾಯಿಯ ಸಂಭಾವನೆ :

ದೇಸಾಯಿಯು ನಿರ್ವಹಿಸುತ್ತಿದ್ದ ಕರ್ತವ್ಯಗಳನ್ನು ಮೇಲೆ ಚರ್ಚಿಸಲಾಯಿತು. ಅದನ್ನೆಲ್ಲ ಪರಿಗಣಿಸಿ ಸುಲ್ತಾನನು ಅವನಿಗೆ ನಿರಂತರವಾಗಿ ಉಪಭೋಗಿಸಲೆಂದು ಕೆಲವೊಂದು ಇನಾಮು ಮತ್ತು ಹಕ್ಕುಗಳನ್ನು ಕೊಟ್ಟಿದ್ದನು. ಇದು ಅವನ ಸಂಭಾವನೆಯಾಗಿತ್ತು. ಈ ಸಂಭಾವನೆಯೆಂದರೆ ಅವನಿಗೆ ಕೆಲವು ಹಳ್ಳಿಗಳನ್ನು ಇನಾಮವೆಂದು (ಇನಾಂಗಾಂವ) ಕೊಡಲಾಗಿತ್ತಲ್ಲದೆ, ಅವನ ಆಡಳಿತದ ಪ್ರದೇಶದಲ್ಲಿದ್ದ ಉಳಿದ ಹಳ್ಳಿಗಳಲ್ಲೂ ಭೂಮಿಯನ್ನು ಕೊಡಲಾಗಿತ್ತು ಮತ್ತು ಅವನು ಪ್ರತಿಯೊಂದು ಹಳ್ಳಿಯ ಜನರಿಂದ ಹಣವನ್ನು ಇಲ್ಲವೆ ಪದಾರ್ಥಗಳನ್ನು ಪಡೆಯುವ ಹಕ್ಕನ್ನು

ಹೊಂದಿದ್ದನು. ಈ ಸಂಭಾವನೆಯು 'ಪ್ರಭು ಪ್ರಸಾದ' ರೂಪದಲ್ಲಿದ್ದರಿಂದ ಯಾವುದೇ ದೇಸಾಯಿಗೆ ಇಂತಿಷ್ಟು ಸಂಭಾವನೆ ಕೊಡಬೇಕೆಂಬ ನಿಗದಿತ ಆಧಾರಸೂತ್ರ ಇರಲಿಲ್ಲ. ಇನ್ನೂ ಹೆಚ್ಚಿಗೆ ಹೇಳಬೇಕೆಂದರೆ ಅದು ಪ್ರಕರಣದಿಂದ ಪ್ರಕರಣಕ್ಕೆ ಬೇರೆ ಬೇರೆಯಾಗಿರುತ್ತಿತ್ತು. ಬೇರೆ ಬೇರೆ ಸಂಗತಿಗಳು ಗಣನೆಗೆ ಬರುತ್ತಿದ್ದವು. ಉದಾಹರಣೆಗೆ ದೇಸಾಯಿಯ ಕುಟುಂಬವು ಸುಲ್ತಾನನ ಆಡಳಿತಕ್ಕೆ ಸಲ್ಲಿಸಿದ ಮಹತ್ವದ ಸೇವೆ, ಸುಲ್ತಾನನ ಸೈನಿಕ ಮತ್ತು ಆರ್ಥಿಕ ಸ್ಥಿತಿಗತಿ, ಸುಲ್ತಾನನ ಔದಾರ್ಯ ಇತ್ಯಾದಿ. ಕೆಳಗಿನ ವಿವರಣೆಗಳಲ್ಲಿ ದೇಸಾಯಿಯ ಸಂಭಾವನೆಗೆ ಸಂಬಂಧಿಸಿದ ಚರ್ಚೆಯಿದೆ.

ಖಲಾಹ ರೋಹಿರಾದ ಟರ್ಫ ಭೋರದ ದೇಶಮುಖ (ದೇಸಾಯಿ) ಕಾನ್ಹೋಜಿ ಜೆಢೇ ಈತನಿಗೆ ೧೬೦೮-೦೯ರಲ್ಲಿ ನೈಝಾಮುಶಾಹಿ ರಾಜಮನೆತನವು ಇನಾಮವೊಂದನ್ನು ಹಾಕಿಕೊಟ್ಟಿತು. ಈ ಇನಾಮದಲ್ಲಿ ಎರಡು ಹಳ್ಳಿಗಳು, ಅವುಗಳಿಂದ ಬರುತ್ತಿದ್ದ ತೆರಿಗೆ, ಅಲ್ಲದೇ ಆ ಟರ್ಫದಲ್ಲಿರುವ ಉಳಿದ ಹಳ್ಳಿಗಳು ನೀಡುವ ಬಾಕಿ ಹಣ ಎಲ್ಲವೂ ಅವನ ಸಂಭಾವನೆಯಾಗಿತ್ತು. ೧೬೨೮ರಲ್ಲಿ ಈ ಇನಾಮವನ್ನು ಈ ರಾಜಮನೆತನವೇ ಮತ್ತೊಮ್ಮೆ ಧೃಡಪಡಿಸಿತು.

ಈ ಕ್ಷೇತ್ರವನ್ನು ೧೬೩೬ರಲ್ಲಿ ಆದಿಲ್‌ಶಾಹಿ ರಾಜ್ಯಕ್ಕೆ ಸೇರಿಸಲಾಯಿತು. ಕೆಲ ಸಮಯದ ತರುವಾಯ, ದೇಶಮುಖ ಕಾನ್ಹೋಜಿ ಜೆಢೆನು ಮುಘಲರ ವಿರುದ್ಧ ಹೋರಾಟದಲ್ಲಿ ಆದಿಲ್‌ಶಾಹನಿಗೆ ಬಹುದೊಡ್ಡ ಸೇವೆ ಸಲ್ಲಿಸಿದಂತೆ ತೋರುತ್ತದೆ. ಏನೇ ಆಗಲಿ, ಅವನಿಗೆ ೧೬೩೭ರಲ್ಲಿ ಮುಹಮ್ಮದ ಆದಿಲ್‌ಶಾಹನು ಆ ಟರ್ಫ್‌ದಲ್ಲಿಯೇ ಮತ್ತೊಂದು ಹಳ್ಳಿಯನ್ನು ಇನಾಮವೆಂದು ನೀಡಿದನು. ಅದರ ಪ್ರಕಾರ ಆ ಹಳ್ಳಿಯಿಂದ ಬರುವ ಕಂದಾಯದೊಂದಿಗೆ ಇನ್ನುಳಿದ ವಾಡಿಕೆಯಾಗಿ ಬರುವ ಕಾಣಿಕೆಗಳೂ ಕೂಡಿದ್ದವು. ಮತ್ತೆ ೧೬೩೮ರಲ್ಲಿ ಆ ಖಲಾಹದ ಹವಾಲ್ದಾರನ ಶಿಫಾರಸದ ಮೇರೆಗೆ ಇದೇ ದೇಶಮುಖನಿಗೆ ಆ ಮನೆತನದವರು ಬಹುದಿನಗಳವರೆಗೆ ಉಪಭೋಗಿಸುತ್ತಿದ್ದ ಇನ್ನೊಂದು ಹಳ್ಳಿಯನ್ನು ಹೆಚ್ಚಿನ ಇನಾಮವೆಂದು ಸುಲ್ತಾನನು ನೀಡಿದನು. ಎರಡು ವರ್ಷಗಳ ನಂತರ, ಅಂದರೆ ೧೬೪೦ರಲ್ಲಿ, ಸುಲ್ತಾನನು ಖಲಾಹ ರೋಹಿರಾದ ಎಲ್ಲ ದೇಶಮುಖರಿಗೆ, ಅಧಿಕಾರಿಗಳಿಗೆ, ಹವಾಲ್ದಾರ ಮತ್ತು ಕಾರಕೂನರಿಗೆಲ್ಲ ಫರ್ಮಾನವೊಂದನ್ನು ಹೊರಡಿಸಿ ಕೆಳಗಿನಂತೆ ತಿಳಿಸಿದನು.

"ಮೇಲ್ಕಾಣಿಸಿದ ಖಲಾಹದ ಟರ್ಫ ಭೋರದ ಕಾನೋಜಿ ದೇಶಮುಖನು ನ್ಯಾಯಾಲಯಕ್ಕೆ ವಿನಂತಿಸಿಕೊಂಡನು : ಬಜಾರವನ್ನೊಳಗೊಂಡ ಅನಬೋರಹ ಹಳ್ಳಿ ಮತ್ತು ಕಾರಿ ಹಳ್ಳಿಗಳು ಮಲಿಕ ಅಂಬರನ ಕಾಲದಿಂದ (ನೈಝಾಮನ ಪ್ರಧಾನಮಂತ್ರಿ) ಹಾಗೆಯೇ ಚಿಕ್ಕಲಗಾಂವ ಹಳ್ಳಿ ಮತ್ತು ನತಂಬಿ ಹಳ್ಳಿ (ಮೇಲಿನ ಟರ್ಫಕ್ಕೆ ಸಂಬಂಧಿಸಿದ) ಆದಿಲ್‌ಶಾಹಿ ರಾಜಮನೆತನದ ಕೃಪೆಯಿಂದ ಈ ನಾಲ್ಕು

ಹಳ್ಳಿಗಳು ಅದಕ್ಕೆ ಸಂಬಂಧಿಸಿದ ಕಂದಾಯ, ಇನ್ನುಳಿದ ಕೊಡುಗೆಗಳು ಇತರೆ ವಸ್ತುಗಳು, ಸರಕುಗಳು ನೈಝಾಮಶಾಹಿಯ ಫರ್ಮಾನದಿಂದ ಮತ್ತು ಈಗಿನ ರಾಜ ಫರ್ಮಾನದ ಪ್ರಕಾರ (ಆದಿಲ್‌ಶಾಹಿ ಸುಲ್ತಾನ ಫರ್ಮಾನದಿಂದ) ನನಗೆ ಇನಾಂವಾಗಿ ಬಂದದ್ದು ಉಂಟು. ಸಣ್ಣಪುಟ್ಟ ತೆರಿಗೆಗಳ ಶುಲ್ಕ, ಬಟ್ಟೆಬರೆಯ ರೂಪದಲ್ಲಿಯ ಕೊಡುಗೆಗಳು ನನಗೆ ಸಲ್ಲುತ್ತ ಬಂದಿವೆ. ಆದರೆ ಈಗ ಸ್ಥಾನಿಕ ಪೋಲಿಸ್ ಠಾಣೆಯು ಈ ಫರ್ಮಾನುಗಳನ್ನು ಅಲ್ಲಗಳೆಯುತ್ತ ತುಂಬಿಸಿಕೊಡುತ್ತಿದ್ದಾರೆ. ಇಲ್ಲಿಯವರೆಗೆ ಈ ಹಳ್ಳಿಗಳು ಹಣವನ್ನು ಕೊಟ್ಟೇ ಇಲ್ಲ. ಆದರೆ ಪೋಲಿಸ್ ಠಾಣೆದವರು ಹಣ ಕೊಡಲು ಕೇಳುತ್ತಿದ್ದಾರೆ. ದಯವಿಟ್ಟು ಪ್ರಭುಚಿತ್ತ ಇದನ್ನು ಗಮನಿಸಬೇಕು. ಫರ್ಮಾನುಗಳನ್ನು ಅಲ್ಲಗಳೆಯುತ್ತ, ಉಪಟಳಕೊಡುತ್ತ, ಮೇಲ್ಕಾಣಿಸಿದ ಹಳ್ಳಿಗಳು ಮತ್ತು ವರಮಾನಗಳನ್ನು ಅವನಿಗೆ (ದೇಶಮುಖನಿಗೆ) ನೈಝಾಮನ ಫರ್ಮಾನ ಮತ್ತು ಈ ಶುಭಕರವಾದ ಪ್ರಸ್ತುತ ಪ್ರಭುವಿನ ಫರ್ಮಾನದ ಪ್ರಕಾರ ಉಪಭೋಗಿಸಲು ಕೊಟ್ಟಿರಲು ಹೀಗೇಕೆ? ಆದುದರಿಂದ ಈ ಫರ್ಮಾನವು ಮುಟ್ಟಿದೊಡನೆ ಎಲ್ಲ ಪ್ರಕಾರದ ತೆರಿಗೆಗಳು, ವರಮಾನಗಳು, ಎಲ್ಲ ವಿಧದ ಹಣಕಾಸಿನ ಪಾಲುಗಾರಿಕೆಗಳು ಹಾಗೆಯೇ ಸಣ್ಣಪುಟ್ಟ ವಸ್ತು ಉಡುಗೊರೆಗಳು ಇವೆಲ್ಲವು ಸಹಿತ ಬಜಾರ ಒಳಗೊಂಡ ಹಳ್ಳಿಗಳನ್ನು, ನಿಜಾಮಶಾಹಿಯ ಮತ್ತು ಈ ಪ್ರಭುತ್ವದ ಪರಮಪವಿತ್ರ ಫರ್ಮಾನುಗಳಿಗನುಸಾರವಾಗಿ ಈ ಸಂಬಂಧಪಟ್ಟ ದೇಶಮುಖನಿಗೆ ಹಿಂದಿರುಗಿಸಬೇಕು.

ಇದಲ್ಲದೆ ಈ ಕೆಳಗಿನವುಗಳನ್ನು ಕಾನೋಜಿ ದೇಶಮುಖನಿಗೆ ಕೊಡಬೇಕೆಂದು ಆಜ್ಞೆ ಹೊರಡಿಸಲಾಗಿದೆ : ಜಕಾತಿ ಪಟ್ಟಿ (ಕ್ರಮ ತೆರಿಗೆ), ಹಾಳು ಭೂಮಿಯನ್ನು ಕೃಷಿಗೈಯುವದರ ಮೇಲಿನ ಹೆಚ್ಚಿನ ತೆರಿಗೆ, ಟೆಂಗಿನ ಮೇಲಿನ ತೆರಿಗೆ, ಪಾದರಕ್ಷೆ-ತೆರಿಗೆ, ಮೇಜವಾನಿ ತೆರಿಗೆ, ಯುದ್ಧ ತೆರಿಗೆ, ಕಾಣಿಕೆಗಳು, ಮಾವಿನ ತೆರಿಗೆ, ಮಹಾರನ ಸೇವೆ, ಬಡಿಗನು ಕೊಟ್ಟ ಪಲ್ಲಂಗ, ಟಂಬರ ಕಟ್ಟಿಗೆ, ದಂಡಹಾಕಿ ಬಂದ ಹಣ, ವ್ಯಾಪಾರ ತೆರಿಗೆ, ಕಾಳುಕಡಿ ರೂಪದಲ್ಲಿ ಬಂದ ಕಾಣಿಕೆಗಳು, ವೀಳ್ಯದೆಲೆ ಮತ್ತು ಇನ್ನಿತರ ಕರಗಳು ಮತ್ತು ಕೊಡುಗೆಗಳು.

ಇನ್ನುಮುಂದೆ ಅವನಿಗೆ ತೊಂದರೆ ಕೊಡಬೇಡಿರಿ. ಯಾವ ಕಾರಣಕ್ಕೂ ಹರಕತ್ ಕೊಡಬೇಡಿರಿ. ಅವನ ನಂತರ ಅವನ ಮಗ ಮತ್ತು ಮೊಮ್ಮಗ ಮುಂದುವರೆಸಿಕೊಂಡು ಹೋಗಲಿ. ಯಾರೇ ಆಗಲಿ ಅಡ್ಡಿಯೊಡ್ಡಿದರೆ ಅಂಥವನನ್ನು ನ್ಯಾಯಾಲಯದ ವಿರುದ್ಧವಿರುವ ಅಪರಾಧಿಯೆಂದು ಪರಿಗಣಿಸಲಾಗುವುದು. ಪ್ರತಿ ವರ್ಷ ನವೀಕರಿಸಿದ ಫರ್ಮಾನ್ ಬೇಕೆಂದು ಬೇಡಿಕೆ ಸಲ್ಲಿಸಬೇಡಿರಿ. ಈ ಫರ್ಮಾನ್‌ದ ಪ್ರತಿ ತಯಾರಿಸಿ ಮೂಲವನ್ನು ಅವನಿಗೆ (ದೇಶಮುಖನಿಗೆ) ಕೊಡಿರಿ. ಈ ಪವಿತ್ರವಾದ ಆಜ್ಞೆಯನ್ನು ಕಾರ್ಯಗತಗೊಳಿಸಬೇಕು.”

ಇನ್ನೊಂದು ಉದಾಹರಣೆಯನ್ನು ಕೊಡಬಹುದು. ಮೇಲೆ ತರ್ಜುಮೆ ಮಾಡಿದ ಫರ್ಮಾನವು ಹೊರಡಿಸಲ್ಪಟ್ಟ ಎರಡು ಅರ್ಧಕಾಲು ತಿಂಗಳ ನಂತರ ಅದೇ ದೇಶಮುಖನಿಗೆ ಬೇರೊಂದು ಹಳ್ಳಿಯಲ್ಲಿ ಆರು ಟಂಕಾ (ಭೂಮಾಪನದ ಒಂದು ಘಟಕ) ಕರಿಯ ಎರಿಭೂಮಿಯನ್ನು ಶಾಶ್ವತ ಇನಾಮವನ್ನಾಗಿ ನೀಡಲಾಯಿತು. ಅದಕ್ಕೆ ಕೆಳಗಿನ ಎಲ್ಲ ಸೌಕರ್ಯಗಳನ್ನು ಜೋಡಿಸಲಾಗಿತ್ತು: ಸರಕಾರದ ಲೇವಾದೇವಿ ಪುಸ್ತಕದಲ್ಲಿ ಕಾಣಿಸಿರುವ ಈ ಸಧ್ಯ : ಇರುವ ಇಲ್ಲವೆ ಮುಂದೆ ಕೊಡಮಾಡುವ ಎಲ್ಲ ಬಗೆಯ ತೆರಿಗೆಗಳು ಅಂದರೆ ನಗದು ಹಣ ರೂಪದಲ್ಲಿ ಇಲ್ಲವೆ ವಸ್ತುಗಳ ರೂಪದಲ್ಲಿ ಕೊಡಮಾಡುವ ದೊಡ್ಡ ಸಣ್ಣ ಎಲ್ಲ ತೆರಿಗೆಗಳು, ಶುಲ್ಕಗಳು, ಕಾಣಿಕೆಗಳು, ಕಡ್ಡಾಯ ದುಡಿಮೆ, ಬಾವಿ ನೀರಾವರಿಯ ಮೇಲಿನ ತೆರಿಗೆ, ಹಾಳುಬಿದ್ದ ಭೂಮಿಯಲ್ಲಿಯ ಹೆಚ್ಚುವರಿ ಬೇಸಾಯದ ಮೇಲಿನ ತೆರಿಗೆ, ಟೆಂಗಿನ ಮೇಲಿನ ತೆರಿಗೆ, ಪಾದರಕ್ಷೆ ಶುಲ್ಕ, ಔತಣ ಸಮಾರಂಭದ ಮೇಲಿನ ತೆರಿಗೆ ಮತ್ತು ಇನ್ನಿತರ ಹಣ ಇಲ್ಲವೆ ದವಸ ಧಾನ್ಯಗಳ ರೂಪದಲ್ಲಿಯ ಕಾಣಿಕೆಗಳು ಈ ಇನಾಮದ ಉಪಭೋಗದ ಭಾಗವಾಗಿದ್ದವು.

ಮೇಲೆ ಉದಾಹರಿಸಿದ ಉದಾಹರಣೆಗಳ ಆಧಾರದ ಮೇಲಿಂದ ದೇಸಾಯಿಯ ಸಂಭಾವನೆಯ ಮುಖ್ಯಸ್ವರೂಪಗಳನ್ನು ಸಂಗ್ರಹಿಸಿ ಕೆಳಗಿನಂತೆ ಇಡಬಹುದು.

೧) ಹಿಂದಿನ ರಾಜಮನೆತನವು ನೀಡಿದ್ದ ಇಲ್ಲವೆ ಖಚಿತಪಡಿಸಿದ್ದ ಸಂಭಾವನೆಯನ್ನು ಆದಿಲ್‌ಶಾಹಿ ಆಡಳಿತವು ಸಾಮಾನ್ಯವಾಗಿ ಮುಂದುವರೆಸುತ್ತಿತ್ತು.

೨) ವಿಶೇಷವಾದ ಸೇವೆಯನ್ನು ಸಲ್ಲಿಸಿ ಹೆಸರು ಗಳಿಸಿದ ದೇಸಾಯರಿಗೆ ಸುಲ್ತಾನನು ವಿಶೇಷ ಕೃಪೆದೋರಿ ಅವರ ಸಂಭಾವನೆಯನ್ನು ಹೆಚ್ಚಿಸುತ್ತಿದ್ದನು.

೩) ಸುಲ್ತಾನನ ರಾಜ್ಯದಲ್ಲಿ ಆಶ್ಚರ್ಯಕರ ರೀತಿಯಲ್ಲಿ ವಿಧವಿಧದ ತೆರಿಗೆಗಳು, ಶುಲ್ಕಗಳು ಇದ್ದವು. ರಾಜ್ಯದಾದ್ಯಂತ ಒಂದೇ ತೆರನಾದ ತೆರಿಗೆಗಳನ್ನು ಮತ್ತು ಶುಲ್ಕಗಳನ್ನು ವಿಧಿಸದಿದ್ದರೂ ಹೆಚ್ಚು ಕಡಿಮೆ ಅಂಥವೇ ಪ್ರಕಾರಗಳೇ ಉಳಿದೆಲ್ಲ ಪ್ರದೇಶಗಳಲ್ಲಿ ಅಸ್ತಿತ್ವದಲ್ಲಿದ್ದವು.

೪) ಇಲ್ಲಿ ಗಮನಿಸಬೇಕಾದ ಅಂಶವೆಂದರೆ ತೆರಿಗೆಯ ವೈವಿಧ್ಯ ಅಷ್ಟೇ ಅಲ್ಲ, ಆದರೆ ಅವುಗಳ ಖಚಿತವಾದ ಮೊತ್ತವೇ (ಅಥವಾ ಪ್ರಮಾಣವೇ) ಆಗಲಿ ಯಾವ ರೀತಿಯಲ್ಲಿ ಕಾಣಿಸಿಲ್ಲ. ಇದರಿಂದ ತಿಳಿದುಬರುವುದೆಂದರೆ ಸಂಭಾವನೆಯನ್ನು ಹಣದ ರೂಪದಲ್ಲಿ ಅಥವಾ ಪ್ರಮಾಣದಲ್ಲಿ ಖಚಿತವಾಗಿ ನಿಗದಿಪಡಿಸಿರಲಿಲ್ಲ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ದೇಸಾಯಿಯು ತನ್ನ ಸಾರಾಸಾರ ವಿಚಾರದ ಮೇರೆಗೆ ಸರಕಾರವು ಒಪ್ಪಿಗೆ ನೀಡಿದ ವಸ್ತುಗಳ

ಮೇಲೆ ತೆರಿಗೆ ಮತ್ತು ಶುಲ್ಕ ಹೇರುವ ಅಧಿಕಾರ ಹೊಂದಿದ್ದನು. ಹೀಗಿದ್ದರೂ ಪ್ರಾದೇಶಿಕ ಸಾಂಪ್ರದಾಯಿಕ ಪದ್ಧತಿಗಳು ಮತ್ತು ಆಚರಣೆಗಳು ಅವನ ವಿವೇಚನಾ ಸಾಮರ್ಥ್ಯದ ಮೇಲೆ ಕಡಿವಾಣ ಹಾಕುವ ಪ್ರಭಾವವನ್ನು ಹೊಂದಿದ್ದವು; ಈ ಆಚರಣೆಗಳನ್ನು ಮತ್ತು ಪದ್ಧತಿಗಳನ್ನು ಮುರಿದು ಹಾಕಿದರೆ ಜನರಲ್ಲಿ ಅಸಮಾಧಾನ ಮೂಡುತ್ತಿದ್ದುದಲ್ಲದೇ ಇದರಿಂದಾಗಿ ಜನರು ಹಳ್ಳಿಗಳನ್ನು ಬಿಟ್ಟು ಓಡಿ ಹೋಗಬಹುದಿತ್ತು. ಜನರು ಊರುಬಿಟ್ಟು ಓಡಿಹೋದರೂ ಅವರನ್ನು ಅವರ ಊರಿಗೆ ಹಿಡಿದು ತರುವ ಅಧಿಕಾರ ದೇಸಾಯಿಗೆ ಇತ್ತು. ಆದರೆ, ಜನರನ್ನು ಗೋಳಾಡಿಸಿದರೆ ಸರಕಾರವು ಅವನಿಗೆ ಛೀಮಾರಿ ಹಾಕುತ್ತಿತ್ತು ಮತ್ತು ಆಗ ಅವನು ಆ ಜನರಿಗೆ ರಕ್ಷಣೆಯ ಭರವಸೆಕೊಟ್ಟು ಸಾಂತ್ವನ ಹೇಳಬೇಕಾಗುತ್ತಿತ್ತು.

೫) ಶುಲ್ಕಗಳು ಮತ್ತು ತೆರಿಗೆಗಳನ್ನು ವಸೂಲ ಮಾಡಿ ತನಗಾಗಿ ಬಳಸಿಕೊಳ್ಳುವ ಹಕ್ಕನ್ನು ದೇಸಾಯಿಗೆ ಕೊಡುವುದಷ್ಟೇ ಅಲ್ಲದೆ ಆ ಇನಾಮ ಹಳ್ಳಿಗಳು ಮತ್ತು ಅವುಗಳಲ್ಲಿಯ ಭೂಮಿಯ ಮೇಲಧಿಕಾರವನ್ನು ಅವನಿಗೆ ಸುಲ್ತಾನನು ಮಂಜೂರ ಮಾಡಿದ್ದನು. ಉದಾಹರಣೆಗೆ, ಒಬ್ಬ ದೇಶಮುಖನ ಇನಾಮ ಹಳ್ಳಿಯ ಪಾಟೀಲ ಮತ್ತು ಕುಲಕರ್ಣಿಗೆ 'ದೇಶಮುಖತ್ವಕ್ಕೆ ನೀವು ಸೇವೆಗೈಯಬೇಕು' ಎಂದು ಸುಲ್ತಾನನು ಆಜ್ಞಾಪಿಸಿದನು. ಇನ್ನೊಬ್ಬ ದೇಶಮುಖನ ಇನಾಮ ಹಳ್ಳಿಯ ಪಾಟೀಲ, ಕುಲಕರ್ಣಿ ಮತ್ತು ಜನರು ಆ ದೇಶಮುಖನ "ಆಜ್ಞೆಯನ್ನು ಪಾಲಿಸಬೇಕು ಮತ್ತು ಅವನಿಗೆ ಮತ್ತು ಅವನ ಪೀಳಿಗೆಗೆ ಗೌರವ ಸಲ್ಲಿಸಬೇಕು" ಎಂದು ಆಜ್ಞೆ ಹೊರಟಿತ್ತು. ನಾವು ಹೀಗೆ ಹೇಳಬಹುದು : ದೇಸಾಯಿಯ ಇನಾಮ ಹಳ್ಳಿಯ ಜನರು ಕೇವಲ ಸುಲ್ತಾನನ ಪ್ರಜೆಗಳು ಮತ್ತು ಸೇವಕರು ಆಗಿರದೆ ಆ ದೇಸಾಯಿಯ ಪ್ರಜೆಗಳಾಗಿ ಮತ್ತು ಸೇವಕರಾಗಿಯೂ ಇದ್ದರು. ಈ ಪ್ರಕಾರದ ಮೇಲಧಿಕಾರವು ದೇಸಾಯಿಗೆ ಇದ್ದಿದ್ದರಿಂದಲೇ ಅವನು ತನ್ನ ಇನಾಮ ಹಳ್ಳಿಯ ಪಾಟೀಲ ಮತ್ತು ಕುಲಕರ್ಣಿ ಇವರಿಗೆ ತನ್ನ ವಿವೇಚನೆಯ ಮೇರೆಗೆ ಅವರ ಇನಾಮ ಭೂಮಿಯನ್ನು ಮತ್ತು ಉಳಿದ ಸೌಕರ್ಯಗಳನ್ನು ಹೆಚ್ಚಿಸಬಹುದಿತ್ತು. ಹಾಗೆ ಹೆಚ್ಚಿಸಿದ್ದಕ್ಕೆ ಸರಕಾರದ ಅನುಮತಿ ಸಿಗುತ್ತಿತ್ತು.

೬) ಆದಾಗ್ಯೂ, ದೇಸಾಯಿಯ ಪ್ರಭುತ್ವಾಧಿಕಾರವು ನಿರ್ಬಂಧಿತವಿದ್ದವು. ಸಾಮಾನ್ಯವಾಗಿ ಸ್ಥಾಪಿತ ಅಧಿಕಾರಿಗಳೊಡನೆ ಹಸ್ತಕ್ಷೇಪ ಮಾಡುತ್ತಿರಲಿಲ್ಲ. ಅವರ ಅಂದರೆ ಪಾಟೀಲ ಮತ್ತು ಕುಲಕರ್ಣಿ ಇವರ ಸಂಭಾವನೆಗಳ ಗೊಡವೆಗೆ ಹೋಗುತ್ತಿರಲಿಲ್ಲ ; ಒಂದು ಇನಾಮ ಹಳ್ಳಿಯ ಅಧಿಕಾರಿಗಳಾದ ಇವರು ಸಂಭಾವನೆ ಮತ್ತು ಸೌಕರ್ಯಗಳನ್ನು ಪಡೆಯುತ್ತ ಸುಲ್ತಾನನ ರಾಜ ಒಪ್ಪಿಗೆ

ಮತ್ತು ಸಮಾಜದ ಮನ್ನಣೆ ಪಡೆದವರಾಗಿದ್ದರು. ಸ್ಥಾಪಿತ ಅಧಿಕಾರಿಗಳು ಮತ್ತು ಅವರಿಗಿರುವ ಸೌಲಭ್ಯಗಳಷ್ಟೇ ಅಲ್ಲ, ದೇಸಾಯಿಯು ತಾನೇ ಮಂಜೂರು ಮಾಡಿದ (ಬಹುತರವಾಗಿ ತನ್ನ ಉತ್ಪನ್ನದ ಒಂದು ಭಾಗದೊಳಗಿಂದಲೇ) ಸೌಲಭ್ಯಗಳನ್ನು ಕೂಡ ಹಿಂದೆಗೆದುಕೊಳ್ಳಲು ಬರುತ್ತಿರಲಿಲ್ಲ. ಯಾಕೆಂದರೆ ಅವುಗಳನ್ನು ಸರಕಾರವು ಮತ್ತು ಸಮಾಜವು ಮಾನ್ಯ ಮಾಡಿರುತ್ತಿದ್ದವು. ಆ ದೇಸಾಯಿಯು ಒಂದು ವೇಳೆ ಹಾಗೆ ಕೊಟ್ಟಿದ್ದ ಹೊಸ ಸೌಕರ್ಯಗಳನ್ನು ಗ್ರಾಮಾಧಿಕಾರಿಯಿಂದ ಕಿತ್ತುಕೊಳ್ಳಲು ಪ್ರಯತ್ನಿಸಿದರೆ ಆ ಗ್ರಾಮಾಧಿಕಾರಿಯು ಸಮೀಪದ ಸ್ಥಾನಿಕ ಸಭೆಯನ್ನು ಕರೆದು ತನ್ನ ಹಕ್ಕುಗಳನ್ನು ಪುನಃ ದೃಢೀಕರಿಸಿದರೆಂದು ವಿನಂತಿಸಿಕೊಳ್ಳಬಹುದಾಗಿತ್ತು.

೫. ದೇಶಕುಲಕರ್ಣಿ (ಅಥವಾ ದೇಶಪಾಂಡೆ)

ದೇಸಾಯಿಯ ಸಹಕಾರದೊಡಗೂಡಿ ಕಂದಾಯ ಸಂಗ್ರಹದಲ್ಲಿ ಭಾಗವಹಿಸುವುದು, ನ್ಯಾಯ ಸಭೆಯಲ್ಲಿರುವುದು ಮತ್ತು ಬೇರೆ ಬೇರೆ ದಾಖಲೆಗಳನ್ನು ಸಿದ್ಧಪಡಿಸಿ ಕಾಯ್ದಿರಿಸುವುದು ಇದೆಲ್ಲವನ್ನು ದೇಶಕುಲಕರ್ಣಿ ಮಾಡಬೇಕಾಗುತ್ತಿತ್ತು. ದೇಶಕುಲಕರ್ಣಿಗೆ ಶಿಕ್ಷಣಜ್ಞಾನ ಬಹುಮುಖ್ಯ ಅರ್ಹತೆಯಾಗಿದ್ದರಿಂದ ಈ ಹುದ್ದೆಯಲ್ಲಿ ಸಾಮಾನ್ಯವಾಗಿ ಬ್ರಾಹ್ಮಣರಿರುತ್ತಿದ್ದರು. ಕಂದಾಯ ಸಂಗ್ರಹ ಕಾರ್ಯದಲ್ಲಿ ಪ್ರಮುಖ ಜಿಲ್ಲೆ ಮತ್ತು ಪರಗಣೆಯ ಕ್ಷೇತ್ರದಲ್ಲಿ ದೇಸಾಯಿಯ ಪಾತ್ರ ಬೇರೆಬೇರೆಯಾಗಿತ್ತು. ಆದರೆ ದೇಶ ಕುಲಕರ್ಣಿಯ ಪಾತ್ರ ಕಾರ್ಯತಃ ಈ ಎರಡೂ ಕ್ಷೇತ್ರಗಳಲ್ಲೂ ಒಂದೇ ತೆರನಾಗಿತ್ತು. ಉದಾಹರಣೆಗೆ, ಮುವಾಮಲಾದ ಹವಾಲ್ದಾರನಿಗೆ ಕಂದಾಯ ಗೊತ್ತುಪಡಿಸುವುದು, ಬೇಡಿಕೆ ಸಲ್ಲಿಸುವುದು, ಸಂಗ್ರಹಿಸಿದ ಕಂದಾಯವನ್ನು ದಾಖಲಿಸುವುದು, ಸರಕಾರಕ್ಕಾಗಿ ಹಣ ಮುರಿದುಕೊಳ್ಳುವುದು ಇತ್ಯಾದಿ ಕೆಲಸಗಳನ್ನು ದೇಶ ಕುಲಕರ್ಣಿಯ ಒಪ್ಪಿಗೆಯೊಂದಿಗೆ ಮಾಡಬೇಕೆಂದು ಸುಲ್ತಾನನ ಆಜ್ಞೆ ಇತ್ತು ಮತ್ತು ಅವನ ಸಹಮತ ಇಲ್ಲದೆ ಆಡಳಿತ ನಡೆಸಬಾರದೆಂದು ಅಪ್ಪಣೆಯಿತ್ತ ನ್ಯಾಯಾಲಯಕ್ಕೆ ಜೋಡಿಸಿರುವ ಪರಗಣೆಯಲ್ಲಿ ಹಾಗೂ ಜಹಗೀರದಲ್ಲಿರುವ ಪರಗಣೆಯಲ್ಲಿ ಎರಡರಲ್ಲೂ ದೇಸಾಯಿಯೊಂದಿಗೆ ಕೂಡಿಕೊಂಡು ದೇಶ ಕುಲಕರ್ಣಿಯ ಪ್ರತಿಯೊಂದು ಗ್ರಾಮದ ಕಂದಾಯವನ್ನು ನಿರ್ಣಯಿಸಿ ವಸೂಲ ಮಾಡುತ್ತಿದ್ದನು. ಸಾಮಾನ್ಯವಾಗಿ ಸ್ಥಾನಿಕ ಸಭೆಯ ದಾಖಲೆಗಳನ್ನು ದೇಶಕುಲಕರ್ಣಿಯೇ ಬರೆಯುತ್ತಿದ್ದರು.

ಈ ಎಲ್ಲ ಕಾರ್ಯಗಳಿಗಾಗಿ ದೇಶಕುಲಕರ್ಣಿಗೆ ಆ ಭಾಗದ ದೇಸಾಯಿಯ ಸಂಭಾವನೆಯ ಅರ್ಧದಷ್ಟು ಆದರೆ ಸ್ವತಂತ್ರವಾಗಿ ಸಂಭಾವನೆಯ ಸುಲ್ತಾನನಿಂದ ಸಿಗುತ್ತಿತ್ತು. ದೇಶ ಕುಲಕರ್ಣಿಯ ಇನಾಮೀ ಗ್ರಾಮಗಳ ಮೇಲೆ ಹಾಗೆಯೇ ಅವನ

ಇನಾಮ ಭೂಮಿಯ ಮೇಲೆ ಅವನ ಪ್ರಭುತ್ವ ಮತ್ತು ಅಧಿಕಾರ ದೇಸಾಯಿಗೆ ಇದ್ದ ರೀತಿಯಲ್ಲೇ ಇದ್ದದ್ದರಿಂದ ಅದನ್ನು ಕುರಿತು ವಿವರ ನೀಡಬೇಕಾಗಿಲ್ಲ.

ಹೀಗಿದ್ದರೂ ಎರಡು ಅಂಶಗಳನ್ನು ಇಲ್ಲಿ ಒತ್ತುಕೊಟ್ಟು ಹೇಳಬೇಕು. (೧) ದೇಶಕುಲಕರ್ಣಿಯ ಹುದ್ದೆ ಮತ್ತು ಸಂಭಾವನೆಯನ್ನು ದೇಸಾಯಿಯ ಹುದ್ದೆ ಮತ್ತು ಸಂಭಾವನೆ ಇವುಗಳಿಗೆ ಜೋಡಿಸಿದ್ದಿಲ್ಲ ಇಲ್ಲವೆ ಅಧೀನಗೊಳಿಸಿರಲಿಲ್ಲ, ಆದರೆ ಸುಲ್ತಾನನೇ ಅವುಗಳನ್ನು ಮಂಜೂರು ಮಾಡಿದ್ದನು. ಕಾರಣವೆಂದರೆ ದೇಸಾಯಿಯು ದೇಶಕುಲಕರ್ಣಿಗೆ ಸಂಬಂಧಿಸಿದ ಅವುಗಳನ್ನು ಹಾಕಬಾರದೆಂದು ಸುಲ್ತಾನನ ಉದ್ದೇಶವಾಗಿತ್ತು. ದೇಸಾಯಿ ಮತ್ತು ದೇಶಕುಲಕರ್ಣಿ ಬೇರೆ ಬೇರೆ ಪಾರಂಪರಿಕ ಅಧಿಕಾರಿಗಳಾಗಿದ್ದರಿಂದ ಅವರಿಬ್ಬರು ಒಬ್ಬರಿಗೊಬ್ಬರು ಸಹಕರಿಸುತ್ತ ಶಾಹಿ ರಾಜ್ಯದ ಸೇವೆಗೆ ತಮ್ಮನ್ನು ಸಮರ್ಪಿಸಿಕೊಳ್ಳಬೇಕೆಂದು ಸುಲ್ತಾನನು ಆಜ್ಞಾಪಿಸಿದನು. (೨) ಮುಸಲ್ಮಾನ–ಪೂರ್ವ ಅವಧಿಯಲ್ಲಿ ದೇಶಕುಲಕರ್ಣಿಯ ಮಾದರಿ ಇದ್ದಿರಬಹುದು. ಆದರೆ ಮುಸಲ್ಮಾನ ಕಾಲದ ಆಳ್ವಿಕೆಯಲ್ಲಿ ಅವನ ಹುದ್ದೆ ಮತ್ತು ಸಂಭಾವನೆಗಳೆರಡೂ ಸ್ಥಾಪಿಸಲ್ಪಟ್ಟು ಸಂಘಟಿಸಲಾಯಿತು ಅನಿಸುತ್ತದೆ; ಮೂಲಭೂತವಾಗಿ ಅವುಗಳನ್ನು ದೇಸಾಯಿಯ ಹುದ್ದೆ ಮತ್ತು ಸಂಭಾವನೆಗಳಿಂದ ಭಿನ್ನವಾಗಿ ಮತ್ತು ಸ್ವತಂತ್ರವಾಗಿ ಇಡಲಾಯಿತು. ಈ ವಸ್ತುಸ್ಥಿತಿಯನ್ನು ಗಮನಿಸಿದರೆ ನಮಗೆ ಅನಿಸುವುದೇನೆಂದರೆ ದೇಶಮುಖನ ಹುದ್ದೆಯನ್ನು ದೇಸಾಯಿಯ ಹುದ್ದೆಯಿಂದ ಬೇರೆಯಿಡುವುದರಿಂದ ಮತ್ತು ದೇಸಾಯಿಯ ಸಂಭಾವನೆಯ ಅರ್ಧದಷ್ಟನ್ನು ದೇಶಮುಖನಿಗೆ ಕೊಡುವುದರಿಂದ ದೇಸಾಯಿಯ ಆಡಳಿತಾತ್ಮಕ ಕಾರ್ಯಗಳ ಮೇಲೆ ನಿಯಂತ್ರಣ ಇಡುವುದಾಗಿತ್ತು.

ನಾವು ಹೀಗೆ ಸಮಾಪ್ತಗೊಳಿಸಬಹುದು.

ದೇಶೀಯ ರಾಜರು ಸಮಾಜದ ಪ್ರಬಲ ಜನ ಸಮುದಾಯಗಳ ತಮ್ಮ ದಿನನಿತ್ಯದ ಆಳಿಕೆಗಾಗಿ ಬಹಳಷ್ಟು ಅವಲಂಬಿಸಿದರೆ(ಇದು ನಿಸ್ಸಂದೇಹವಾದ ಸಂಗತಿ), ವಿದೇಶೀಯ ಆಳುಗರಿಗೆ ಅವೇ ಪ್ರಬಲ ಸಮುದಾಯಗಳ ಮೇಲೆ ಅವಲಂಬಿಸುವುದು ಮತ್ತಷ್ಟು ಅವಶ್ಯವಿತ್ತು. ಯಾಕೆಂದರೆ ಆಳಲ್ಪಡುವ ಜನರಿಗೆ ತಮ್ಮದೇ ಆದ ಧರ್ಮ, ರೀತಿ ರಿವಾಜಗಳು, ಸಂಪ್ರದಾಯಗಳು ಹೊಸದಾಗಿ ಆಳಲು ಬಂದವರಿಂದ ಬೇರೆಯಾಗಿದ್ದಲ್ಲಿ ಇಂಥ ಅವಲಂಬನೆ ತೀರ ಅವಶ್ಯವೆನಿಸಿರುತ್ತದೆ. ಆದ್ದರಿಂದ ಸಾಂಪ್ರದಾಯಿಕ ಅಧಿಕಾರಿಗಳು ಅದರಲ್ಲೂ ದೇಸಾಯರು ಮತ್ತು ದೇಶಮುಖರು, ದೇಶೀಯ ಜನತೆಯ ಪ್ರತಿನಿಧಿಗಳೆಂದು ಪರಿಗಣಿಸಲ್ಪಟ್ಟರು ಮತ್ತು ಅವರ ಮೂಲಕ ಹಿಂದುಗಳು ಹಿಂದುಗಳನ್ನು ಆಳುವಂತೆ ಮಾಡಲಾಯಿತು.

■

*

ಪ್ರಮುಖ ಜಿಲ್ಲೆಗಳ ಹವಾಲ್ದಾರನ ಕರ್ತವ್ಯಗಳು ಮತ್ತು ಸಂಭಾವನೆ

ಸ್ಥಾನಿಕ ಆಡಳಿತದ ಒಂದು ಕಂಭವೆಂದರೆ ದೇಶೀಯ ಪಾರಂಪರಿಕ ಅಧಿಕಾರಿಗಳು ಮತ್ತೊಂದು ಎಂದರೆ ಸರಕಾರಿ ಅಧಿಕಾರಿಗಳಾಗಿದ್ದರು. ಈ ಭಾಗದಲ್ಲಿ ನಾವು ನಮ್ಮ ಲಕ್ಷ್ಯವನ್ನು ಪ್ರಮುಖ ಜಿಲ್ಲೆಗಳ ('ಮುವಾಮಲಾ' ಮತ್ತು 'ಖಲಾಬ' ಗಳ) ಹವಾಲ್ದಾರರ ಕಾರ್ಯಗಳು ಮತ್ತು ಅದಕ್ಕೆ ಸಿಗುವ ಪ್ರತಿಫಲಗಳ ಮೇಲೆ ಕೇಂದ್ರೀಕರಿಸುವೆವು.

ಈ ಮೊದಲೇ ಹೇಳಿದಂತೆ ಪ್ರತಿಯೊಂದು ಮುವಾಮಲಾ ಮತ್ತು ಖಲಾಹಕ್ಕೆ ಸುಲ್ತಾನನೇ ಸ್ವತಃ ಆಯ್ಕೆ ಮಾಡಿ ಹವಲ್ದಾರನನ್ನು ನಿಯಮಿಸುತ್ತಿದ್ದನು. ಈ ಅಧಿಕಾರಿಯ ಹುದ್ದೆ ತಾತ್ಪೂರ್ತಿಕವಾಗಿ ಖಾಲಿ ಬಿದ್ದರೆ ಇಲ್ಲವೆ ಆ ಹವಾಲ್ದಾರನು ತನ್ನ ಠಾಣೆಯಿಂದ ಅನುಪಸ್ಥಿತನಾಗಿದ್ದರೆ ಸುಲ್ತಾನನು ಆ ಸ್ಥಾನಕ್ಕೆ ಅಧೀನ ಅಧಿಕಾರಿಯೊಬ್ಬನನ್ನು ನಿಯಮಿಸುತ್ತಿದ್ದನು. ಒಮ್ಮೊಮ್ಮೆ ಸರ-ಹವಾಲ್ದಾರನನ್ನು (ಹವಾಲ್ದಾರನಿಗಿಂತ ಹೆಚ್ಚಿನವನ್ನು) ನಿಯಮಿಸಲಾಗುತ್ತಿತ್ತು. ಈ ಸರಹವಾಲ್ದಾರನನ್ನು ಕಾರ್ಯವು ಹವಾಲ್ದಾರನ ಕಾರ್ಯವೇ ಆಗಿದ್ದರಿಂದ ಇಂಥ ನೇಮಕಾತಿಯನ್ನು ಮಾಡುವುದು ಬಹಳ ವಿರಳವಾಗಿತ್ತು.

ಹವಾಲ್ದಾರನ ಕೆಳಗೆ ಸೈನಿಕ-ನಾಯಕರು, ಕಾರಕೂನರು ಅದರಂತೆಯೇ ಪಾರಂಪರಿಕ ಕೋಟೆ ರಕ್ಷಕರಿದ್ದರು. ಇದಲ್ಲದೆ ರಾಜಧಾನಿ ಬಿಜಾಪುರಕ್ಕೆ ನಗರ ಆರಕ್ಷಕ-ಮುಖ್ಯಸ್ಥನನ್ನು ಸುಲ್ತಾನನು ನಿಯಮಿಸುತ್ತಿದ್ದನು; ಪ್ರಮುಖ ಜಿಲ್ಲೆಗಳಲ್ಲಿ ಆರಕ್ಷಕ ಠಾಣೆ ಇರುತ್ತಿತ್ತು ಮತ್ತು ಅಲ್ಲಿಯ ಠಾಣೇದಾರನನ್ನು ಬಹುತರವಾಗಿ ಸುಲ್ತಾನನೇ ನಿಯಮಿಸುತ್ತಿದ್ದನು. ಈ ಸರಕಾರಿ ಅಧಿಕಾರಿಗಳಲ್ಲೇ ಅತ್ಯಂತ ಮಹತ್ವದ ಅಧಿಕಾರಿಯೆಂದರೆ ಹವಾಲ್ದಾರನೇ ಆಗಿದ್ದನು.

ಹವಾಲ್ದಾರ, ಅವನ ಅಧೀನ ಅಧಿಕಾರಿ ಮತ್ತು ಸರ-ಹವಾಲ್ದಾರ (ಒಮ್ಮೊಮ್ಮೆ ಹವಾಲ್ದಾರನ ಮೇಲೆ ನಿಯಮಿಸಲ್ಪಡುತ್ತಿದ್ದ ಅಧಿಕಾರಿ) ಇವರೆಲ್ಲರು ಪ್ರಮುಖ ಜಿಲ್ಲೆಯ ಆಡಳಿತದಲ್ಲಿ ಅತ್ಯಂತ ಹೆಚ್ಚಿನ ಹೊಣೆಗಾರಿಕೆಯನ್ನು ನಿರ್ವಹಿಸಬೇಕಾಗಿತ್ತು; ಅವರಲ್ಲಿ ಹೆಚ್ಚಾಗಿ ಎಲ್ಲರೂ ನಿರೀಕ್ಷಿಸುವಂತೆ ಮುಸಲ್ಮಾನರೇ ಆಗಿರುತ್ತಿದ್ದರು. ಉದಾಹರಣೆಗೆ, ಒಂದು ಫರ್ಮಾನ್‌ದಲ್ಲಿ ಕಂಡುಬರುವಂತೆ ಒಟ್ಟು ನಲವತ್ತೊಂದು ಹವಾಲ್ದಾರರಲ್ಲಿ ಏಳು ಜನ ಹಿಂದುಗಳಿದ್ದು, ಉಳಿದ ಮೂವತ್ನಾಲ್ಕು ಜನರು ಮುಸಲ್ಮಾನರಾಗಿದ್ದರು. ಆ ಫರ್ಮಾನದಲ್ಲಿ ಕಾಣಿಸಿದಂತೆ ನಾಲ್ವರು ಅಧೀನ ಅಧಿಕಾರಿಗಳು ಮತ್ತು ಏಳು ಸರ-ಹವಾಲ್ದಾರರು ಎಲ್ಲರೂ ಮುಸಲ್ಮಾನರಾಗಿದ್ದರು.

೧. ಹವಾಲ್ದಾರ ಮತ್ತು ಸುಲ್ತಾನ :

ಸುಲ್ತಾನ ಮತ್ತು ಹವಾಲ್ದಾರ ಇವರ ನಡುವಿನ ಸಂಬಂಧದ ಕೆಲವು ಮುಖಗಳನ್ನು ತೋರಿಸಬಹುದು.

ಯಾರನ್ನು ಸುಲ್ತಾನನು ಹವಾಲ್ದಾರನನ್ನಾಗಿ ನಿಯಮಿಸಬೇಕೆಂದಿದ್ದನೊ ಅವನ ಒಪ್ಪಿಗೆಯನ್ನು ಪಡೆಯುವುದು ಸಾಮಾನ್ಯವಾಗಿತ್ತು. ಹವಾಲ್ದಾರನನ್ನು ನಿಯಮಿಸುವ ವೇಳೆಯಲ್ಲಿ ಅವನಿಗೆ 'ರಾಜ ಪೋಷಾಕದ ಗೌರವ' ವನ್ನು ನೀಡಲಾಗುತ್ತಿತ್ತು ಮತ್ತು ಅವನು ತನ್ನ ಜಾಮೀನ ಮೊತ್ತವನ್ನು ಖಾತ್ರಿಗೆಂದು ಇಡಬೇಕಾಗಿತ್ತು. ಸತ್ಯಸಂಗತಿ ಎಂದರೆ ಹವಾಲ್ದಾರನೆಂದು ನಿಯಮಿಸುವುದಕ್ಕೆ ಆ ವ್ಯಕ್ತಿಯಿಂದ ಒಪ್ಪಿಗೆ ಪಡೆಯುವುದು ನಾಮಮಾತ್ರಕ್ಕೆ ಇದ್ದಿತಲ್ಲದೆ ಕೆಲವು ಹವಾಲ್ದಾರರಿಗೆ 'ಪ್ರಭು ಸಭೆಯ ಸದಸ್ಯ' ಅಥವಾ ರಾಜ ವಿಭಾಗದ ಮುಖ್ಯಸ್ಥ' ಇತ್ಯಾದಿ ಬಿರುದುಗಳನ್ನು ದಯಪಾಲಿಸಲಾಗುತ್ತಿತ್ತು; ಇದು ತೋರಿಸುವುದೇನೆಂದರೆ ಸಾಮಾನ್ಯವಾಗಿ ಕೇವಲ ವಿಶ್ವಾಸದ ಮತ್ತು ಉನ್ನತ ದರ್ಜೆಯ ಸರಕಾರಿ ಅಧಿಕಾರಿಗಳನ್ನೇ ಈ ಹುದ್ದೆಗೆ ನೇಮಿಸಲಾಗುತ್ತಿತ್ತು.

ಹವಾಲ್ದಾರರ ಹುದ್ದೆಯನ್ನು 'ಪ್ರಭು ಕೃಪೆಯೆಂದು' ತುಂಬುತ್ತಿದ್ದರಿಂದ ಹವಾಲ್ದಾರನ ಅಧಿಕಾರ ಅವಧಿಯು ಖಚಿತವಾಗಿ ಇಷ್ಟೊಂದು ನಿರ್ಧರಿಸುತ್ತಿದ್ದಿಲ್ಲ. ಸರಕಾರಿ ಸಿಬ್ಬಂದಿಯ ಮೇಲಿಂದಮೇಲೆ ಮತ್ತು ಕ್ರಮರಹಿತ ರೀತಿಯಲ್ಲಿ ಕೆಲವು ತಿಂಗಳಿಂದ ಕೆಲವು ಸುಮಾರು ಮೂರು ವರ್ಷಗಳವರೆಗೆ ವರ್ಗ ಮಾಡಲಾಗುತ್ತಿತ್ತು. ಉದಾಹರಣೆಗೆ, ಸಂದಲಾಪುರ (ಸೋಲಾಪುರ) ಮುವಾಮಲಾದಲ್ಲಿ ಸೆಪ್ಟಂಬರ್ ೧೬೪೦ ರಿಂದ ಮಾರ್ಚ್ ೧೬೬೨ ರ ಅವಧಿಯಲ್ಲಿ ಒಟ್ಟು ಹದಿನೈದು ಹವಾಲ್ದಾರರು ಆ ಹುದ್ದೆಯನ್ನು ಅಲಂಕರಿಸಿದರು. ಎಷ್ಟೋ ಸಾರೆ ಹವಾಲ್ದಾರ ಹುದ್ದೆಯಿಂದ ತೆಗೆಯಲ್ಪಟ್ಟ ಸರಕಾರಿ ಅಧಿಕಾರಿಯನ್ನು ಕೆಲ ಸಮಯದ ನಂತರ ಅದೇ ಹುದ್ದೆಗೆ ಮರು ನೇಮಣೂಕಿಯನ್ನು ಮಾಡಲಾಗುತ್ತಿತ್ತು. ಮೇಲೆ ಉಲ್ಲೇಖಿಸಿದ ಹದಿನೈದು ಹವಾಲ್ದಾರರಲ್ಲಿ ಕನಿಷ್ಠ ಮೂವರು

ಎರಡು ಬಾರಿ ಅದೇ ಹುದ್ದೆಯನ್ನು ಬೇರೆ ಬೇರೆ ಅವಧಿಯಲ್ಲಿ ಹಿಡಿದದ್ದುಂಟು. ಒಂದು ಜಿಲ್ಲೆಯಲ್ಲಿದ್ದ ಒಬ್ಬ ಸರ–ಹವಾಲ್ದಾರನೆಂದು ನೇಮಿಸಲಾಗಿತ್ತು.

ಪುನಃ ಪುನಃ ಆಗುತ್ತಿದ್ದ ಈ ಬದಲಾವಣೆಗಳಿಗೆ ಸ್ಪಷ್ಟವಾದ ಕಾರಣವಿರಲಿಲ್ಲ. ಆದಾಗ್ಯೂ ಒಂದು ಸ್ಪಷ್ಟ ಸಂಗತಿಯೆಂದರೆ ಹವಾಲ್ದಾರನ ಹುದ್ದೆಯು ಪಾರಂಪರಿಕ ಹುದ್ದೆಯಾಗಿದ್ದಿಲ್ಲ ಮತ್ತು ಪದೇ ಪದೇ ನಡೆಯುತ್ತಿದ್ದ ವರ್ಗಾವಣೆಯ ಯಾವುದೇ ಒಬ್ಬ ಹವಾಲ್ದಾರನು ಒಂದೇ ಒಂದು ನಿರ್ದಿಷ್ಟ ಜಿಲ್ಲೆಯೊಡನೆ ಸಂಬಂಧ ಬೆಳೆಸಿಕೊಳ್ಳುವುದನ್ನು ನಿರ್ಬಂಧಿಸುತ್ತಿತ್ತು. ಭಾರತದ ಉಳಿದ ಮುಸಲ್ಮಾನ ರಾಜ್ಯಗಳಲ್ಲಿರುವಂತೆ ಈ ಸುಲ್ತಾನ ರಾಜ್ಯದಲ್ಲಿಯೂ 'ಮನಸಬದಾರಿ' ಅಂದರೆ ಒಬ್ಬ ಸರಕಾರಿ ಅಧಿಕಾರಿ ಹೊಂದಿರುವ ಸೈನಿಕರ ಸಂಖ್ಯೆಯನ್ನು ಅವಲಂಬಿಸಿ ನಿರ್ಣಯಿಸುವ ಅಧಿಕಾರಿಗಳ 'ಶ್ರೇಣಿಕ್ರಮ' ನಿರ್ಧರಿಸುವ ಪದ್ಧತಿಯಿತ್ತು. ಆದರೆ ನಮಗೆ ಲಭ್ಯವಿರುವ ಆಕರಗಳು ಹವಾಲ್ದಾರನು ಎಷ್ಟು ಜನ ಸೈನಿಕರನ್ನು ಹೊಂದಿರುತ್ತಿದ್ದರು ಎನ್ನುವುದನ್ನು ತಿಳಿಸುವುದಿಲ್ಲ. ಸುಲ್ತಾನ ರಾಜ್ಯಕ್ಕೆ ವಿಶೇಷ ಸೇವೆ ಸಲ್ಲಿಸುತ್ತಿದ್ದ ದೇಸಾಯಿಯ ಹತ್ತಿರ ಐದುನೂರ ಅಶ್ವದಳ ಇರುತ್ತಿತ್ತೆಂದರೆ ಹವಾಲ್ದಾರನು ಅದಕ್ಕಿಂತ ಬಹಳ ಕಡಿಮೆ ಸಂಖ್ಯೆಯ ಅಶ್ವದಳವನ್ನು ಹೊಂದಿರಬೇಕೆಂದು ಊಹಿಸಬಹುದು. ತನ್ನಷ್ಟಕ್ಕೆ ತಾನೇ ಹವಾಲ್ದಾರನು ಸೈನಿಕರನ್ನು ಸಾಕುತ್ತಿದ್ದನೆಂದರೆ ಅವನ ಕೈಕೆಳಗೆ ಕೆಲಸ ಮಾಡುತ್ತಿದ್ದ ಪ್ರಮುಖ ಜಿಲ್ಲೆಯ ಜನರೆಲ್ಲರೂ ಅವನ ವೈಯಕ್ತಿಕ ಸೇವೆಯಲ್ಲಿ ಇದ್ದರೆಂದು ತಿಳಿಯಬಾರದು. ಈ ಒಳಗಾಗಿ ಹೇಳಿದಂತೆ, ಸೈನ್ಯಾಧಿಕಾರಿಗಳು, ಕಾರಕೂನರು ಮತ್ತು ಪೋಲೀಸ್ ಠಾಣೆಯ ಮುಖ್ಯಸ್ಥ ಇವರೆಲ್ಲರನ್ನೂ ಸ್ವತಂತ್ರವಾಗಿಯೇ ನಿಯಮಿಸಲಾಗುತ್ತಿತ್ತು. ಕನಿಷ್ಠ ಪಕ್ಷಕ್ಕೆ ಸೈನಿಕ ಅಧಿಕಾರಿಗಳನ್ನು ಮತ್ತು ಪೋಲೀಸ್ ಠಾಣಾಧಿಕಾರಿಗಳನ್ನು ಸುಲ್ತಾನನೇ ನೇರವಾಗಿ ನಿಯಮಿಸುತ್ತಿದ್ದನು.

೨. ಹವಾಲ್ದಾರನ ಕರ್ತವ್ಯಗಳು:

ಒಂದು ಫರ್ಮಾನವು ಸ್ಪಷ್ಟಪಡಿಸುವಂತೆ ಸಾಮಾನ್ಯವಾಗಿ ಹವಾಲ್ದಾರನ ಕರ್ತವ್ಯಗಳು ಕೋಟೆಯನ್ನು ಸುಭದ್ರಗೊಳಿಸುವುದು ಮತ್ತು ತನ್ನ ಪ್ರದೇಶದಲ್ಲಿಯ ಕೃಷಿಯನ್ನು ಮತ್ತು ಸಂಪತ್ತನ್ನು ಸುಸ್ಥಿತಿಯಲ್ಲಿಡುವುದು ಮುಖ್ಯವಾಗಿದ್ದವು; ಆ ದಿಶೆಯಲ್ಲಿ ಅವನು ಗರಿಷ್ಠ ಪ್ರಮಾಣದಲ್ಲಿ ಶ್ರಮಿಸಬೇಕೆಂದು ತಿಳಿಸಲಾಗಿತ್ತು. ಸುರಕ್ಷಿತತೆ ಮತ್ತು ಕೋಟೆಯನ್ನು ಭದ್ರಪಡಿಸುವುದು ಇವೆರಡನ್ನು ಒತ್ತುಕೊಟ್ಟು ಹೇಳುವುದನ್ನು ಹೊರತುಪಡಿಸಿ ಉಳಿದೆಲ್ಲ ಕರ್ತವ್ಯಗಳು ದೇಸಾಯಿಯು ನಿರ್ವಹಿಸುತ್ತಿದ್ದ ಕರ್ತವ್ಯಗಳೇ ಆಗಿದ್ದವು: ಸೈನ್ಯಕ್ಕೆ ಸಂಬಂಧಿಸಿದ ವಿಷಯಗಳು, ರಕ್ಷಣೆ, ಆಡಳಿತಾತ್ಮಕ ನ್ಯಾಯ ಮತ್ತು ಕಂದಾಯ ವಸೂಲಿ.

ಸೈನ್ಯ ಸಂಬಂಧ ಮತ್ತು ರಕ್ಷಣಾ ಕರ್ತವ್ಯಗಳು:

ಹವಾಲ್ದಾರನ ಸೈನ್ಯ ಸಂಬಂಧಿ ಮತ್ತು ರಕ್ಷಣಾ ಸಂಬಂಧಿ ಕರ್ತವ್ಯಗಳನ್ನು ವಿವರವಾಗಿ ಚರ್ಚಿಸುವ ಅವಶ್ಯಕತೆಯಿಲ್ಲ. ರಕ್ಷಣೆಗೆ ಸಂಬಂಧಿಸಿದ್ದ ಅವನ ಜವಾಬ್ದಾರಿಗಳಲ್ಲಿ ಮೂರು ಮುಖ್ಯ ಅಂಶಗಳನ್ನು ನೋಡೋಣ. (೧) ತನ್ನ ಕೆಳಗಿನ ಹಳ್ಳಿಯಲ್ಲಿಯ ಯಾವುದೇ ಒಬ್ಬ ರೈತನು ಪರಾರಿಯಾಗಿದ್ದರೆ ಆ ಹಳ್ಳಿಯ ಪಾರಂಪರಿಕ ಅಧಿಕಾರಿಯಿಂದ ಆ ವ್ಯಕ್ತಿಯನ್ನು ಮರಳಿ ತರಿಸುವುದು. (೨) ಪಾರಂಪರಿಕ ಅಧಿಕಾರಿಗಳ ಸ್ಥಾನಿಕ ಅಧಿಕಾರಿಗಳ ಅಥವಾ ಸೈನಿಕರ ದಬ್ಬಾಳಿಕೆ ಇಲ್ಲವೆ ಸುಲಿಗೆಯಿಂದಾಗಿ ಹಳ್ಳಿಯೊಂದರ ಜನರು ದೊಡ್ಡ ಸಂಖ್ಯೆಯಲ್ಲಿ ಊರಿಂದ ಓಡಿಹೋಗಿದ್ದರೆ ಅಂಥ 'ದಮನಕಾರಿ'ಗಳನ್ನು ಹತೋಟಿಯಲ್ಲಿಟ್ಟು ಆ ರೈತರಿಗೆ ಅಭಯವನ್ನು ಸಾರಿ, ಸಾಂತ್ವನಪಡಿಸಿ ಅವರು ಮತ್ತೆ ಊರಿಗೆ ಮರಳಿಬಂದು ಬೇಸಾಯ ಕೆಲಸವನ್ನು ಮುಂದುವರೆಸುವಂತೆ ಅವರ ಮನವೊಲಿಸುವುದು. (೩) ಆದರೆ, ತಪ್ಪಿತಸ್ಥರನ್ನು ಶಿಕ್ಷಿಸುವ ಅಧಿಕಾರ ಹವಾಲ್ದಾರನಿಗೆ ಇದ್ದಂತೆ ಕಾಣುವುದಿಲ್ಲ. ನ್ಯಾಯಾಲಯದಿಂದ ನಿರ್ದಿಷ್ಟ ಆಜ್ಞೆ ಬಂದರೆ ಮಾತ್ರ ಅವನು ತನ್ನ ಶಿಕ್ಷಿಸುವ ಅಧಿಕಾರವನ್ನು ಪ್ರಯೋಗಿಸಬಹುದಿತ್ತು.

ನ್ಯಾಯಾಂಗ ಕಾರ್ಯಗಳು :

ನಾಗರಿಕ ವ್ಯಾಜ್ಯಗಳಿಗೆ ಸಂಬಂಧಿಸಿದ ಹವಾಲ್ದಾರನ ನ್ಯಾಯಾಂಗ ಕಾರ್ಯಗಳು ದೇಸಾಯಿಗೆ ಇದ್ದಂತಹವುಗಳೇ ಆಗಿದ್ದವು: ವ್ಯಾಜ್ಯಗಾರರಿಂದ ಮನವಿಗಳನ್ನು ಸ್ವೀಕರಿಸುವುದು, ನ್ಯಾಯ ಸಭೆಗಳನ್ನು ಕರೆಯುವುದು, ಬಹಳ ಸಾರ ತಾನೇ ಅಂಥ ಸಭೆಗಳನ್ನು ಭಾಗವಹಿಸಿ ಆಲಿಸುವುದು ಮತ್ತು ಅಂಥ ಸಭೆಗಳಲ್ಲಿ ಕೈಕೊಂಡ ನಿರ್ಣಯಗಳನ್ನು ದೃಢಪಡಿಸಿ ಕಾರ್ಯಗತಗೊಳಿಸುವುದು.

ಕಂದಾಯ ಸಂಗ್ರಹ :

ತಹಸೀಲ್ದಾರರ ಮುಖಾಂತರ ತನ್ನ ಹಳ್ಳಿಗಳಿಂದ ಕಂದಾಯ ಸಂಗ್ರಹ ಮಾಡುವುದಕ್ಕಾಗಿ ಹವಾಲ್ದಾರನು ನೇರವಾಗಿ ಸುಲ್ತಾನನಿಗೆ ಹೊಣೆಯಾಗಿದ್ದನು. ಹಾಗೆಯೇ ತನ್ನ ಜಿಲ್ಲೆಗೆ ಸಂಬಂಧಪಟ್ಟ ದೇಸಾಯಿ ಮತ್ತು ಇನ್ನಿತರ ಪಾರಂಪರಿಕ ಅಧಿಕಾರಿಗಳಿಂದ ವಾರ್ಷಿಕ ಕಾಣಿಕೆಗಳನ್ನು ಸುಲ್ತಾನನಿಗೆ ಕೊಡುವುದಕ್ಕಾಗಿ ಸಂಗ್ರಹಿಸುವುದು ಇವನದೇ ಜವಾಬ್ದಾರಿಯಾಗಿತ್ತು. ಆ ಹಣವನ್ನು ರಾಜ ಖಜಾನಿಗೆ ಕಳಿಸುವುದೂ ಇವನ ಹೊಣೆಯೇ ಆಗಿತ್ತು. ರಾಜಾಸ್ಥಾನಕ್ಕೆ ತಾತ್ಪೂರ್ತಿಕವಾಗಿ ಬೇಕಾಗಿರುವ ಒತ್ತಾಯದಿಂದ ಕೂಡಿಸಿದ ಆಳುಗಳನ್ನು ಮತ್ತು ಕಟ್ಟಡ ಕಟ್ಟುವವರನ್ನು ಒದಗಿಸುವುದೂ ಈತನ ಹೊಣೆಯೇ ಆಗಿತ್ತು.

ಆದರೆ ಇಲ್ಲಿ ಗಮನಿಸಬೇಕಾದ ಮಾತೆಂದರೆ ಹವಾಲ್ದಾರನು ತಥಾ-ಕಥಿತ ಸಾಂಸ್ಥಿಕ 'ತೆರಿಗೆ-ವರ್ಧಕ'ನೂ ಆಗಿರಲಿಲ್ಲ. ಯಾಕೆಂದರೆ ಒಂದು ಫರ್ಮಾನವು ನಿರ್ದಿಷ್ಟವಾಗಿ ಹೇಳುವಂತೆ ಹಳ್ಳಿಗರಿಂದ ಹೆಚ್ಚಿನ ಕಂದಾಯ ವಸೂಲಿ ಮಾಡುವಂತಿರಲಿಲ್ಲ. (ಅಧಿಕೃತಗೊಳಿಸಿದ ಮೊತ್ತದಾಚೆ) ಫರ್ಮಾನದ ಒಕ್ಕಣಿಕೆ ಹೀಗಿತ್ತು:" ನೀವು ಒಂದೇ ಒಂದು ಹೆಚ್ಚಿನ ಪೈಸೆಯನ್ನು ವಸೂಲ ಮಾಡಿದ್ದಾದರೆ ಮತ್ತು ಆ ಬಗೆಗೆ ಹಳ್ಳಿಗರಿಂದ ದೂರು ಬಂದದ್ದಾದರೆ ಅದರ ಪರಿಣಾಮ ಒಳ್ಳೆಯದಾಗುವುದಿಲ್ಲ. ಈ ವಿಷಯದಲ್ಲಿ ಕಟ್ಟುನಿಟ್ಟಾದ ಆಜ್ಞೆಯನ್ನು ಪಾಲಿಸಲೇಬೇಕು; ಒಂದು ಹೆಚ್ಚಿನ ಪೈಸೆಯನ್ನು ತೆಗೆದುಕೊಳ್ಳಬಾರದು" ಈ ಮೊದಲು ತಿಳಿಸಿದಂತೆ, ತನ್ನ ಜಿಲ್ಲೆಯ ಮೌಲ್ಯಮಾಪಿತ ಕಂದಾಯ ಮೊತ್ತ ಎಷ್ಟೆಂದು ರಾಜಾಸ್ಥಾನಕ್ಕೆ ಹವಾಲ್ದಾರನು ತಿಳಿಸಬೇಕಾಗಿತ್ತು ಮತ್ತು ಅದಕ್ಕೆ ದೃಢೀಕೃತ ಒಪ್ಪಿಗೆ ಸಿಕ್ಕ ನಂತರ ನಿಜವಾದ ಕಂದಾಯ ಮೊತ್ತವನ್ನು ಸಂಗ್ರಹಿಸಬೇಕಾಗಿತ್ತು. ಈ ಕ್ರಮಗಳಿಂದ ಸುಲ್ತಾನನು ಹವಾಲ್ದಾರನು ತನ್ನ ಸಂಪೂರ್ಣ ಹತೋಟಿಯಲ್ಲಿಡಲು ಯತ್ನಿಸುತ್ತಿದ್ದನು.

೩. ಹವಾಲ್ದಾರನ ಸಂಭಾವನೆ

ಫರ್ಮಾನವೊಂದನ್ನು ಸಂದಲಾಪುರ (ಸೋಲಾಪುರ) ಮುವಾಮಲಾ ಹವಾಲ್ದಾರಿಕೆಗೆ ಒಬ್ಬ ಸರಕಾರಿ ಅಧಿಕಾರಿಯನ್ನು ನಿಯಮಿಸುವ ಘೋಷಣೆಯೊಂದಿಗೆ ಆ ಪ್ರದೇಶಕ್ಕೆ ಸಂಬಂಧಪಟ್ಟ ಕಾರಕೂನರಿಗೆ, ಸೈನ್ಯಾಧಿಕಾರಿಗಳಿಗೆ, ದೇಸಾಯರಿಗೆ ಮತ್ತು ಸಾಮಾನ್ಯ ಜನರಿಗೆ ಹೊಸ ಹವಾಲ್ದಾರನ ಅಧಿಕಾರ ಮತ್ತು ಆಳ್ವಿಕೆಯನ್ನು ಮನ್ನಿಸಬೇಕು. ಹಾಗೆಯೇ ಇಲ್ಲಿಯವರೆಗೆ ಇದ್ದಂತೆ ಹವಾಲ್ದಾರನ ಮಾಸಿಕ ಸಂಬಳವನ್ನು ಮತ್ತು ಕಂದಾಯದಲ್ಲಿಯ ಅವನ ಪಾಲನ್ನು ಒಪ್ಪಿಕೊಂಡು ಮುಂದುವರೆಯಬೇಕು ಎಂದು ಆಜ್ಞಾಪಿಸಿತು. ಈ ಫರ್ಮಾನದ ಪ್ರಕಾರ ತಿಳಿದುಬರುವುದೆಂದರೆ ರಾಜ ಖಜಾನೆಯಿಂದ ಹವಾಲ್ದಾರನಿಗೆ ಮಾಸಿಕ ಸಂಬಳವನ್ನು ಮತ್ತು ಅದರಂತೆ ಜಿಲ್ಲೆಯ ಕಂದಾಯ ಆದಾಯದಲ್ಲಿಯ ಅವನ ಪಾಲನ್ನು ಕೊಡಲಾಗುತ್ತಿತ್ತು. ಮತ್ತು ಹವಾಲ್ದಾರ ಹುದ್ದೆಯ ಸಂಭಾವನೆಗಳನ್ನು ಪಡೆಯುವ ಹಕ್ಕು ಹಿಂದಿನ ಹವಾಲ್ದಾರನಿಂದ ಮುಂದಿನ ಹವಾಲ್ದಾರನಿಗೆ ತನ್ನಿಂದ ತಾನೇ ಸಾಗಿಬರುವಂತೆ ವ್ಯವಸ್ಥೆ ಮಾಡಲಾಗಿತ್ತು. ಹವಾಲ್ದಾರಿಗೆ ಸಂಬಂಧಿಸಿ ಬೇರಾವ ಸಂಭಾವನೆಯನ್ನು ಕುರಿತು ತಿಳಿಸುವ ಯಾವ ಆಕರಗಳು ನಮ್ಮಲ್ಲಿಲ್ಲ. ಆದಾಗ್ಯೂ ಒಬ್ಬ ಉನ್ನತ ದರ್ಜೆಯ ಸರಕಾರಿ ಅಧಿಕಾರಿಯನ್ನು ಹವಾಲ್ದಾರನೆಂದು ನಿಯಮಿಸಿದಾಗ ಯಾವುದೇ ನಿರ್ದಿಷ್ಟ ಹುದ್ದೆಗಳಿಗೆ ಸಂಬಂಧಿಸದ, ಆದರೆ ಆ ವ್ಯಕ್ತಿಯ ನಿಷ್ಠೆಗೋಸ್ಕರ ಅವನಿಗೆ ಜಹಗೀರ ಜಮೀನನ್ನು (ಅವನಿಗೆ ಗೊತ್ತುಪಡಿಸಿದ ಸಂಭಾವನೆಗೆ ಹೊರತುಪಡಿಸಿ) ದಯಪಾಲಿಸಲಾಗುತ್ತಿತ್ತು. ಉದಾಹರಣೆಗೆ, ಹವಾಲ್ದಾರನೆಂದು ಒಬ್ಬ ಸರಕಾರಿ ಅಧಿಕಾರಿಯನ್ನು ನೇಮಿಸಿ ಒಂದು ವರ್ಷ ಕಳೆದ ಮೇಲೆ (ಅವನು ಅದೇ ಹುದ್ದೆಯಲ್ಲಿ ಮುಂದುವರೆದಿದ್ದರೆ) ಅದೇ

ಜಿಲ್ಲೆಯಲ್ಲಿ ಅವನಿಗೊಂದು ಹಳ್ಳಿಯನ್ನು ಮಂಜೂರು ಮಾಡಲಾಗುತ್ತಿತ್ತು. ತಂಬಾಕ ತೆರಿಗೆ, ವೀಳ್ಯದೆಲೆಯ ಮೇಲಿನ ಕರ ಇವುಗಳನ್ನು ಬಿಟ್ಟು ಇನ್ನುಳಿದ ಕಂದಾಯದ ಎಲ್ಲ ಬಾಬುಗಳು ಮತ್ತು ನಿಷ್ಠೆಗೆಂದು ನೀಡಿದ ಎಲ್ಲ ಇನಾಮುಗಳು ಅವನಿಗೇ ಸೇರಿದ್ದವು. ಸುಲ್ತಾನನು ಅವನಿಗೆ ಒಂದಲ್ಲದೇ ಹಲವಾರು ಹಳ್ಳಿಗಳನ್ನು ಮಂಜೂರ ಮಾಡಿರಬಹುದು, ಅವು ಬೇರೆ ಬೇರೆ ಕಾಲದಲ್ಲಿ ಬೇರೆ ಬೇರೆ ಪ್ರದೇಶಗಳಲ್ಲಿ ನೀಡಿದ್ದಾಗಿರಬಹುದು. ಆದರೆ ನಮ್ಮ ಆಕರಗಳಲ್ಲಿ ಅವು ಉಲ್ಲೇಖಿತವಾಗಿಲ್ಲ. ಏನಿದ್ದರೂ ಮಹತ್ವದ ವಿಷಯವೆಂದರೆ ಉನ್ನತದರ್ಜೆಯ ಹವಾಲ್ದಾರನಿಗೆ ಅವನ ನಿಷ್ಠೆಗಾಗಿ ಕೆಲವು ಹಳ್ಳಿಗಳ ಮತ್ತು ಕ್ಷೇತ್ರಗಳ ಮೇಲೆ ತಾತ್ಪೂರ್ತಿಕ ಮೇಲಧಿಕಾರವನ್ನು ದಯಪಾಲಿಸಲಾಗುತ್ತಿತ್ತು.

ಹವಾಲ್ದಾರನ ಸ್ಥಿತಿಯನ್ನು ಸಾಮಾನ್ಯವಾಗಿ ಕೆಳಗಿನಂತೆ ಸಂಗ್ರಹಿಸಿ ಹೇಳಬಹುದು.

೧) ಹವಾಲ್ದಾರನು ಸುಲ್ತಾನನು ನಿಯಮಿಸಿದ ಅಧಿಕಾರಿಯಾಗಿದ್ದರಿಂದ ಅವನನ್ನು ಇಡಬಹುದು ಇಲ್ಲವೆ ತೆಗೆಯಬಹುದಾಗಿತ್ತು. ಜಿಲ್ಲೆಯನ್ನು ಅವನ ಸಂಪೂರ್ಣ ನಿರ್ವಹಣೆಯಲ್ಲಿಟ್ಟಿದ್ದಿಲ್ಲ: ಉಳಿದ ಸರಕಾರಿ ಅಧಿಕಾರಿಗಳು ಅವನ ಕೆಳಗೆ ಕೆಲಸ ಮಾಡುತ್ತಿದ್ದರೂ ವೈಯಕ್ತಿಕವಾಗಿ ಅವನ ಅನುಯಾಯಿಗಳಾಗಿರದೇ ಸುಲ್ತಾನನ ಅಧಿಕಾರಿಗಳಾಗಿದ್ದರು. ಹವಾಲ್ದಾರನ ಆಳಿಕೆಯನ್ನು ಮಧ್ಯಮ ವರ್ಗದ ಅಧಿಕಾರಿಗಳು, ಒಮ್ಮೊಮ್ಮೆ ವಿಶೇಷವಾಗಿ ಕಳಿಸಿದ ಮೇಲ್ವಿಚಾರಕರು ಮತ್ತು ಆ ಜಿಲ್ಲೆಯ ಪಾರಂಪರಿಕ ಅಧಿಕಾರಿಗಳು ತಪಾಸಿಸುತ್ತಿದ್ದರು. ಅದಲ್ಲದೆ ಅವನಿಗೆ ಸಿಗುತ್ತಿದ್ದ ಸಂಬಳವು ವ್ಯಕ್ತಿಗತವಾಗಿರದೇ ಅವನ ಹುದ್ದೆಗೆ ಸಂಬಂಧಿಸಿದ್ದರಿಂದ ಅವನನ್ನು ಆ ಹುದ್ದೆಯಿಂದ ಮುಕ್ತಗೊಳಿಸಿದ ತತ್ಕ್ಷಣವೇ ಅವನ ಸಂಬಳದ ಹಕ್ಕು ಮುಗಿದುಹೋಗುತ್ತಿತ್ತು. ಒಂದು ರೀತಿಯಲ್ಲಿ ಅವನು ಸುಲ್ತಾನನ 'ಪಿತ್ರಾರ್ಜಿತ ಅಧಿಕಾರಿ' ಎನ್ನುವಂತಿದ್ದನು. (೨) ಆದರೆ ಕೇವಲ 'ಪಿತ್ರಾರ್ಜಿತ ಅಧಿಕಾರಿ' ಆಗಿರದೆ ಕೆಲವೊಂದು ಪ್ರದೇಶಗಳ ಮೇಲೆ ಅಧಿಕಾರ ಹೊಂದಿರುವ ಅಧಿಕಾರಿಯಾಗಿದ್ದು ತಾನೇ ತನ್ನ ಖರ್ಚಿನಲ್ಲಿ ಕೆಲವು ಸೈನ್ಯದ ತುಕಡಿಗಳನ್ನು ಇಟ್ಟುಕೊಂಡ ಅಧಿಕಾರಿಯೂ ಆಗಿದ್ದನು. ಈ ಅರ್ಥದಲ್ಲಿ ಇವನಲ್ಲಿ 'ಉಂಬಳಿಯ ಅಧಿಕಾರಿ'ಯ ಲಕ್ಷಣಗಳೂ ಇದ್ದವು.

ಈ ತೆರನಾದ ದ್ವಿವಿಧ ಸ್ವರೂಪದ ಆಡಳಿತಶಾಹಿಯು ಹವಾಲ್ದಾರನಿಗಷ್ಟೇ ಸೀಮಿತವಾಗಿರದೇ ಸುಲ್ತಾನರಾಜ್ಯದ ಉನ್ನತ ಅಧಿಕಾರಿಗಳಲ್ಲಿಯೂ ಹಾಗೆಯೇ ಮಧ್ಯಮ ಶ್ರೇಣಿಯ ಸರಕಾರಿ ಅಧಿಕಾರಿಗಳಲ್ಲಿಯೂ ಇತ್ತು. ಈಗ ನಾವು ಸುಲ್ತಾನ ರಾಜ್ಯದಲ್ಲಿದ್ದ ಅಧಿಕಾರಶಾಹಿಯ ಊಳಿಗಮಾನ್ಯ ಪದ್ಧತಿಯ ಸ್ವರೂಪವನ್ನು ಮತ್ತು ಜಮೀನದಾರಿ ಪದ್ಧತಿಯನ್ನು ಚರ್ಚಿಸೋಣ.

■

*

ಸರಕಾರಿ ಅಧಿಕಾರಿಗಳ ಜಹಗೀರಿಗಳು

೧. ಮೂರು ವರ್ಗಗಳ ಜಹಗೀರುಗಳು :

ಈ ಮೊದಲು ಹೇಳಿದಂತೆ, ಸಣ್ಣ ಜಹಗೀರುಗಳನ್ನು ಸರಕಾರಿ ಜಿಲ್ಲೆಯಲ್ಲಿ ಮಂಜೂರ ಮಾಡುತ್ತಿದ್ದರು. ವಿಶೇಷವಾಗಿ ದೊಡ್ಡ ಜಹಗೀರಗಳನ್ನು ಪರಗಣಾ ಕ್ಷೇತ್ರದಲ್ಲಿಯೇ ಮಂಜೂರ ಮಾಡಲಾಗುತ್ತಿತ್ತು.

ಬಹಳಷ್ಟು ಫರ್ಮಾನುಗಳನ್ನು ನಾವು ಸೂಕ್ಷ್ಮಾವಲೋಕನ ಮಾಡಿದರೆ ಮೂರು ಮುಖ್ಯ ವರ್ಗಗಳ ಜಹಗೀರಗಳು ಕಂಡುಬರುತ್ತವೆ. ಅವುಗಳೆಂದರೆ ೧) ಖಚಿತವಾಗಿ ವರ್ಣಿಸಿದ ಉಂಬಳಿಗಳು ೨) ಹುದ್ದೆಗನುಸಾರವಾಗಿ ಕೊಟ್ಟ ಉಂಬಳಿಗಳು ೩) ನಿಷ್ಠೆಗಾಗಿ ನೀಡಿದ ಜಹಗೀರಗಳು. ನಮ್ಮ ದಾಖಲೆಗಳಲ್ಲಿ ಮೊದಲಿನ ವರ್ಗಕ್ಕೆ ಯಾವ ತಾಂತ್ರಿಕ ಶಬ್ದವನ್ನು ಕೊಟ್ಟಿಲ್ಲ. ಕೊನೆಯ ಎರಡಕ್ಕೂ ಸಾಮಾನ್ಯವಾಗಿ 'ಮುಖಾಸಾ' ಎನ್ನಲಾಗಿದೆ. ಕೆಲವೊಂದು ಸಾರೆ ಮೂರನೆಯ ವರ್ಗಕ್ಕೆ 'ಜಹಗೀರ' ಎನ್ನಲಾಗಿದೆ. ಖಚಿತವಾಗಿ ವರ್ಣಾತೀತವಾದ ಉಂಬಳಿಗಳು : ಈ ವರ್ಗದ ಉಂಬಳಿಯೆಂದರೆ ಒಂದು ಹಳ್ಳಿಯಿಂದ ಬರಬಹುದಾದ ಕಂದಾಯದ ಪಾಲು (೨೦೦ಹಂಸದಿಂದ ೬೦೦ ಹಂಸದವರೆಗೆ ಅಂದರೆ ರೂ. ೪೦೦/- ರಿಂದ ರೂ. ೨೪೦೦/- ವರೆಗೆ) ಈ ಕಂದಾಯ ಸಾಲದ ಮೊತ್ತವು ಸರಕಾರಿ ಅಶ್ವದಳದ ಸೈನಿಕರಿಗೆ ಅಂದರೆ ಸಿಲ್ಹಾದಾರ, ಲಷ್ಕರ-ಇ-ಅಫ್ರದ ಮತ್ತು ಲಷ್ಕರಿ ಇವರಿಗೆ ಅವರ ಮಾಸಿಕ-ಸಂಬಳದ ಬದಲಾಗಿ ಸಲ್ಲುತ್ತಿತ್ತು. ಈ ಉಂಬಳಿಯ ರಾಜಾನುಗ್ರಹದಿಂದಿರದೆ ಹೆಚ್ಚು ವ್ಯವಸ್ಥಿತ ರೀತಿಯಲ್ಲಿತ್ತು. ಅಂದರೆ ಅದರ ಉಪಭೋಗಿಯು ಅಶ್ವದಳ ಮತ್ತು ಶಸ್ತ್ರಾಸ್ತ್ರಗಳನ್ನು ಪೋಷಿಸದಿದ್ದರೆ, ಆಜ್ಞೆಯ ಪ್ರಕಾರ ವರದಿಯನ್ನೊಪ್ಪಿಸದಿದ್ದರೆ, ಪರಾರಿಯಾಗಿದ್ದರೆ ಇಲ್ಲವೆ ಮೃತನಾಗಿದ್ದರೆ ತತ್‌ಕ್ಷಣವೇ ಆ ಉಂಬಳಿಯನ್ನು ಸ್ಥಗಿತಗೊಳಿಸಲಾಗುತ್ತಿತ್ತು. ಆ ಉಪಭೋಗಿಯು (ಉಂಬಳಿದಾರನು) ಸಂಬಂಧಪಟ್ಟ

ಹಳ್ಳಿಯ ಒಡೆಯನಾಗಿರಲಿಲ್ಲ, ಕೇವಲ ತನ್ನ ನಿಯೋಗಿಯ ಮುಖಾಂತರ ಅಥವಾ ನೇರವಾಗಿ ಅಲ್ಲಿಯ ಪಾರಂಪರಿಕ ಅಧಿಕಾರಿಯಾಗಿ ಖಚಿತಪಡಿಸಿದ ಮೊತ್ತವನ್ನು ಪಡೆಯುವ ಹಕ್ಕನ್ನು ಹೊಂದಿದ್ದನು.

ಹುದ್ದೆಯ ಉಂಬಳಿಗಳು : ಒಂದು ಅಥವಾ ಹಲವಾರು ಹಳ್ಳಿಗಳ ಉಂಬಳಿ ಇರುತ್ತಿತ್ತು. ಕಂದಾಯ ಮೊತ್ತದೊಡನೆ ಹಲವಾರು ಹಳ್ಳಿಗಳನ್ನು ಜೋಡಿಸಲಾಗಿತ್ತು ಮತ್ತು ಕಂದಾಯ ಹಣವನ್ನು ಇಷ್ಟೆಂದು ನಿಶ್ಚಿತಗೊಳಿಸಿದ್ದಿಲ್ಲ. ಅಂದರೆ ಹುದ್ದೆ ಉಂಬಳಿಯು ಉಂಬಳಿದಾರನಿಗೆ ಕೆಲವೊಂದು ಪ್ರದೇಶದ ಮೇಲೆ ಒಂದು ಬಗೆಯ ಮೇಲಧಿಕಾರವನ್ನು ನೀಡಿತ್ತು.

ಉಂಬಳಿ ಜಮೀನದ ಉಸ್ತುವಾರಿಯನ್ನು ಜಮೀನದಾರನು ಆ ಹಳ್ಳಿಯ ಪಾರಂಪರಿಕ ಅಧಿಕಾರಿಗಳಿಗೆ ಒಪ್ಪಿಸುತ್ತಿದ್ದನು ಇಲ್ಲವೆ ಅದಕ್ಕೆ ತನ್ನ ನಿಯೋಗಿಗಳನ್ನು (ಏಜೆಂಟರನ್ನು) ಕಳಿಸುತ್ತಿದ್ದನು. ಹೇಗಿದ್ದರೂ ಅವನು ಅದರ ಮೇಲ್ವಿಚಾರಣೆಗಾಗಿ ಒಮ್ಮೊಮ್ಮೆ ಅಲ್ಲಿಗೆ ಭೆಟ್ಟಿಕೊಡುತ್ತಿದ್ದನು.

ಇಂಥ ಜಮೀನದಾರನ ಮೇಲಧಿಕಾರದ ವ್ಯಾಪ್ತಿಗೆ ಸಂಬಂಧಿಸಿದ ಮೂರು ಮುಖಗಳನ್ನು ಕಾಣಬಹುದು. ಮೊದಲನೆಯದು, ಇಂಥ ಜಹಗೀರಿಯನ್ನು ಪ್ರಮುಖ ಜಿಲ್ಲೆಯಲ್ಲಿ ಹಾಕಿಕೊಟ್ಟಾಗಲೂ ಇದನ್ನು ಅಲ್ಲಿಯ ಹವಾಲ್ದಾರ ಮತ್ತು ಅವನ ಅಧೀನ ಅಧಿಕಾರಿಗಳ ದಿನನಿತ್ಯದ ಆಡಳಿತಾಧಿಕಾರದಿಂದ ದೂರ ಇಡಲಾಗಿತ್ತು. ಎರಡನೆಯದು, ಅಲ್ಲಿಯ ಕಂದಾಯ ಎಷ್ಟೆಂದು ಗೊತ್ತುಪಡಿಸಿ ಅದನ್ನು ವಸೂಲ ಮಾಡುವುದು ಅವನ ಹಕ್ಕಾಗಿತ್ತು. ಮೂರನೆಯದು, ಅಲ್ಲಿಯ ಪಾರಂಪರಿಕ ಅಧಿಕಾರಿಗಳು ಆ ಕಂದಾಯ ಹಣವನ್ನು ವಸೂಲು ಮಾಡಿ ಜಮೀನದಾರನಿಗೆ ಒಪ್ಪಿಸಲೇಬೇಕಾಗಿತ್ತು. ಹಾಗೆ ಮಾಡದಿದ್ದರೆ, ಅವರ ಅಧಿಕಾರ ಸ್ಥಾನವನ್ನು ಒತ್ತೆಯಾಗಿಡುವ ಇಲ್ಲವೆ ವಿಳಂಬ ಮಾಡಿದ್ದಕ್ಕೆ ದಂಡ ತೆತ್ತಬೇಕಾದ ಅಪಾಯದ ಭಯವಿತ್ತು.

ಇದರ ಮತ್ತೊಂದು ಬದಿಯ ಸಂಗತಿ ಎಂದರೆ, ಈ ಜಹಗೀರದಾರನ ಮೇಲಧಿಕಾರದ ಮೇಲೆ ಹಲವಾರು ಮಹತ್ವದ ನಿರ್ಬಂಧಗಳನ್ನು ಹೇರಲಾಗಿತ್ತು. ಮೊದಲನೆಯದು, ಹಳ್ಳಿಯ ಪಾರಂಪರಿಕ ಅಧಿಕಾರಿಗಳ ಮನ್ನಣೆ ಹೊಂದಿದ ಹುದ್ದೆ ಮತ್ತು ಹಕ್ಕುಗಳಲ್ಲಿ ಕೈ ಹಾಕಲು ಅವನಿಗೆ ಅಧಿಕಾರವಿರಲಿಲ್ಲ. ಎರಡನೆಯದು ಹಳ್ಳಿಯ ಪಾರಂಪರಿಕ ಅಧಿಕಾರಿಗಳನ್ನು ಶಿಕ್ಷಿಸುವ ಅಧಿಕಾರ ಅವನಿಗೆ ಇರಲಿಲ್ಲ. ಇನ್ನು ಮೂರನೆಯದು, ಜಹಗೀರದಾರನಿಗೆ ದಬ್ಬಾಳಿಕೆ ಮತ್ತು ದುಷ್ಕೃತ್ಯಗಳ ಮೇಲೆ ಸರಕಾರದ ಸಾಮಾನ್ಯ ಹತೋಟಿಯಲ್ಲಿಡದೆ ಪಾರಂಪರಿಕ ಅಧಿಕಾರಿಗಳ ಮತ್ತು ಜನರ ವಿರೋಧವಿರುತ್ತಿತ್ತು. ಈ ಅಧಿಕಾರಿಗಳು ಮತ್ತು ಜನರು ಈತನ ರೂಢಿಗೆ

ವಿರುದ್ಧವಾದ ಶೋಷಣೆ ಮತ್ತು ಸದೆಬಡೆಯುವಿಕೆಯ ವಿರುದ್ಧ ಹೋರಾಡುತ್ತ ಎಲ್ಲರೂ ಕೂಡಿಯೇ ದೊಡ್ಡ ಸಂಖ್ಯೆಯಲ್ಲಿ ಊರು ಬಿಟ್ಟು ಹೋಗುತ್ತಿದ್ದರು.

ಈ ಜಹಗೀರಗಳಲ್ಲಿ ಮೂರನೆಯದಾದ 'ನಿಷ್ಠೆಯ ಉಂಬಳಿ' ಅಥವಾ ಜಹಗೀರಿ, ಸುಲ್ತಾನ ರಾಜ್ಯದ ಸ್ಥಾನಿಕ ಆಡಳಿತಕ್ಕೆ ಸಂಬಂಧಿಸಿದಂತೆ, ಅತ್ಯಂತ ಮಹತ್ವದ್ದಾಗಿತ್ತು. ಆದ್ದರಿಂದ ನಾವು ಕೆಳಗಿನ ಭಾಗದಲ್ಲಿ ಇದನ್ನು ಕುರಿತು ಸವಿವರವಾಗಿ ಚರ್ಚಿಸುತ್ತೇವೆ.

೨.ಸ್ವಾಮಿನಿಷ್ಠೆಗಾಗಿತ್ತ ಜಹಗೀರಿಗಳು :

ಸಾಮಾನ್ಯ ಅಭಿಪ್ರಾಯಗಳು :

ಮೇಲೆ ಚರ್ಚಿತವಾದ ಎರಡು ವರ್ಗಗಳ ಜಹಗೀರುಗಳು ವ್ಯವಸ್ಥಿತ ಪದ್ಧತಿಗನಿಗುಣವಾಗಿ ಮಂಜೂರಾಗುತ್ತಿದ್ದವು. ಅಂದರೆ ಅವು ಕೆಲವು ಹುದ್ದೆಗಳಿಗೆ ಸಂಬಂಧಿಸಿದ್ದು ಇದ್ದು ಯಾವ ರಾಜಾನುಗ್ರಹದ ಕೊಡುಗೆ ಆಗಿರಲಿಲ್ಲ. ಆದರೆ ನಿಷ್ಠೆಗಾಗಿತ್ತ ಜಹಗೀರವು ಅದನ್ನು ಪಡೆದುಕೊಂಡವನ ನಿಷ್ಠೆಗಾಗಿತ್ತ ವಿಶೇಷ ಪ್ರಭುಪ್ರಸಾದವಾಗಿತ್ತು, ಅದು ಯಾವೊಂದೂ ಹುದ್ದೆಗೆ ಜೋಡಿಸಲ್ಪಟ್ಟಿರಲಿಲ್ಲ. ಯಾಕೆಂದರೆ ಫರ್ಮಾನುಗಳು ಇವುಗಳನ್ನು ಪಡೆದವನ ಹುದ್ದೆಯನ್ನು ತಿಳಿಸದೆ ಕೇವಲ ಆತನ ಗುಣಗಾನ ಮಾಡುತ್ತವೆ. ಆದಾಗ್ಯೂ, ಇಂಥ ಜಹಗೀರ ಪಡೆದವರ ಹೆಸರುಗಳನ್ನು ಗಮನಿಸಿದರೆ ತಿಳಿಯುವುದೇನೆಂದರೆ ಈ ಎಲ್ಲರೂ ಉನ್ನತ ದರ್ಜೆಯ ಸರಕಾರಿ ಅಧಿಕಾರಿಗಳಾಗಿದ್ದರು; ಇಂಥವರು ಬೇರೆ ಬೇರೆ ಮಂತ್ರಿಗಳಾಗಿ ಪ್ರಭುಸೈನ್ಯದ ಸರ್ವೋನ್ನತ ನಾಯಕರಾಗಿ ಅಥವಾ ಪ್ರಭುಸೈನ್ಯದ ವಲಯಾಧಿಕಾರಿಗಳಾಗಿ, ಪ್ರಾದೇಶಿಕ ಸೈನ್ಯಾಧಿಕಾರಿಗಳಾಗಿ ಇಲ್ಲವೆ ಪ್ರಮುಖ ಸರಕಾರಿ ಜಿಲ್ಲೆಗಳ ಹವಾಲ್ದಾರರಾಗಿ ಆದಿಲ್‌ಶಾಹಿ ರಾಜ್ಯೇತಿಹಾಸದ ಪುಸ್ತಕಗಳಲ್ಲಿ ಕಾಣಿಸುತ್ತಾರೆ.

ಈ ವರ್ಗದ ಜಹಗೀರಿಯು ಕಂದಾಯದ ಎಲ್ಲ ಬಾಬುಗಳನ್ನೊಳಗೊಂಡ ಒಂದು ಸಣ್ಣ ಹಳ್ಳಿಯಷ್ಟು ಕಂದಾಯದ ಎಲ್ಲ ಬಾಬುಗಳುಳ್ಳ ಎರಡು ಹಳ್ಳಿಗಳಷ್ಟು ಅಥವಾ ಕಂದಾಯದ ಎರಡು ಬಾಬುಗಳನ್ನು ಬಿಟ್ಟು ಉಳಿದ ಎಲ್ಲವನ್ನೊಳಗೊಂಡ ಮೂರು ಹಳ್ಳಿಗಳಷ್ಟು ಗಾತ್ರಹೊಂದಿತ್ತು. ಹೀಗಿದ್ದಾಗ್ಯೂ ವಿಶಿಷ್ಟರೆನಿಸಿದ್ದ ಉನ್ನತ ಶ್ರೇಣಿಯ ಸರಕಾರಿ ಅಧಿಕಾರಿಗಳಿಗೆ ಹಾಕಿಕೊಟ್ಟ ಜಹಾಗೀರುಗಳು ಸಾಮಾನ್ಯವಾಗಿ ಬಹು ವಿಸ್ತಾರವಾಗಿರುತ್ತಿದ್ದವು; ಅಂಥ ಜಾಹಗೀರು 'ಸಮ್ತ'ದ ಮೂವತ್ತೆರಡು ಹಳ್ಳಿಗಳಷ್ಟಿದ್ದು ಎರಡು ಬಾಬುಗಳನ್ನು ಹೊರತುಪಡಿಸಿ ಎಲ್ಲ ಕಂದಾಯ ಒಳಗೊಂಡ ಹದಿನಾಲ್ಕು ಹಳ್ಳಿಗಳಷ್ಟಿತ್ತು. (ಖಾರ್ಯತ್ತದ ಭಾಗವಾಗಿದ್ದ ಹಳ್ಳಿಗಳಾಗಿದ್ದವು) ಎರಡನ್ನು ಬಿಟ್ಟು ಎಲ್ಲ ಕಂದಾಯ ಬಾಬುಗಳನ್ನೊಳಗೊಂಡ ('ಸಮ್ತ'ದ ಭಾಗವಾಗಿದ್ದ) ಮೂವತ್ತಾರು ಹಳ್ಳಿಗಳ ವಿಸ್ತಾರವಾಗಿತ್ತು, ಅದು ಕಂದಾಯದ ಎಲ್ಲ ಬಾಬುಗಳ ಸಮೇತ ಒಂದು

'ಸಮ್ತ' ಅಥವಾ 'ಖರ್ಯಾತ್' ಆಗಿತ್ತು. ಎಲ್ಲ ಕಂದಾಯ ಬಾಬುಗಳೊಂದಿಗೆ ಒಂದು ಪರಗಣೆಯಾಗಿತ್ತು. ಎಲ್ಲ ಕಂದಾಯ ಬಾಬುಗಳ ಸಮೇತ ಹಲವು ಪರಗಣೆಗಳಷ್ಟಿತ್ತು, ಹೀಗೆ.

ಇನ್ನೂ ಮೂರು ಅಂಶಗಳನ್ನು ನಾವು ಗಮನಿಸಬೇಕು. ಒಂದು, ಈ ಪ್ರಕಾರದ ನಿಷ್ಠೆಗಾಗಿ ನೀಡಿದ ಜಹಗೀರವು ಎಷ್ಟೇ ವಿಸ್ತಾರವಾಗಿದ್ದರೂ ಅದು ಸಾಮಾನ್ಯವಾಗಿ ವಂಶಪಾರಂಪರ್ಯದ ಉಂಬಳಿಯಾಗಿರಲಿಲ್ಲ. ಉದಾಹರಣೆಗೆ, ೧೪೮೯ ರಿಂದ ೧೬೭೪ರವರೆಗೆ 'ವಾಯಿ ಪರಗಣೆ'ಯನ್ನು ಒಟ್ಟು ಮೂವತ್ತೆರಡು ಉನ್ನತ ಶ್ರೇಣಿಯ ಸರಕಾರಿ ಅಧಿಕಾರಿಗಳಿಗೆ ಜಹಗೀರಿಯಾಗಿ ಕೊಟ್ಟಿತ್ತು. ಈ ಪ್ರಕರಣದಲ್ಲಿ ಒಬ್ಬ ಜಹಗೀರದಾರನು ಇಪ್ಪತ್ತೇಳು ವರ್ಷ ಒಂಬತ್ತು ತಿಂಗಳುಗಳ ಕಾಲ ಅತ್ಯಂತ ಹೆಚ್ಚಿನ ಅವಧಿಯವರೆಗೆ ಜಹಗೀರಿಯನ್ನು ಉಪಭೋಗಿಸಿದರೆ ಇನ್ನೊಬ್ಬರದು ಅತ್ಯಂತ ಕಡಿಮೆ ಅವಧಿಯೆಂದರೆ ಮೂರು ತಿಂಗಳು ಮತ್ತು ಅಲ್ಲಿಯ ಸರಾಸರಿ ಅವಧಿ ಆರು ವರ್ಷವಿತ್ತು. ಆದರೆ ಈ ಬಗೆಯ ಜಹಗೀರಿಯು ಯಾವ ನಿರ್ದಿಷ್ಟ ಹುದ್ದೆಗೆಂದು ನೀಡಿಲ್ಲವಾದ್ದರಿಂದ ಮತ್ತು ಬಹಳ ಕಾಲ ಅದು 'ಪ್ರಭು ಪ್ರಸಾದ'ವಾದದ್ದರಿಂದ ಕೆಲವೊಂದು ಸಾರೆ ಬಹಳ ಕಾಲ ಅದು ಅದೇ ಉಂಬಳಿದಾರನದಾಗಿಯೇ ಉಳಿಯುತ್ತಿತ್ತು. ಒಮ್ಮೊಮ್ಮೆ ನಿರಂತರ ಉಂಬಳಿಯಾಗುತ್ತಿತ್ತು. ಎರಡನೆಯ ಅಂಶವೆಂದರೆ, ಉನ್ನತ ಶ್ರೇಣಿಯ ಸರಕಾರಿ ಅಧಿಕಾರಿಗಳಲ್ಲಿ ಬಹಳಷ್ಟು ಜನ ಮುಸಲ್ಮಾನ ಅಧಿಕಾರಿಗಳೇ ಆಗಿದ್ದರಿಂದ ಈ ಬಗೆಯ ಜಹಗೀರದಾರರು ಮುಸಲ್ಮಾನರೇ ಆಗಿದ್ದರು. ಉದಾಹರಣೆಗೆ, ಮೇಲೆ ಉಲ್ಲೇಖಿಸಿದ 'ವಾಯಿ ಪರಗಣೆ'ಯನ್ನು ಉಪಭೋಗಿಸಿದ ಮೂವತ್ತೆರಡು ಜನರಲ್ಲಿ ಮೂವತ್ತು ಮುಸಲ್ಮಾನ ಅಧಿಕಾರಿಗಳಿದ್ದರೆ ಇಬ್ಬರು ಮಾತ್ರ ಹಿಂದುಗಳಾಗಿದ್ದರು. ಮೂರನೆಯ ಅಂಶ, ಈ ಪ್ರಕಾರದ ಜಹಗೀರದಾರರು ತಮ್ಮ ಜಹಗೀರಿಯ ಉತ್ಪನ್ನದಿಂದ ಕೆಲವು ನೂರರಿಂದ ಐದು ಅಥವಾ ಏಳು ಸಾವಿರ ಅಶ್ವಾರೋಹಿಗಳನ್ನು ಇಟ್ಟುಕೊಂಡು ಪೋಷಿಸುವುದಲ್ಲದೆ ತಮ್ಮ ಅಶ್ವದಳದೊಂದಿಗೆ ಸುಲ್ತಾನನ ಇಚ್ಛೆಗನುಸಾರವಾಗಿ ಪ್ರಮುಖ ಜಿಲ್ಲೆಗಳಲ್ಲಿ ಹಾಗೆಯೇ ಸ್ಥಾನಿಕ ಪ್ರದೇಶಗಳಲ್ಲಿ ಸೇವೆಗೈಯಬೇಕಾಗಿತ್ತು. ಇನ್ನುಳಿದ ಹಿಂದುಸ್ತಾನದ ಮುಸಲ್ಮಾನ ರಾಜ್ಯಗಳಲ್ಲಿದ್ದಂತೆ ಈ ವಿಜಾಪುರ ಸುಲ್ತಾನ ರಾಜ್ಯದಲ್ಲಿ ನಾಗರಿಕ ಸೇವಾ ಸರಕಾರಿ ಅಧಿಕಾರಿಗಳು ಮತ್ತು ಸೈನ್ಯಕ್ಕೆ ಸಂಬಂಧಿಸಿದ ಅಧಿಕಾರಿಗಳು ಎಂದು ವ್ಯತ್ಯಾಸವಿರಲಿಲ್ಲ. ತುರ್ತು ಪರಿಸ್ಥಿತಿಯಲ್ಲಿ ರಾಜಾಸ್ಥಾನದ ಉನ್ನತ ಅಧಿಕಾರಿಗಳು ಮತ್ತು ಸ್ಥಾನಿಕ ಅಧಿಕಾರಿಗಳು ಬಹಳಷ್ಟು ಸಾರೆ ಯುದ್ಧಭೂಮಿಗೆ ಹೋಗುತ್ತಿದ್ದರು.

■

*

ಜಹಗೀರಿ – ನಿರ್ವಹಣೆಯ ವ್ಯವಸ್ಥೆ

ಅ. ನಿಯೋಗಿಗಳು (ಏಜಂಟರು) – ಪ್ರತಿಯೊಬ್ಬ ಜಹಗೀರದಾರನು ತನ್ನ ಜಹಗೀರ ಪ್ರದೇಶವನ್ನು ನೋಡಿಕೊಳ್ಳಲು ನಿಯೋಗಿಗಳನ್ನು ಕಳಿಸುತ್ತಿದ್ದರು. ಪರ್ಶಿಯಾ ಭಾಷೆಯಲ್ಲಿರುವ ಫರ್ಮಾನ್‌ಗಳಲ್ಲಿ ಈ ನಿಯೋಗಿಗಳನ್ನು ಒಟ್ಟಾರೆಯಾಗಿ 'ಮುತಾಲಿಖನ' ಎಂದು ಕರೆಯಲಾಗಿದೆ.

ಮರಾಠಿ ದಾಖಲೆಗಳು ತೋರಿಸುವಂತೆ ಪ್ರಮುಖ ಜಿಲ್ಲೆಗಳಲ್ಲಿಯ ಸುಲ್ತಾನನ ಸರಕಾರಿ ಅಧಿಕಾರಿಗಳ ಸಂಘಟನೆಯ ರೀತಿಯಲ್ಲಿ ಜಹಗೀರದಾರನ 'ಮುತಾಲಖನ' (ನಿಯೋಗಿಗಳ ಒಟ್ಟು ವ್ಯವಸ್ಥೆ)ವನ್ನು ಸಂಘಟಿಸಲಾಗಿತ್ತು. ಸಾಮಾನ್ಯ ಪ್ರಬಂಧಕನನ್ನು (ಹವಾಲ್ದಾರನನ್ನು) ಜಹಗೀರಿಯ ಮುಖ್ಯ ಪಟ್ಟಣದ ಜಹಗೀರ ಕಛೇರಿಯಲ್ಲಿ (ದಿವಾನದಲ್ಲಿ) ನೇಮಿಸಲಾಗುತ್ತಿತ್ತು ಮತ್ತು ಆರಕ್ಷಕ ಮುಖ್ಯಸ್ಥನನ್ನು (ಠಾಣೇದಾರ) ಅಲ್ಲಿಯ ಜಹಗೀರಿಯ ಮುಖ್ಯ ಪಟ್ಟಣಗಳ ಮತ್ತು ಹಳ್ಳಿಗಳ ಆರಕ್ಷಕ ಠಾಣೆಯಲ್ಲಿರಲು ನೇಮಿಸಲಾಗುತ್ತಿತ್ತು. ಇದಲ್ಲದೆ ಕಾರಕೂನರನ್ನು ಕಾಲಾಳುಗಳನ್ನು ಪ್ರತಿಯೊಂದು ದಿವಾನ ಮತ್ತು ಠಾಣೆಗೆ ನಿಯಮಿಸಲಾಗುತ್ತಿತ್ತು. ಮರಾಠಿ ದಾಖಲೆಗಳು ತಿಳಿಸುವಂತೆ 'ಕಾರಕೂನ' ಅಂದರೆ ಸಾಮಾನ್ಯವಾಗಿ (ಒಮ್ಮೊಮ್ಮೆ 'ಹವಾಲ್ದಾರ' ಮತ್ತು 'ಠಾಣಾದಾರ' ಎಂಬ ಅರ್ಥದಲ್ಲಿ ಬಳಸಿದರೂ) ನಿಯೋಗಿ (ಏಜಂಟ) ಎಂದೇ ಅರ್ಥದಲ್ಲಿ ಉಪಯೋಗಿಸಲಾಗಿದೆ. ಕಛೇರಿ–ಮೇಲ್ವಿಚಾರಕ (ನಿಗಾವನ್) ಪ್ರಧಾನ ಕಾರಕೂನ (ಸರದಫದಾರ), ಸೈನಿಕ ಠಾಣೆಯ ಮುಖ್ಯಸ್ಥ (ಸರನೌಬತ್), ಕೋಶಾಧಿಕಾರಿ (ಮುಜುಮದಾರ), ಸಂಬಳ ವಿತರಣಕ (ಸಬ್ನೀಸ್) ಕಾಗದಪತ್ರ ಕೋಶಾಧಿಕಾರಿ (ದಫ್ತರಖಾಸ್), ಪತ್ರ–ಲೇಖಕ(ಚಿಟ್ನಿಸ್) ಮತ್ತು ಪರ್ಶಿಯನ್ ಭಾಷಾ ಕರಣಿಕ (ಪರಸ್ನೀಸ್) ಈ ಎಲ್ಲ ಅರ್ಥವನ್ನು 'ಕಾರಕೂನ' ಶಬ್ದ ಕೊಡುತ್ತಿತ್ತು.

ಈ ವಿಷಯಕ್ಕೆ ಸಂಬಂಧಿಸಿದ ಮೂರು ಅಂಶಗಳನ್ನು ಗಣನೆಗೆ ತೆಗೆದುಕೊಳ್ಳಬೇಕು. ಒಂದನೆಯದು, ನಿಯೋಗಿ ಹವಾಲ್ದಾರರಲ್ಲಿ, ಮುಸಲ್ಮಾನ ಜಹಗೀರಗಳಲ್ಲೂ ಕೂಡ, ಬಹಳಷ್ಟು ಹಿಂದು ಅಧಿಕಾರಿಗಳೇ ಇದ್ದರು. ಉದಾಹರಣೆಗೆ ೧೬೩೬ ರಿಂದ ೧೬೬೭ ಅವಧಿಯಲ್ಲಿ ವಾಯಿ ಪರಗಣೆಯಲ್ಲಿ ನೇಮಕಗೊಂಡ ಹದಿನೆಂಟು ಹವಾಲ್ದಾರರಲ್ಲಿ ಹದಿನಾಲ್ಕು ಹಿಂದುಗಳು, ನಾಲ್ವರು ಮುಸಲ್ಮಾನರು ಇದ್ದರು. ಎರಡನೆಯದು, ಕಾರಕೂನರಲ್ಲಿ ಬಹುದೊಡ್ಡ ಸಂಖ್ಯೆಯಲ್ಲಿ ಹಿಂದುಗಳೇ ಇದ್ದರು. ಮರಾಠಿ ದಾಖಲೆಗಳಲ್ಲಿರುವ ಹೆಸರುಗಳಿಂದ ತಿಳಿದುಬರುವಂತೆ ಕಾರಕೂನರೆಲ್ಲ ಹಿಂದುಗಳಾಗಿದ್ದರು. ಆದರೆ ಕಛೇರಿ ಮೇಲ್ವಿಚಾರಕ (ನಿಗಾವನಿ) ಮತ್ತು ಸೈನಿಕ ಠಾಣೆಯ ಮುಖ್ಯಸ್ಥ (ಸರನೌಬತ್) ಮುಸಲ್ಮಾನರಾಗಿದ್ದರು. ಮೂರನೆಯದು, ಹಿಂದು ಕಾರಕೂನರಲ್ಲಿ ಕನಿಷ್ಠ ಕೆಲವರಾದರು. (ಉದಾ. ಸಂಬಳ ವಿತರಕ ಮತ್ತು ಪತ್ರ ಲೇಖಕ) ತಮ್ಮ ಹುದ್ದೆಯನ್ನು ವಂಶಪಾರಂಪರಿಕ ಆಸ್ತಿಯನ್ನಾಗಿಯೇ(ಮಿರಾಸ) ಪಡೆದಿದ್ದರು.

ಮೇಲಿನ ಮೂರು ಅಂಶಗಳು ತೋರಿಸುವಂತೆ ತಮ್ಮ ಜಹಗೀರಿಗಳ ಆಡಳಿತಾತ್ಮಕ ಮತ್ತು ದೈನಂದಿನ ನಿರ್ವಹಣೆಗೆ ದೊಡ್ಡ ಜಹಗೀರದಾರರು (ಅವರು ಹೆಚ್ಚಾಗಿ ಮುಸಲ್ಮಾನರೇ ಆಗಿದ್ದರು) ದೇಶೀಯ ಜನರ ಮೇಲೆ ವಿಶೇಷತಃ ಸುಶಿಕ್ಷಿತ ಬ್ರಾಹ್ಮಣರ ಮೇಲೆ ಅವಲಂಬಿಸಬೇಕಾಗಿತ್ತು ಮತ್ತು ಹೆಚ್ಚಾಗಿ ಅವರ ಮೇಲೆ ಅವಲಂಬಿಸಿದ್ದರೂ, ಈ ಜಹಗೀರದಾರರು ಸ್ವಧರ್ಮೀಯ ಮುಸಲ್ಮಾನರನ್ನೇ ಕಛೇರಿ–ಮೇಲ್ವಿಚಾರಕ ಮತ್ತು ಸೈನಿಕರ ಮೇಲಧಿಕಾರಿ ಇಂಥ ಹುದ್ದೆಗಳಿಗೆ ನೇಮಿಸುತ್ತಿದ್ದರು.

ಬ. ನಿಯೋಗಿಗಳು ಮತ್ತು ವಂಶಪಾರಂಪರಿಕ ಅಧಿಕಾರಿಗಳು

ಜಹಗೀರದಾರನು ತನ್ನ ನಿಯೋಗಿಗಳನ್ನು ಜಹಗೀರಿಗಳಿಗೆ ಸಂಬಂಧಪಟ್ಟ ಎಲ್ಲ ಪಾರಂಪರಿಕ ಅಧಿಕಾರಿಗಳಿಗೆ ಕೆಳಗಿನಂತೆ ಆಜ್ಞೆ ಹೊರಡಿಸುತ್ತಿದ್ದನು "ಅವರು (ನಿಯೋಗಿಗಳು) ಹೇಳಿದಂತೆ ಮಾಡಿರಿ, ಹಗಲು ರಾತ್ರಿ ಅವರೊಡನಿದ್ದು ಕೆಲಸಗಳನ್ನು ಮಾಡಿರಿ, ಅವರು ಹೇಳಿದ್ದು ನಾನು ಹೇಳಿದ್ದೆಂದೇ ತಿಳಿಯಿರಿ, ಅವರನ್ನು ಭೇಟಿಯಾಗಿ ನಿಮ್ಮ ಸದ್ಭಾವನೆಯನ್ನು ವ್ಯಕ್ತಪಡಿಸಿರಿ. ಈ ರೀತಿಯಾಗಿ ಆಜ್ಞಾಪಿಸಲ್ಪಟ್ಟ ಜಹಗೀರಿಯಲ್ಲಿಯ ದೇಸಾಯಿ ಮತ್ತು ಪಾರಂಪರಿಕ ಅಧಿಕಾರಿಗಳು ಆ ಪ್ರದೇಶದ ಭೂಮಿಯ ಕೃಷಿ ಮಾಡುವುದು, ಹಳ್ಳಿಗಳಿಂದ ಕಂದಾಯ ಸಂಗ್ರಹಿಸುವುದು ಮತ್ತು ಆ ಕಂದಾಯ ಮೊತ್ತವನ್ನು ಸಮೀಪದ ಠಾಣೆಗೆ ಮುಟ್ಟಿಸುವುದು ಇದಕ್ಕೆಲ್ಲ ಜವಾಬ್ದಾರರಾಗಿದ್ದರು; ಠಾಣೇದಾರನು ಸರಿಯಾದ ಕ್ರಮದಲ್ಲಿ ಪ್ರಮುಖ ಪಟ್ಟಣದ ದಿವಾನಕ್ಕೆ ಆ ಕಂದಾಯ ಹಣವನ್ನು ಮುಟ್ಟಿಸುವುದಕ್ಕೆ ಜವಾಬ್ದಾರನಾಗಿದ್ದನು.

ಜಹಗೀರದಾರನ ಮೇಲಧಿಕಾರ :

(೧) ಹೊಸ ಪಾರಂಪರಿಕ ಅಧಿಕಾರಿಗಳನ್ನು ಖಾಲಿ ಇದ್ದ ಹುದ್ದೆಗಳಿಗೆ ನೇಮಿಸುವ ಮತ್ತು ಇದ್ದ ಪಾರಂಪರಿಕ ಅಧಿಕಾರಿಗಳ ಅದರಂತೆ ಆ ಜಹಗೀರದಲ್ಲಿದ್ದ ಮಂದಿರಗಳ ಮತ್ತು ಪೂಜಾರಿಗಳ ಇನಾಮವನ್ನು ಹೆಚ್ಚಿಸುವ ಅಧಿಕಾರ ಜಹಗೀರದಾರನಿಗಿತ್ತು. ಹೊಸದಾಗಿ ನೇಮಿಸಲ್ಪಟ್ಟ ಪಾರಂಪರಿಕ ಅಧಿಕಾರಿಗಳು ಹಾಗೆಯೇ ಯಾರ ಇನಾಮವು ಹೆಚ್ಚಿಸಲ್ಪಟ್ಟಿತ್ತು. ಅಂಥವರು ಬಯಸಿದಲ್ಲಿ ಸುಲ್ತಾನನಿಂದ ಆ ವಿಷಯವನ್ನು ದೃಢೀಕರಿಸಿಕೊಳ್ಳಬಹುದಿತ್ತು.

(೨) ಜಹಗೀರದಾರನ ಮತ್ತು ಅವನ ನಿಯೋಗಿಗಳ ನ್ಯಾಯಾಂಗ ಕಾರ್ಯಗಳನ್ನು ಕುರಿತು ಬರೆಯುವ ಅವಶ್ಯಕತೆಯಿಲ್ಲ. ಜಹಗೀರಿ ಕ್ಷೇತ್ರದಲ್ಲಿರುವ ಪಾರಂಪರಿಕ ಹುದ್ದೆಗಳಿಗೆ ಮತ್ತು ಹಕ್ಕುಗಳಿಗೆ ಸಂಬಂಧಿಸಿ ವ್ಯಾಜ್ಯದಾರರು ಮನವಿ ಸಲ್ಲಿಸಿದಾಗ ಆ ಜಹಗೀರದಾರನು ನ್ಯಾಯಸಭೆಯನ್ನು ಕರೆದು ಅದರ ಮುಖ್ಯಸ್ಥನಾಗಿದ್ದು ವ್ಯಾಜ್ಯಗಳನ್ನು ನಿರ್ಣಯಿಸುತ್ತಿದ್ದನು.

(೩) ಪರ್ಶಿಯನ್ ಫರ್ಮಾನುಗಳು ತಿಳಿಸುವಂತೆ ಜಹಗೀರದಾರನು ಪಾರಂಪರಿಕ ಅಧಿಕಾರಿಗಳ ಸ್ಥಾಪಿತ ಹುದ್ದೆ ಹಾಗೂ ಅವರ ಸಂಭಾವನೆಯ ವಿಷಯುದಲ್ಲಿ ಹಸ್ತಕ್ಷೇಪ ಮಾಡುವಂತಿರಲಿಲ್ಲ. ಒಂದು ವೇಳೆ ಜಹಾಗೀರದಾರರು ಹಾಗೆ ಮಾಡಿದರೆ, ಅನ್ಯಾಯಕ್ಕೊಳಗಾದ ಅಧಿಕಾರಿಗಳು ತಮ್ಮ ಸ್ಥಾಪಿತ ಹಕ್ಕುಗಳ ಪುನಃಸ್ಥಾಪನೆಗೆ ಮತ್ತು ರಕ್ಷಣೆಗೆ ಸುಲ್ತಾನನಿಗೆ ನೇರವಾಗಿ ಮೊರೆಯಿಡಬಹುದಿತ್ತು ಮತ್ತು ಹಾಗೆ ಮಾಡುತ್ತಿದ್ದರು. ಹತೋಟಿ ಮೀರಿದ ಪಾರಂಪರಿಕ ಅಧಿಕಾರಿಗಳನ್ನು ಶಿಕ್ಷಿಸುವ ಅಧಿಕಾರವು ಈ ಜಹಗೀರದಾರರಿಗೆ ಇದ್ದಂತೆ ಕಾಣುವುದಿಲ್ಲ. ನಾವು ಈ ರೀತಿಯಾಗಿ ಭಾವಿಸಲು ಕಾರಣವೆಂದರೆ, ಒಂದು ಫರ್ಮಾನು ತಿಳಿಸುವ ಪ್ರಕಾರ ಮಂತ್ರಿಯೊಬ್ಬನ ದೊಡ್ಡದಾದ ಜಹಗೀರಿಯಲ್ಲಿಯ ಎರಡು ಹಳ್ಳಿಗಳನ್ನು ಒಬ್ಬ ದೇಸಾಯಿ ಅತಿಕ್ರಮಿಸಿಕೊಂಡಿದ್ದನು. ಆ ಮಂತ್ರಿಯು ಸುಲ್ತಾನನಿಗೆ ವಿನಂತಿಸುತ್ತ ಆ ಅಪರಾಧಿಯನ್ನು ದಂಡಿಸಬೇಕೆಂದು ನಿವೇದಿಸಿದನು.

(೪) ಇಲ್ಲೊಂದು ಮಹತ್ವದ ಅಂಶವನ್ನು ತಿಳಿಯಬೇಕು. ಮರಾಠಿ ದಾಖಲೆಗಳ ಪ್ರಕಾರ ರಾಜಾಸ್ಥಾನವು ಹೇರಿದ ನಿರ್ಬಂಧಗಳನ್ನು ಎಲ್ಲ ದೊಡ್ಡ ಜಹಗೀರದಾರರು ಮತ್ತು ಅವರ ನಿಯೋಗಿಗಳು ಪಾಲಿಸಿದಂತಿಲ್ಲ. ಪಾರಂಪರಿಕ ಅಧಿಕಾರಿಗಳ 'ಅನುಲಂಘನೀಯ' ಹುದ್ದೆಗಳನ್ನು ಮತ್ತು

ಮಂದಿರಗಳ ಮತ್ತು ಅವುಗಳ ಅರ್ಚಕರ ಇನಾಮಗಳನ್ನು ಉಲ್ಲಂಘಿಸಲು ಅಲ್ಲಿಯ ಜಹಗೀರದಾರರು ಪ್ರಯತ್ನಿಸುತ್ತಿದ್ದರು. ಉದಾಹರಣೆಗೆ, ಹೊಸದಾಗಿ ನೇಮಿಸಲ್ಪಟ್ಟ ಜಹಗೀರದಾರನ ನಿಯೋಗಿಗಳು ಪಾರಂಪರಿಕ ಅಧಿಕಾರಿಗಳ 'ಮಿರಾಸ' ಮತ್ತು 'ಇನಾಮ'ಗಳನ್ನು ತಪಾಸಿಸುತ್ತಿದ್ದರು. (ಹಾಗೆಯೇ ಮಂದಿರಗಳ ಮತ್ತು ಅರ್ಚಕರ ಆಸ್ತಿಗಳನ್ನು ಇತ್ಯಾದಿ ತಪಾಸಿಸುತ್ತಿದ್ದರು) ಆಗ ಅವುಗಳೆಲ್ಲ ತಮ್ಮ ಒಡೆಯುನಿಂದ ಖಚಿತಗೊಳ್ಳಬೇಕು ಎಂದು ಒತ್ತಾಯಿಸುತ್ತಿದ್ದರು. ಎಷ್ಟೋ ಸಾರೆ ಈ ನಿಯೋಗಿಗಳು ಪಾರಂಪರಿಕ ಅಧಿಕಾರಿಗಳಿಗೆ ಉಪಟಳ ಕೊಡುತ್ತಿದ್ದರಲ್ಲದೇ ಒಮ್ಮೊಮ್ಮೆ ಆ ಅಧಿಕಾರಿಗಳು ತಮ್ಮ ಸವಲತ್ತುಗಳನ್ನು ಉಪಭೋಗಿಸದಂತೆ ಅಡ್ಡಪಡಿಸುತ್ತಿದ್ದರು. ಏನಿದ್ದರೂ ಈ ಪಾರಂಪರಿಕ ಅಧಿಕಾರಿಗಳು ಈ ನಿಯೋಗಿಗಳಿಗೆ ತಮ್ಮ ಹಕ್ಕು ಮತ್ತು ಸವಲತ್ತುಗಳನ್ನು ಪುಷ್ಟೀಕರಿಸುವ ರಾಜ ದಾಖಲೆಗಳನ್ನು ತೋರಿಸಿದರೂ ಅದು ಅಷ್ಟಕ್ಕೆ ಮುಗಿಯುತ್ತಿದ್ದಿಲ್ಲ, ಹೊಸ ಜಹಗೀರದಾರನಿಂದ ಇವರು ದೃಢೀಕರಿಸಿ ಭರವಸೆ ನೀಡುವ ಪತ್ರವನ್ನು ಪಡೆಯಬೇಕಾಯ್ತು.

ಬಹುಶಃ ಇಂಥ ತಪಾಸಣೆಗಳು ಮತ್ತು ಹಕ್ಕುಗಳ ಪುನರ್ನವೀಕರಣದ ಬೇಡಿಕೆಯ ಹಿಂದೆ ಜಹಗೀರದಾರ ಮತ್ತು ಆತನ ನಿಯೋಗಿಗಳ ಅಧಿಕಾರವನ್ನು ಪರಂಪರಾಧಿಕಾರಿಗಳು ಮತ್ತು ಅಲ್ಲಿಯ ಜನತೆಯ ಮೇಲೆ ಬಿಂಬಿಸುವುದಾಗಿತ್ತು. ಹೀಗಿದ್ದರೂ, ಒಮ್ಮೊಮ್ಮೆ ಇವರು ಸ್ಥಾನಿಕ ಅಧಿಕಾರಿಗಳ ಸ್ಥಾಪಿತ ಹುದ್ದೆಗೆ ಧಕ್ಕೆ ತರುವುದು ಮತ್ತು ತಮ್ಮ ಮನಸ್ಸಿಗೆ ಬಂದಂತೆ ಅವರನ್ನು ಶಿಕ್ಷಿಸುತ್ತಿದ್ದರು. ಉದಾಹರಣೆಗೆ: ಯಾವುದೋ ಒಂದು ದೇಸಾಯಿಗಿರಿಯು ವ್ಯಾಜ್ಯದಲ್ಲಿ ತೊಡಗಿದ್ದ ಜಹಗೀರದಾರನೊಬ್ಬನು ತನ್ನ ಮನಸ್ಸಿಗೆ ಬಂದಂತೆ ಆ ದೇಸಾಯಿಯ ಹುದ್ದೆಯನ್ನು ಮತ್ತು ಅವನ ಸವಲತ್ತುಗಳನ್ನು ಮುಟ್ಟುಗೋಲು ಹಾಕಿಕೊಂಡನು. ನಂತರ ರೂ. ೨೪೦೦೦ನ್ನು ವಸೂಲು ಮಾಡಿ ಅದನ್ನು ಅವನಿಗೆ ಮರಳಿಸಿದನು. ಇನ್ನೊಂದು ಪ್ರಕರಣವನ್ನು ನೋಡಿರಿ. ಬರಗಾಲ ಬಿದ್ದಿದ್ದರಿಂದ ಒಂದು ಹಳ್ಳಿಯ ಪಾಟೀಲ ಮತ್ತು ಜನರು ಊರುಬಿಟ್ಟು ಓಡಿಹೋದರು. ಹವಾಲ್ದಾರ-ನಿಯೋಗಿಯು ಪಾಟೀಲನಿಗೆ ದಿವಾನಕ್ಕೆ ಬರಬೇಕೆಂದು ಹೇಳಿ ಕರೆಸಿ, ಆ ಹಳ್ಳಿಯ ಭೂಮಿಯನ್ನು ಬೇಸಾಯಗೈಯಬೇಕು ಮತ್ತು ಅದರ ಕಂದಾಯ ತಂದು ಕೊಡಬೇಕೆಂದು ಆಜ್ಞಾಪಿಸಿದನು; "ಇಲ್ಲದೆ ಹೋದರೆ ಗೌಡಕಿಯನ್ನು ದಿವಾನಕ್ಕೆ ಒಪ್ಪಿಸಬೇಕು, ಬೇರೆಯವರು ಆ ಕೆಲಸವನ್ನು ಮಾಡಲಿ, ಕೃಷಿಗೈಯಲಿ ಮತ್ತು ಕಂದಾಯ ಸಂದಾಯ ಮಾಡಲಿ, ಇಲ್ಲದಿದ್ದರೆ, ಕಂದಾಯ ಸಂದಾಯ ಆಗದ್ದಕ್ಕೆ ಖಡ್ಗದಿಂದ ನಿನ್ನ ತಲೆಯನ್ನು

ಕತ್ತರಿಸಲಾಗುವುದು. ಹೀಗೆಂದು ಬೆದರಿಸಿದನು. ಆ ನಿಯೋಗಿಯು ಗೌಡನನ್ನು ಜೈಲಿಗಟ್ಟಿದನು. ತನ್ನ ಮನಸ್ಸಿಗೆ ಬಂದಂತೆ ಆ ಪಾಟೀಲ ಹುದ್ದೆಯನ್ನು ಮೂರು ಭಾಗ ಮಾಡಿ ಎರಡು ಭಾಗಗಳನ್ನು ಬೇರೆಯವರಿಗೆ ಕೊಟ್ಟನು.

ಕೇಂದ್ರ ಸರಕಾರವು ಹೇರಿರುವ ನಿರ್ಬಂಧಗಳನ್ನು ಅಲಕ್ಷ್ಯ ಮಾಡುವುದು ದೊಡ್ಡ ಜಮೀನದಾರರ ಪ್ರವೃತ್ತಿಯಾಗಿತ್ತು. ಯಾಕೆಂದರೆ ಹಾಗೆ ಮಾಡುತ್ತ ತಮ್ಮ ಜಹಗೀರಿಯ ಮೇಲಿರುವ ತಮ್ಮ ಅಧಿಕಾರವನ್ನು ಬಿಗಿಗೊಳಿಸುತ್ತ 'ಊಳಿಗಮಾನ್ಯ'ವನ್ನು ವಿಕೇಂದ್ರೀಕರಣಗೊಳಿಸುವುದಾಗಿತ್ತು.

ಆದಿಲಶಾಹಿ ರಾಜವಂಶವು ಹೊರಗಿನಿಂದ ಬಂದಿದ್ದರಿಂದ ಅನಿವಾರ್ಯವಾಗಿ ಈ ಆಳುಗರು ದೇಶೀಯ ಹಿಂದು ಸಮಾಜದ ಪ್ರಾತಿನಿಧಿಕ ವರ್ಗಗಳನ್ನು ಉಪಯೋಗಿಸಿಕೊಂಡು ದಿನನಿತ್ಯದ ಸ್ಥಾನಿಕ ಆಡಳಿತವನ್ನು ನಡೆಸಬೇಕಾಗಿತ್ತು. ಈ ಸನ್ನಿವೇಶದ ಸುಸ್ಪಷ್ಟ ಫಲಿತಾಂಶವೆಂದರೆ ಸುಮಾರು ಹದಿನೇಳನೆಯ ಶತಮಾನದ ಮಧ್ಯಭಾಗದಲ್ಲಿ ದೊಡ್ಡ ಸಂಖ್ಯೆಯಲ್ಲಿ ಹಿಂದುಗಳು ಮುಸಲ್ಮಾನ ಆಳ್ವಿಕೆಯ ಮಧ್ಯದಲ್ಲಿದ್ದೇ ದಿನನಿತ್ಯದ ಆಡಳಿತ ತಂತ್ರಗಳನ್ನು ತಮ್ಮದಾಗಿಸಿಕೊಂಡರು. ನಿಸ್ಸಂದೇಹವಾದ ಸಂಗತಿಯೆಂದರೆ ಶಿವಾಜಿಯ ಶಕ್ತಿಸಾಮರ್ಥ್ಯದ ಬೃಹತ್ ಉದಯ, ದ್ರುತಗತಿಯ ವಿಸ್ತರಣೆ ಮತ್ತು ಅದರ ತೀವ್ರ ಒಗ್ಗೂಡುವಿಕೆ ಭದ್ರವಾದ ಹಿಂದುರಾಜ್ಯ ಸ್ಥಾಪನೆಗೆ ಕಾರಣವಾದವು ಮತ್ತು ಅದು ಸಾಂಸ್ಥಿಕವಾಗಿ ಸಾಧ್ಯವಾಗಲು ಕಾರಣವೆಂದರೆ ಮುಸಲ್ಮಾನ ಆಡಳಿತದ ದಿನನಿತ್ಯದ ಕಾರ್ಯಕಲಾಪಗಳಲ್ಲಿ ತರಬೇತಿ ಹೊಂದಿದ ಬಹುದೊಡ್ಡ ಸಂಖ್ಯೆಯಲ್ಲಿದ್ದ ಹಿಂದುಗಳ ಕ್ರಿಯಾಶೀಲ ನೆರವು ಮತ್ತು ಸಹಭಾಗಿತ್ವವು ಇತ್ತು. ಆದ್ದರಿಂದ ಮರಾಠಾಭ್ಯುದಯದ ಆಡಳಿತಾತ್ಮಕ ಭದ್ರಬುನಾದಿಯು ಆದಿಲಶಾಹಿ ಸುಲ್ತಾನರ ರಾಜ್ಯಾಡಳಿತದಲ್ಲಿಯೇ ಸಿದ್ಧವಾಗಿತ್ತು ಎಂದು ಹೇಳಬಹುದು.

■

ಆದಿಲಶಾಹಿ ಅರಸು ಮನೆತನ ವಿಜಾಪುರದವರಾದ ನಮಗೆಲ್ಲ ಒಂದು ಹೆಮ್ಮೆ. ರಾಜಕೀಯ ಇತ್ಯಾದಿಗಳನ್ನು ಬಿಟ್ಟರೂ ಶಿಲ್ಪ-ಸಾಹಿತ್ಯಕ್ಷೇತ್ರಗಳಿಗೆ ಅದು ನೀಡಿದ ಕೊಡುಗೆ ಲೋಕಮಾನ್ಯವಾದುದು. ಈ ಕೊಡುಗೆಗಳಲ್ಲಿ ಶಿಲ್ಪದ ಬಗ್ಗೆ ಆಗಾಗ ಆಸಕ್ತಿ ವಹಿಸಿದ ನಾವು, ಸಾಹಿತ್ಯವನ್ನು ಅಲಕ್ಷಿಸುತ್ತ ಬಂದಿದ್ದೇವೆ. ಇದಕ್ಕೆ ಕಾರಣ, ಈ ಸಾಹಿತ್ಯ ದಖಣಿ ಉರ್ದು, ಪರ್ಶಿಯನ್‌ಗಳೆಂಬ ಅಪರಿಚಿತ ಭಾಷೆಗಳಲ್ಲಿರುವುದು ಮತ್ತು ಬಹಳಷ್ಟು ಕೃತಿಗಳು ಅಪ್ರಕಟಿತವಾಗಿರುವುದು. ಹೀಗಿದ್ದೂ ನಮ್ಮ ಸಾಂಸ್ಕೃತಿಕ ಆಸ್ತಿಯಾಗಿರುವ ಈ ಸಾಹಿತ್ಯದ ರಕ್ಷಣೆ, ಅನುವಾದ, ಪ್ರಸಾರ ನಮ್ಮ ಕರ್ತವ್ಯವಾಗಿದೆ.

ಇಂತಹ ಕಾರ್ಯಗಳನ್ನು ಪೂರೈಸುತ್ತ ಬಂದ ನಮ್ಮ 'ವಚನಪಿತಾಮಹ ಡಾ॥ ಫ.ಗು. ಹಳಕಟ್ಟಿ ಸಂಶೋಧನ ಸಂಸ್ಥೆ'ಯ ಮೂಲಕ ಈ ಕರ್ತವ್ಯವನ್ನು ಈಡೇರಿಸಲು ಯೋಚಿಸಿದ ಫಲ 'ಆದಿಲಶಾಹಿ ಸಾಹಿತ್ಯ ಪ್ರಕಟನ ಯೋಜನೆ'. ಈ ಕಾರ್ಯ ಭಾವಿಸಿದಷ್ಟು ಸುಲಭವಲ್ಲ. ಅಲ್ಲಲ್ಲಿ ಚದರಿ ಹೋಗಿರುವ ಪ್ರಕಟಿತ-ಅಪ್ರಕಟಿತ ಕೃತಿಗಳನ್ನು ಶೋಧಿಸುವ, ಸಂಗ್ರಹಿಸುವ, ಅನುವಾದಿಸುವ, ಪರಿಷ್ಕರಿಸಿ ಪ್ರಕಟಿಸುವ ಹಂತಗಳಲ್ಲಿ ವಿದ್ವಾಂಸರು ಶ್ರಮಿಸಬೇಕಾಗುತ್ತದೆ. ನಮ್ಮ ಸುದೈವಕ್ಕೆ ಸಮರ್ಥ ಯೋಜಕರಾದ ಡಾ.ಎಂ.ಎಂ.ಕಲಬುರ್ಗಿಯವರು, ಆದಿಲಶಾಹಿ ಅಭ್ಯಾಸಿಗಳಾದ ಡಾ. ಕೃಷ್ಣ ಕೊಲ್ಹಾರಕುಲಕರ್ಣಿಯವರು ಈ ಯೋಜನೆಯ ಹೊಣೆಹೊತ್ತಿದ್ದಾರೆ. ಸಲಹಾಸಮಿತಿಯ ಸದಸ್ಯರು-ಅನುವಾದಕರು ಈ ಕಾರ್ಯದಲ್ಲಿ ಆಸ್ಥೆವಹಿಸಿದ್ದಾರೆ. ಇವರೆಲ್ಲರ ಸಹಯೋಗದಲ್ಲಿ ಕನ್ನಡಕ್ಕೆ ಹೊಸದೊಂದು ಆಕರ ಸಂಪತ್ತು ಹೊರಬರುತ್ತಲಿರುವುದು ಸಂತೋಷದ ಸಂಗತಿಯಾಗಿದೆ.

ಡಾ. ಎಂ. ಬಿ. ಪಾಟೀಲ

ಅಧ್ಯಕ್ಷರು, ಬಿ.ಎಲ್.ಡಿ.ಇ ಸಂಸ್ಥೆ, ವಿಜಯಪುರ

ಜಲಸಂಪನ್ಮೂಲ ಸಚಿವರು, ಕರ್ನಾಟಕ ಸರಕಾರ

ಮುದ್ರಣ : ಪ್ರಿಂಟ್ ಪಾಯಿಂಟ್, ಮೊ : 97390 67359